ಮಂಗಳವಾರ, ಜೂನ್ 18, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 169 | ಪುಟ 14
www.prajavani.net
prajavani.net | prajavani | Prajavani | prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಳ-ಅಗಲ
ಕುಲುಕಾಡಿದ ಮತಬುಟ್ಟಿಗಳು...
ಬಿಜೆಪಿಗೆ ನೈತಿಕ ಹಕ್ಕು ಎಲ್ಲಿದೆ?– ಸಿದ್ದರಾಮಯ್ಯ 6
‘ಪಠ್ಯಪುಸ್ತಕ ರೂಪಿಸಿ, ಕರಪತ್ರವನ್ನಲ್ಲ..’ 7

ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
₹74,250 (ಬೆಂಗಳೂರು)	₹90,900 (ಬೆಂಗಳೂರು)	83.53

‘ಗ್ಯಾರಂಟಿ’ಗಳಿಂದ ಆರ್ಥಿಕ ಸಂಕಷ್ಟ ● ಸಂಪನ್ಮೂಲ ಸಂಗ್ರಹಕ್ಕೆ ರಾಜ್ಯ ಸರ್ಕಾರದ ಹೊಸದಾರಿ

ಕಾಸಿಗೆ 25 ಸಾವಿರ ಎಕರೆ ಆಸರೆ

● ಭರತ್ ಜೋಶಿ

ಬೆಂಗಳೂರು: ಐದು ‘ಗ್ಯಾರಂಟಿ’ ಯೋಜನೆಗಳ ಅನುಷ್ಠಾನದಿಂದ ಎದುರಾಗಿರುವ ಆರ್ಥಿಕ ಹೊರೆಯನ್ನು ಸರಿದೂಗಿಸಲು ಸಿದ್ದರಾಮಯ್ಯ ನೇತೃತ್ವದ ಸರ್ಕಾರವು, ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ತೆರಿಗೆ ಹೆಚ್ಚಿಸಿದ ಬೆನ್ನಲ್ಲೇ ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ 25,000 ಎಕರೆ ಜಮೀನನ್ನು ವರಮಾನ ಸಂಗ್ರಹಕ್ಕೆ ಬಳಸಿಕೊಳ್ಳುವ ಚಿಂತನೆ ನಡೆಸಿದೆ.

ರಾಜ್ಯದಲ್ಲಿ ವರಮಾನ ಸಂಗ್ರಹ ಹೆಚ್ಚಳಕ್ಕೆ ಇರುವ ಅವಕಾಶಗಳ ಕುರಿತು ಹಣಕಾಸು ಇಲಾಖೆಗೆ ಸಲಹೆ ನೀಡಲು ಬಾಸ್ಟನ್ ಕನ್ಸಲ್ಟಿಂಗ್ ಗ್ರೂಪ್ (ಬಿಸಿಜಿ) ಕಂಪನಿಯನ್ನು ನೇಮಿಸಿಕೊಳ್ಳಲಾಗಿದೆ. ಈ ಕಂಪನಿ ಇತ್ತೀಚೆಗೆ ಪ್ರಾಥಮಿಕ ವರದಿಯೊಂದನ್ನು ಸಲ್ಲಿಸಿದ್ದು, ಜಮೀನುಗಳ ನಗದೀಕರಣ ಅಥವಾ ರಾಜ್ಯ ನಿರ್ದೇಶಿತ ನಗರೀಕರಣ ಮಾದರಿಗಳ ಮೂಲಕ ವರಮಾನ ಸಂಗ್ರಹ ಹೆಚ್ಚಿಸಿಕೊಳ್ಳಬಹುದು ಎಂದು ಸಲಹೆ ನೀಡಿದೆ.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಕಳೆದ ಆರ್ಥಿಕ ವರ್ಷದಲ್ಲಿ ಗ್ಯಾರಂಟಿ ಯೋಜನೆಗಳಿಗಾಗಿ ₹36,000 ಕೋಟಿ ವೆಚ್ಚ ಮಾಡಿತ್ತು. ಪ್ರಸಕ್ತ ಹಣಕಾಸು ವರ್ಷದಲ್ಲಿ ಗ್ಯಾರಂಟಿ ಯೋಜನೆಗಳಿಗಾಗಿ ₹52,009 ಕೋಟಿಯನ್ನು ಮೀಸಲಿಡಲಾಗಿದೆ. ‘ಗ್ಯಾರಂಟಿ’ಗಳ ಹೊರೆಯು ರಾಜ್ಯ ಸರ್ಕಾರವನ್ನು ರಾಜಸ್ವ ಕೊರತೆಯತ್ತ ತಳ್ಳುತ್ತಿದೆ. ಇದರಿಂದಾಗಿ ಹೆಚ್ಚುವರಿ ಸಂಪನ್ಮೂಲಗಳ ಸಂಗ್ರಹ ಮಾಡಲೇಬೇಕಾದ ಅನಿವಾರ್ಯ ಸ್ಥಿತಿ ಎದುರಾಗಿದೆ.

6ನೇ ಪುಟ ನೋಡಿ

ಉದ್ದೇಶಿತ ಜಮೀನುಗಳು ಎಲ್ಲಿವೆ?

- ಹೊಸಕೋಟೆ ತಾಲ್ಲೂಕಿನ ನಂದಗುಡಿಯಲ್ಲಿ 15,000 ಎಕರೆ
- ಬಿಡದಿ ಕೈಗಾರಿಕಾ ಪ್ರದೇಶದ ಬಳಿ 9,800 ಎಕರೆ
- ಬಿಎಂಆರ್‌ಡಿಎ ವ್ಯಾಪ್ತಿಯಲ್ಲಿ 300ರಿಂದ 400 ಎಕರೆ
- ಬಳಕೆಯಾಗದೆ ಉಳಿದ ಬಿಡಿಎ ಆಸ್ತಿಗಳು

‘₹5,000 ಕೋಟಿ ಹೆಚ್ಚುವರಿ ಸಂಗ್ರಹ’

‘ಬಳಕೆಯಾಗದ ವರಮಾನ ಮೂಲಗಳಿಂದ ಪ್ರತಿ ಆರ್ಥಿಕ ವರ್ಷದಲ್ಲಿ ₹5,000 ಕೋಟಿಯಷ್ಟು ಹೆಚ್ಚುವರಿ ವರಮಾನ ಸಂಗ್ರಹಿಸಲು ಸರ್ಕಾರ ಬಯಸಿದೆ’ ಎಂದು ಹಣಕಾಸು ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್‌.ಕೆ. ಅತೀಕ್ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ಎಲ್‌.ಕೆ. ಅತೀಕ್

‘ಆಸ್ತಿಗಳ ನಗದೀಕರಣವೂ ಸೇರಿದಂತೆ ಸರ್ಕಾರಿ–ಖಾಸಗಿ ಸಹಭಾಗಿತ್ವದ ಯೋಜನೆಗಳು ಮತ್ತು ರಾಜ್ಯ ನಿರ್ದೇಶಿತ ನಗರೀಕರಣ ಯೋಜನೆಗಳಿಗೆ ನಾವು ಆದ್ಯತೆ ನೀಡುತ್ತಿದ್ದೇವೆ. ವಿತ್ತೀಯ ಸುಸ್ಥಿರತೆಗಾಗಿ ಬಳಕೆಯಾಗದ ವರಮಾನ ಮೂಲಗಳಿಂದ ರಾಜಸ್ವ ಸಂಗ್ರಹ ಮಾಡುವುದು ಮತ್ತು ಸರ್ಕಾರದ ಆದ್ಯತೆಗಳಿಗೆ ಧಕ್ಕೆಯಾಗದಂತೆ ವೆಚ್ಚವನ್ನು ತಗ್ಗಿಸುವುದು ನಮ್ಮ ಯೋಚನೆ’ ಎಂದು ವಿವರಿಸಿದರು. ‘ಬಿಡಿಎಗೆ ಸೇರಿದ ಭಾರಿ ಸಂಖ್ಯೆಯ ಆಸ್ತಿಗಳು ಯಾವತ್ತೂ ಬಳಕೆಯಾಗದೆ ಉಳಿದಿವೆ. ಪಾರದರ್ಶಕವಾದ ಕ್ರಮಗಳ ಮೂಲಕ ಅವುಗಳನ್ನು ಬಳಸಿಕೊಂಡು ವರಮಾನ ಸಂಗ್ರಹಿಸಬಹುದು. ಇದರಿಂದ ಬರುವ ಆದಾಯವನ್ನು ಬೆಂಗಳೂರಿನ ಮೂಲಸೌಕರ್ಯ ಅಭಿವೃದ್ಧಿಗೆ ವಿನಿಯೋಗಿಸಬಹುದು’ ಎಂದು ಅತೀಕ್ ವಿವರಿಸಿದರು.

‘ರಾಜಸ್ವ ಸ್ವೀಕೃತಿ ಹೆಚ್ಚಳ ಅನಿವಾರ್ಯ’

‘ಕರ್ನಾಟಕ ಸರ್ಕಾರವು ತನ್ನ ರಾಜಸ್ವ ಸ್ವೀಕೃತಿಯನ್ನು ಹೆಚ್ಚಿಸಿಕೊಳ್ಳುವುದು ಅನಿವಾರ್ಯ’ ಎಂದು ಬಾಸ್ಟನ್ ಕನ್ಸಲ್ಟಿಂಗ್ ಗ್ರೂಪ್ ತನ್ನ ಪ್ರಾಥಮಿಕ ವರದಿಯಲ್ಲಿ ಹೇಳಿದೆ.

ಕರ್ನಾಟಕ ಸರ್ಕಾರದ ರಾಜಸ್ವ ಸ್ವೀಕೃತಿಯು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ (ಜಿಎಸ್‌ಡಿಪಿ) ಶೇಕಡ 9ರಷ್ಟಿದೆ. ಮಹಾರಾಷ್ಟ್ರದಲ್ಲಿ ಶೇ 12, ತೆಲಂಗಾಣದಲ್ಲಿ ಶೇ 13ರಷ್ಟು ಮತ್ತು ತಮಿಳುನಾಡಿನಲ್ಲಿ ಶೇ 10ರಷ್ಟಿದೆ. ರಾಜಸ್ವ ಸ್ವೀಕೃತಿಯ ಪ್ರಮಾಣ ಹೆಚ್ಚಾಗಿರುವ ಕಾರಣದಿಂದ ಮಹಾರಾಷ್ಟ್ರ ಮತ್ತು ತಮಿಳುನಾಡು ಸರ್ಕಾರಗಳ ಬಜೆಟ್ ಗಾತ್ರವು ಜಿಎಸ್‌ಡಿಪಿಯ ಶೇಕಡಾವಾರು ಪ್ರಮಾಣದಲ್ಲಿ ಕರ್ನಾಟಕಕ್ಕಿಂತ ಹೆಚ್ಚಾಗಿದೆ ಎಂಬ ಉಲ್ಲೇಖ ವರದಿಯಲ್ಲಿದೆ. ವೆಚ್ಚ ತಗ್ಗಿಸುವ ವಿಚಾರದಲ್ಲಿ ಇಂಧನ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಜಲ ಸಂಪನ್ಮೂಲ, ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಇಲಾಖೆಗಳನ್ನು ಆದ್ಯತೆಯ ಇಲಾಖೆಗಳನ್ನಾಗಿ ಗುರುತಿಸಲಾಗಿದೆ. ಇಂಧನ ಇಲಾಖೆಯಲ್ಲಿ ನೀರಾವರಿ ಪಂಪ್‌ಸೆಟ್‌ಗಳು ಮತ್ತು ಗೃಹ ಜ್ಯೋತಿ ಯೋಜನೆಯಡಿ ನೀಡುತ್ತಿರುವ ಸಹಾಯಧನವು ಶೇ 97ರಷ್ಟಿದೆ. ಈ ಇಲಾಖೆಯಲ್ಲಿ ವೆಚ್ಚ ತಗ್ಗಿಸಲು ಅವಕಾಶಗಳಿವೆ ಎಂದು ಅಂದಾಜಿಸಲಾಗಿದೆ.

ವಯನಾಡ್‌ಗೆ ಪ್ರಿಯಾಂಕಾ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಕೇರಳದ ವಯನಾಡ್ ಲೋಕಸಭಾ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಲಿದ್ದು, ಉತ್ತರ ಪ್ರದೇಶದ ರಾಯ್‌ಬರೇಲಿ ಕ್ಷೇತ್ರ ಉಳಿಸಿಕೊಳ್ಳಲಿದ್ದಾರೆ. ರಾಹುಲ್ ರಾಜೀನಾಮೆಯಿಂದ ತೆರವಾಗಲಿರುವ ವಯನಾಡ್ ಕ್ಷೇತ್ರದಲ್ಲಿ, ಅವರ ಸಹೋದರಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಸ್ಪರ್ಧಿಸಲಿದ್ದಾರೆ.

ಸಂಸದೀಯ ಪಕ್ಷದ ನಾಯಕಿ ಸೋನಿಯಾ ಗಾಂಧಿ, ರಾಹುಲ್, ಪ್ರಿಯಾಂಕಾ ಹಾಗೂ ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಜೊತೆ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸೋಮವಾರ ಎರಡು ಗಂಟೆ ನಡೆಸಿದ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಯಿತು.

7ನೇ ಪುಟ ನೋಡಿ

ADVERTORIAL

ಮಂಡಿನೋವು
ಸರ್ಜರಿ ಇಲ್ಲದೇ ಉಪಶಮನ

10,000ಕ್ಕೂ ಹೆಚ್ಚು ಮಂದಿಗೆ ಅಲಿವಿಯೇಟ್‌ನಿಂದ ನೋವು ಮುಕ್ತ ಜೀವನ

ಕೇವಲ 30-60 ನಿಮಿಷದ ವಿಧಾನ | ಆಸ್ಪತ್ರೆ ವಾಸವಿಲ್ಲ | ವೇಗವಾದ ಚೇತರಿಕೆ

ಮೊಣಕಾಲಿನ ಅಸ್ಥಿಸಂಧಿವಾತದ ನೋವನ್ನು ಕೇವಲ ಔಷಧಿಗಳಿಂದ ಮಾತ್ರವೇ ಪರಿಣಾಮಕಾರಿಯಾಗಿ ನಿರ್ವಹಿಸುವುದು ಸಾಧ್ಯವೇ ಇಲ್ಲ. ಸಂಧಿವಾತವು ತೀವ್ರವಾಗಿರುವವರಿಗೆ ಶಸ್ತ್ರಚಿಕಿತ್ಸೆಯ ಅಗತ್ಯವಿದ್ದರೂ ಸಹ, ಬಹುಪಾಲು ಜನರು ಶಸ್ತ್ರಚಿಕಿತ್ಸೆಯಿಲ್ಲದ ನೋವಿನಿಂದ ಮುಕ್ತರಾಗಬಹುದು.

ರೇಡಿಯೊ ಫ್ರೀಕ್ವೆನ್ಸಿ ಅಬ್ಲೇಶನ್ (ಆರ್.ಎಫ್.ಎ), ಸರ್ಜರಿಯೇ ಇಲ್ಲದೇ ನೋವನ್ನು ಉಪಶಮಿಸುವ ಆಧುನಿಕ ಚಿಕಿತ್ಸಾ ವಿಧಾನಗಳಲ್ಲಿ ಒಂದಾಗಿದೆ.

ಈ ವಿಧಾನವು ಪೀಡಿತ ಪ್ರದೇಶದಲ್ಲಿನ ನೋವಿಗೆ ಕಾರಣವಾಗುವ ನರಗಳನ್ನು ಗುರುತಿಸಿ, ಅವು ಮೆದುಳಿಗೆ ನೋವಿನ ಸಂದೇಶ ನೀಡದಂತೆ ತಡೆಯುವ ಕೆಲಸ ಮಾಡುತ್ತದೆ. ಇದರಿಂದಾಗಿ ನೋವು ಹಂತ ಹಂತವಾಗಿ ಕಡಿಮೆಯಾಗುತ್ತದೆ.

ಮೊಣಕಾಲು ನೋವಿನ ಪ್ರಚೋದಕ ಸ್ಥಳವನ್ನು ಕಂಡುಹಿಡಿಯುತ್ತಿರುವ ವೈದ್ಯರು

ಈ ಪ್ರಕ್ರಿಯೆಯು ಕನಿಷ್ಠ ಛೇದನವನ್ನು ಒಳಗೊಂಡಿರುವುದು ಮಾತ್ರವಲ್ಲದೇ, ಅತೀ ಕಡಿಮೆ ಚೇತರಿಕೆಯ ಸಮಯ–ವನ್ನು ತೆಗೆದುಕೊಳ್ಳುತ್ತದೆ. ಹೆಚ್ಚಿನ ರೋಗಿಗಳು ಅದೇ ದಿನ ಮನೆಗೆ ತೆರಳಿ, ಮರುದಿನ ದಿಂದಲೇ ಸಾಮಾನ್ಯ ಚಟು–ವಟಿಕೆಗಳನ್ನು ಶುರು ಮಾಡಬಹುದು.

ಆರ್‌ಎಫ್‌ಎ ವಿಧಾನದ ಹಂತಗಳು :

1. ತಯಾರಿ: ವೈದ್ಯರು ಸ್ಥಳೀಯ ಅರಿವಳಿಕೆಯನ್ನು ನೋವು ಇರುವ ಜಾಗಕ್ಕೆ ಚುಚ್ಚಿ, ಮಂಡಿಯ ಪ್ರದೇಶ ನಿಷ್ಕ್ರಿಯಗೊಳಿಸುತ್ತಾರೆ.
2. ಚಿತ್ರಣ: ನೋವು ಉಂಟುಮಾಡುವ ನರಗಳನ್ನು ಪತ್ತೆಹಚ್ಚಲು ವೈದ್ಯರು ಎಕ್ಸ್–ರೇ ಅಥವಾ ಅಲ್ಟ್ರಾಸೌಂಡ್ ಅನ್ನು ಬಳಸುತ್ತಾರೆ.
3. ಪರೀಕ್ಷೆ: ಸರಿಯಾದ ನರವನ್ನು ಖಚಿತಪಡಿಸಲು ಸೂಜಿಯ ಮೂಲಕ ವಿದ್ಯುತ್ ಪ್ರವಾಹವನ್ನು ಕಳುಹಿಸಲಾಗುತ್ತದೆ, ಇದು ಜುಮ್ಮೆನಿಸುವಿಕೆ ಸಂವೇದನೆ ಉಂಟುಮಾಡುತ್ತದೆ.
4. ತಾಪನ: ರೇಡಿಯೋ ಆವರ್ತನದ ಮೂಲಕ ಉತ್ಪತ್ತಿಯಾಗುವ ಶಾಖವು ಪೀಡಿತ ಪ್ರದೇಶದ ನರಗಳಿಗೆ ನೀಡಲಾಗುತ್ತದೆ, ಇದು ನರಗಳಲ್ಲಿ ಸಣ್ಣ ಗಾಯವನ್ನು ಉಂಟುಮಾಡಿ ನೋವಿನ ಸಂಕೇತಗಳನ್ನು ಮೆದುಳಿಗೆ ಕಳುಹಿಸ–ದಂತೆ ತಡೆಯುತ್ತದೆ.

5. ಪ್ರಕ್ರಿಯೆಯ ನಂತರ: ಸಣ್ಣ ಬ್ಯಾಂಡೇಜ್ ಅನ್ನು ಅನ್ವಯಿಸಲಾಗುತ್ತದೆ. ನೀವು ಸ್ವಲ್ಪ ವಿಶ್ರಾಂತಿ ಪಡೆದು ಮನೆಗೆ ತೆರಳ–ಬಹುದು. ನಂತರ ನೋವು ಕ್ರಮ ಕ್ರಮವಾಗಿ ಉಪಶಮನಗೊಳ್ಳುತ್ತದೆ.

ಬೆನ್ನು, ಕುತ್ತಿಗೆ, ಭುಜ, ಕಾಲು, ಪಾದ, ಕೆಳಬೆನ್ನು, ಕ್ಯಾನ್ಸರ್ ಮತ್ತಿತರ ನೋವಿಗೂ ಕೂಡ ಅಲಿವಿಯೇಟ್‌ನಲ್ಲಿ ಸರ್ಜರಿ ಇಲ್ಲದೇ ಚಿಕಿತ್ಸೆ ಲಭ್ಯ

ನೋವು ಮುಕ್ತ ಜೀವನಕ್ಕೆ ಇಂದೇ ಸಂಪರ್ಕಿಸಿ
81475 50855
080 23614888

ಅಲಿವಿಯೇಟ್ ಪೇನ್ ಮ್ಯಾನೇಜ್‌ಮೆಂಟ್ ಕ್ಲಿನಿಕ್ಸ್
Google Reviews 4.8

ಇವರ ಕ್ಲಿನಿಕ್ಕುಗಳು ಬೆಂಗಳೂರಿನಲ್ಲಿ ಇಲ್ಲಿವೆ:
ಪೀಣ್ಯಾ ದಾಸರಹಳ್ಳಿ | ಸದಾಶಿವನಗರ | ವೈಟ್‌ಫೀಲ್ಡ್ | ಜಯನಗರ | ಇಂದಿರಾನಗರ

ಸುರಕ್ಷತಾ ಆಯುಕ್ತರಿಂದ ತನಿಖೆ ● ಪರಿಹಾರ ಘೋಷಣೆ ● ಸಿಗ್ನಲ್ ಲೋಪ?

ಗೂಡ್ಸ್ ರೈಲು ಡಿಕ್ಕಿ: 9 ಸಾವು

ನ್ಯೂ ಜಲಪಾಇಗುಡಿ/ಕೋಲ್ಕತ್ತ/ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದ ಡಾರ್ಜಿಲಿಂಗ್ ಜಿಲ್ಲೆಯಲ್ಲಿ ಕಾಂಚನ್‌ಜುಂಗಾ ಎಕ್ಸ್‌ಪ್ರೆಸ್ ರೈಲಿಗೆ ಸರಕು ಸಾಗಣೆ ರೈಲು ಹಿಂದಿನಿಂದ ಡಿಕ್ಕಿಹೊಡೆದು, ಎಕ್ಸ್‌ಪ್ರೆಸ್ ರೈಲಿನ ಹಿಂದಿನ ನಾಲ್ಕು ಬೋಗಿಗಳು ಹಳಿತಪ್ಪಿದ ಪರಿಣಾಮವಾಗಿ ಒಂಬತ್ತು ಜನ ಮೃತಪಟ್ಟಿದ್ದಾರೆ, 41 ಮಂದಿಗೆ ಗಾಯಗಳಾಗಿವೆ.

ಸೋಮವಾರ ಬೆಳಿಗ್ಗೆ ಈ ದುರ್ಘಟನೆ ಸಂಭವಿಸಿದೆ. ಕಾಂಚನ್‌ಜುಂಗಾ ಎಕ್ಸ್‌ಪ್ರೆಸ್ ರೈಲು ಅಗರ್ತಲಾದಿಂದ ಸಿಯಾಲದಹ ಕಡೆಗೆ ಸಾಗುತ್ತಿತ್ತು.

ಸರಕು ಸಾಗಣೆ ರೈಲಿನ ಪೈಲಟ್ ಹಾಗೂ ಸಹಪೈಲಟ್, ಪ್ರಯಾಣಿಕ ರೈಲಿನ ಗಾರ್ಡ್ ಕೂಡ ಮೃತಪಟ್ಟಿದ್ದಾರೆ ಎಂದು ರೈಲ್ವೆ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು. ಗಾಯಗೊಂಡವರನ್ನು ಉತ್ತರ ಬಂಗಾಳದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸರಕು ಸಾಗಣೆ ರೈಲಿನ ಎಂಜಿನ್ ಡಿಕ್ಕಿ ಹೊಡೆದ ಪರಿಣಾಮವಾಗಿ ಪ್ರಯಾಣಿಕ ರೈಲಿನ ಹಿಂದಿನ ನಾಲ್ಕು ಬೋಗಿಗಳು ಹಳಿತಪ್ಪಿದವು. ಪ್ರಯಾಣಿಕ ರೈಲು ಉತ್ತರ ಬಂಗಾಳದ ನ್ಯೂ ಜಲಪಾಇಗುಡಿ ನಿಲ್ದಾಣದಿಂದ 30 ಕಿ.ಮೀ. ದೂರದಲ್ಲಿ, ರಂಗಾಪಾಣಿ ನಿಲ್ದಾಣದ ಸನಿಹದಲ್ಲಿ ಇತ್ತು.

ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ದ್ವಿಚಕ್ರ ವಾಹನವೊಂದರ ಹಿಂಬದಿಯಲ್ಲಿ ಕುಳಿತು ಅಪಘಾತ ನಡೆದ ಸ್ಥಳ ತಲುಪಿದರು. ಅಪಘಾತ ನಡೆದ ಸ್ಥಳಕ್ಕೆ ತಲುಪಲು ಅಗಲವಾದ ರಸ್ತೆ ಇಲ್ಲದಿದ್ದ ಕಾರಣ, ಅವರಿಗೆ ಅಲ್ಲಿಗೆ ದೊಡ್ಡ ವಾಹನದಲ್ಲಿ ತೆರಳಲು ಆಗಲಿಲ್ಲ.

7ನೇ ಪುಟ ನೋಡಿ

ರಾಣಿಪತ್ರಾ ರೈಲು ನಿಲ್ದಾಣ ಮತ್ತು ಛತ್ತರ್‌ಹಾಟ್ ಜಂಕ್ಷನ್ ನಡುವೆ ಸೋಮವಾರ ಕಾಂಚನ್‌ಜುಂಗಾ ಎಕ್ಸ್‌ಪ್ರೆಸ್ ರೈಲಿಗೆ ಗೂಡ್ಸ್ ರೈಲು ಡಿಕ್ಕಿ ಹೊಡೆದಿದ್ದು, ಸ್ಥಳದಲ್ಲಿ ಭಾರಿ ಸಂಖ್ಯೆಯಲ್ಲಿ ಜನ ಸೇರಿದ್ದರು –ಎಎಫ್‌ಪಿ ಚಿತ್ರ

- ಬೆಳಿಗ್ಗೆ 5.50ರಿಂದಲೇ ಕೈಕೊಟ್ಟಿದ್ದ ಸ್ವಯಂ ಚಾಲಿತ ಸಿಗ್ನಲ್ ವ್ಯವಸ್ಥೆ
- ಕೆಂಪು ಸಿಗ್ನಲ್ ಇದ್ದರೂ ಗೂಡ್ಸ್ ರೈಲಿನ ಸಂಚಾರಕ್ಕೆ ಅನುಮತಿ
- ಈ ಮಾರ್ಗಕ್ಕೆ ಇರಲಿಲ್ಲ ‘ಕವಚ್’ ರಕ್ಷಣೆ

ಯಡಿಯೂರಪ್ಪ ಹೇಳಿಕೆ ದಾಖಲು

ಬೆಂಗಳೂರು: ಪೋಕ್ಸೊ ಪ್ರಕರಣವೊಂದರಲ್ಲಿ ಹೈಕೋರ್ಟ್ ಸೂಚನೆ ಮೇರೆಗೆ ಸೋಮವಾರ ಸಿಐಡಿ ವಿಚಾರಣೆಗೆ ಹಾಜರಾದ ಬಿಜೆಪಿಯ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರ ಹೇಳಿಕೆಯನ್ನು ತನಿಖಾಧಿಕಾರಿಗಳು ದಾಖಲಿಸಿಕೊಂಡರು. ಅರಮನೆ ರಸ್ತೆಯಲ್ಲಿರುವ ಸಿಐಡಿ ಕಚೇರಿಗೆ ಬಂದ ಯಡಿಯೂರಪ್ಪ ಅವರನ್ನು ಬೆಳಿಗ್ಗೆ 11ರಿಂದ ಮಧ್ಯಾಹ್ನ 2ರವರೆಗೆ ವಿಚಾರಣೆ ನಡೆಸಲಾಯಿತು.

6

ಚಿನಕುರುಳಿ

ಪ್ರಕಾಶ್ ಶೆಟ್ಟಿ

ರೇಣುಕಸ್ವಾಮಿ ಹತ್ಯೆ: ಚಿಕ್ಕಣ್ಣ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧಿತ ಆರೋಪಿ ನಟ ದರ್ಶನ್ ಸ್ನೇಹಿತರೂ ಆಗಿರುವ ನಟ ಚಿಕ್ಕಣ್ಣ ಅವರನ್ನು ಸೋಮವಾರ ಪಶ್ಚಿಮ ವಿಭಾಗದ ಪೊಲೀಸರು ತೀವ್ರ ವಿಚಾರಣೆಗೆ ಒಳಪಡಿಸಿದರು.

ಕೊಲೆ ಪ್ರಕರಣ ಸಂಬಂಧ ವಿಚಾರಣೆಗೆ ಬರುವಂತೆ ಸೂಚಿಸಿ ಸೋಮವಾರ ಬೆಳಿಗ್ಗೆ ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ನೋಟಿಸ್ ಜಾರಿ ಮಾಡಿದ್ದರು. ಸಂಜೆ 4 ಗಂಟೆ ಸುಮಾರಿಗೆ ವಿಚಾರಣೆಗೆ ಬರುತ್ತಿದ್ದಂತೆ ಚಿಕ್ಕಣ್ಣ ಅವರನ್ನು ರಾಜರಾಜೇಶ್ವರಿ ನಗರದಲ್ಲಿರುವ ಸ್ಟೋನಿ ಬ್ರೂಕ್ ಬಾರ್ ಆ್ಯಂಡ್ ರೆಸ್ಟೋರೆಂಟ್‌ಗೆ ಆರೋಪಿ ದರ್ಶನ್ ಹಾಗೂ ಅದರ ಮಾಲೀಕರೂ ಆಗಿರುವ ಆರೋಪಿ ವಿನಯ್ ಜತೆಗೆ ಕರೆದೊಯ್ದು ಸ್ಥಳ ಮಹಜರು ನಡೆಸಿದರು.

ಅಲ್ಲಿಂದ ಚಿಕ್ಕಣ್ಣ ಅವರನ್ನು ಅನ್ನಪೂರ್ಣೇಶ್ವರಿ ನಗರ ಠಾಣೆಗೆ ಕರೆ ತಂದ ಪೊಲೀಸರು ವಿಚಾರಣೆ ನಡೆಸಿದರು.

ಕೃತ್ಯ ಎಸಗುವುದಕ್ಕೂ ಮುನ್ನ ರಾಜರಾಜೇಶ್ವರಿ ನಗರದ ರೆಸ್ಟೋರೆಂಟ್‌ನಲ್ಲಿ ಜೂನ್ 8ರ ಸಂಜೆ ಪಾರ್ಟಿ ಆಯೋಜಿಸಲಾಗಿತ್ತು. ಈ ಪಾರ್ಟಿಯಲ್ಲಿ ದರ್ಶನ್ ಜತೆಗೆ ಚಿಕ್ಕಣ್ಣ ಇದ್ದರು ಎಂಬುದಕ್ಕೆ ಪುರಾವೆ ಲಭಿಸಿದ್ದು ಅದರ ಆಧಾರದಲ್ಲಿ ನೋಟಿಸ್ ಜಾರಿ ಮಾಡಲಾಗಿತ್ತು. ಪಾರ್ಟಿ ವೇಳೆ ಕೃತ್ಯದ ಬಗ್ಗೆ ಏನಾದರೂ ಚರ್ಚೆ ನಡೆದಿತ್ತೇ? ಪಾರ್ಟಿಯಲ್ಲಿ ಯಾರು ಭಾಗಿಯಾಗಿದ್ದರು ಎಂಬುದರ ಬಗ್ಗೆ ಹೇಳಿಕೆ ದಾಖಲು ಮಾಡಿಕೊಳ್ಳಲಾಗಿದೆ. ಪಾರ್ಟಿಯಲ್ಲಿ ಇದ್ದವರನ್ನು ಗುರುತಿಸುವಂತೆ ಬಂಧಿತ ಆರೋಪಿಗಳ ಚಿತ್ರ ತೋರಿಸಿ ಹೇಳಿಕೆ ಪಡೆಯಲಾಗಿದೆ’ ಎಂದು ಪೊಲೀಸರು ಹೇಳಿದರು. ‘ಶೆಡ್‌ಗೆ ಚಿಕ್ಕಣ್ಣ ತೆರಳಿದ್ದರು ಎಂಬುದಕ್ಕೆ ಸಾಕ್ಷ್ಯಾಧಾರಗಳು ಸಿಕ್ಕಿಲ್ಲ. ಪಾರ್ಟಿಯಲ್ಲಿದ್ದರು ಎಂಬುದಕ್ಕೆ ಸಿ.ಸಿ. ಟಿ.ವಿ ಕ್ಯಾಮೆರಾದ ದೃಶ್ಯಾವಳಿಗಳು ಸಿಕ್ಕಿವೆ. ಅಲ್ಲದೇ ಬಂಧಿತರು ಚಿಕ್ಕಣ್ಣ ಹೆಸರು ಬಾಯ್ಬಿಟ್ಟಿದ್ದರು’ ಎಂದು ತನಿಖಾ ಮೂಲಗಳು ಸಿಕ್ಕಿವೆ.

ಇನ್ನಷ್ಟು ಸುದ್ದಿಗಳು 5

ಪೆಟ್ರೋಲ್, ಡೀಸೆಲ್ ಮೇಲಿನ ಮಾರಾಟ ತೆರಿಗೆ ಏರಿಕೆಗೆ ಆಕ್ರೋಶ

ರಾಜ್ಯದಾದ್ಯಂತ ಬಿಜೆಪಿ ಪ್ರತಿಭಟನೆ ತೀವ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಮಾರಾಟ ತೆರಿಗೆ ಏರಿಕೆ ಮಾಡಿರುವುದನ್ನು ವಿರೋಧಿಸಿ ಬಿಜೆಪಿ ಕಾರ್ಯಕರ್ತರು ರಾಜಧಾನಿ ಬೆಂಗಳೂರು ಸೇರಿ ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ವಿರೋಧಪಕ್ಷದ ನಾಯಕ ಆರ್.ಅಶೋಕ ಅವರ ನೇತೃತ್ವದಲ್ಲಿ ಸ್ವಾತಂತ್ರ್ಯ ಉದ್ಯಾನದ ಬಳಿ ಪ್ರತಿಭಟನೆ ನಡೆಸಿ, ಬಳಿಕ ಮುಖ್ಯಮಂತ್ರಿ ಮನೆಗೆ ಮುತ್ತಿಗೆ ಹಾಕಲು ಕಾರ್ಯಕರ್ತರು ಮುಂದಾದರು. ಆ ವೇಳೆ ಎಲ್ಲರನ್ನೂ ವಶಕ್ಕೆ ಪಡೆದ ಪೊಲೀಸರು, ನಂತರ ಬಿಡುಗಡೆ ಮಾಡಿದರು.

6ನೇ ಪುಟ ನೋಡಿ

ಬಿಜೆಪಿ ಮುಖಂಡರಾದ ಬಿ ವೈ ವಿಜಯೇಂದ್ರ, ಆರ್ ಅಶೋಕ ಹಾಗೂ ಸಿ.ಟಿ.ರವಿ ಮತ್ತಿತರರು ಸೋಮವಾರ ಪ್ರತಿಭಟನೆಯ ಬಳಿಕ ಎತ್ತಿನ ಗಾಡಿಯಲ್ಲಿ ಮುಖ್ಯಮಂತ್ರಿ ನಿವಾಸಕ್ಕೆ ತೆರಳಲು ಯತ್ನಿಸಿದರು – ಪ್ರಜಾವಾಣಿ ಚಿತ್ರ

> **ಸಿದ್ದರಾಮಯ್ಯ ತಾವು ಮಾತ್ರ ಟೋಪಿ ಹಾಕುವುದಲ್ಲ. ಜನರಿಗೆಲ್ಲ ಟೋಪಿ ಹಾಕುತ್ತಿದ್ದಾರೆ. ಟೋಪಿ ಹಾಕಿ, ನಾಮ ಹಾಕಿ, ಜನರಿಗೆ ಚೊಂಬು ಕೊಡುತ್ತಿದ್ದಾರೆ**
> **ಸಿ.ಟಿ.ರವಿ,** ವಿಧಾನಪರಿಷತ್ ಸದಸ್ಯ

> **ನೆರೆಯ ರಾಜ್ಯಗಳು ಹಾಗೂ ಬಿಜೆಪಿ ಆಡಳಿತದ ರಾಜ್ಯಗಳಿಗಿಂತ ಕರ್ನಾಟಕದಲ್ಲಿನ ದರ ಕಡಿಮೆಯಿದೆ. ರಾಜ್ಯದ ಪಾಲಿನ ಹಣವನ್ನು ಕೇಂದ್ರ ಕೊಟ್ಟಿದ್ದರೆ ಮಾರಾಟ ತೆರಿಗೆ ಹೆಚ್ಚಿಸುವ ಅಗತ್ಯವೇ ಬೀಳುತ್ತಿರಲಿಲ್ಲ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> **ಎಲ್ಲರ ಖಾತೆಗಳಿಗೂ ವರ್ಷಕ್ಕೆ ₹1 ಲಕ್ಷ ಹಾಕುತ್ತೇವೆ ಎಂದು ಕಾಂಗ್ರೆಸ್ ನಾಯಕರು ಹೇಳಿದ್ದರು. ಒಂದು ಹೆಜ್ಜೆ ಮುಂದೆ ಹೋಗಿದ್ದ ರಾಹುಲ್‌ಗಾಂಧಿ ಟಕಾಟಕ್ ಹಾಕುತ್ತೇವೆ ಎಂದಿದ್ದರು. ಈಗ ಜೇಬಿಗೆ ಟಕಾಟಕ್ ಕತ್ತರಿ ಹಾಕಿದ್ದಾರೆ**
> **ಆರ್.ಅಶೋಕ,** ವಿರೋಧಪಕ್ಷದ ನಾಯಕ

ಪ್ರತಿಭಟನೆ ವೇಳೆ ಮೃತಪಟ್ಟ ಭಾನುಪ್ರಕಾಶ್

ಶಿವಮೊಗ್ಗ: ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ವಿಧಾನಪರಿಷತ್ ಮಾಜಿ ಸದಸ್ಯ, ಪಕ್ಷದ ಮುಖಂಡ ಎಂ.ಬಿ. ಭಾನುಪ್ರಕಾಶ್ (69) ತೀವ್ರ ಹೃದಯಾಘಾತದಿಂದ ನಿಧನರಾದರು.

ಸರ್ಕಾರದ ಅಣಕು ಶವ ಯಾತ್ರೆ ನಂತರ ಭಾನುಪ್ರಕಾಶ್ ಅವರು ಮುಖಂಡರ ಜೊತೆ ಕುಳಿತಿದ್ದರು. ಪ್ರತಿಭಟನೆ ಮುಗಿಯುತ್ತಿದ್ದಂತೆಯೇ ಬಿಜೆಪಿ ಕಚೇರಿಗೆ ತೆರಳಲು ಕಾರಿನ ಬಳಿ ತೆರಳಿದ ಅವರು ದಿಢೀರ್ ಅಸ್ವಸ್ಥಗೊಂಡು ಕುಸಿದು ಕುಳಿತರು. ಆಸ್ಪತ್ರೆಗೆ ತೆರಳುವ ಹಾದಿಯಲ್ಲಿಯೇ ಅವರು ನಿಧನರಾದರು. ಸಂಜೆ 6 ಗಂಟೆಗೆ ಭಾನುಪ್ರಕಾಶ್ ಅಂತ್ಯಕ್ರಿಯೆ ನಡೆಯಿತು.

PANKAJAKASTHURI for life. for ayurveda Since 1988

ಈ ಮಳೆಗಾಲವನ್ನು ಯಾವುದೇ ಚಿಂತೆಗಳಿಲ್ಲದೆ ಆನಂದಿಸಿ

ಮಳೆಗಾಲವು ನಿಮ್ಮ ಆರೋಗ್ಯದ ಮೇಲೆ ಪರಿಣಾಮ ಬೀರಲು ಬಿಡಬೇಡಿ. ಆಯುರ್ವೇದದ ಶಕ್ತಿಯನ್ನು ನಂಬಿರಿ. ಋತುಮಾನದ ಉಸಿರಾಟದ ಸಮಸ್ಯೆಗಳ ವಿರುದ್ಧ ಹೋರಾಡಲು ನಿಮ್ಮಲ್ಲಿ ಪ್ರತಿರೋಧ ಶಕ್ತಿಯನ್ನು ಹೆಚ್ಚಿಸಿಕೊಳ್ಳಿ.

17 ನೈಸರ್ಗಿಕ ಗಿಡಮೂಲಿಕೆಗಳು | 26 ಗುಣಮಟ್ಟದ ಭರವಸೆಯನ್ನು ಖಾತರಿಪಡಿಸುವ ಪರಿಶೀಲನೆಗಳು

1 ಕೋಟಿ ಸಂತೃಪ್ತ ಗ್ರಾಹಕರನ್ನು ಹೊಂದುವ ನಮ್ಮ ಕನಸಿನ ಗುರಿಯನ್ನು ಸಾಧಿಸುವಂತೆ ಮಾಡಿದ ನೀವು ನಮ್ಮ ಮೇಲೆ ಇಟ್ಟಿರುವ ವಿಶ್ವಾಸಕ್ಕಾಗಿ ನಾವು ನಿಮ್ಮೆಲ್ಲರಿಗೂ ಕೃತಜ್ಞರಾಗಿರುತ್ತೇವೆ!*

MOST TRUSTED BRANDS OF INDIA 2024 - 2025 | CLINICALLY PROVEN

ಪ್ರಶ್ನೆಗಳು ಮತ್ತು ಅನುಮಾನಗಳಿದ್ದರೆ, ನಮ್ಮ ವೈದ್ಯರೊಂದಿಗೆ ಮಾತನಾಡಿ
080694 98111
ಉಚಿತ ಕನ್ಸಲ್ಟೇಶನ್

ಪಂಕಜಕಸ್ತೂರಿ®
ಬ್ರೀತ್ ಈಝಿ
ಚೂರ್ಣ | ಸಿರಪ್ | ಶುಗರ್ ಫ್ರೀ ಮಾತ್ರೆಗಳು

Pankajakasthuri Herbals India (P) Ltd.
Ph: 0472 289 5301/6301 • info@pkhil.com

*ಗ್ರಾಹಕರ ಸಂಖ್ಯೆಯು ಕಳೆದ 7 ವರ್ಷಗಳಲ್ಲಿ ಮಾಡಿದ ಒಟ್ಟು ಮಾರಾಟದ ಆಧಾರವಾಗಿದೆ

‘ಎಲ್ಲರಲ್ಲೂ ಮನುಷ್ಯತ್ವ ಬೆಳೆಯಲಿ’

ಬಕ್ರೀದ್: ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದ ಬಳಿಕ ಸಂದೇಶ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಒಬ್ಬರು ಇನ್ನೊಂದು ಧರ್ಮವನ್ನು ಪ್ರೀತಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ಭಾರತ ಬಹುತ್ವದ ದೇಶ. ಎಲ್ಲಾ ಧರ್ಮ, ಜಾತಿ, ಭಾಷೆ, ಪ್ರಾಂತ್ಯದವರು ಒಟ್ಟಾಗಿ ಬಾಳಬೇಕು. ಮನುಷ್ಯತ್ವ ಬಹಳ ದೊಡ್ಡದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಚಾಮರಾಜಪೇಟೆಯಲ್ಲಿ ಬಕ್ರೀದ್ ಅಂಗವಾಗಿ ನಡೆದ ಸಾಮೂಹಿಕ ಪ್ರಾರ್ಥನೆ ನಂತರ ಅವರು ಮಾತನಾಡಿದರು.

‘ಎಲ್ಲರೂ ಭಕ್ತಿಯಿಂದ ಪ್ರಾರ್ಥನೆಯಲ್ಲಿ ಭಾಗವಹಿಸಿ ಮನುಕುಲಕ್ಕೆ ಒಳಿತಾಗಲಿ ಎಂದು ಪ್ರಾರ್ಥಿಸಿದ್ದೀರಿ. ಎಲ್ಲರೂ ಸಾಮೂಹಿಕ ಪ್ರಾರ್ಥನೆ ಮಾಡಿದ್ದು, ಸಮಾಜದಲ್ಲಿ ನಾವೆಲ್ಲರೂ ಅಣ್ಣ ತಮ್ಮಂದಿರ ಹಾಗೆ ಪರಸ್ಪರ ಪ್ರೀತಿ ವಿಶ್ವಾಸದಿಂದ ಬಾಳಬೇಕು’ ಎಂದರು.

1. ನಗರದ ಚಾಮರಾಜಪೇಟೆಯ ಈದ್ಗಾ ಮೈದಾನದಲ್ಲಿ ಈದ್ ಉಲ್ ಅದಾ ಹಬ್ಬದ ಸಾಮೂಹಿಕ ಪ್ರಾರ್ಥನೆಯ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು. ವಸತಿ ಮತ್ತು ವಕ್ಫ್ ಸಚಿವ ಜಮೀರ್ ಅಹ್ಮದ್ ಖಾನ್ ಉಪಸ್ಥಿತರಿದ್ದರು. 2. ಚಾಮರಾಜಪೇಟೆಯ ಈದ್ಗಾ ಮೈದಾನದಲ್ಲಿ ಬಕ್ರೀದ್ ಹಬ್ಬವನ್ನು ಮಕ್ಕಳು ಸಂಭ್ರಮಿಸಿದ್ದು ಹೀಗೆ..

‘ಎಲ್ಲರೂ ಪರಸ್ಪರ ಪ್ರೀತಿಸಬೇಕು. ಪ್ರತಿಯೊಬ್ಬರೂ ಸಹಿಷ್ಣುತೆ ಪಾಲಿಸಬೇಕು. ಎಲ್ಲ ಧರ್ಮವನ್ನು ಪ್ರೀತಿಸುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಆಗ ಮಾತ್ರ ರಾಷ್ಟ್ರ, ಸಮಾಜ ಹಾಗೂ ಎಲ್ಲಾ ಧರ್ಮಗಳೂ ಏಳಿಗೆಯಾಗುತ್ತದೆ’ ಎಂದು ಹೇಳಿದರು.

‘ಸಂವಿಧಾನದಲ್ಲಿ ನಂಬಿಕೆ ಇಟ್ಟಿರುವ ನಮ್ಮ ಸರ್ಕಾರ, ಸಂವಿಧಾನ ಹೇಳುವಂತೆ ನಡೆದುಕೊಳ್ಳುತ್ತದೆ. ತಾರತಮ್ಯ ಮಾಡುವುದಿಲ್ಲ. ಕರ್ನಾಟಕದ ಏಳು ಕೋಟಿ ಜನರನ್ನು ರಕ್ಷಣೆ ಮಾಡುವ ಜವಾಬ್ದಾರಿ ನಮ್ಮದು’ ಎಂದು ಭರವಸೆ ನೀಡಿದರು.

‘ಅಲ್ಪಸಂಖ್ಯಾತರು ಯಾವುದೇ ಕಾರಣಕ್ಕೂ ಭಯ, ಆತಂಕ ಪಡಬೇಕಾದ ಅಗತ್ಯವಿಲ್ಲ. ನಮ್ಮ ಸರ್ಕಾರದಲ್ಲಿ ಅಲ್ಪಸಂಖ್ಯಾತರು, ಬಹುಸಂಖ್ಯಾತರಿಗೆ ಒಂದೇ ರೀತಿಯಲ್ಲಿ ರಕ್ಷಣೆ ಕೊಡುವ ಕೆಲಸ ಮಾಡುತ್ತೇವೆ. ಎಲ್ಲಕ್ಕಿಂತ ಮುಖ್ಯವಾಗಿ ನಾಡಿನ ಅಭಿವೃದ್ಧಿಗೆ ಒಳ್ಳೆ ಮಳೆ ಬೆಳೆಯಾಗಲಿ ಎಂದು ಪ್ರಾರ್ಥಿಸುತ್ತೇನೆ’ ಎಂದು ತಿಳಿಸಿದರು.

ವಸತಿ ಸಚಿವ ಜಮೀರ್ ಅಹಮದ್ ಖಾನ್ ಉಪಸ್ಥಿತರಿದ್ದರು.

ನಗರದಾದ್ಯಂತ ಭಕ್ತಿಯಿಂದ ಬಕ್ರೀದ್ ಆಚರಣೆ

ತ್ಯಾಗ ಹಾಗೂ ಬಲಿದಾನದ ಸಂಕೇತವಾದ ಬಕ್ರೀದ್ ಅನ್ನು ಮುಸ್ಲಿಂ ಸಮುದಾಯದವರು ನಗರದಲ್ಲಿ ಶ್ರದ್ಧೆ ಹಾಗೂ ಭಕ್ತಿಯಿಂದ ಆಚರಿಸಿದರು.

ಮಸೀದಿಗಳಲ್ಲಿ ಸಾಮೂಹಿಕ ಪ್ರಾರ್ಥನೆ ನಡೆಯಿತು. ಸಮುದಾಯದವರು ಪ್ರಾರ್ಥನೆಯಲ್ಲಿ ಪಾಲ್ಗೊಂಡರು. ಧರ್ಮಗುರುಗಳು ಸಂದೇಶ ನೀಡಿದರು.

ಚಾಮರಾಜಪೇಟೆ, ಪಾದರಾಯನಪುರ, ಕಲಾಸಿಪಾಳ್ಯ, ಮೈಸೂರು ರಸ್ತೆ, ಶಿವಾಜಿನಗರ, ಹೆಬ್ಬಾಳ, ಆರ್.ಟಿ.ನಗರ, ಶಾಂತಿನಗರ, ಲಾಲ್‌ಬಾಗ್ ರಸ್ತೆ, ಮಾಗಡಿ ರಸ್ತೆ, ಕಮ್ಮಗೊಂಡನಹಳ್ಳಿ ಸೇರಿದಂತೆ ನಗರದ ವಿವಿಧೆಡೆಯಲ್ಲಿರುವ ಪ್ರಮುಖ ಮಸೀದಿಗಳಲ್ಲಿ ಮುಸ್ಲಿಂ ಬಾಂಧವರು ಪ್ರಾರ್ಥನೆ ಸಲ್ಲಿಸಿದರು.

ಮಕ್ಕಳು, ದೊಡ್ಡವರು ಹೊಸ ಬಟ್ಟೆ ಧರಿಸಿ, ಹೊಸ ಟೋಪಿ ತೊಟ್ಟು ಸಂಭ್ರಮಿಸಿದರು. ಪರಸ್ಪರ ಆಲಂಗಿಸಿಕೊಂಡು ಶುಭಾಶಯ ವಿನಿಮಯ ಮಾಡಿಕೊಂಡರು. ಮಕ್ಕಳು ಶುಭಾಶಯ ವಿನಿಯಮ ಮಾಡಿಕೊಂಡರು.

ಚಾಮರಾಜಪೇಟೆಯ ಈದ್ಗಾ ಮೈದಾನದಲ್ಲಿ ಈದ್ ಉಲ್ ಅದಾ ಹಬ್ಬದ ಅಂಗವಾಗಿ ಮುಸ್ಲಿಂ ಸಮುದಾಯದವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು —ಪ್ರಜಾವಾಣಿ ಚಿತ್ರಗಳು: ಪ್ರಶಾಂತ್ ಎಚ್.ಜಿ.

THIS IS AN ADVERTISEMENT FOR INFORMATION PURPOSES ONLY. THIS IS NOT AN ANNOUNCEMENT AND DOES NOT CONSTITUTE AN INVITATION OR OFFER TO ACQUIRE, PURCHASE OR SUBSCRIBE FOR UNITS OR SECURITIES. NOT FOR RELEASE, PUBLICATION OR DISTRIBUTION, DIRECTLY OR INDIRECTLY OUTSIDE INDIA IN ANY JURISDICTION, INCLUDING IN THE UNITED STATES.

(Please scan this QR code to view the Corrigendum)

SOBHA
PASSION AT WORK

SOBHA LIMITED

Our Company was originally incorporated as ‘Sobha Developers Private Limited’ on August 7, 1995, under the Companies Act, 1956 at Bangalore, Karnataka, pursuant to a certificate of incorporation dated August 7, 1995, issued by the Registrar of Companies, Karnataka at Bangalore (“**RoC**”). Subsequently, pursuant to conversion from a private company to a public company, the name of our Company was changed to ‘Sobha Developers Limited’ and a fresh certificate of incorporation dated June 2, 2006, was issued by the RoC under the Companies Act, 1956. Thereafter, the name of our Company was changed to ‘Sobha Limited’ and a fresh certificate of incorporation dated August 18, 2014, consequent on change of name was issued by the RoC under the Companies Act, 2013. For details in relation to the change in name of our Company and the address of our registered office, see “*General Information*” beginning on page 54 of the letter of offer dated June 12, 2024 (“**Letter of Offer**”).

Registered and Corporate Office: SOBHA, Sarjapur-Marathahalli, Outer Ring Road (ORR), Devarabisanahalli, Bellandur Post, Bangalore 560 103, Karnataka, India; **Tel**: +91 80 4932 0000
Contact Person: Bijan Kumar Dash, Company Secretary and Compliance Officer
E-mail: rights.issue@sobha.com; **Website**: www.sobha.com
Corporate Identity Number: L45201KA1995PLC018475

CORRIGENDUM TO THE LETTER OF OFFER: NOTICE TO SHAREHOLDERS (THE “CORRIGENDUM”)

FOR PRIVATE CIRCULATION TO ELIGIBLE EQUITY SHAREHOLDERS OF SOBHA LIMITED (OUR “COMPANY” OR THE “ISSUER”) ONLY

ISSUE OF UP TO 12,107,981* PARTLY PAID-UP EQUITY SHARES OF FACE VALUE OF ₹10 EACH OF OUR COMPANY (“RIGHTS EQUITY SHARES”) FOR CASH AT A PRICE OF ₹1,651 PER RIGHTS EQUITY SHARE (INCLUDING A PREMIUM OF ₹1,641 PER RIGHTS EQUITY SHARE) (“ISSUE PRICE”) AGGREGATING UP TO ₹19,990.28 MILLION* ON A RIGHTS BASIS TO THE ELIGIBLE EQUITY SHAREHOLDERS IN THE RATIO OF 6 RIGHTS EQUITY SHARES FOR EVERY 47 FULLY PAID-UP EQUITY SHARE HELD BY THE ELIGIBLE EQUITY SHAREHOLDERS ON THE RECORD DATE, THAT IS ON WEDNESDAY, JUNE 19, 2024 (“RECORD DATE”) (THE “ISSUE”). FOR FURTHER DETAILS, SEE “*TERMS OF THE ISSUE*” BEGINNING ON PAGE 356 OF THE LETTER OF OFFER.

**Assuming full subscription in the Issue, Allotment and receipt of all Call Monies with respect to the Rights Equity Shares. Subject to finalisation of Basis of Allotment. For further details on Payment Schedule, see “Terms of the Issue – Payment Terms” on page 376 of the Letter of Offer.*

This is with reference to the Letter of Offer filed with the Securities and Exchange Board of India (“**SEBI**”), BSE Limited (“**BSE**”) and National Stock Exchange of India Limited (“**NSE**”) in relation to the Issue. Investors to note the following:

1. The last date for credit of rights entitlements has been inadvertently disclosed as Thursday, July 27, 2024 instead of Thursday, June 27, 2024 on pages 56 and 374 of the Letter of Offer. The last date for credit of rights entitlements shall stand updated as Thursday, June 27, 2024 and the aforesaid date has also been disclosed in the Abridged Letter of Offer to be sent to the Eligible Equity Shareholders.
2. In *“Risk Factors – 2. Our Company is currently involved in proceedings initiated by the Directorate of Enforcement (“ED”) in relation to alleged non-compliances with the Prevention of Money Laundering Act, 2002 (“PMLA”). While our Company has preferred an appeal before the Hon’bl Appellate Tribunal, New Delhi (“Tribunal”) to set aside a provisional attachment order (“PAO”) issued by the ED and confirmed by the Adjudicating Authority, New Delhi (“AA”), we cannot assure you, that such PAO will be set aside, which could adversely affect our business, financial condition, results of operations, prospects and reputation.”* on pages 18 and 19 of the Letter of Offer, it has been inadvertently disclosed that the proceedings initiated by the ED has been disclosed as an emphasis of matter instead of a key audit matter in our FY 2024 Audited Consolidated Financial Statements and accordingly, such reference shall stand updated and cross reference to *“Risk Factor – 7. Our Statutory Auditors have included emphasis of matters in our Audited Consolidated Financial Statements as of and for Fiscal 2023 and as of and for Fiscal 2024. There is no assurance that our auditors’ reports for any future fiscal periods will not contain qualifications, matters of emphasis or other observations which could subject us to additional liabilities due to which our reputation and financial condition may be adversely affected.”* shall stand deleted.

The above changes are to be read in conjunction with the Letter of Offer and accordingly their references in the Letter of Offer stand updated and amended pursuant to this Corrigendum. The information in this Corrigendum supplements the Letter of Offer and updates the information in the Letter of Offer, as applicable. All capitalised terms used in this Corrigendum shall, unless the context otherwise requires, have the meaning ascribed to them in the Letter of Offer.

The Corrigendum will be filed with SEBI and the Stock Exchanges and shall be made available on the website of SEBI at www.sebi.gov.in, on the websites of the Stock Exchanges i.e. NSE and BSE at www.nseindia.com and www.bseindia.com, respectively and the websites of Lead Managers, i.e., JM Financial Limited and BOB Capital Markets Limited at www.jmfl.com and www.bobcaps.in, respectively.

For and on behalf of Sobha Limited
Sd/-
Place: Bengaluru **Bijan Kumar Dash**
Date: June 17, 2024 **Company Secretary and Compliance Officer**

LEAD MANAGERS TO THE ISSUE		REGISTRAR TO THE ISSUE
JM FINANCIAL **JM Financial Limited** 7th Floor, Cnergy Appasaheb Marathe Marg Prabhadevi, Mumbai 400 025 Maharashtra, India **Tel**: +91 22 6630 3030 **E-mail**: sobha.rights@jmfl.com **Website**: www.jmfl.com **Investor Grievance ID**: grievance.ibd@jmfl.com **Contact Person**: Prachee Dhuri **SEBI Registration No.**: INM000010361	BOBCAPS TRUST | INNOVATION | EXCELLENCE **BOB Capital Markets Limited** 1704, B Wing, 17th Floor, Parinee Crescenzo Plot No. C –38/39, G Block, Bandra Kurla Complex, Bandra (East), Mumbai 400 051 Maharashtra, India **Tel**: : +91 22 6138 9353 **E-mail**: sobha.rights@bobcaps.in **Website**: www.bobcaps.in **Investor Grievance ID**: investorgrievance@bobcaps.in **Contact Person**: Nivedika Chavan **SEBI Registration Number**: INM000009926	LINK Intime **Link Intime India Private Limited** C-101, 247 Park, L.B.S. Marg, Vikhroli West Mumbai 400 083, Maharashtra, India **Tel**: +91 810 811 4949 **E-mail**: sobha.rights2024@linkintime.co.in **Website**: www.linkintime.co.in **Investor grievance email**: sobha.rights2024@linkintime.co.in **Contact Person**: Shanti Gopalkrishnan **SEBI Registration No.**: INR000004058

ISSUE PROGRAMME

ISSUE OPENS ON	LAST DATE FOR ON MARKET RENUNCIATION*	ISSUE CLOSES ON**
FRIDAY, JUNE 28, 2024	MONDAY, JULY 1, 2024	THURSDAY, JULY 4, 2024

**Eligible Equity Shareholders are requested to ensure that renunciation through off-market transfer is completed in such a manner that the Rights Entitlements are credited to the demat accounts of the Renouncees on or prior to the Issue Closing Date.*
***Our Board or the Rights Issue Committee will have the right to extend the Issue Period as it may determine from time to time but not exceeding 30 days from the Issue Opening Date (inclusive of the Issue Opening Date). Further, no withdrawal of Application shall be permitted by any Applicant after the Issue Closing Date.*

Sobha Limited is proposing, subject to receipt of requisite approvals, market conditions and other considerations, a rights issue of its equity shares and has filed a Letter of Offer dated June 12, 2024 with SEBI, BSE and NSE. The Letter of Offer and this Corrigendum shall be available on the website of the Company at www.sobha.com, on the website of SEBI at www.sebi.gov.in, on the websites of the Stock Exchanges i.e. NSE and BSE at www.nseindia.com and www.bseindia.com, respectively, and the websites of Lead Managers, i.e., JM Financial Limited and BOB Capital Markets Limited at www.jmfl.com and www.bobcaps.in, respectively. Investors should note that investment in equity shares involves a high degree of risk. For details, potential investors should refer to the Letter of Offer, including the section titled “*Risk Factors*” beginning on page 17 of the Letter of Offer.

THE RIGHTS ENTITLEMENTS AND THE RIGHTS EQUITY SHARES HAVE NOT BEEN, AND WILL NOT BE, REGISTERED UNDER THE UNITED STATES SECURITIES ACT OF 1933, AS AMENDED (THE “U.S SECURITIES ACT”) AND MAY NOT BE OFFERED OR SOLD WITHIN THE UNITED STATES, EXCEPT PURSUANT TO AN EXEMPTION FROM, OR IN A TRANSACTION NOT SUBJECT TO, THE REGISTRATION REQUIREMENTS OF THE U.S. SECURITIES ACT AND APPLICABLE STATE SECURITIES LAWS. ACCORDINGLY, THE RIGHTS EQUITY SHARES ARE ONLY BEING OFFERED AND SOLD OUTSIDE THE UNITED STATES IN “OFFSHORE TRANSACTIONS” AS DEFINED IN AND IN RELIANCE ON REGULATION S UNDER THE U.S. SECURITIES ACT TO ELIGIBLE EQUITY SHAREHOLDERS LOCATED IN JURISDICTIONS WHERE SUCH OFFER AND SALE IS PERMITTED UNDER THE LAWS OF SUCH JURISDICTIONS. THE OFFERING TO WHICH THIS LETTER OF OFFER RELATES IS NOT, AND UNDER NO CIRCUMSTANCES IS TO BE CONSTRUED AS, AN OFFERING OF ANY RIGHTS ENTITLEMENTS OR RIGHTS EQUITY SHARES FOR SALE IN THE UNITED STATES OR AS A SOLICITATION THEREIN OF AN OFFER TO BUY ANY OF THE SAID SECURITIES. ACCORDINGLY, YOU SHOULD NOT FORWARD OR TRANSMIT THIS LETTER OF OFFER INTO THE UNITED STATES AT ANY TIME.

ಬ್ಯೂರೋ ಆಫ್ ಎನರ್ಜಿ ಎಫಿಷಿಯನ್ಸಿ
(ಭಾರತ ಸರ್ಕಾರದ ವಿದ್ಯುತ್ ಸಚಿವಾಲಯದ ಅಡಿಯಲ್ಲಿನ ಒಂದು ಶಾಸನಬದ್ಧ ಅಂಗ)
4ನೇ ಮಹಡಿ, ಸೇವಾ ಭವನ, ಆರ್.ಕೆ.ಪುರಂ, ನವದೆಹಲಿ–110066
ವೆಬ್‌ಸೈಟ್: www.beeindia.gov.in ಫೋನ್: 011–26766700

28 ಮತ್ತು 29 ಸೆಪ್ಟಂಬರ್, 2024 ರಂದು ಎನರ್ಜಿ ಮ್ಯಾನೇಜರ್ಸ್ ಹಾಗೂ ಎನರ್ಜಿ ಆಡಿಟರ್‌ಗಳಿಗೆ 24ನೇ ನ್ಯಾಷನಲ್ ಸರ್ಟಿಫಿಕೇಶನ್ ಎಕ್ಸಾಮಿನೇಶನ್

ಬ್ಯೂರೋ ಆಫ್ ಎನರ್ಜಿ ಎಫಿಷಿಯನ್ಸಿ ಇವರು, ಎನರ್ಜಿ ಮ್ಯಾನೇಜರ್ಸ್ ಹಾಗೂ ಎನರ್ಜಿ ಆಡಿಟರ್‌ಗಳಿಗಾಗಿ, **28ನೇ ಮತ್ತು 29ನೇ ಸೆಪ್ಟಂಬರ್, 2024** (ಶನಿವಾರ ಮತ್ತು ಭಾನುವಾರ) ರಂದು 24ನೇ ನ್ಯಾಷನಲ್ ಸರ್ಟಿಫಿಕೇಶನ್ ಪರೀಕ್ಷೆ ಕೈಗೊಳ್ಳುತ್ತಿದ್ದಾರೆ.

ವಿವರಣಾ ಕೈಪಿಡಿಯನ್ನು www.aipnpc.org ವೆಬ್‌ಸೈಟ್‌ನಿಂದ, ವೆಬ್‌ಸೈಟ್‌ನಲ್ಲಿ ನೀಡಲಾಗಿರುವ ಸೂಚನೆಗಳ ಪ್ರಕಾರ ಡೌನ್‌ಲೋಡ್ ಮಾಡಿಕೊಳ್ಳಬಹುದು. ಮೇಲಿನ ವೆಬ್‌ಸೈಟ್‌ಗೆ ಸಂಬಂಧಿಸಿದ ಲಿಂಕ್ www.beeindia.gov.in ನಲ್ಲಿ ಕೂಡ ಲಭ್ಯವಿರುತ್ತದೆ.

ಆನ್‌ಲೈನ್ ನೋಂದಣಿ ಆರಂಭ: 1ನೇ ಜುಲೈ, 2024 ರಂದು 17:00 ಗಂಟೆ.
ಆನ್‌ಲೈನ್ ನೋಂದಣಿ ಮುಕ್ತಾಯ: 31ನೇ ಜುಲೈ, 2024 ರಂದು 23.59 ಗಂಟೆ.

CBC 34106/12/0004/2425 (ಕಾರ್ಯದರ್ಶಿ)

ಚಿನ್ನೇನಹಳ್ಳಿ: ಮತ್ತೊಬ್ಬ ವೃದ್ಧೆ ಸಾವು

ಮಧುಗಿರಿ (ತುಮಕೂರು): ಕಲುಷಿತ ನೀರು ಸೇವಿಸಿ ಆರು ಜನರು ಮೃತಪಟ್ಟಿರುವ ಚಿನ್ನೇನಹಳ್ಳಿ ಗ್ರಾಮದ ಮತ್ತೊಬ್ಬ ವೃದ್ಧೆ ಸೋಮವಾರ ಮೃತಪಟ್ಟಿದ್ದಾರೆ.

ಸೀಮಾಂಧ್ರಪ್ರದೇಶದಪೆನಗೊಂಡತಾಲ್ಲೂಕಿನಪಾರ್ಥನಹಳ್ಳಿನಿವಾಸಿಲಕ್ಷ್ಮಮ್ಮ(70) ಮೃತಪಟ್ಟಿದ್ದಾರೆ. ಹತ್ತು ದಿನಗಳ ಹಿಂದೆ ಚಿನ್ನೇನಹಳ್ಳಿ ಗ್ರಾಮದಲ್ಲಿ ನಡೆದ ಗ್ರಾಮ ದೇವತೆ ಜಾತ್ರೆಗೆ ಬಂದಿದ್ದರು. ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಆಸ್ಪತ್ರೆಗೆ ದಾಖಲಾಗಿರಲಿಲ್ಲ. ಮನೆಯಲ್ಲಿಯೇ ಕೊನೆಯುಸಿರೆಳೆದಿದ್ದಾರೆ ಎಂದು ಸಂಬಂಧಿಕರು ಹೇಳಿದ್ದಾರೆ.

‘ವಯೋಸಹಜ ಅನಾರೋಗ್ಯದಿಂದ ಲಕ್ಷ್ಮಮ್ಮ ಮೃತಪಟ್ಟಿದ್ದಾರೆ. ಕಲುಷಿತ ನೀರು ಪ್ರಕರಣಕ್ಕೂ ಸಾವಿಗೂ ಸಂಬಂಧ ಇಲ್ಲ’ ಎಂದು ಅಧಿಕಾರಿ ತಿಳಿಸಿದ್ದಾರೆ.

ನಿಧನ ವಾರ್ತೆ

ಅನಂತ ಕಾಂಬಳೆ



ಬೆಂಗಳೂರು: ಸ್ವಕುಳಸಾಳಿ ಸಮಾಜದ ಚಿಂತಕ ರಾಜಾಜಿನಗರದ ಅನಂತ ಕಾಂಬಳೆ (80) ಅವರು ಸೋಮವಾರ ನಿಧನರಾದರು.

ಮೃತರಿಗೆ ಪತ್ನಿ ಹಾಗೂ ಇಬ್ಬರು ಪುತ್ರರಿದ್ದಾರೆ.

ಅವರ ಅಂತಿಮ ಆಶಯದಂತೆ ಮೃತ ದೇಹವನ್ನು ಎಂ.ಎಸ್. ರಾಮಯ್ಯ ಕಾಲೇಜು ಆಸ್ಪತ್ರೆಗೆ ದಾನ ಮಾಡಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE
This is to inform the General Public that my client has negotiated to purchase the Schedule Property from **1). G.K. Shankar, S/o. Late. Mr. Kenchappa,** Residing at No.32, 12th Main Road, 1 Block, HMT Layout, Vidyaranyapura, Bengaluru-560097, and **2). Sri. J. Devarajulu Naidu, S/o. Late. Lakshmaiah Naidu,** Residing at No.81, 4th Floor, 4th Cross, 3rd Main, Arehalli, AGS Layout, Bengaluru - 560061, for valuable consideration amount. The aforesaid Vendors have represented to my client that they are the absolute owners of the Schedule property as mentioned below. Any person(s) claiming any right, title or interest of whatsoever nature over the schedule property is called upon to lodge such claim with the undersigned, with supporting documents within 7 days from the date of this publication. In the event no such claims) is received within the stipulated time, it shall be lawful for my client to presume that there are no valid claims) adverse to 1). Sri. G.K. Shankar, S/o. Late. Kenchappa and 2). Sri. J. Devarajulu Naidu, S/o. Late. Lakshmaiah Naidu's right, title and interest in the Schedule Property and proceed with the proposed sale transaction.

SCHEDULE PROPERTY
All that piece and parcel of the immovable residential property bearing vacant Site No.31, formed out of converted Sy. No.69, duly converted from agricultural to Non-Agricultural Residential Purpose vide Official memorandum order bearing No. ALN: (N)(Y) SR/35/2021-22, issued by the office of the Deputy Commissioner, Bangalore District, dated 05/01/2022, Application No. 277892, issued from the office of DeputyCommissioner Bangalore District, Bangalore, in the Layout Named as "VINAYAKA GARDENIA", Presently coming under BBMP Limits, of Lakshmipura Village, Yeshwanthpura Hobli, Bangalore North Taluk, measuring East to West 25 Ft. and North to South 45Ft., totally measuring 1125 Sq. ft., and the same is bounded on the: **East by:** Site No.22, **West by:** Road, **North by:** Site No. 32, **South by**: Road.

K. S. Bheemaiah, Advocate
Mobile No: +91 9845339307
No.186/1 , 2nd Floor, JC Complex
Annexe, Sirur Park Road,
Seshadripuram, Bengaluru-560 020.

REAL ESTATE SELLING

Sites

Sanjaynagar

RMV BHOOPASANDRA
BDA
Site 29'x57' East 40' Road
besides Central Excise, Off
Chawla Road Rs. 3.30 Crore
Call 9980555558

PERSONAL

Change of Name

CHANGE OF NAME
I, **AMITH P KASHYAP** S/o
B. K. Prasanna, Residing at
36, 4th Cross, Shanthivana,
Kodigehalli, Bengaluru-92,
have changed my name
AMIT P to
AMITH P KASHYAP
vide affidavit dated 14-06-2024
before notary H. H. Nagaraj,
Bengaluru.

CHANGE OF NAME
I, **B.Chandra Shekar** S/o
C.Byrappa, R/at No.11/D,
Tarabanahalli village, Siluvepur
Road, Bangalore North Taluk.
In my Voter ID and other
Documents, it is entered as
Chandra shekhar.B. and my correct
name is **B.Chandra Shekar,**
vide affidavit dt:15/06/2024 before
Magistrate VII th ACMM Court,
Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ದಾಬಸ್‌ಪೇಟೆ – ಹೊಸಕೋಟೆ – ದೊಡ್ಡಬಳ್ಳಾಪುರ ರಸ್ತೆ ಪೂರ್ಣ • ಸ್ಥಳೀಯರ ವಾಹನಕ್ಕೂ ಶುಲ್ಕ – ಗ್ರಾಮಸ್ಥರ ವಿರೋಧ

ಹುಲಿಕುಂಟೆ ಟೋಲ್ ಪ್ಲಾಜಾ ಕಾರ್ಯಾರಂಭ

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ದಾಬಸ್‌ಪೇಟೆ-ಹೊಸಕೋಟೆ-ದೊಡ್ಡಬಳ್ಳಾಪುರ ಉಪನಗರದ ಹೊರವರ್ತುಲ ರಸ್ತೆ ಪೂರ್ಣಗೊಂಡಿದ್ದು, ಹುಲಿಕುಂಟೆ ಟೋಲ್ ಪ್ಲಾಜಾದಲ್ಲಿ ಜೂನ್ 14ರಿಂದ ಟೋಲ್ ಸಂಗ್ರಹ ಆರಂಭವಾಗಿದೆ.

ದ್ವಿಚಕ್ರ ವಾಹನಗಳಿಗೆ ಮಾತ್ರ ಸುಂಕ ವಸೂಲಾತಿಯಿಂದ ವಿನಾಯತಿ ನೀಡಲಾಗಿದೆ. ಆದರೆ, ಸ್ಥಳೀಯರ ವಾಹನಗಳಿಗೂ ಶುಲ್ಕ ವಿಧಿಸಿರುವುದಕ್ಕೆ ಹುಲಿಕುಂಟೆ ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು ವಿರೋಧ ವ್ಯಕ್ತಪಡಿಸಿದ್ದಾರೆ.

ಜೂನ್ 14 ರಿಂದ ಎಲ್ಲ ರೀತಿಯ ಖಾಸಗಿ ಮತ್ತು ವಾಣಿಜ್ಯ ವಾಹನಗಳು ದರಪಟ್ಟಿ ಪ್ರಕಾರ ಸುಂಕ ಪಾವತಿಸುತ್ತಿವೆ ಎಂದು ಹೇಳಿರುವ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ದರಪಟ್ಟಿ ಸಹ ಪ್ರಕಟಿಸಿದೆ.

ದಿನದ 24 ಗಂಟೆಯಲ್ಲಿ ಕಾರಿನ ಒಂದು ಕಡೆ ಸಂಚಾರಕ್ಕೆ ₹105, ಮತ್ತೆ ವಾಪಸ್ ಬರಲು ₹155, ಮಾಸಿಕ ಪಾಸ್‌ನಲ್ಲಿ 50 ಬಾರಿ ಒಂದು ಪ್ರಯಾಣಕ್ಕೆ ಅವಕಾಶ ಇದ್ದು, ₹3,490 ನಿಗದಿ ಮಾಡಲಾಗಿದೆ. ಅಲ್ಲದೇ ಭಾರಿ ವಾಹನ ಸೇರಿದಂತೆ ವಿವಿಧ ವಾಹನಗಳಿಗೆ ಬೇರೆ ಬೇರೆ ಶುಲ್ಕ ನಿಗದಿಪಡಿಸಿದೆ.

ರಾಷ್ಟ್ರೀಯ ಹೆದ್ದಾರಿಯಲ್ಲಿನ ಹುಲಿಕುಂಟೆ ಟೋಲ್ ಫ್ಲಾಜಾ

ಹುಲಿಕುಂಟೆ ಟೋಲ್ ಪ್ಲಾಜಾ ಮಾನವರಹಿತವಾಗಿದ್ದು, ಫಾಸ್ಟ್ಯಾಗ್ ಇದ್ದರಷ್ಟೆ ಟೋಲ್ ಪ್ರವೇಶ. ಇಲ್ಲವಾದರೆ ಟೋಲ್ ಅಂಚಿನಲ್ಲಿ ಇರುವ ರಸ್ತೆ ಮೂಲಕ ದುಪ್ಪಟ್ಟು ಶುಲ್ಕ ಪಾವತಿಸಿ ಹೋಗಬೇಕಿದೆ.

ಹುಲಿಕುಂಟೆ ಟೋಲ್ ಫ್ಲಾಜಾದಲ್ಲಿ ಶುಲ್ಕ ಸಂಗ್ರಹ ಪ್ರಾರಂಭವಾಗುವ ಮೂಲಕ ದೊಡ್ಡಬಳ್ಳಾಪುರ ತಾಲ್ಲೂಕಿಗೆ ಪ್ರವೇಶ ಮಾಡುವ ನಾಲ್ಕು ದಿಕ್ಕುಗಳಲ್ಲೂ ಸಹ ವಾಹನ ಮಾಲೀಕರು ಶುಲ್ಕ ಪಾವತಿಸಿಯೇ ಒಳಗೆ ಬರುವಂತಾಗಿದೆ.

ಉಪನಗರ ಹೊರವರ್ತುಲ ರಸ್ತೆ ಯೋಜನೆಯಡಿ ಟೋಲ್ ರಸ್ತೆಯನ್ನು ನಿರ್ಮಾಣ ಮಾಡಲಾಗಿದ್ದು, ಈಗಾಗಲೇ ಮೊದಲ ಹಂತದಲ್ಲಿ ನೆಲ್ಲೂರು-ದೇವನಹಳ್ಳಿಯ 34.15 ಕಿ.ಮೀ ಟೋಲ್ ಸುಂಕ ಸಂಗ್ರಹ 2023ರ ನವೆಂಬರ್‌ನಿಂದ ಆರಂಭವಾಗಿದೆ.

ಬೆಂಗಳೂರು ನಗರಕ್ಕೆ ಪ್ರಮುಖ ನಗರಗಳನ್ನು ಸಂಪರ್ಕಿಸುವ ಕಾರಣಕ್ಕೆ ಉಪನಗರದ ಹೊರವರ್ತುಲ ರಸ್ತೆ ನಿರ್ಮಾಣ ಮಾಡಲಾಗಿದೆ. ಮೊದಲ ಹಂತದಲ್ಲಿ 101 ಕಿ.ಮೀ ದಾಬಸ್‌ಪೇಟ್-ಹೊಸಕೋಟೆ ರಸ್ತೆ ಕಾಮಗಾರಿ ಪೂರ್ಣಗೊಂಡಿದ್ದು, ಈಗಾಗಲೇ ಒಂದು ಕಡೆ ಟೋಲ್ ಸುಂಕ ಸಂಗ್ರಹ ಆರಂಭವಾಗಿದೆ. ಜೂನ್ 14ರಿಂದ ಎರಡನೇ ಟೋಲ್ ಬೂತ್‌ನಲ್ಲಿ ಟೋಲ್ ಸಂಗ್ರಹ ಆರಂಭವಾಗಿದೆ.

ಹುಲಿಕುಂಟೆ ಟೋಲ್ ಪ್ಲಾಜಾ ದರ ಪಟ್ಟಿ

ವಾಹನ ಮಾದರಿ	ಏಕಮುಖ ಸಂಚಾರ	ಅದೇ ದಿನ ಮರಳಿ ಬಂದರೆ	ಒಂದು ತಿಂಗಳಲ್ಲಿ 50 ಬಾರಿ ಸಂಚಾರ ಮಾಸಿಕ ಶುಲ್ಕ	ಜಿಲ್ಲೆಯ ಒಳಗೆ ನೋಂದಣಿ ಆಗಿರುವ ವಾಣಿಜ್ಯ ವಾಹನ	ಸ್ಥಳೀಯರಿಗೆ ಮಾಸಿಕ ಪಾಸ್
ಕಾರು, ಜೀಪು, ವ್ಯಾನ್, ಎಲ್‌ಎಂವಿ	₹105	₹155	₹3,490	₹50	₹340
ಎಲ್‌ಸಿವಿ, ಎಲ್‌ಜಿವಿ, ಮಿನಿಬಸ್	₹170	₹255	₹5,635	₹85	
ಟ್ರಕ್, ಬಸ್, 2 ಅಕ್ಸಲ್	₹355	₹530	₹11,805	₹175	
3 ಅಕ್ಸಲ್ ಕಮರ್ಷಿಯಲ್	₹ 385	₹580	₹12,880	₹195	
ಹೆವಿ ಕನ್‌ಸ್ಟ್ರಕ್ಷನ್ ಮಿಷನರಿ ವಾಹನ	₹555	₹835	₹18,515	₹280	
7ಕ್ಕಿಂತ ಹೆಚ್ಚಿನ ಅಕ್ಸಲ್ ವಾಹನ	₹675	₹1,015	₹22,540	₹340	

ವಿನಾಯಿತಿ ನೀಡದಿದ್ದರೆ ಪ್ರತಿಭಟನೆ

ತೋಟಕ್ಕೆ ಹೋಗಿ ಬರಲು ಸಹ ಟೋಲ್ ಶುಲ್ಕ ಪಾವತಿಸಿ ಹೋಗುವ ಸ್ಥಿತಿ ಉಂಟಾಗಿದೆ. ನಮ್ಮೂರಿನಲ್ಲೇ ಇರುವ ಟೋಲ್‌ಗೆ ನಾವು ಶುಲ್ಕ ಪಾವತಿಸಬೇಕು ಅನ್ನುವುದು ಎಷ್ಟ-ರಮಟ್ಟಿಗೆ ಸರಿ? ಸ್ಥಳೀಯರು ಎನ್ನುವುದಕ್ಕೆ ಖಾತರಿಯಾಗಿ ಆಧಾರ್ ಕಾರ್ಡ್ ತೋರಿಸಿದರೂ ಬಿಡುತ್ತಿಲ್ಲ. ಸ್ಥಳೀಯರಿಗೆ ಶುಲ್ಕ ಪಾವತಿಯಿಂದ ಸಂಪೂರ್ಣ ವಿನಾಯಿತಿ ನೀಡದೆ ಇದ್ದರೆ ಪ್ರತಿಭಟನೆ ಅನಿವಾರ್ಯವಾಗಲಿದೆ.

ಜಿ.ವೆಂಕಟೇಶ್, ಹುಲಿಕುಂಟೆ ನಿವಾಸಿ

ಆನ್‌ಲೈನ್ ಗೇಮ್ ವ್ಯಸನ ವಿದ್ಯಾರ್ಥಿನಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಹಾಸ್ಟೆಲ್‌ನಲ್ಲಿ ತಂಗಿದ್ದ ವಿದ್ಯಾರ್ಥಿನಿಯೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕೋಲಾರ ಜಿಲ್ಲೆ ಶ್ರೀನಿವಾಸಪುರದ ಪಾವನಾ(19) ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿನಿ.

ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿನಿ ಆನ್‌ಲೈನ್ ಗೇಮಿಂಗ್ ಚಟಕ್ಕೆ ಬಿದ್ದಿದ್ದರು. ಪೋಷಕರು ನೀಡಿದ್ದ ಕಾಲೇಜು ಶುಲ್ಕವನ್ನು ಜೂಜಾಟವಾಡಿ ಕಳೆದುಕೊಂಡಿದ್ದರು. ಆ ಹಣ ಹೊಂದಿಸಲು ಸಾಧ್ಯವಾಗದೇ ಆತ್ಮಹತ್ಯೆ ಮಾಡಿಕೊಂಡಿರುವ ಸಾಧ್ಯತೆಯಿದೆ' ಎಂದು ಪೊಲೀಸರು ಹೇಳಿದರು.

'ಪಾವನಾ, ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದಲ್ಲಿ ಬಿಎಸ್‌ಸಿ ಮೊದಲ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದರು. ಮೂರು ದಿನ ರಜೆಯಿದ್ದ ಕಾರಣ ಹಾಸ್ಟೆಲ್‌ನಲ್ಲಿದ್ದ ಸಹ ಪಾಠಿಗಳು ಊರುಗಳಿಗೆ ತೆರಳಿದ್ದರು. ಹಾಸ್ಟೆಲ್‌ನಲ್ಲಿ ಭಾನುವಾರ ರಾತ್ರಿ ಒಬ್ಬರೇ ಇದ್ದರು. ಆ ವೇಳೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಕೊಠಡಿಯಲ್ಲಿ ಡೆತ್‌ನೋಟ್ ಪತ್ತೆಯಾಗಿದೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆ ನಡೆಸಿ ಪಾಲಕರಿಗೆ ಹಸ್ತಾಂತರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಪೋಷಕರು ಕಾಲೇಜು ಶುಲ್ಕ ಪಾವತಿಸಲು ₹15 ಸಾವಿರ ನೀಡಿದ್ದರು. ಅದನ್ನು ಪಾವನಾ ಆನ್‌ಲೈನ್ ಗೇಮಿಂಗ್ ಬಳಸಿಕೊಂಡು ಸಂಪೂರ್ಣ ಹಣ ಕಳೆದುಕೊಂಡಿದ್ದರು' ಎಂದು ಗೊತ್ತಾಗಿದೆ.

ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೆಜೆಟೆಡ್ ಪ್ರೊಬೇಷನರಿ ವಯೋಮಿತಿ ಸಡಿಲಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2017ರಲ್ಲಿ ಕೆಎಎಸ್ ನೇಮಕಾತಿ ಪರೀಕ್ಷೆ ಬರೆದ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿ ಪರಿಗಣಿಸದೆ ಪ್ರಸಕ್ತ ಸಾಲಿನ ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳಿಗೆ ಪರೀಕ್ಷೆ ಬರೆಯಲು ಅವಕಾಶ ನೀಡುವಂತೆ ಕಡತದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದರೂ, ಅವಕಾಶ ಕಲ್ಪಿಸಲು ಕೆಪಿಎಸ್‌ಸಿ ಮತ್ತು ಡಿಪಿಎಆರ್ ಮುಂದಾಗಿಲ್ಲ ಎಂದು ಹುದ್ದೆ ಆಕಾಂಕ್ಷಿಗಳು ದೂರಿದ್ದಾರೆ.

'ಪ್ರಸಕ್ತ ಸಾಲಿನ ನೇಮಕಾತಿಗೆ ಜುಲೈ 21ರಂದು ಪೂರ್ವಭಾವಿ ಪರೀಕ್ಷೆ ನಡೆಸಲು ಕೆಪಿಎಸ್‌ಸಿ ನಿರ್ಧರಿಸಿದೆ. 2017ರಲ್ಲಿ ಕೆಎಎಸ್ ಪರೀಕ್ಷೆ ಬರೆದವರಿಗೆ ವಯೋಮಿತಿ ಪರಿಗಣಿಸದೆ ಅವಕಾಶ ನೀಡಬೇಕೆಂಬ ಬೇಡಿಕೆಯನ್ನು ಪರಿಗಣಿಸಿದರೆ, ಪೂರ್ವಭಾವಿ ಪರೀಕ್ಷೆಯನ್ನು ಕನಿಷ್ಠ ಮೂರು ತಿಂಗಳು ಮುಂದೂಡಬೇಕಾಗುತ್ತದೆ ಎಂದು ಕೆಪಿಎಸ್‌ಸಿ ಹೇಳುತ್ತಿದೆ. ಇದೇ ಕಾರಣಕ್ಕೆ ಆದೇಶ ಹೊರಡಿಸಲು ಡಿಪಿಎಆರ್ ಹಿಂದೇಟು ಹಾಕುತ್ತಿದೆ' ಎಂದು ಕರ್ನಾಟಕ ರಾಜ್ಯ ದಲಿತ ಪದವೀಧರ ಸಂಘದ ಅಧ್ಯಕ್ಷ ವಿ. ಲೋಕೇಶ ಆರೋಪಿಸಿದ್ದಾರೆ.

ಅಭ್ಯರ್ಥಿಗಳ ಬೇಡಿಕೆಗೆ ಸ್ಪಂದಿಸಿದ್ದ ಮುಖ್ಯಮಂತ್ರಿ, ಸಚಿವ ಸಂಪುಟ ಸಭೆಯ ಘಟನೋತ್ತರ ಅನುಮೋದನೆ ಬಾಕಿ ಇಟ್ಟು ಆದೇಶ ಹೊರಡಿಸುವಂತೆ ಡಿಪಿಎಆರ್ ಕಾರ್ಯದರ್ಶಿಗೆ ಮಾರ್ಚ್ ತಿಂಗಳಿನಲ್ಲೇ ಸೂಚನೆ ನೀಡಿದ್ದರು. ಆದರೆ, ಚುನಾವಣಾ ನೀತಿ ಸಂಹಿತೆಯ ಕಾರಣಕ್ಕೆ ಡಿಪಿಎಆರ್ ಆದೇಶ ಹೊರಡಿಸಿರಲಿಲ್ಲ.

'ಕೆಪಿಎಸ್‌ಸಿ ಮತ್ತು ಡಿಪಿಎಆರ್ ಕಾರ್ಯದರ್ಶಿಯವರನ್ನು ಭೇಟಿ ಮಾಡಿ ನಮ್ಮ ಬೇಡಿಕೆ ಮುಂದಿಟ್ಟಿದ್ದೇವೆ. ಆದೇಶ ಹೊರಡಿಸಲು ವಿಳಂಬ ಮಾಡುತ್ತಿರು-ವುದರಿಂದ, ಕಳೆದ 4– 5 ವರ್ಷಗಳಿಂದ ಪರೀಕ್ಷೆ ಬರೆಯಲು ತಯಾರಿ ನಡೆಸುತ್ತಿರುವ 50 ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳಲ್ಲಿ ಆತಂಕ ಉಂಟಾಗಿದೆ' ಎಂದಿದ್ದಾರೆ.

'ಪ್ರತಿಕ್ರಿಯೆ ಪಡೆಯಲು ಡಿಪಿಎಆರ್ ಕಾರ್ಯದರ್ಶಿಗೆ ಕರೆ ಮಾಡಿದರೂ ಅವರು ಕರೆ ಸ್ವೀಕರಿಸಲಿಲ್ಲ.

ಶೈಕ್ಷಣಿಕ ಸುಧಾರಣೆ, ಸಂಶೋಧನೆ ಹಾಗೂ ಸಾಂಸ್ಕೃತಿಕ ವಿನಿಮಯಕ್ಕೆ ಸಂಬಂಧಿಸಿದಂತೆ ಇಲ್ಲಿನ ಪಿಇಎಸ್ ವಿಶ್ವವಿದ್ಯಾಲಯ ಹಾಗೂ ಅಮೆರಿಕದ ಮಿಯಾಮಿಯಲ್ಲಿರುವ ಫ್ಲಾರಿಡಾ ಇಂಟರ್‌ನ್ಯಾಷನಲ್ ಯೂನಿವರ್ಸಿಟಿ ನಗರದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಒಡಂಬಡಿಕೆ ಮಾಡಿಕೊಂಡವು. ಪಿಇಎಸ್ ವಿಶ್ವವಿದ್ಯಾಲಯದ ಸಮ ಕುಲಾಧಿಪತಿ ಪ್ರೊ.ಡಿ.ಜವಾಹರ್, ಕುಲಪತಿ ಜೆ. ಸೂರ್ಯಪ್ರಸಾದ್, ಪಿಇಎಸ್ ಸಮೂಹದ ಸಿಒಒ ಅಜೋಯ್ ಕುಮಾರ್, ಫ್ಲಾರಿಡಾ ಇಂಟರ್‌ನ್ಯಾಷನಲ್ ಯೂನಿವರ್ಸಿಟಿಯ ಕೆನ್ನೆತ್ ಜಿ. ಫರ್ಟನ್, ಕೆವಿನ್ ಲೋಥ್ರಿಡ್ಜ್, ಎಸ್‌.ಎಸ್ ಅಯ್ಯಂಗಾರ್ ಪಾಲ್ಗೊಂಡಿದ್ದರು

ನಗರದಲ್ಲಿ ಇಂದು

ನಟಸಾರ್ವಭೌಮ ಡಾ. ರಾಜಕುಮಾರ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮ,
ಆಯೋಜನೆ: ಕುವೆಂಪು ಕಲಾನಿಕೇತನ ಹಾಗೂ ಸ್ನೇಹ ಶ್ರೀರಕ್ಷಾ ಸಂಗೀತ ನೃತ್ಯ ಸಾಂಸ್ಕೃತಿಕ ಅಕಾಡೆಮಿ,

ಎಸ್.ಎ. ಚಿನ್ನೇಗೌಡ

ಉದ್ಘಾಟನೆ: ಎಸ್.ಎ. ಚಿನ್ನೇಗೌಡ, ಅಧ್ಯಕ್ಷತೆ: ವ.ಚ. ಚನ್ನೇಗೌಡ, ಅತಿಥಿಗಳು: ವೂಡೇ.ಪಿ. ಕೃಷ್ಣ, ಶರತ್ ಲೋಹಿತಾಶ್ವ, ಪ್ರಶಸ್ತಿ ಪುರಸ್ಕೃತರು: ಹೊನ್ನವಳ್ಳಿ ಕೃಷ್ಣ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಸಂಜೆ 5

ATTENTION!
DIPLOMA/ B.Sc Graduates

NTTF® Securing your Future with your own Hands

POST DIPLOMA 1 YEAR PROGRAMS

NTTF is an educational foundation established in 1963 with Swiss co-operation to provide quality education & excellent technical training as per industry demand. NTTF graduates are widely accepted by industries in India and abroad. NTTF invites applications for the following programs listed below.

ADMISSIONS OPEN-2024

Programs Commencing from September 2024

TOOL DESIGN
Post Diploma Program
(Mechanical / Production / Automobile & Tool Engg.)
Offered at: Electronic City (Bengaluru), Peenya (Bengaluru), Dharwad, Tellicherry, Gannavaram, Murbad, Vellore, Pune & Chennai

INDUSTRIAL AUTOMATION
Post Diploma Program for Diploma & B.Sc. holders
(Electronics/ Electrical/ Instrumentation/ Mechatronics)
Offered at: Electronic City (Bengaluru) & Burma Mines (Jharkhand)

EMBEDDED SYSTEM & IoT
Post Diploma Program for Diploma & B.Sc. holders
(Electronics/ Electrical/ Instrumentation/ Computer)
Offered at: Electronic City (Bengaluru) & Trichy

POWER ELECTRONICS
Post Diploma Program for Diploma & B.Sc. holders
(Electronics/ Electrical/ Instrumentation)
Offered at: Electronic City (Bengaluru)

Placements through Campus Selections

Placement at reputed Industries with attractive packages

NTTF ELECTRONICS CENTRE, 40/40A, Electronic City, Phase 1, Hosur Road, Bangalore- 560100, Phone: 080 42623506

NETTUR TECHNICAL TRAINING FOUNDATION
Bengaluru (Electronic City) - 6364864681, Bengaluru (Peenya) - 6364864682,
Dharwad - 6364864683, Tellicherry - 6364864690, Gannavaram - 6364864686,
Murbad - 6364864687, Vellore - 6364864684, Pune - 6364864694, Chennai - 6364937148

Apply Online:
www.nttftrg.com
Mail at: enquiry@nttf.co.in

ಕ್ಷೇಮ ಕುಶಲ

ಮನಸ್ಸಿಗೆ ನೋವಾದರೆ ಹಲ್ಲುಗಳಿಗೂ ನೋವು!

ಡಾ. ವಿನಯ ಶ್ರೀನಿವಾಸ್

ಸುಮಾರು ಒಂದು ವರ್ಷದಿಂದ ತಪಸ್ಸಿಗೆ ಕೂರುವಂತೆ ಕುಳಿತು 'ನೀಟ್' ಪರೀಕ್ಷೆಗೆ ಸಿದ್ಧತೆ ನಡೆಸಿದ್ದ ಸಮೀಕ್ಷಾ, ಅಂದು ದಂತ ಚಿಕಿತ್ಸಾಲಯಕ್ಕೆ ಬಂದಿದ್ದಳು. ಒಸಡು ಮತ್ತು ಹಲ್ಲುಗಳ ಆಸುಪಾಸಿನ ಅಂಗಾಂಶದಲ್ಲಿ ಉರಿಯೂತ ಮತ್ತು ನೋವು ಅವಳ ಸಮಸ್ಯೆ.

ಪರಿಚಿತರ ಮಗ ಗಗನ್ ಭಾರತೀಯ ಸೇನೆಯಲ್ಲಿ ಸೈನಿಕ. ತವರೂರಿಗೆ ಬಂದಿದ್ದ ಆತನೂ ಈ ಬಾರಿ ಅಂತಹದ್ದೇ ಸಮಸ್ಯೆಗಾಗಿ ದಂತವೈದ್ಯರನ್ನು ಸಂಪರ್ಕಿಸಿದ್ದ.

ಕೆಲವು ತಿಂಗಳುಗಳ ಹಿಂದೆಯಷ್ಟೇ ಪತಿಯ ಹಠಾತ್ ಅಗಲಿಕೆಯಿಂದ ನೊಂದಿದ್ದ ಸಂಬಂಧಿ ರಾಣಿಯ ಸಮಸ್ಯೆಯೂ ಒಸಡುಗಳ ಉರಿಯೂತವೇ ಆಗಿತ್ತು.

ಮೇಲಿನ ಮೂರೂ ಸನ್ನಿವೇಶಗಳಲ್ಲಿ ಗಮನಿಸಬೇಕಾದ ಸಾಮಾನ್ಯ ಅಂಶ ಮಾನಸಿಕ ಒತ್ತಡ ಮತ್ತು ಪರಿದಂತದ ಅಂಗಾಂಶಗಳ ಉರಿಯೂತ. ಮಾನಸಿಕ ಒತ್ತಡವು ಅಧಿಕ ರಕ್ತದೊತ್ತಡ, ಮಧುಮೇಹದಂತಹ ಅಸಾಂಕ್ರಾಮಿಕ ಕಾಯಿಲೆಗಳಿಗೆ ನೇರವಾಗಿ ಕಾರಣವಾಗಬಲ್ಲದು ಎಂದು ಕೇಳಿದ್ದೇವೆ. ಅದು ದಂತಾರೋಗ್ಯದ ಮೇಲೆಯೂ ವ್ಯತಿರಿಕ್ತ ಪರಿಣಾಮ ಬೀರಬಹುದು ಎನ್ನುತ್ತಾರೆ, ದಂತತಜ್ಞರು.

ಒತ್ತಡ ಹೇಗೆ ಅಪಾಯ?

ಬದುಕಿನಲ್ಲಿ ವೃತ್ತಿ, ಪ್ರವೃತ್ತಿ, ಕುಟುಂಬ, ಸ್ನೇಹಿತ ವರ್ಗ – ಎಲ್ಲವನ್ನೂ ನಿಭಾಯಿಸುವಾಗ ಒತ್ತಡಕ್ಕೊಳಗಾಗುವುದು ಸಹಜ. ಈ ಮಾನಸಿಕ ಕುಗ್ಗುವಿಕೆಯು ಕೆಲವೊಮ್ಮೆ ಅಲ್ಪಾವಧಿಯದ್ದೂ, ಇನ್ನು ಕೆಲವೊಮ್ಮೆ ದೀರ್ಘಾವಧಿಯದ್ದೂ ಆಗಿರಬಹುದು. ದೀರ್ಘ ಸಮಯದವರೆಗೆ ಕಾಡುವ ಮಾನಸಿಕ ಒತ್ತಡವು ಶರೀರದಲ್ಲಿ ಕೆಲವು ಮುಖ್ಯ ಬದಲಾವಣೆಗಳನ್ನು ತರುತ್ತದೆ. ಒತ್ತಡದಿಂದ ಮುಖ್ಯವಾಗಿ ಪ್ರಚೋದನೆಗೆ ಒಳಗಾಗುವ ಕೇಂದ್ರ ನರಮಂಡಲವು ಹೈಪೋಥಾಲಾಮಸ್ ಮತ್ತು ಪಿಟ್ಯುಟರಿ ಗ್ರಂಥಿಗಳನ್ನೂ ಪ್ರಚೋದಿಸುತ್ತದೆ. ಪಿಟ್ಯುಟರಿಯಿಂದ ಪ್ರಚೋದನೆಗೊಂಡ ಅಡ್ರೆನಲ್ ಗ್ರಂಥಿಯು ಕಾರ್ಟಿಸಾಲ್ ಎಂಬ ರಸದೂತವನ್ನು ಹೆಚ್ಚು ಸ್ರವಿಸಲು ಆರಂಭಿಸುತ್ತದೆ. ಹೆಚ್ಚಾದ ಕಾರ್ಟಿಸಾಲ್ ಹಲವು ಬಗೆಯಲ್ಲಿ ವ್ಯಕ್ತಿಯ ರೋಗನಿರೋಧಕ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತದೆ. ಮುಖ್ಯವಾಗಿ ಪ್ರತಿಕಾಯಗಳ ಪ್ರಮಾಣವನ್ನು ಕಡಿಮೆ ಮಾಡುವುದಲ್ಲದೆ ರೋಗಾಣುಗಳೊಂದಿಗೆ ಹೋರಾಡುವ ಜೀವಕೋಶಗಳ ಕ್ಷಮತೆಯನ್ನೂ ಕ್ಷೀಣಿಸುತ್ತದೆ. ಅಷ್ಟೇ ಅಲ್ಲ, ಲಾಲಾರಸದ ಆಮ್ಲೀಯತೆಯಲ್ಲಿ ವ್ಯತ್ಯಾಸ ತರುವುದರ ಜೊತೆಗೆ 'ಎ' ಬಗೆಯ ಪ್ರತಿಕಾಯಗಳ ಸ್ರವಿಸುವಿಕೆಯನ್ನೂ ಕುಗ್ಗಿಸುತ್ತದೆ. ಈ ಎಲ್ಲ ಅಂಶಗಳು ಸೋಂಕಿನ ಹೆಚ್ಚಳಕ್ಕೆ ಎಡೆಮಾಡಿಕೊಡುತ್ತವೆ. ಭಾವನೆಗಳ ತೀವ್ರ ಏರುಪೇರಿನಿಂದಾಗಿ ಪ್ರಚೋದನೆಗೊಳ್ಳುವ ಮತ್ತೊಂದು ನರವ್ಯೂಹವು ರಕ್ತನಾಳಗಳನ್ನು ಕಿರಿದಾಗಿಸುವುದರಿಂದ ಪರಿದಂತ ಅಂಗಾಂಶಗಳಿಗೆ ಆಮ್ಲಜನಕ ಹಾಗೂ ಪೌಷ್ಟಿಕಾಂಶಗಳ ಪೂರೈಕೆಯಲ್ಲಿಯೂ ವ್ಯತಯವಾಗುತ್ತದೆ. ಇದು ಸಹ ಸೋಂಕನ್ನು ಮತ್ತಷ್ಟು ಆಹ್ವಾನಿಸುತ್ತದೆ. ಒತ್ತಡದಿಂದಾಗಿ ಹೆಚ್ಚು ಸ್ರವಿಸಲ್ಪಡುವ ನರವಾಹಕಗಳಾದ 'ಎಪಿನೆಫ್ರಿನ್', 'ನಾರ್ ಎಪಿನೆಫಿನ್', 'ನ್ಯೂರೋ ಕೈನಿನ್' ಮೊದಲಾದ ಅಂಶಗಳು ರೋಗನಿರೋಧಕ ವ್ಯವಸ್ಥೆಯ ಜೀವಕೋಶಗಳನ್ನು ಪ್ರಚೋದಿಸುತ್ತವೆ. ಸಹಜಕ್ಕಿಂತಲೂ ಹೆಚ್ಚು ಕ್ರಿಯಾಶೀಲವಾಗುವ ಈ ಜೀವಕೋಶಗಳು ಪರಿದಂತದ ಅಂಗಾಂಶದ ಹಾನಿಗೂ ಕಾರಣವಾಗುತ್ತವೆ.

ಮನಸ್ಸಿನ ಚಿಂತೆ ಮತ್ತು ದುಗುಡಗಳು ಅಂಗಾಂಶಗಳ ದುರಸ್ತಿ ಪ್ರಕ್ರಿಯೆಯ ಮೇಲೆಯೂ ಪರಿಣಾಮ ಬೀರಬಲ್ಲವು. ಈ ಸಂದರ್ಭದಲ್ಲಿ ಹೆಚ್ಚು ಸ್ರವಿಸಲ್ಪಡುವ ಪ್ರೋಟಿಯೇಸ್ ಮತ್ತು ಪ್ರೋಸ್ಟಾಗ್ಲ್ಯಾಂಡಿನ್ ಎಂಬ ಅಂಶಗಳು ಮೂಳೆ ಮತ್ತು ಸಂಯೋಜಕ ಅಂಗಾಂಶದ ದುರಸ್ತಿಯನ್ನು ನಿಧಾನಿಸುತ್ತವೆ. ಹಾಗಾಗಿ ಸೋಂಕಿನ ನಿಯಂತ್ರಣ ಇನ್ನಷ್ಟು ತಡವಾಗುತ್ತದೆ.

ದೈನಂದಿನ ಅಭ್ಯಾಸಗಳು

ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ಸಮರ್ಪಕವಾಗಿ ಮತ್ತು ಪ್ರಾಯೋಗಿಕವಾಗಿ ನಿಭಾಯಿಸಲು ಅಸಮರ್ಥರಾಗುವವರು ಒತ್ತಡದಿಂದ ಬಳಲುತ್ತಾರೆ. ಇಂತಹವರು ಮನಸ್ಸಿನ ತುಮುಲದಿಂದ ಹೊರಬರಲು ಮದ್ಯಪಾನ ಮತ್ತು ಧೂಮಪಾನದಂಥ ದುರಭ್ಯಾಸಗಳ ದಾಸರಾಗುತ್ತಾರೆ. ಇದರಿಂದಲೂ ವ್ಯಕ್ತಿಯ ರೋಗನಿರೋಧಕ ವ್ಯವಸ್ಥೆ ಶಿಥಿಲಗೊಳ್ಳುತ್ತದೆ. ಧೂಮಪಾನದಿಂದ ದೇಹವನ್ನು ಸೇರುವ ನಿಕೋಟಿನ್, ರಕ್ತನಾಳಗಳನ್ನು ಕುಗ್ಗಿಸಿ ಅಂಗಾಂಶಗಳಿಗೆ ಆಮ್ಲಜನಕ ಮತ್ತು ಪೌಷ್ಟಿಕಾಂಶಗಳ ಪೂರೈಕೆಯಲ್ಲಿ ವ್ಯತ್ಯಯವನ್ನುಂಟುಮಾಡುತ್ತದೆ. ಅಲ್ಲದೆ ಈ ಎರಡೂ ಅಭ್ಯಾಸಗಳಿಂದಾಗಿ ವ್ಯಕ್ತಿಯ ನಿದ್ದೆ ಮತ್ತು ವಿಶ್ರಾಂತಿಯೂ ಅಸ್ತವ್ಯಸ್ತಗೊಳ್ಳುತ್ತವೆ. ಇಂತಹ ವ್ಯಕ್ತಿಗಳು ಆರೋಗ್ಯಸಮಸ್ಯೆಗಳಿಗೆ ಸರಿಯಾದ ಸಮಯಕ್ಕೆ ಚಿಕಿತ್ಸೆ ಮಾಡಿಸುವಲ್ಲಿಯೂ ನಿರಾಸಕ್ತಿ ತೋರುತ್ತಾರೆ. ಮನಸ್ಸು ಸ್ಥಿಮಿತದಲ್ಲಿಲ್ಲದಿದ್ದಾಗ ವ್ಯಕ್ತಿಯು ಹಲ್ಲು, ನಾಲಿಗೆ, ತುಟಿ, ಗಲ್ಲಗಳ ಒಳ ಭಾಗವನ್ನು ಕಚ್ಚುವುದು, ನಾಲಿಗೆಯನ್ನು ಮೇಲ್ದವಡೆಗೆ ಒತ್ತುವುದು, ಉಗುರು ಕಚ್ಚುವುದು, ಬೆರಳು ಚೀಪುವುದು, ಪೆನ್ನು, ಪೆನ್ಸಿಲ್ ಇತ್ಯಾದಿ ಸಾಮಗ್ರಿಗಳನ್ನು ಬಾಯಿಯ ಒಳಗೆ ತೂರಿಸಿಕೊಳ್ಳುವುದು ಮೊದಲಾದ ಅಭ್ಯಾಸಗಳಿಗೂ ಅರಿವಿಲ್ಲದಂತೆಯೇ ಶರಣಾಗುತ್ತಾರೆ. ಇದರಿಂದ ಕೂಡ ಹಲ್ಲು ಮತ್ತು ಪರಿದಂತದ ಅಂಗಾಂಶಗಳಿಗೆ ಸೋಂಕು ತಗಲುತ್ತದೆ. ಮನೋವ್ಯಾಕುಲತೆಯಿಂದ ಬಳಲುವ ವ್ಯಕ್ತಿಯ ಆಹಾರಾಭ್ಯಾಸವೂ ಬಾಯಿಯ ಅನಾರೋಗ್ಯಕ್ಕೆ ಪೂರಕವಾಗಿರುತ್ತದೆ. ಅವರು ಹೆಚ್ಚು ಪಿಷ್ಟಾಂಶ, ಸಕ್ಕರೆ ಮತ್ತು ಸಿಹಿ ತಿನಿಸುಗಳು, ಮೆತ್ತಗಿನ ಆಹಾರಗಳು, ಜಿಡ್ಡಿನ ಪದಾರ್ಥಗಳನ್ನು ಹೆಚ್ಚು ಸೇವಿಸುತ್ತಾರೆ. ಇದೂ ದಂತಕ್ಷಯ ಮತ್ತು ಒಸಡುಗಳ ಸೋಂಕಿಗೆ ಕಾರಣವಾಗುತ್ತವೆ.

ಚಿಕಿತ್ಸಾಲಯದಲ್ಲಿ

ಪದೇ ಪದೇ ಪರಿದಂತದ ಅಂಗಾಂಶದ ಉರಿಯೂತಕ್ಕೆಂದು ಬರುವ ರೋಗಿಗಳೊಡನೆ ದಂತತಜ್ಞರು ಆಪ್ತವಾಗಿ ಮಾತನಾಡಿ ಅವರ ಜೀವನಶೈಲಿಯ ಬಗ್ಗೆ ತಿಳಿಯುವ ಪ್ರಯತ್ನ ಮಾಡಬೇಕು. ಅವರು ಒತ್ತಡದಿಂದ ಬಳಲುತ್ತಿದ್ದಾರೆ ಎಂಬ ಸೂಕ್ಷ್ಮ ಕಂಡು ಬಂದರೆ ಆ ಬಗ್ಗೆ ಸಲಹೆಗಳನ್ನು ನೀಡಬೇಕು. ಅಗತ್ಯವಿದ್ದರೆ ಆಪ್ತಸಮಾಲೋಚಕರಲ್ಲಿ ಅಥವಾ ಮನೋವೈದ್ಯರಲ್ಲಿ ಸಲಹೆಯನ್ನು ತೆಗೆದುಕೊಳ್ಳುವಂತೆಯೂ ಸೂಚಿಸಬೇಕು.

(ಕಂದಕ(ಟ್ರೆಂಚ್)ಗಳಲ್ಲಿ ಅಡಗಿಕೊಂಡು ಯುದ್ಧಮಾಡುವ ಸೈನಿಕರಲ್ಲಿ ಸಾಮಾನ್ಯವಾಗಿ ಕಂಡು ಬರುವ ತೀವ್ರತರವಾದ ಒಸಡಿನ ಹುಣ್ಣು ಮತ್ತು ಉರಿಯೂತವನ್ನು 'ಟ್ರೆಂಚ್ ಮೌತ್' ಎನ್ನುತ್ತಾರೆ)

❖

ಒಂದಿಷ್ಟು ಸಲಹೆಗಳು

- ಕೆಲಸಗಳನ್ನು ಆದ್ಯತೆಯ ಮೇರೆಗೆ ಮಾಡಿ.
- ಎಲ್ಲ ಕೆಲಸಗಳನ್ನು ಸಮರ್ಪಕವಾಗಿ ನಿಭಾಯಿಸಲು ವೇಳಾಪಟ್ಟಿಯನ್ನು ಹಾಕಿಕೊಳ್ಳಿ.
- ನಿಯಮಿತ ವ್ಯಾಯಾಮವನ್ನು ತಪ್ಪಿಸದಿರಿ.
- ಪೌಷ್ಟಿಕ ಆಹಾರಸೇವನೆಯನ್ನು ಮರೆಯದಿರಿ.
- ಉತ್ತಮ ಸ್ನೇಹಿತರನ್ನು ಸಂಪಾದಿಸಿ, ಅವರೊಡನೆ ನಿಮ್ಮ ಮಾನಸಿಕ ತುಮುಲಗಳನ್ನು ಹಂಚಿಕೊಳ್ಳಿ.
- ಉತ್ತಮ ಹವ್ಯಾಸಗಳಲ್ಲಿ ತೊಡಗಿಸಿಕೊಳ್ಳಿರಿ.

ನೆನಪುಗಳು ಭಾರವೇ?



ನಮ್ಮ ಅತ್ಯಮೂಲ್ಯ ನೆನಪುಗಳು ಕೇವಲ ವಾಸ್ತವಿಕ ವಿವರಗಳಲ್ಲಿ ಅಡಗಿಲ್ಲ, ಸಂವೇದನೆಗಳಲ್ಲಿ ಮತ್ತು ಭಾವನೆಗಳಲ್ಲಿ ಅಡಗಿದೆ.

ರಮ್ಯಾ ಶ್ರೀಹರಿ

'ಪದೇ ಪದೇ ಹಳೆಯದ್ದನ್ನೆಲ್ಲಾ ನೆನಪಿಸಿಕೊಂಡು ಕೊರಗಬೇಡ, ಮರೆತುಬಿಡು' ಎಂದು ಸಲಹೆ ಕೊಡುವುದು ಸಾಮಾನ್ಯ. ಜಗಳವಾಡುವಾಗ ಆಗಿಹೋದ ಘಟನೆಯೊಂದನ್ನು ಪ್ರಸ್ತಾಪಿಸಿ ಹಳೆಯ ಗಾಯಕ್ಕೆ ನ್ಯಾಯ ಕೇಳಿದರೆ 'ಇಂದಿನ ಜಗಳದ ಬಗೆಗೆ ಮಾತ್ರ ಮಾತಾಡು, ಹಳೆಯದೆಲ್ಲ ಕೆದಕಬೇಡ' ಎಂದು ಹೇಳುತ್ತೇವೆ. ಕಳೆದುಹೋದ ಪ್ರೀತಿಯನ್ನು, ಮಧುರ ಕ್ಷಣಗಳನ್ನು ಇಂದು ನೆನಪಿಸಿಕೊಂಡು ಹೃದಯಕ್ಕೆ ಮುಳ್ಳು ಚುಚ್ಚಿಸಿಕೊಂಡವರಂತೆ ಆಡುತ್ತಾ 'ಹಳೆಯದ್ದನ್ನೆಲ್ಲಾ ನಾನು ಮರೆತುಬಿಡುವಂತಾಗಬಾರದೇ' ಎಂದು ಮತ್ತಷ್ಟು ಪರಿತಾಪ ಪಡುತ್ತೇವೆ.

ಹಳೆಯದನ್ನು, ಆಗಿಹೋದ ಕಹಿಘಟನೆಗಳನ್ನು, ಕಳೆದುಹೋದುದನ್ನು ಮರೆತುಬಿಡಬೇಕೆಂಬ ಒತ್ತಡ, ಅದೇಕೆ? ಯಾಕೆ ಹಾಗೆ ಕೆಲವು ನೆನಪುಗಳನ್ನು ಅಳಿಸಿಕೊಳ್ಳಬೇಕೆಂದು ಬಯಸುತ್ತೇವೆ? ಅದು ಭಾರ, ಅದರ ಭಾರದಿಂದ ಇಂದಿನ ನಡಿಗೆ ನಿಧಾನವಾಗುತ್ತಿದೆ, ಇಂದಿನ ಓಟ ಲಯ ತಪ್ಪುತ್ತಿದೆ ಎಂದಲ್ಲವೇ? ಇಷ್ಟೆಲ್ಲಾ ಗೊತ್ತಿದ್ದಮೇಲೆ, ಭಾರವನ್ನು ಸರಾಗವಾಗಿ ಇಳಿಸಿ ನಡೆದುಕೊಂಡು ಹೋಗಿಬಿಡಬಹುದಲ್ಲವೇ? ಹಾಗೆ ನೆನಪುಗಳನ್ನು ಬೇಕೆಂದಾಗ ನೆನಪಿಸಿಕೊಂಡು ಬೇಡವಾದಾಗ ಅಳಿಸಿಬಿಡುವುದು ನಮ್ಮ ಕೈಲಿದ್ದಿದ್ದರೆ ಅದನ್ನು ಯಾರ ಹತ್ತಿರವೂ ಹೇಳಿಸಿಕೊಳ್ಳದೆ, 'ಮರೆಯುವಂತಾಗಬಾರದೇ' ಎಂದು ಹಪಹಪಿಸದೆ ಸಹಜವಾಗಿಯೇ ಮರೆತುಬಿಡಬಹುದಾಗಿತ್ತಲ್ಲವೇ? ಅದು ಅಷ್ಟು ಸುಲಭವಲ್ಲ. ನೆನಪು-ಮರೆವಿನ ಕೀಲಿಕೈ ಕೆಲವೊಮ್ಮೆ ಮಾತ್ರವೇ ಬುದ್ಧಿಯ ಕೈಲಿರುತ್ತದೆ; ಹೆಚ್ಚಿನ ಸಮಯ ಅದು ಭಾವದ ಕೈಯಲ್ಲಿರುತ್ತದೆ. ಯಾವುದನ್ನು ಮರೆಯಬೇಕು ಯಾವುದನ್ನು ನೆನಪಿಟ್ಟುಕೊಳ್ಳಬೇಕು ಎನ್ನುವುದನ್ನು ನಿರ್ಧರಿಸುವುದು ನಮ್ಮ ಎಚ್ಚರದ ಬುದ್ಧಿಯಲ್ಲ, ಅದನ್ನು ತೀರ್ಮಾನಿಸುವುದು ನಮ್ಮ ಆಳದ ಪ್ರಜ್ಞೆ, ನಮ್ಮ ಭಾವಲೋಕ.

ನೆನಪು ಕೇವಲ ನಮ್ಮ ಮಿದುಳಿನಲ್ಲಿರದೆ ನಮ್ಮ ದೇಹದ ಪ್ರತಿಯೊಂದು ಅಂಗದಲ್ಲಿಯೂ ಇದೆ; ದೇಹದ ಪ್ರತಿಯೊಂದು ಭಾಗವೂ ನೆನಪುಗಳನ್ನು ತನ್ನದೇ ರೀತಿಯಲ್ಲಿ ನೆನಪಿಟ್ಟುಕೊಂಡಿರುತ್ತದೆ. ಎಂದೋ ಆಗಿಹೋದ ಅನುಭವ ಮತ್ತು ಅಂದು ನಮ್ಮ ರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು ನಾವು ನೀಡಿದ ಪ್ರತಿಕ್ರಿಯೆ ಪುನರಾವರ್ತನೆಯಾದಾಗ ಅದು ರೂಪಾಂತರ ಹೊಂದಿ ಇಂದಿನ ನಮ್ಮ ವರ್ತನೆಯಾಗಿ ಅಭ್ಯಾಸವಾಗಿಬಿಟ್ಟಿರುತ್ತದೆ. ಹಾಗಾಗಿಯೇ ಕೆಲವು ಸನ್ನಿವೇಶಗಳಿಗೆ ನಾವು ನೀಡುವ ಪ್ರತಿಕ್ರಿಯೆ, ವರ್ತಿಸುವ ರೀತಿಯನ್ನು ಎಷ್ಟೇ ಪ್ರಯತ್ನಪಟ್ಟರೂ ಬದಲಾಯಿಸಿಕೊಳ್ಳುವುದು ಸುಲಭವಾಗಿರುವುದಿಲ್ಲ. ಅಂದರೆ ನಮ್ಮ ನೆನಪುಗಳು 'ಹಾಗಾಯಿತು, ಹೀಗಿತ್ತು, ಹೇಗೆಲ್ಲಾ ಅಂದುಬಿಟ್ಟರು' ಎಂದು ಹೇಳುವ ಕಥೆಗಳಲ್ಲಿಲ್ಲ; ಅದು ಅಂದು ನಡೆದ ಘಟನೆಗೆ ನಾವು ನೀಡಿದ ಪ್ರತಿಕ್ರಿಯೆ ಹೇಗಿತ್ತು, ಅದನ್ನು ನಮ್ಮ ಆಳದ ಪ್ರಜ್ಞೆ, ನಮ್ಮ ದೇಹ ಯಾವ ರೀತಿಯಲ್ಲಿ ಸಂಗ್ರಹಿಸಿಟ್ಟುಕೊಂಡು ಯಾವಾಗ ಹೊರತೆಗೆಯುತ್ತದೆ ಎನ್ನುವುದರಲ್ಲಿದೆ.

ಎಂದರೆ ಇಂದಿನ ನಮ್ಮ ಬದುಕಿನ ಬೇರುಗಳು ಹಿಂದೆ ಆಗಿಹೋದ ಘಟನೆಗಳಿಗೆ ನಾವು ನೀಡುತ್ತಿದ್ದ ಪ್ರತಿಕ್ರಿಯೆಗಳಲ್ಲಿ ನೆಲೆಯಾಗಿರುತ್ತದೆ. ಹಾಗಾಗಿಯೇ ನೆನಪುಗಳನ್ನು ನಾವು ಸ್ಮಾರ್ಟ್ ಫೋನಿನಲ್ಲಿ ಫೋಟೊಗಳನ್ನು, ಸಂದೇಶಗಳನ್ನು ತುಂಬಿಸಿಟ್ಟುಕೊಂಡಂತೆ ಸುಮ್ಮನೆ ಸಂಗ್ರಹಿಸಿಡಲಾಗುವುದಿಲ್ಲ.

ನಮ್ಮ ಈಗಿನ ಬದುಕಿಗೆ ಪ್ರಸ್ತುತವಲ್ಲದ ನೆನಪುಗಳು ನಮ್ಮ ಯಾವ ಪ್ರಯತ್ನವೂ ಇಲ್ಲದೆ ತಾನೇ ಕಳೆದುಹೋಗುತ್ತಿರುತ್ತದೆ; ಅದು ಮುಗಿದುಹೋದದ್ದು ಎನ್ನುವ ಅರಿವಿರುತ್ತದೆ. ಅದೇ ಕೆಲವು ನೆನಪುಗಳು ಏನೇ ಮಾಡಿದರೂ ಅಳಿಸಿಹೋಗುವುದಿಲ್ಲ. ಕಾರಣ ಇಂದಿನ ಬದುಕಿಗೆ ಬೇಕಾದ ಯಾವುದೋ ಮುಖ್ಯ ಸಂದೇಶವೊಂದನ್ನು ಅದು ಹೊತ್ತು ನಿಂತಿರುತ್ತದೆ; ಸರಿಯಾದ ಸಮಯಕ್ಕೆ ನಮಗೆ ಬೇಕಾದ, ನಮ್ಮ ಜೀವನಕ್ಕೆ ಮಹತ್ವಪೂರ್ಣವಾದ ಯಾವುದೋ ಸಂಗತಿಯನ್ನು ತಿಳಿಸಿಕೊಡುವುದಕ್ಕೆ ಕಾಯುತ್ತಿರುತ್ತದೆ. ನಮ್ಮ ನಿನ್ನೆಯ, ಇಂದಿನ, ನಾಳಿನ ಬದುಕನ್ನು ಸಾವಯವವಾಗಿ ಬೆಸೆಯುವ ಸೂತ್ರವೇ ನೆನಪು. ನಮ್ಮನ್ನು ನಾವು ಕಂಡುಕೊಳ್ಳುವ ಹಾದಿಯಲ್ಲಿ ನೆನಪೂ ಸಹಾಯಕ್ಕೆ ಬರುತ್ತದೆ.

ಕಾಲದಿಂದ ಕಾಲಕ್ಕೆ ವ್ಯಕ್ತಿಗಳು ಬದಲಾಗುವ ಹಾಗೆ ನೆನಪುಗಳೂ ಬದಲಾಗುತ್ತಿರುತ್ತದೆ. ಒಂದೇ ಘಟನೆಯನ್ನು ಇಬ್ಬರು ವ್ಯಕ್ತಿಗಳು ತೀರಾ ವಿಭಿನ್ನವಾಗಿಯೇ ನೆನಪಿಟ್ಟುಕೊಳ್ಳುವುದು ಸಾಧ್ಯವಿದೆ. ನಮ್ಮೆಲ್ಲಾ ನೆನಪುಗಳು ಎಂದಿನದೋ ಘಟನೆಯ, ಯಾವುದೋ ವ್ಯಕ್ತಿ/ ವಸ್ತು/ ಅನುಭವದ ನಿಖರವಾದ ವಿವರಗಳನ್ನು, ಮಾಹಿತಿಯನ್ನು ತಿಳಿಸುವುದು ಸಾಧ್ಯವಿದೆಯೇ? ಇಲ್ಲವೇ? ನೆನಪುಗಳೆಷ್ಟು ವಿಶ್ವಾಸಾರ್ಹ? ಈ ವಿವರಗಳನ್ನು ಕುರಿತು ವಿಸ್ತೃತವಾದ ಚರ್ಚೆಗಳು, ಅಧ್ಯಯನಗಳು, ಪ್ರಯೋಗಗಳು ನಡೆದಿವೆ. ಇದೆಲ್ಲದರ ತಾತ್ಪರ್ಯ ನೆನಪುಗಳು ಎಂದರೆ ನಾವು ಬುದ್ಧಿಪೂರ್ವಕವಾಗಿ ಭಾಷೆಯ ನೆರವಿನಿಂದ ದಾಖಲಿಸಿದ್ದಷ್ಟೇ ಅಲ್ಲ, ಯಾವುದು ಅಪ್ರಜ್ಞಾಪೂರ್ವಕವಾಗಿ ನಮ್ಮ ನರಮಂಡಲದಲ್ಲೇ ಅಚ್ಚೊತ್ತಿಕೊಂಡಿದ್ದು, ಹೊರಜಗತ್ತಿನ ಪ್ರಚೋದಕಗಳಿಗೆ (triggers) ಅಪ್ರಯತ್ನಪೂರ್ವಕವಾಗಿ ಪ್ರತಿಕ್ರಿಯೆಯ ರೂಪದಲ್ಲಿ ತೋರ್ಪಡಿಸಿಕೊಳ್ಳುತ್ತದೋ ಅದು ನಮ್ಮ ಬದುಕಿಗೆ ಮುಖ್ಯವಾದ ವಿಷಯಗಳನ್ನು ಹೊತ್ತ ನೆನಪುಗಳಾಗಿರುತ್ತವೆ.

ನಮ್ಮ ಅತ್ಯಮೂಲ್ಯ ನೆನಪುಗಳು ಕೇವಲ ವಾಸ್ತವಿಕ ವಿವರಗಳಲ್ಲಿ ಅಡಗಿಲ್ಲ, ಬದಲಾಗಿ ಅವು ನಮ್ಮ ದೇಹದಲ್ಲಿ ಉಂಟುಮಾಡುವ ಸಂವೇದನೆಗಳಲ್ಲಿ ಮತ್ತು ಉಕ್ಕಿಸುವ ಭಾವಗಳಲ್ಲಿ ಅಡಗಿದೆ. ಯಾವ ನೆನಪು ಯಾವ ಭಾವವನ್ನು, ಯಾವ ಸಂವೇದನೆಯನ್ನು ಉಂಟುಮಾಡುತ್ತದೆ ಎಂದು ಗುರುತಿಸುವುದನ್ನು ಅಭ್ಯಾಸಮಾಡಿಕೊಂಡರೆ ಯಾಕೆ ಕೆಲವನ್ನು ಮರೆಯುವುದು ಅಷ್ಟು ಕಷ್ಟ ಎನ್ನುವುದೂ ಗೊತ್ತಾಗುತ್ತದೆ.

ಮನೆಯಲ್ಲಿರುವ, ಇನ್ಮುಂದೆ ಉಪಯೋಗವಿಲ್ಲದ ಒಂದು ವಸ್ತುವನ್ನೇ ಬಿಸಾಕಿಬಿಡಲು ಅದೆಷ್ಟು ಯೋಚಿಸುತ್ತೇವೆ ನಾವು, ಹಾಗಿದ್ದಮೇಲೆ ಹಿಂದೆಂದೋ ನಮಗೆ ಬದುಕಿ ಉಳಿಯಲು, ಸುರಕ್ಷೆಯನ್ನು ಪಡೆಯಲು ಸಹಾಯ ಮಾಡಿದ್ದ ವರ್ತನೆಯನ್ನು, ಪ್ರತಿಕ್ರಿಯೆಯನ್ನು ಅಷ್ಟು ಸುಲಭವಾಗಿ ಬಿಸಾಕಿ ಮುನ್ನಡೆದುಬಿಡಲಾದೀತೆ? ಹಾಗಾದರೆ ಕಾಡಿಸುವ ನೆನಪುಗಳಿಂದ ಬಿಡುಗಡೆಯೇ ಇಲ್ಲವೇ?

ಯಾವ ನೆನಪುಗಳನ್ನು ನಾವು ಕಥೆಯಂತೆ ಹೇಳುತ್ತಿರುತ್ತೇವೋ ಅಂತಹ ನೆನಪುಗಳಿಂದ ಬಿಡುಗಡೆ ಸುಲಭ. ಹೇಳುವ ಕ್ರಿಯೆಯೇ ಆ ಬಿಡುಗಡೆ ನೀಡುತ್ತದೆ. ಅಷ್ಟೇ ಅಲ್ಲದೆ ನಮ್ಮ 'ನೆನಪಿನ ಕಥೆ'ಗಳು ಅನುಭವದ ಯಥಾವತ್ ಪ್ರತಿಕೃತಿಯಲ್ಲ; ನೆನಪಿನ ಕಥನ ಅನುಭವದ ವ್ಯಾಖ್ಯಾನ ಮಾತ್ರ. ಒಂದೇ ನೆನಪನ್ನು ಪಾಸಿಟಿವ್ ಆಗಿಯೂ ನೆಗೆಟಿವ್ ಆಗಿಯೂ ನಿರೂಪಿಸಬಹುದೆಂಬ ತಿಳಿವಳಿಕೆ ನಮ್ಮನ್ನು ನೆನಪಿನ ಸುಳಿಯಿಂದ ಬಿಡುಗಡೆಗೊಳಿಸುತ್ತದೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ -ಗಣಿತ

ಸಮಾಂತರ ಶ್ರೇಢಿ

ಅಭ್ಯಾಸ 5.2

ಪರಿಹಾರ:– (..........ಹಿಂದಿನ ಸಂಚಿಕೆಯಿಂದ)

ಸಮೀಕರಣ (1)ರಲ್ಲಿ d ಬೆಲೆಯಾದ –15ನ್ನು ಹಾಕಿದಾಗ

$a = 38 - (-15)$

$\Rightarrow 38 + 15 = 53$

$\therefore a = 53 \quad d = -15$

$\therefore 3rd \ term = 53+(3-1)(-15)(\because a_n = a+(n-1)d)$
$= 53-30 = 23$

$4th \ term = 53+(4-1)(-15)(\because a_n = a+(n-1)d)$
$= 8$

$5th \ term = 53+(5-1)(-15)(\because a_n = a+(n-1)d)$
$= -7$

ಹೀಗಾಗಿ ಬಿಟ್ಟುಹೋದ ಪದಗಳು 53, 23, 8, –7

4) 3, 8, 13, 18... ಈ ಸಮಾಂತರ ಶ್ರೇಢಿಯ ಎಷ್ಟನೇ ಪದ 78?

ಪರಿಹಾರ:– ನೀಡಿರುವ ಸಮಾಂತರ ಶ್ರೇಢಿ 3, 8, 13, 18......

ಇಲ್ಲಿ $a = 3 \quad d = 8-3 = 5 \quad n^{th}$ ಪದ = 78

Then $a_n = a+(n-1)d$

$78 = 3+(n-1)(5)$

$5(n-1) = 78-3 \Rightarrow 5(n-1) = 75$

$n-1 = \frac{75}{5}$

$n-1 = 15 \Rightarrow n = 15+1 \Rightarrow n = 16$

ಹೀಗಾಗಿ 78 ಸಮಾಂತರ ಶ್ರೇಢಿಯ 16ನೇ ಪದವಾಗಿದೆ

5) ಈ ಕೆಳಗಿನ ಸಮಾಂತರ ಶ್ರೇಢಿಯಲ್ಲಿರುವ ಪದಗಳ ಸಂಖ್ಯೆ ಕಂಡುಹಿಡಿಯಿರಿ

(i) 7, 13, 19 205

(ii) 18, 1512, 13 47

ಪರಿಹಾರ:– (i) 7, 13, 19 205

ನೀಡಿರುವ ಸಮಾಂತರ ಶ್ರೇಢಿ 7, 13, 19 205

ಇಲ್ಲಿ $a = 7 \quad d = 13-7 = 6 \quad a_n = 205$

$a+(n-1)d = 205$

$7+(n-1)6 = 205$

$6(n-1) = 205-7$

$6(n-1) = 198$

$n-1 = \frac{198}{6}$

$n-1 = 33$

$n = 33+1 = 34$

ಸಮಾಂತರ ಶ್ರೇಢಿಯಲ್ಲಿರುವ ಪದಗಳ ಸಂಖ್ಯೆ = 34

(ii) $18, 15\frac{1}{2}, 13 .... -47$

ನೀಡಿರುವ ಸಮಾಂತರ ಶ್ರೇಢಿ $18, 15\frac{1}{2}, 13 .... -47$

ಇಲ್ಲಿ $a = 18$,

$d = 15\frac{1}{2} - 18 = \frac{31}{2} - 18 = -\frac{5}{2}$

$a_n = -47, \qquad n = ?$

$a+(n-1)d = -47$

$18+(n-1)\left(-\frac{5}{2}\right) = -47$

$-\left(\frac{5}{2}\right)(n-1) = -65$

$n-1 = \frac{65x2}{5}$

$n-1 = 26 \Rightarrow n = 26+1 = 27 \Rightarrow n = 27$

6) –150 ಇದು 11, 8, 5, 2 ..... ಸಮಾಂತರ ಶ್ರೇಢಿಯ ಪದವಾಗಿದೆಯೇ ಪರೀಕ್ಷಿಸಿ.

ಪರಿಹಾರ: ದತ್ತ ಸಮಾಂತರ ಶ್ರೇಢಿಯ ಪದ 11, 8, 5, 2 .....

$\Rightarrow a_2 - a_1 = 8-11 = -3$

$\Rightarrow a_3 - a_2 = 5-8 = -3$

$\Rightarrow a_4 - a_3 = 2-5 = -3$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ

ಮೇಲೆ ತಿಳಿಸಿದ ಸಂಖ್ಯೆಗಳು $a = 11$ ಸಾಮಾನ್ಯ ವ್ಯತ್ಯಾಸ $d = -3$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿದೆ.

–150 ಈ ಸಮಾಂತರ ಶ್ರೇಢಿಯ ಪದವಾಗಿದ್ದಾಗ ಇದು n ನೇ ಪದವಾಗಿರುತ್ತದೆ

$a_n = -150$

$a_n = a+(n-1)d = -150$

$11+(n-1)(-3) = -150$

$-3(n-1) = -150-11$

$-3(n-1) = -161$

$-3(n-1) = -161$

$-3(n-1) = -161$

$(n-1) = -\frac{161}{3}$

$n = \frac{161}{3}+1 \Rightarrow n = \frac{164}{3}$

ಇಲ್ಲಿ n ಒಂದು ಧನ ಪೂರ್ಣಾಂಕವಲ್ಲ ಆದ್ದರಿಂದ ದತ್ತ –150 ಸಮಾಂತರ ಶ್ರೇಢಿಯ ಪದವಲ್ಲ.

7) ಒಂದು ಸಮಾಂತರ ಶ್ರೇಢಿಯ 11ನೇ ಪದ 38, 16ನೇ ಪದ 73 ಆದರೆ 31ನೇ ಪದವನ್ನು ಕಂಡುಹಿಡಿಯಿರಿ.

ಪರಿಹಾರ:– ಮೊದಲ ಪದ a ಆಗಿರಲಿ, ಸಾಮಾನ್ಯ ವ್ಯತ್ಯಾಸ d ಆಗಿರಲಿ,

11ನೇ ಪದ= 38

$a+(11-1)d = 38 \ (\because a_n = a+(n-1)d)$

$a+10d = 38$.............. (1)

16ನೇ ಪದ= 73

$a+(16-1)d = 73$............ (2)

(1) ಮತ್ತು (2)ನ್ನು ಬಿಡಿಸುವುದರಿಂದ

$a+15d = 73$

$a+10d = 38$

(-) (-) (-)

$5d = 35$

$\therefore d = 7$

ಈಗ ಸಮೀಕರಣ 1ನ್ನು ತೆಗೆದುಕೊಂಡು ಅದರಲ್ಲಿ $d = 7$ ಆದೇಶಿಸಿದಾಗ

$a+10d = 38 \Rightarrow a+10(7) = 38 \Rightarrow a = -32$

$\therefore a = -32 \qquad d = 7$ ಲಭ್ಯವಾಗುವುದು

ಆದ್ದರಿಂದ 31ನೇ ಪದ= $a + (31-1)d$

$= a + 30d \Rightarrow = -32+(30)(7)$

$= -32+210 = 178$

ಹೀಗಾಗಿ 31ನೇ ಪದ 178 ಆಗಿದೆ

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC PHYSICS

Chapter – 2
ELECTROSTATIC POTENTIAL AND CAPACITANCE

32. Write a note on Dielectric strength.

Ans:- Dielectric Strength - The maximum value of the electric field intensity that can be applied to the dielectric without its electric break down is known as the dielectric strength of the dielectric.

$$\text{i.e.} \quad E_{break} = \frac{V_{break}}{d}$$

Where V_{break} is the maximum voltage, a dielectric field can withstand without electric break down, d is the thickness of the dielectric.

When a dielectric is placed in the magnetic field it gets polarized. In a polarized dielectric, each atom gets stretched and some strain is produced in the atom.

As the electric field strength increases, the atoms are further stretched and strain on atoms also increases. When the electric field strength becomes too high, the strain becomes unbearable and the electrons get detached from the atom which in turn becomes a positive ion. This is known as the electric breakdown of the dielectric.

The electrons drift towards the positive plate of the capacitor and positive ions drift towards the negative plate. Now the dielectric no more remains an insulator.

SI Unit of Dielectric strength of a material is Vm^{-1} (same as that of electric field).

Practical Unit of dielectric strength is kV/ mm i.e., $kV\ mm^{-1}$.

Dielectric strengths of some materials are given in the following table:

Dielectric	*Dielectric strength (in kV/mm)*
Vacuum	∞
Air	0.8
Porcelain	12
Pyrex	14
Paper	16
Natural Rubber	18 - 24
Mica	80

Dimensional formula of dielectric strength

$$= \frac{[Potential]}{[Distance]}$$

$$= \frac{[Work]}{[Charge \times Distance]}$$

$$= \frac{[Work]}{[Current][Time][Distance]}$$

$$= \frac{[ML^2T^{-2}]}{[ATL]} = [MLT^{-3}A^{-1}]$$

Problems:-

1. Three capacitors of capacitance of each 2 μF are connected in series. Find the resultant capacitance in Farad.

Soln :– Given, 3 capacitors

$C_1 = C_2 = C_3 = 2\mu F$

When they are connected in series the capacitance of the resultant capacitor is given by,

$$\frac{1}{C_s} = \frac{1}{C_1} + \frac{1}{C_2} + \frac{1}{C_3} = \frac{1}{2} + \frac{1}{2} + \frac{1}{2} = \frac{3}{2}$$

$\therefore C_s = \frac{2}{3}\mu F$

$= 0.667 \times 10^{-6} F$

2. When the potential difference between the plates is 500 V, what amount work is to be done to charge a 24 μF capacitor?

Soln :– Given, $C = 24\mu F = 24 \times 10^{-6} F$ and $V = 500V$

The work done $= \frac{1}{2} CV^2$

$\Rightarrow \frac{1}{2} \times 24 \times 10^{-6} (500)^2 = 3J$

3. What will be the energy released by the capacitor when it is discharged, if it is charged through a p.d of 200V, and the charge stored in it is 0.1 C?

Ans :– Given, $q = 0.1C$ & $V = 200V$

The energy stored, $U = \frac{1}{2}qV$

$\Rightarrow \frac{1}{2} \times 0.1 \times 200 = 10J$

On being discharged the capacitor will release 10J of energy.

4. What should be the capacitance of the capacitor capable of storing one joule of energy, when used with a 100 V d.c supply?

Soln :– Given, $U = 1$ joule & $V = 100V$

If C is the capacitance of a capacitor,

then $U = \frac{1}{2} CV^2$

$\therefore C = \frac{2U}{V^2} = \frac{2}{100^2} = 2 \times 10^{-4} F$

5. If an air capacitor is given a charge of 2 μF, its p. d is raised to 200V. If on inserting a dielectric medium its p. d falls to 50 V, what is the dielectric constant of the medium?

(Contd.....)

ಬಿಬಿಎಂಪಿ ವಿಭಜನೆ: ನಾಗರಿಕರ ನಾಡಿಮಿಡಿತ

ಬಿಬಿಎಂಪಿಗೆ ಚುನಾವಣೆ ನಡೆಯದೆ ನಾಲ್ಕು ವರ್ಷವಾಗುತ್ತಿದೆ. ಈ ಮಧ್ಯೆ ತಲಾ 80 ವಾರ್ಡ್‌ಗಳ ಐದು ಪಾಲಿಕೆಯನ್ನಾಗಿ ಮಾಡಲು ರಾಜ್ಯ ಸರ್ಕಾರ ಚಿಂತಿಸುತ್ತಿದೆ. ಈ ಬಗ್ಗೆ ನಾಗರಿಕರಾದ ನಿಮ್ಮ ಅಭಿಪ್ರಾಯವನ್ನು 50 ಪದಗಳಲ್ಲಿ ವಾಟ್ಸ್‌ಆ್ಯಪ್ ಮಾಡಿ. ನಿಮ್ಮ ಹೆಸರು, ವಿಳಾಸ ಹಾಗೂ ಭಾವಚಿತ್ರವೂ ಜೊತೆಗಿರಲಿ.

ಪ್ರಜಾವಾಣಿ **96060 38256**

ಕನ್ನಡದ ಐಎಎಸ್ ಅಧಿಕಾರಿಗಳು ಬೇಕು

ಬಿಬಿಎಂಪಿಯನ್ನು ತಲಾ 80 ವಾರ್ಡ್‌ಗಳನ್ನಾಗಿ ಐದು ಪಾಲಿಕೆಗಳನ್ನಾಗಿ ಮಾಡುವುದು ಬೆಂಗಳೂರು ಮಹಾನಗರದ ಅಭಿವೃದ್ಧಿ ಹಾಗೂ ಮೂಲಸೌಕರ್ಯ ಒದಗಿಸಲು ಅನುಕೂಲ. ಆದರೆ, ಪಾಲಿಕೆಯ ಉನ್ನತ ಹುದ್ದೆಗಳಿಗೆ ಅನ್ಯರಾಜ್ಯದ ಕನ್ನಡ ಬಾರದ ಐಎಎಸ್ ಅಧಿಕಾರಿಗಳನ್ನು ನೇಮಕ ಮಾಡದೆ ಕನ್ನಡದ ಐಎಎಸ್ ಅಧಿಕಾರಿಗಳನ್ನು ನೇಮಿಸುವುದು ಸೂಕ್ತ.

ಬಿ.ವಿಠಲ್, ಜಕ್ಕೂರು

ವಿಭಜನೆಯಿಂದ ಘನತೆ ಕುಗ್ಗಲಿದೆ

ಇಡೀ ರಾಜ್ಯವನ್ನು ಒಂದು ಸರ್ಕಾರ ನಿರ್ವಹಣೆ ಮಾಡಬಹುದಾದರೆ, ಇಡೀ ಬೆಂಗಳೂರನ್ನು ಒಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನಿರ್ವಹಣೆ ಮಾಡಲು ಸಾಧ್ಯವಿಲ್ಲವೇ? ಬಿಬಿಎಂಪಿಯ ಕಾರ್ಯನಿರ್ವಹಣೆಯಲ್ಲಿ ಇಚ್ಛಾಶಕ್ತಿಯ ಕೊರತೆ ಇದೆ ಅದನ್ನು ಸರಿಪಡಿಸಬೇಕು. ಭಾಗ ಮಾಡಿ ಐದು ಪಾಲಿಕೆ ಮಾಡಿದರೆ ಇದರಿಂದ ಬಿಬಿಎಂಪಿಯ ಘನತೆ ಕುಗ್ಗಲಿದೆಯೆ ಹೊರತು ಸಮಸ್ಯೆಗಳು ಬಗೆಹರಿಯುವುದಿಲ್ಲ.

ಬಿ.ಎಂ. ವಸಂತ ಕುಮಾರ್, ಹೊಂಬೇಗೌಡ ನಗರ

ವಿಭಾಗದಿಂದ ಏನೂ ಪ್ರಯೋಜನವಿಲ್ಲ

ಐದು ವಿಭಾಗ ಮಾಡುವುದರಿಂದ ಏನೂ ಪ್ರಯೋಜನವಿಲ್ಲ. ಬೊಕ್ಕಸಕ್ಕೆ ಇನ್ನಷ್ಟು ವೆಚ್ಚ. ಮತ್ತಷ್ಟು ಸಿಬ್ಬಂದಿ ಕೊರತೆಯಿಂದ ಜನರ ನಾಯಿಪಾಡು. ಅದರ ಬದಲು, ಬಿಬಿಎಂಪಿಗೆ ಆದಷ್ಟು ಬೇಗ ಚುನಾವಣೆ ನಡೆದರೆ ಅನಾಥವಾಗಿರುವ ಪಾಲಿಕೆ ಮತ್ತೆ ಕಳೆಗಟ್ಟಬಹುದು. ನಮ್ಮ ಕಾರ್ಪೊರೇಟರ್ ಅನ್ನು ದುಂಬಾಲು ಬಿದ್ದು ಕೆಲಸ ಮಾಡಿಸಿಕೊಳ್ಳಬಹುದು.

ಮೂಲೆಮನೆ ರತ್ನಾಕರ ಭಿಡೆ, ಜೆ.ಪಿ. ನಗರ

ಹಳೆ, ಹೊಸ ಪಾಲಿಕೆಯಾಗಲಿ



ಬಿಬಿಎಂಪಿಯನ್ನು ವಿಭಜಿಸುವುದು ಸೂಕ್ತ. ಈಗಾಗಲೇ 225 ವಾರ್ಡ್‌ಗಳಾಗಿವೆ. ಒಂದು ವರ್ಷದಲ್ಲಿ ಮೇಯರ್ ಎಲ್ಲೆಡೆ ಹೋಗಲು ಸಾಧ್ಯವಿಲ್ಲ. ಬಿಬಿಎಂಪಿಗೆ ಹಲವಾರು ಹಳ್ಳಿಗಳು ಸೇರಿವೆ. 15 ವರ್ಷಗಳಿಂದ ಅಭಿವೃದ್ಧಿ ಕಾರ್ಯಗಳು ಸಹ ಆಗಿಲ್ಲ. ಹಳೆ ಬೆಂಗಳೂರು ಮತ್ತು ಹೊಸ ಬೆಂಗಳೂರು ಎಂದು ವಿಭಜಿಸುವುದು ಸೂಕ್ತ.

ಬಿ.ಆರ್. ಸುರೇಶ್, ಹನುಮಂತನಗರ

ವಿಭಜನೆ ಮಾರಕ, ಆರ್ಥಿಕ ಹೊರೆ



ಅಭಿವೃದ್ಧಿ ನೆಪದಲ್ಲಿ ಬೆಂಗಳೂರು ಒಂದನ್ನೇ ಕೇಂದ್ರೀಕರಿಸಿಕೊಂಡು ಗಜಗಾತ್ರ ಹಿಗ್ಗಿಸಿ ವಿಭಜಿಸುತ್ತಿರುವುದು ದುರದೃಷ್ಟಕರ ಹಾಗೂ ಮಾರಕ. ಅದರಿಂದ ಆರ್ಥಿಕ ಹೊರೆ ಹೆಚ್ಚಾಗುತ್ತದೆ. ರಾಜ್ಯದ ಇತರೆ ನಗರಗಳನ್ನು ಸಮಾನ ಅವಕಾಶಗಳೊಂದಿಗೆ ಅಭಿವೃದ್ಧಿಪಡಿಸಲಿ. ಹುದ್ದೆ ಅರಸಿ ಬೆಂಗಳೂರಿಗೆ ಬರುವ ವಲಸಿಗರಿಗೆ ಕಡಿವಾಣ ಬೀಳಲಿ. ಮೊದಲು ಚುನಾವಣೆ ಮಾಡಲಿ.

ಚಂದ್ರಶೇಖರ ಪುಟ್ಟಪ್ಪ, ಚಾಮರಾಜಪೇಟೆ

ಭ್ರಷ್ಟ ರಾಜಕಾರಣಿಗಳು ಹೆಚ್ಚು

ಬಿಬಿಎಂಪಿ ವಿಭಜನೆಯಿಂದ ಇನ್ನಷ್ಟು ಭ್ರಷ್ಟ ರಾಜಕಾರಣಿಗಳು ಹೆಚ್ಚಾಗುತ್ತಾರೆಯೇ ವಿನಾ ಬೆಂಗಳೂರು ಅಭಿವೃದ್ಧಿ ಅನುಮಾನಾಸ್ಪದ. ರಾಜಕಾರಣಿಗಳಿಗೆ ಅಧಿಕಾರ ಬೇಕು, ಅಭಿವೃದ್ಧಿ ಅಲ್ಲ. ವಾರ್ಡನ್ನು ವಿಭಜಿಸುವುದರಿಂದ ಸರ್ಕಾರದ ಮೇಲೆ ಇನ್ನಷ್ಟು ಹೊರೆ ಬೀಳುವ ಸಾಧ್ಯತೆ ಇದೆ.

ಆದಿಮಂಜುನಾಥ ಎಸ್, ಜೆ.ಪಿ. ನಗರ 5ನೇ ಹಂತ

ಪಾರಂಪರಿಕ ಅಸ್ಮಿತೆಗೆ ಧಕ್ಕೆ

ವಿಕೇಂದ್ರೀಕರಣದ ನೆಪದಲ್ಲಿ ಪಾಲಿಕೆಯನ್ನು ವಿಭಜಿಸುವ ಸರ್ಕಾರದ ಕ್ರಮ ಅವೈಜ್ಞಾನಿಕವಾದದು. ಈ ನಿರ್ಧಾರ ಬೆಂಗಳೂರು ನಿರ್ಮಾತೃ ಕೆಂಪೇಗೌಡರ ಆಶಯಕ್ಕೆ, ಪಾರಂಪರಿಕ ನಗರದ ಅಸ್ಮಿತೆಗೆ ಧಕ್ಕೆ ತರುವ ದುರುದ್ದೇಶದಿಂದ ಕೂಡಿದೆ. ಅಭಿವೃದ್ಧಿಗೆ ವಿಭಜನೆಯೊಂದೆ ಅಸ್ತ್ರವೆಂಬುದು ಮೂರ್ಖತನದ ಪರಮಾವಧಿ. ರಾಜಕೀಯದ ದುರುದ್ದೇಶಕ್ಕಾಗಿ ಅಖಂಡ ಬೆಂಗಳೂರಿನ ಪಾರಂಪರಿಕ ಅಸ್ಮಿತೆಗೆ ಧಕ್ಕೆ ತಂದಲ್ಲಿ ಕನ್ನಡಿಗರ ಆಕ್ರೋಶಕ್ಕೆ ಗುರಿಯಾಗಬೇಕಾದೀತು

ಕೆ.ಜಿ.ಕುಮಾರ್, ಕನ್ನಡ ಕ್ರಿಯಾ ಸಮಿತಿ

ವಿಕೇಂದ್ರೀಕರಣದಿಂದ ಭೇಟಿ ಸುಲಭ

ಪ್ರಜಾತಂತ್ರದಲ್ಲಿ ವಿಕೇಂದ್ರೀಕರಣ ಮುಖ್ಯಪಾತ್ರ ವಹಿಸುತ್ತದೆ. ಬೆಂಗಳೂರನ್ನು ತಲಾ 80 ವಾರ್ಡ್‌ಗಳಂತೆ ಐದು ಭಾಗ ಮಾಡಿ, 400 ವಾರ್ಡ್ ಮಾಡಿದರೆ, ಕಾರ್ಪೊರೇಟರ್‌ಗಳನ್ನು ಸುಲಭವಾಗಿ ಭೇಟಿ ಮಾಡಬಹುದು. ನೀರಿನ ಸಮಸ್ಯೆ, ಒಳಚರಂಡಿ, ಆರೋಗ್ಯ, ಸುಗಮ ಸಂಚಾರಗಳಿಗೆ ಪರಿಹಾರ ಕಂಡುಕೊಳ್ಳಬಹುದು.

ಆನಂದ ಸಾವಳಗಿ, ರಾಜಾಜಿನಗರ

ಸೌಕರ್ಯ ಪೂರ್ಣಗೊಂಡ ಮೇಲೆ ಚುನಾವಣೆ

ಬೆಂಗಳೂರು ವಿಶಾಲವಾಗಿ ಬೆಳೆದಿರುವುದರಿಂದ ನಿರ್ವಹಣೆ ಕಾರ್ಯಕ್ಕೆ ತೊಂದರೆಯಾಗಿದೆ. ಪಾಲಿಕೆ ವಿಭಜನೆ ಮಾಡುವುದು ಸೂಕ್ತ. ಚುನಾವಣೆ ನಡೆದರೆ ದುಬಾರಿ ಖರ್ಚುಗಳಾಗುತ್ತವೆ. ಗೆದ್ದುಬರುವಂತಹ ಸದಸ್ಯರಿಗೆ ಸೌಕರ್ಯದ ಖರ್ಚುಗಳು ಕೂಡ ನಗರದ ಜನತೆಯ ಮೇಲೆ ಹೊರೆಯಾಗಲಿದೆ. ಬಿಬಿಎಂಪಿ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡು ನಗರದ ಸಾರ್ವಜನಿಕ ಸೌಕರ್ಯಗಳು ಪೂರ್ಣಗೊಂಡ ನಂತರ ಚುನಾವಣೆ ನಡೆಸುವುದು ಸೂಕ್ತ.

ಕೆ.ಎಂ. ಮುನಿಯಪ್ಪ, ಜಯನಗರ

ಬೇಡವಾದ ಕೆಲಸಗಳೇ ಹೆಚ್ಚು

ಪಾಲಿಕೆಯನ್ನು ಹಲವು ಭಾಗಗಳಾಗಿ ವಿಂಗಡಿಸುವುದಕ್ಕೂ ಮೊದಲು ಪಾರದರ್ಶಕತೆ, ಭ್ರಷ್ಟಾಚಾರ ರಹಿತ ಆಡಳಿತ ನೀಡಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಪಾಲಿಕೆಯ ಇತ್ತೀಚಿನ ಕಾರ್ಯವೈಖರಿಯು ಹಳೇ ಕಲ್ಲು ಹೊಸ ಬಿಲ್ಲು ಎಂಬಂತಾಗಿದೆ. ಇತ್ತೀಚೆಗೆ ಬೇಕಾದ ಕೆಲಸಗಳಿಗಿಂತ ಬೇಡದ ಕೆಲಸಗಳಿಗೆ ಹೆಚ್ಚಾಗುತ್ತಿವೆ. ಪ್ರಸಕ್ತ ಪಾಲಿಕೆಯ ಪರಿಮಿತಿಯಲ್ಲೇ ಉತ್ತಮ ನಾಗರಿಕ ಸೌಲಭ್ಯ ನೀಡಬಹುದು.

ಎಚ್. ನಾರಾಯಣ, ಜೆ.ಪಿ. ನಗರ

‘ಈಶಾವಾಸ್ಯ’ : ಕನ್ನಡದಲ್ಲಿ ವ್ಯಾಖ್ಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗುರುಕುಲದಲ್ಲಿ ಗುರುಗಳು ಈಶಾವಾಸ್ಯ ಉಪನಿಷತ್ತಿನ ಶ್ಲೋಕಗಳನ್ನು ಹೇಳಿಕೊಡುವಾಗ ನನಗೆ ಅರ್ಥವಾಗುತ್ತಿರಲಿಲ್ಲ. ಕ್ರಮೇಣ ಅರ್ಥವಾಯಿತು. ಜನಸಾಮಾನ್ಯರಿಗೂ ಅರ್ಥವಾಗುವಂತೆ ಕನ್ನಡದಲ್ಲಿ ವ್ಯಾಖ್ಯಾನ ಮಾಡಿದ್ದೇನೆ’ ಎಂದು ಶಿಕ್ಷಣ ತಜ್ಞ ಗುರುರಾಜ ಕರಜಗಿ ಹೇಳಿದರು.

ತಮ್ಮ ಮೂರು ಕೃತಿಗಳಾದ ‘ಸಮರ್ಪಣಾ’ ಈಶಾವಾಸ್ಯ ಉಪನಿಷತ್ತು, ಬೆರಗಿನ ಬೆಳಕು ಭಾಗ–3 ಮತ್ತು ಭಾಗ–4 ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಗುರುಕುಲದಲ್ಲಿ ಈಶಾವಾಸ್ಯ ಉಪನಿಷತ್ತಿನ ಮಂತ್ರಗಳನ್ನು ಬಾಯಿಪಾಠ ಮಾಡಿದ್ದರಿಂದ ದೊಡ್ಡವನಾದ ಮೇಲೆ ಅವುಗಳು ನನ್ನನ್ನು ಕಾಡತೊಡಗಿದವು. ಇವುಗಳು ಎಲ್ಲರಿಗೂ ಅರ್ಥವಾಗುವಂತೆ ಮಾಡಬೇಕು ಎಂದು ಕನ್ನಡದಲ್ಲಿ ವ್ಯಾಖ್ಯಾನಿಸಿದ್ದೇನೆ. ಇದರಲ್ಲಿ ಒಳ್ಳೆಯದಿದ್ದರೆ ಅದು ನನ್ನ ಗುರುಗಳಿಗೆ ಸಲ್ಲುತ್ತದೆ. ತಪ್ಪಿದ್ದರೆ ಅದು ನನ್ನದು’ ಎಂದರು.

‘ಅಧಿಕಾರದಲ್ಲಿರುವವರು ತಮ್ಮ ಪಾಲಿನ ಕೆಲಸವನ್ನು ಪ್ರಾಮಾಣಿಕವಾಗಿ ನಿರ್ವಹಿಸಿದರೆ, ಸಮಾಜದಲ್ಲಿ ಭ್ರಷ್ಟಾಚಾರ ಕಡಿಮೆಯಾಗುತ್ತದೆ. ಸಿಕ್ಕಿರುವ ಅಧಿಕಾರದಿಂದ ಅಹಂಕಾರ ಪಡದೆ, ಜನಸೇವೆ ಮಾಡಬೇಕು’ ಎಂದು ನ್ಯಾಯಮೂರ್ತಿ ಶಿವರಾಜ ಪಾಟೀಲ್ ಹೇಳಿದರು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಶಾಸಕ ಸಿ.ಟಿ. ರವಿ, ವಿಶ್ವವಾಣಿ ಸಂಪಾದಕ ವಿಶ್ವೇಶ್ವರ ಭಟ್ ಉಪಸ್ಥಿತರಿದ್ದರು.

ಹೊಸ ನೀತಿಗೆ ಡಿಸಿಎಂ ಸಮ್ಮತಿ ವಾಣಿಜ್ಯ ಹೋರ್ಡಿಂಗ್ ನಿಷೇಧ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ವಾಣಿಜ್ಯ ಜಾಹೀರಾತು (ಹೋರ್ಡಿಂಗ್) ಮೇಲಿದ್ದ ನಿಷೇಧವನ್ನು ಆರು ವರ್ಷಗಳ ನಂತರ ರದ್ದುಪಡಿಸಲು ಬಿಬಿಎಂಪಿ ಸಜ್ಜಾಗಿದೆ.

ಹೊರಾಂಗಣದಲ್ಲಿ ಜಾಹೀರಾತಿಗೆ ಪ್ರೇರಣೆ ನೀಡುವ ಬಿಬಿಎಂಪಿಯ ಹೊಸ ನೀತಿಗೆ ಸಚಿವ ಸಂಪುಟ ಸಮ್ಮತಿ ನೀಡಿದೆ. ಇನ್ನೊಂದು ವಾರದಲ್ಲಿ ನೀತಿಯನ್ನು ಸರ್ಕಾರ ಅಧಿಸೂಚಿಸುವ ನಿರೀಕ್ಷೆ ಇದೆ.

ಬಿಬಿಎಂಪಿಮುಖ್ಯಆಯುಕ್ತತುಷಾರ್ ಗಿರಿನಾಥ್ ಹೊರಾಂಗಣ ಜಾಹೀರಾತು ನೀತಿಯನ್ನು ಡಿ.ಕೆ. ಶಿವಕುಮಾರ್ ಅವರ ಕಚೇರಿಗೆ ಸಲ್ಲಿಸಿದ್ದರು. ಡಿ.ಕೆ. ಶಿವ ಕುಮಾರ್ ಈ ನೀತಿಗೆ ಜೂನ್ 14ರಂದು ಸಮ್ಮತಿ ನೀಡಿದ್ದರು ಎಂದು ಮೂಲಗಳು ತಿಳಿಸಿವೆ.

ಹೊರಾಂಗಣ ಜಾಹೀರಾತು ನೀತಿಯನ್ನು ಮತ್ತೆ ಜಾರಿಗೆ ತರಬೇಕು ಎಂಬ ಅಭಿಲಾಷೆಯನ್ನು ಡಿಸಿಎಂ ಶಿವಕುಮಾರ್ ಹೊಂದಿದ್ದರು. ಇದರಿಂದ ಪಾಲಿಕೆಗೆ ಆದಾಯ ಹೆಚ್ಚಾಗುತ್ತದೆ ಎಂದೂ ಹೇಳಿದ್ದರು. ಈ ಜಾಹೀರಾತು ಹಕ್ಕುಗಳನ್ನು ನೀಡುವುದರಿಂದ ಬಿಬಿಎಂಪಿ 2024–25ನೇ ಸಾಲಿನಲ್ಲಿ ₹500 ಕೋಟಿ ಆದಾಯ ಗಳಿಸುವ ನಿರೀಕ್ಷೆ ಇದೆ.

ಹೊಸ ಜಾಹೀರಾತು ನೀತಿಯಿಂದ 800 ಚದರ ಅಡಿಯಷ್ಟು ದೊಡ್ಡದಾದ ಜಾಹೀರಾತು ಫಲಕಗಳನ್ನು (ಹೋರ್ಡಿಂಗ್ಸ್) ವ್ಯಕ್ತಿಯೊಬ್ಬರು ಹಾಕಿಕೊಳ್ಳಬಹುದು. ಜಂಕ್ಷನ್ ಅಥವಾ ಇತರೆ ಪ್ರದೇಶಗಳಲ್ಲಿ 3,000 ಚದರ ಅಡಿಯಷ್ಟು ಅಳವಡಿಸಿಕೊಳ್ಳಬಹುದಾಗಿದೆ. 100 ಮೀಟರ್‌ಗೆ ಒಂದು ಹೋರ್ಡಿಂಗ್ ಅಳವಡಿಸಲು ಅವಕಾಶವಿದೆ.

ಪಿಎಂ ಕಿಸಾನ್ ಎಚ್‌ಡಿಕೆ ನೇತೃತ್ವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯ 17ನೇ ಕಂತಿನ ಸಹಾಯಧನ ವಿತರಣೆ ಮಂಗಳವಾರ ನಡೆಯಲಿದ್ದು, ಧಾರವಾಡದಲ್ಲಿ ನಡೆಯಲಿರುವ ರಾಜ್ಯಮಟ್ಟದ ಸಮಾರಂಭದ ನೇತೃತ್ವವನ್ನು ಕೇಂದ್ರ ಭಾರಿ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರಿಗೆ ವಹಿಸಲಾಗಿದೆ.

ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ನೇರ ನಗದು ವರ್ಗಾವಣೆ ಮೂಲಕ ಸಹಾಯಧನ ವಿತರಣೆಗೆ ಚಾಲನೆ ನೀಡುವರು. ಅದೇ ಸಮಯದಲ್ಲಿ ದೇಶದಾದ್ಯಂತ 51 ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಏಕಕಾಲಕ್ಕೆ ಸಮಾರಂಭ ನಡೆಯಲಿದೆ. ಪ್ರತಿ ಕಾರ್ಯಕ್ರಮಕ್ಕೂ ಒಬ್ಬ ಕೇಂದ್ರ ಸಚಿವರನ್ನು ನಿಯೋಜಿಸಲಾಗಿದೆ.

ಪೌರಕಾರ್ಮಿಕರ ಜತೆ ಉಪಾಹಾರ

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬಿ.ಎಸ್. ಸುರೇಶ (ಬೈರತಿ) ಅವರು ಆರ್.ಟಿ. ನಗರದ ಹೋಟೆಲೊಂದರಲ್ಲಿ ಬಿಬಿಎಂಪಿ ಪೌರ ಕಾರ್ಮಿಕರ ಜೊತೆ ಸೋಮವಾರ ಬೆಳಿಗ್ಗೆ ಉಪಾಹಾರ ಸೇವಿಸಿ, ಕುಂದುಕೊರತೆಗಳನ್ನು ಆಲಿಸಿದರು. ಬೆಂಗಳೂರು ಉತ್ತರ ಜಿಲ್ಲಾ ಕಾಂಗ್ರೆಸ್ ಘಟಕದ ಅಧ್ಯಕ್ಷ ಅಬ್ದುಲ್ ವಾಜಿದ್ ಇದ್ದರು

ಬಿಬಿಎಂಪಿಯಿಂದ ಸಸಿ ಬೆಳೆಸಲು ದುಬಾರಿ ಹಣ ವ್ಯಯ; ₹24 ಕೋಟಿ ವೆಚ್ಚ

ಒಂದು ಗಿಡಕ್ಕೆ ₹3,100 ವೆಚ್ಚ...

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೈಗೊಳ್ಳುವ ‘ಅರಣ್ಯೀಕರಣ‘ದ ಹೆಸರಿನಲ್ಲಿ ಬಿಬಿಎಂಪಿ ಪ್ರತಿಯೊಂದು ಸಸಿಗೆ ₹3,100 ವೆಚ್ಚ ಮಾಡಲು ಮುಂದಾಗಿದೆ. ಇನ್ನೊಂದು ಯೋಜನೆಯಲ್ಲಿ ತಲಾ ಸಸಿಗೆ ₹1,800 ವ್ಯಯ ಮಾಡಲು ಟೆಂಡರ್ ಕರೆದಿದೆ.

ದಾಬಸಪೇಟೆ ಮತ್ತು ದೊಡ್ಡಬೆಳವಂಗಲ ನಡುವೆ ನಗರದ ಹೊರವಲಯದಲ್ಲಿ ನಿರ್ಮಾಣವಾಗುವ ಸ್ಯಾಟಲೈಟ್ ಟೌನ್ ರಿಂಗ್ ರಸ್ತೆಯ (ಎಸ್‌ಟಿಆರ್‌ಆರ್) ಎರಡೂ ಬದಿಯಲ್ಲಿ 10,900 ಗಿಡಗಳನ್ನು ನೆಡಲು ₹3.4 ಕೋಟಿ ವೆಚ್ಚ ಮಾಡಲಿದೆ. ಪ್ರತಿ ಸಸಿಗೆ ₹3,100 ವೆಚ್ಚ ಮಾಡಲಿದ್ದು, ಸಸಿಯನ್ನು ನೆಟ್ಟ ಗುತ್ತಿಗೆದಾರರು ನಂತರದ ಐದು ವರ್ಷ ಅವುಗಳ ನಿರ್ವಹಣೆ ಮಾಡಬೇಕು.

ಮುಖ್ಯಾಂಶಗಳು

- ಎಸ್‌ಟಿಆರ್‌ಆರ್ ಯೋಜನೆಯಲ್ಲಿ ₹3.4 ಕೋಟಿ
- ವಲಯಗಳಲ್ಲಿ ಸಸಿ ನೆಡಲು ₹21.36 ಕೋಟಿ

ಇನ್ನೊಂದು ಯೋಜನೆಯಲ್ಲಿ, ಬಿಬಿಎಂಪಿಯಲ್ಲಿ ವಲಯವಾರು ಗಿಡಗಳನ್ನು ನೆಟ್ಟು ಮೂರು ವರ್ಷ ನಿರ್ವಹಣೆ ಮಾಡಲೂ ಅರಣ್ಯ ವಿಭಾಗ ಟೆಂಡರ್ ಆಹ್ವಾನಿಸಿದೆ. 27 ಕಾಮಗಾರಿಗಳಲ್ಲಿ ಒಟ್ಟು 1,13,500 ಸಸಿಗಳನ್ನು ನೆಡಲಾಗುತ್ತದೆ. ಇದಕ್ಕಾಗಿ ₹21.36 ಕೋಟಿ ವೆಚ್ಚ ಮಾಡಲು ನಿರ್ಧರಿಸಲಾಗಿದೆ. ಈ ಯೋಜನೆಯಲ್ಲಿ ಪ್ರತಿ ಸಸಿಗೆ ₹1,800 ವೆಚ್ಚ ಮಾಡಲಾಗುತ್ತಿದೆ.

ಸಸಿಗಳಿಗೆ ರಕ್ಷಾ ಕವಚ, ಗೊಬ್ಬರ ಹಾಗೂ ನೀರು ಹಾಕುವ ವೆಚ್ಚವೂ ಈ ನಿರ್ವಹಣೆಯಲ್ಲಿ ಸೇರಿಕೊಂಡಿದೆ ಎಂದು ಹೇಳಲಾಗಿದೆ. ಆದರೆ, ಖಾಸಗಿ ವಲಯದಲ್ಲೇ ಅತಿ ಹೆಚ್ಚಿನ ರೀತಿಯಲ್ಲಿ ನಿರ್ವಹಣೆ ಇದ್ದರೂ, ಪಾಲಿಕೆ ವೆಚ್ಚ ಮಾಡುತ್ತಿರುವ ಅರ್ಧದಷ್ಟೂ ಹಣ ವೆಚ್ಚವಾಗುವುದಿಲ್ಲ. ಆದರೆ, ಈಗಾಗಲೇ ನೆಟ್ಟಿರುವ ಗಿಡಗಳಲ್ಲಿ ಶೇ 50ರಷ್ಟನ್ನೂ ಉಳಿಸಿಕೊಳ್ಳಲು ಸಾಧ್ಯವಾಗದ ಬಿಬಿಎಂಪಿ, ಅರಣ್ಯೀಕರಣದ ಹೆಸರಲ್ಲಿ ಲೂಟಿ ಮಾಡಲು ಮುಂದಾಗಿದೆ. ಹಸಿರು ರಕ್ಷಕ ಹೆಸರಿನಲ್ಲಿ ವಿದ್ಯಾರ್ಥಿಗಳ ನಿರ್ವಹಣೆ ಎಂದು ಲಕ್ಷಾಂತರ ಸಸಿ ನೆಡಲಾಗಿದೆ ಎಂದು ತೋರಿಸಲಾಗಿದೆ. ಆದರೆ, ವಾಸ್ತವದಲ್ಲಿ ಅವುಗಳಲ್ಲಿ ಅರ್ಧದಷ್ಟು ನಿರ್ವಹಣೆ ಇಲ್ಲದೆ ಸೊರಗಿವೆ.

ಕರ್ನಾಟಕ ರೈಲು ಮೂಲಸೌಕರ್ಯ ಅಭಿವೃದ್ಧಿ ಎಂಟರ್‌ಪ್ರೈಸಸ್ (ಕೆ–ರೈಡ್) ತನ್ನ ಯೋಜನೆಯಿಂದ ಮರಗಳು ತೆರವಾಗುವುದರಿಂದ, ಪರ್ಯಾಯವಾಗಿ ಗಿಡಗಳನ್ನು ನೆಡಲು ₹8 ಕೋಟಿಯನ್ನು ಈಗಾಗಲೇ ಬಿಬಿಎಂಪಿ ಅರಣ್ಯ ಇಲಾಖೆಗೆ ಬಿಡುಗಡೆ ಮಾಡಿದೆ. ಆದರೆ, ಅರಣ್ಯ ಇಲಾಖೆ ಈ ಬಾಬ್ತಿನಲ್ಲಿ ಯಾವುದೇ ಸಸಿಗಳನ್ನು ನೆಟ್ಟಿಲ್ಲ.

ಸಸಿಗಳಿಗೆ ದುಂದು ವೆಚ್ಚದ ಬಗ್ಗೆ ಪ್ರತಿಕ್ರಿಯಗೆ ಅರಣ್ಯ ವಿಭಾಗದ ಉಪಸಂರಕ್ಷಣಾಧಿಕಾರಿ ಸ್ವಾಮಿ ಅವರನ್ನು ಸಂಪರ್ಕಿಸಲು ಪ್ರಯತ್ನಿಸಿದಾಗ ಅವರು ಕರೆ ಸ್ವೀಕರಿಸಲಿಲ್ಲ.

ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್‌ವೇ: ನಿರೀಕ್ಷಿತ ವೇಗದಲ್ಲಿ ಸಾಗದ ಯೋಜನೆ

ಗಡುವು ಮೀರಲಿದೆ ಕಾಮಗಾರಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ, ಆಂಧ್ರ ಪ್ರದೇಶ ಹಾಗೂ ತಮಿಳುನಾಡಿನ ಮೂಲಕ ಹಾದು ಹೋಗುವ 'ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್‌ವೇ ಯೋಜನೆ'ಯ ಕಾಮಗಾರಿ ನಿರೀಕ್ಷಿತ ವೇಗದಲ್ಲಿ ಸಾಗುತ್ತಿಲ್ಲ. 10 ಪ್ಯಾಕೇಜ್‌ಗಳ ಕಾಮಗಾರಿಗಳ ಈಗಿನ ಪ್ರಗತಿ ಗಮನಿಸಿದರೆ ಈ ಯೋಜನೆಯು 2025ರ ಜೂನ್‌ಗೂ ಪೂರ್ಣಗೊಳ್ಳುವುದು ಅನುಮಾನ.

ಈ ಎಕ್ಸ್‌ಪ್ರೆಸ್‌ವೇ ಬೆಂಗಳೂರು–ಚೆನ್ನೈ ಕೈಗಾರಿಕಾ ಕಾರಿಡಾರ್‌ನ ಭಾಗವಾಗಿದ್ದು, ಕಾಮಗಾರಿ ಪೂರ್ಣಗೊಂಡ ಬಳಿಕ ಎರಡು ನಗರಗಳ ನಡುವಿನ ಪ್ರಯಾಣದ ಅವಧಿ ಎರಡೂವರೆ ಗಂಟೆಗಳಿಗೆ ಇಳಿಯಲಿದೆ.

ಈ ಯೋಜನೆಯು 2024ರ ಆರಂಭದಲ್ಲಿ ಪೂರ್ಣಗೊಳ್ಳಲಿದೆ ಎಂದು ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಭರವಸೆ ನೀಡಿದ್ದರು. ಫೆಬ್ರುವರಿಯಲ್ಲಿ ನಡೆದ ಲೋಕಸಭಾ ಅಧಿವೇಶನದಲ್ಲಿ ಗಡ್ಕರಿ, 'ಈ ಕಾಮಗಾರಿ ಡಿಸೆಂಬರ್‌ಗೆ ಮುಗಿಯಲಿದೆ' ಎಂದು ಅಭಯ ನೀಡಿದ್ದರು. 'ಈ ಯೋಜನೆಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ರಾಜ್ಯ ಸರ್ಕಾರಗಳ ಸಹಕಾರ ಅಗತ್ಯ. ಆಯಾ ರಾಜ್ಯಗಳ ವ್ಯಾಪ್ತಿಯಲ್ಲಿ ಯೋಜನೆಗೆ ನಿರ್ಮಾಣ ಸಾಮಗ್ರಿ ಒದಗಿಸಲು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಈ ಸರ್ಕಾರಗಳು ಸಹಾಯ ಮಾಡಬೇಕು' ಎಂದು ಕೋರಿದ್ದರು.

ಕರ್ನಾಟಕದಲ್ಲಿ ₹5,465 ಕೋಟಿ ವೆಚ್ಚದಲ್ಲಿ ಮೂರು ಪ್ಯಾಕೇಜ್‌ಗಳಲ್ಲಿ ಕಾಮಗಾರಿ ನಡೆಯುತ್ತಿದೆ. ಶೇ 85ರಷ್ಟು ಕಾಮಗಾರಿಗಳು ಮುಗಿದಿವೆ. ಈ ಭಾಗದಲ್ಲಿ ನಾಲ್ಕು ಗ್ರೇಡ್ ಸಪರೇಟರ್‌ಗಳು, 15 ಪ್ರಮುಖ ಸೇತುವೆಗಳು, 47 ಸಣ್ಣ ಸೇತುವೆಗಳು, 63 ಅಂಡರ್‌ಪಾಸ್‌ಗಳು, ನಾಲ್ಕು ಟೋಲ್ ಪ್ಲಾಜಾಗಳು ಇರಲಿವೆ. ರಾಜ್ಯದ ಮೂರು ಪ್ಯಾಕೇಜ್‌ಗಳು 2024ರ ಮಾರ್ಚ್ ತಿಂಗಳೊಳಗೆ ಮುಗಿಯಲಿವೆ ಎಂದು ಸಚಿವರು ಭರವಸೆ ನೀಡಿದ್ದರು. 'ರಾಜ್ಯದ ಮೂರು ಪ್ಯಾಕೇಜ್‌ಗಳ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿವೆ. ಸಣ್ಣಪುಟ್ಟ ಕಾಮಗಾರಿಗಳಷ್ಟೇ ಬಾಕಿ ಇವೆ. ಒಂದೂವರೆ ತಿಂಗಳೊಳಗೆ ಎಲ್ಲ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುತ್ತದೆ' ಎಂದು ಹೆದ್ದಾರಿ ಪ್ರಾಧಿಕಾರದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ತಮಿಳುನಾಡಿನಲ್ಲಿ ನಾಲ್ಕು ಪ್ಯಾಕೇಜ್‌ಗಳಲ್ಲಿ ನಡೆಯುತ್ತಿರುವ ಕಾಮಗಾರಿಯು ಶೇ 42ರಿಂದ ಶೇ 55ರಷ್ಟು ಪೂರ್ಣಗೊಂಡಿದೆ. ಆಂಧ್ರ ಪ್ರದೇಶದಲ್ಲಿ ಮೂರು ಪ್ಯಾಕೇಜ್‌ಗಳಲ್ಲಿ ಕಾಮಗಾರಿ ನಡೆಯುತ್ತಿದೆ. ಆದರೆ, ಇಲ್ಲಿ ಬಹಳ ನಿಧಾನಗತಿಯಿಂದ ಕಾಮಗಾರಿ ಸಾಗುತ್ತಿದೆ. ಆಂಧ್ರ ಪ್ರದೇಶದ ಮೂರು ಪ್ಯಾಕೇಜ್‌ಗಳ ಕೆಲಸಗಳನ್ನು ಮುಗಿಸಲು 2025ರ ಜೂನ್‌ನ ಗಡು ವನ್ನು ವಿಧಿಸಲಾಗಿದೆ. ಆದರೆ, ಭೂಸ್ವಾಧೀನ ಕಗ್ಗಂಟು, ಸಮನ್ವಯ ಕೊರತೆ ಹಾಗೂ ಗುತ್ತಿಗೆದಾರರ ವಿಳಂಬ ಧೋರಣೆಯಿಂದಾಗಿ ಈ ಗಡುವಿನೊಳಗೆ ಕೆಲಸ ಪೂರ್ಣಗೊಳ್ಳುವ ಸಾಧ್ಯತೆ ಕಡಿಮೆ.

ಯೋಜನೆಯ ಸ್ಥಿತಿಗತಿ

ಯೋಜನೆಯ ವಿಭಾಗ	ರಾಜ್ಯ	ಭೌತಿಕ ಪ್ರಗತಿ	ವೆಚ್ಚ (₹ಕೋಟಿಗಳಲ್ಲಿ)
ಬೆಂಗಳೂರು–ಮಾಲೂರು	ಕರ್ನಾಟಕ	ಶೇ 85	2761
ಮಾಲೂರು–ಬಂಗಾರಪೇಟೆ	ಕರ್ನಾಟಕ	ಶೇ 82	1496
ಬಂಗಾರಪೇಟೆ–ಬೇತಮಂಗಲ	ಕರ್ನಾಟಕ	ಶೇ 80	1047
ಗುಡಿಪಾಲ–ವಾಲಾಜಪೇಟೆ	ತಮಿಳುನಾಡು	ಶೇ 48	1028
ವಾಲಾಜಪೇಟೆ–ಅರಕ್ಕೋಣಂ	ತಮಿಳುನಾಡು	ಶೇ 55	843
ಅರಕ್ಕೋಣಂ–ಕಾಂಚಿಪುರಂ	ತಮಿಳುನಾಡು	ಶೇ 42	1155
ಕಾಂಚಿಪುರಂ–ಪೆರಂಬದೂರು	ತಮಿಳುನಾಡು	ಶೇ 47	2948
ಬೇತಮಂಗಲ–ಬೈರೆಡ್ಡಿಪಲ್ಲಿ	ಆಂಧ್ರ ಪ್ರದೇಶ	ಶೇ 42	1306
ಬೈರೆಡ್ಡಿಪಲ್ಲಿ - ಬಂಗಾರುಪಾಲೆಂ	ಆಂಧ್ರ ಪ್ರದೇಶ	ಶೇ 15	2171
ಬಂಗಾರುಪಾಲೆಂ–ಗುಡಿಪಾಲ	ಆಂಧ್ರ ಪ್ರದೇಶ	ಶೇ 48	1288

ಯೋಜನೆಯ ರೂಪುರೇಷೆ

- ದೇಶದಲ್ಲಿ ನಿರ್ಮಿಸುತ್ತಿರುವ ಹೊಸ 36 ಎಕ್ಸ್‌ಪ್ರೆಸ್‌ವೇಗಳಲ್ಲಿ ಇದು ಒಂದು.
- ಯೋಜನೆಯ ಒಟ್ಟು ಉದ್ದ 262 ಕಿ.ಮೀ
- ಯೋಜನೆಯ ವೆಚ್ಚ ₹17,930 ಕೋಟಿ
- ಈ ಹೆದ್ದಾರಿಯು ಕರ್ನಾಟಕ (71 ಕಿ.ಮೀ), ತಮಿಳುನಾಡು (106 ಕಿ.ಮೀ) ಹಾಗೂ ಆಂಧ್ರ ಪ್ರದೇಶ (85 ಕಿ.ಮೀ) ಮೂಲಕ ಹಾದು ಹೋಗಲಿದೆ
- 240 ಕಿ.ಮೀ. ಹೆದ್ದಾರಿಯು ಎಂಟು ಪಥ ಆಗಿರಲಿದೆ
- 22 ಕಿ.ಮೀ.ಯು ಎತ್ತರಿಸಿದ ಮಾರ್ಗ ಆಗಿರಲಿದೆ
- ಯೋಜನೆಗಾಗಿ ₹2,650 ಹೆಕ್ಟೇರ್ ಭೂಸ್ವಾಧೀನ

ಭೂಸ್ವಾಧೀನ ಕಾರ್ಯಕ್ಕೆ ಚುರುಕು

ರೈಲ್ವೆ ಅಭಿವೃದ್ಧಿ ಕಾಮಗಾರಿ ತ್ವರಿತಕ್ಕೆ ಸಚಿವ ಸೋಮಣ್ಣ ಸೂಚನೆ

ಪ್ರಜಾವಾಣಿ ವಾರ್ತೆ

ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ.ಸೋಮಣ್ಣ ಅಧಿಕಾರಿಗಳ ಸಭೆ ನಡೆಸಿದರು

ಬೆಂಗಳೂರು: ರಾಜ್ಯದಲ್ಲಿ ಬಾಕಿ ಉಳಿದಿರುವ ರೈಲ್ವೆ ಅಭಿವೃದ್ಧಿ ಯೋಜನೆಗಳ ಕಾಮಗಾರಿ ತ್ವರಿತಗೊಳಿಸಲು ಭೂಸ್ವಾಧೀನ ಕಾರ್ಯಕ್ಕೆ ಚುರುಕು ನೀಡಬೇಕು ಎಂದು ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವ ವಿ.ಸೋಮಣ್ಣ ಸೂಚಿಸಿದರು.

ಇದಕ್ಕಾಗಿ ರೈಲ್ವೆ ಅಧಿಕಾರಿಗಳು, ಜಿಲ್ಲಾಡಳಿತ ಮತ್ತು ಕೆ–ರೈಡ್ ಸೇರಿ ವಿವಿಧ ಮಧ್ಯಸ್ಥಗಾರರ ನಡುವಿನ ಸಮನ್ವಯ ಅತ್ಯಗತ್ಯ ಎಂದು ಅವರು ಸೋಮವಾರ ರೈಲ್ವೆ ಅಧಿಕಾರಿಗಳ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮುಂಬರುವ ವರ್ಷಗಳಲ್ಲಿ ಎಲ್ಲಾ ಬಾಕಿ ಯೋಜನೆಗಳನ್ನು ವ್ಯವಸ್ಥಿತವಾಗಿ ಪೂರ್ಣಗೊಳಿಸಲಾಗುವುದು. ರೈಲ್ವೆ ಸುರಕ್ಷತೆ ಮತ್ತು ರೈಲುಗಳ ವೇಗವನ್ನು ಹೆಚ್ಚಿಸಲು ಎಲ್ಲಾ ಲೆವೆಲ್ ಕ್ರಾಸಿಂಗ್‌ಗಳನ್ನು ತೆಗೆದು ಹಾಕಬೇಕೆನ್ನುವ ಸರ್ಕಾರದ ಆಲೋಚನೆಯನ್ನು ಪೂರ್ಣ ಪ್ರಮಾಣದಲ್ಲಿ ಕಾರ್ಯಗತಗೊಳಿಸಬೇಕು. ಅದರಲ್ಲೂ ಬೆಂಗಳೂರು ಸುತ್ತಮುತ್ತಲಿನ ಲೆವೆಲ್ ಕ್ರಾಸಿಂಗ್‌ಗಳನ್ನು ಪರಿಶೀಲಿಸಿ ಅಗತ್ಯ ಕ್ರಮ ತೆಗೆದುಕೊಳ್ಳಬೇಕು ಎಂದೂ ನಿರ್ದೇಶನ ನೀಡಿದರು.

'ಸಭೆಯಲ್ಲಿ ಅಭಿವೃದ್ಧಿ ಯೋಜನೆಗಳ ಸಂಪೂರ್ಣ ಪರಿಶೀಲನೆ ನಡೆಸಲಾಯಿತು. ಹೊಸ ಸಾಲಿನ ಒಂಬತ್ತು ಯೋಜನೆಗಳು ಮತ್ತು ಐದು ದ್ವಿಪಥೀಕರಣಗೊಳಿಸುವ ಯೋಜನೆಗಳೂ ಸೇರಿ 14 ಮಹತ್ವದ ಯೋಜನೆಗಳ ಕುರಿತು ಮಾಹಿತಿ ಪಡೆದೆ. ಒಟ್ಟು 1,264 ಕಿ.ಮೀ ಹೊಸ ಮಾರ್ಗ ಮತ್ತು 707 ಕಿ.ಮೀ ದ್ವಿಪಥೀಕರಣ ಯೋಜನೆ ಒಳಗೊಂಡಿದೆ. 289 ಕಿ.ಮೀ ಹೊಸ ಮಾರ್ಗ ಮತ್ತು 502 ಕಿ.ಮೀ ಡಬ್ಲಿಂಗ್ ಲೈನ್ ಈಗಾಗಲೇ ಕಾರ್ಯಾರಂಭಗೊಂಡಿದೆ' ಎಂದು ಹೇಳಿದರು.

ರೈಲ್ವೆ ಯೋಜನೆಗಳು

- **5 ದ್ವಿಪಥೀಕರಣ ಯೋಜನೆಗಳು:** ಹೊಟ್ಗಿ–ಕುಡ್ಗಿ–ಗದಗ, ಯಶವಂತಪುರ–ಚನ್ನಸಂದ್ರ, ಬೈಯ್ಯಪ್ಪನಹಳ್ಳಿ–ಹೊಸೂರು, ಬೆಂಗಳೂರು–ವೈಟ್‌ಫೀಲ್ಡ್, ಹೊಸಪೇಟೆ–ಹುಬ್ಬಳ್ಳಿ–ಲೋಂಡಾ–ತಿನೈಘಾಟ್–ವಾಸ್ಕೋ ಡ ಗಾಮಾ
- **9 ಹೊಸ ಯೋಜನೆಗಳು:** ತುಮಕೂರು–ಕಲ್ಯಾಣದುರ್ಗ ಮೂಲಕ ರಾಯದುರ್ಗ, ತುಮಕೂರು–ಚಿತ್ರದುರ್ಗ–ದಾವಣಗೆರೆ, ಗಿಣಿಗೇರಾ–ರಾಯಚೂರು, ಬಾಗಲಕೋಟೆ–ಕುಡಚಿ, ಗದಗ–ವಾಡಿ, ಕಡೂರು–ಚಿಕ್ಕಮಗಳೂರು, ಶಿವಮೊಗ್ಗ–ಶಿಕಾರಿಪುರ– ರಾಣೆಬೆನ್ನೂರು, ಬೆಳಗಾವಿ–ಕಿತ್ತೂರು ಮಾರ್ಗವಾಗಿ ಧಾರವಾಡ, ಹಾಸನ–ಬೇಲೂರು

ಅಸ್ಸಾಂನಲ್ಲಿ ಪ್ರವಾಹ

ಗುವಾಹಟಿ (ಪಿಟಿಐ): ಅಸ್ಸಾಂನಲ್ಲಿನ ಪ್ರವಾಹ ಪರಿಸ್ಥಿತಿ ಸೋಮವಾರ ಹದಗೆಟ್ಟಿದ್ದು, ಎಂಟು ಜಿಲ್ಲೆಗಳ ಒಂದು ಲಕ್ಷಕ್ಕೂ ಹೆಚ್ಚು ಮಂದಿ ಸಂಕಷ್ಟಕ್ಕೊಳಗಾಗಿದ್ದಾರೆ.

ಅಸ್ಸಾಂ ರಾಜ್ಯ ವಿಪತ್ತು ನಿರ್ವಹಣಾ ಸಂಸ್ಥೆ (ಎಎಸ್‌ಡಿಎಂಎ) ನೀಡುವ ದಿನನಿತ್ಯದ ಪ್ರವಾಹ ವರದಿಯ ಪ್ರಕಾರ, ಏಳು ಜಿಲ್ಲೆಗಳಲ್ಲಿ ಜನ ಪ್ರವಾಹದಿಂದ ಬಾಧಿತರಾಗಿದ್ದಾರೆ.

ಕುವೈತ್: ಅವಿವಾಹಿತರಿಗೆ ವಸತಿ ಸಮಸ್ಯೆ

ಕುವೈತ್ (ಪಿಟಿಐ): ನಿಯಮಗಳನ್ನು ಅನುಸರಿಸದ ಕಟ್ಟಡಗಳಲ್ಲಿ ವಾಸ ಮಾಡುತ್ತಿರುವ ವಿದೇಶೀಯರನ್ನು ಅದರಲ್ಲೂ ವಿಶೇಷವಾಗಿ ಅವಿವಾಹಿತರನ್ನು ಕುವೈತ್‌ನ ಮನೆಗಳಿಂದ ಹೊರಹಾಕುವ ಪ್ರಕ್ರಿಯೆ ಶುರುವಾಗಿದೆ ಎಂದು ಪತ್ರಿಕೆಯೊಂದು ವರದಿ ಮಾಡಿದೆ.

ಬಿನೀದ್ ಅಲ್–ಗರ್ ಪ್ರದೇಶದಲ್ಲಿ ಮೂರು ಕಟ್ಟಡಗಳು ನಿಯಮಗಳಿಗೆ ಅನುಸಾರವಾಗಿ ಇಲ್ಲ ಎಂದು ಅಧಿಕಾರಿಗಳು ವಿದ್ಯುತ್ ಸಂಪರ್ಕ ಕಡಿತಗೊಳಿಸಿದ್ದಾರೆ ಎಂದು 'ಅರಬ್ ಟೈಮ್ಸ್' ಪತ್ರಿಕೆ ವರದಿಯಲ್ಲಿ ತಿಳಿಸಿದೆ.

ಕಟ್ಟಡವೊಂದರಲ್ಲಿ ಬೆಂಕಿ ಅವಘಡ ಸಂಭವಿಸಿದ್ದರಿಂದ 46 ಭಾರತೀಯರೂ ಸೇರಿ 50 ಮಂದಿ ಇತ್ತೀಚೆಗೆ ಮೃತಪಟ್ಟಿದ್ದರು.

ಗಣಿಗಾರಿಕೆ: ಎಚ್‌ಡಿಕೆ ಸಭೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಭಾರಿ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಕುದುರೆಮುಖ ಕಬ್ಬಿಣದ ಅದಿರು ಕಂಪನಿ (ಕೆಐಒಸಿಎಲ್) ಕಚೇರಿಯಲ್ಲಿ ಮಂಗಳವಾರ ಸಭೆ ನಡೆಸಲಿದ್ದು, ಕಂಪನಿಯ ಪುನಶ್ಚೇತನ ಮತ್ತು ಸಂಡೂರಿನಲ್ಲಿ ಗಣಿಗಾರಿಕೆ ಆರಂಭ ಕುರಿತು ಚರ್ಚಿಸಲಿದ್ದಾರೆ.

ಕುದುರೆಮುಖದಲ್ಲಿ ಗಣಿಗಾರಿಕೆ ಸ್ಥಗಿತಗೊಂಡ ಬಳಿಕ ಕೆಐಒಸಿಎಲ್ ಚಟುವಟಿಕೆಗಳು ತಗ್ಗಿವೆ. ಸಂಡೂರಿನ ದೇವದಾರಿಯಲ್ಲಿ 958 ಎಕರೆ 36 ಗುಂಟೆ ವಿಸ್ತೀರ್ಣದಲ್ಲಿ ಗಣಿಗಾರಿಕೆ ನಡೆಸಲು ಕುಮಾರಸ್ವಾಮಿ ಅವರು ಕೇಂದ್ರ ಸಚಿವರಾದ ಬಳಿಕ ಒಪ್ಪಿಗೆ ನೀಡಿದ್ದಾರೆ. ಸಂಡೂರಿನ ಸ್ವಾಮಿಮಲೈ ಪ್ರದೇಶದ 'ಹದ್ದಿನಪಡೆ' ಬ್ಲಾಕ್‌ನಲ್ಲಿ 1,074 ಎಕರೆ 24 ಗುಂಟೆ ವಿಸ್ತೀರ್ಣದಲ್ಲಿ ಕಬ್ಬಿಣದ ಅದಿರಿನ ನಿಕ್ಷೇಪ ಪತ್ತೆಗೆ ಸಮೀಕ್ಷೆ ನಡೆಸಲು ಅನುಮತಿ ನೀಡುವಂತೆಯೂ ಕೆಐಒಸಿಎಲ್ ಪ್ರಸ್ತಾವ ಸಲ್ಲಿಸಿದೆ.

ಕೆಐಒಸಿಎಲ್ ರಾಜ್ಯದಲ್ಲಿ ಗಣಿಗಾರಿಕೆ ಚಟುವಟಿಕೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಿತ್ತು. ಹೊರ ರಾಜ್ಯಗಳಿಂದ ಅದಿರು ತರಿಸಿಕೊಂಡು ಸಣ್ಣ ಪ್ರಮಾಣದಲ್ಲಿ ಉಕ್ಕಿನ ಉಂಡೆಗಳನ್ನಷ್ಟೇ ಉತ್ಪಾದಿಸುತ್ತಿದೆ. ಸ್ವಂತ ಗಣಿಗಾರಿಕೆ ಮೂಲಕ ಚಟುವಟಿಕೆಯನ್ನು ಪುನಃ ವಿಸ್ತರಿಸಲು ಕಂಪನಿ ಉದ್ದೇಶಿಸಿದೆ.

ದೇವದಾರಿ ಮತ್ತು 'ಹದ್ದಿನಪಡೆ' ಬ್ಲಾಕ್ ಎರಡೂ ಯೋಜನೆಗಳು ಅರಣ್ಯ ಪ್ರದೇಶದ ವ್ಯಾಪ್ತಿಯೊಳಗೆ ಬರುತ್ತವೆ. ಈ ಕಾರಣದಿಂದ ಅಲ್ಲಿನ ಪರಿಸರಾಸಕ್ತರು ತೀವ್ರ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಗಣಿಗಾರಿಕೆ ಪ್ರದೇಶದಲ್ಲಿ ಅರಣ್ಯ ನಾಶದ ಪ್ರಮಾಣ, ಸ್ಥಳೀಯರ ವಿರೋಧದ ಕುರಿತು ಕುಮಾರಸ್ವಾಮಿ ಅವರು ಕಂಪನಿಯ ಅಧಿಕಾರಿಗಳ ಜತೆ ಚರ್ಚಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕೆಐಒಸಿಎಲ್ ಪುನಶ್ಚೇತನಕ್ಕೆ ಸಂಬಂಧಿಸಿದ ಪ್ರಸ್ತಾವಗಳ ಬಗ್ಗೆಯೂ ಸಭೆಯಲ್ಲಿ ಚರ್ಚಿಸುವ ಸಾಧ್ಯತೆಗಳಿವೆ. ಮಂಗಳೂರಿನಲ್ಲಿರುವ ಉಕ್ಕು ತಯಾರಿಕಾ ಘಟಕದ ಕಾರ್ಯಾಚರಣೆ, ಹೊಸ ಉತ್ಪನ್ನಗಳ ಉತ್ಪಾದನೆ ಬಗ್ಗೆಯೂ ಕೇಂದ್ರ ಸಚಿವರು ಪರಿಶೀಲನೆ ನಡೆಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

'ಕೆಎಎಸ್ ಅಧಿಕಾರಿ ವಿರುದ್ಧ ದೋಷಾರೋಪ ಪಟ್ಟಿ ಸಿದ್ಧಪಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅರಣ್ಯ ಭೂಮಿಯನ್ನು ಗೋಮಾಳವೆಂದು ಮರು ನಮೂದು (ಇಂಡೀಕರಣ) ಮಾಡಿ ಆದೇಶ ಹೊರಡಿಸಿದ ಆರೋಪ ಎದುರಿಸು ತ್ತಿರುವ ಹಿರಿಯ ಕೆಎಎಸ್ ಅಧಿಕಾರಿ ಬಿ.ಎ ಜಗದೀಶ್ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಅವಕಾಶವಾಗುವಂತೆ ಕರಡು ದೋಷಾರೋಪ ಪಟ್ಟಿ ಸಿದ್ಧಪಡಿಸಿ, ಇಲಾಖೆಯ ಸಚಿವರ ಅನುಮೋದನೆಯೊಂದಿಗೆ ಪ್ರಸ್ತಾವ ಸಲ್ಲಿಸಬೇಕು' ಎಂದು ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ (ಎಸಿಎಸ್) ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಸೂಚನೆ ನೀಡಿದೆ.

ಹಾಸನ ಉಪ ವಿಭಾಗಾಧಿಕಾರಿ ಆಗಿದ್ದಾಗ, ಹಾಸನ ಉಪ ವಿಭಾಗದ ಶಾಂತಿಗ್ರಾಮ ಹೋಬಳಿಯ ತ್ಯಾವಿಹಳ್ಳಿ ಗ್ರಾಮದ ಸರ್ವೆ ನಂ. 22ರಲ್ಲಿ 61 ಎಕರೆ 31 ಗುಂಟೆ ಅರಣ್ಯ ಪ್ರದೇಶವನ್ನು ಅರಣ್ಯ ಸಂರಕ್ಷಣಾ ಕಾಯ್ದೆ ಉಲ್ಲಂಘಿಸಿ ಅನಧಿಕೃತವಾಗಿ ಗೋಮಾಳವೆಂದು ಮರು ನಮೂದು ಮಾಡಿರುವ ಆರೋಪವನ್ನು ಜಗದೀಶ್ ಅವರು ಎದುರಿಸುತ್ತಿದ್ದಾರೆ.

'ಸರ್ಕಾರಿ ಕೆಲಸದ ನಿರ್ವಹಣೆ ಸಂದರ್ಭದಲ್ಲಿ ನಿಯಮ ಉಲ್ಲಂಘಿಸಿದ ಪ್ರಕರಣ ಇದಾಗಿರುವುದರಿಂದ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆಯ ಬದಲು ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳಡಿ ಶಿಸ್ತು ಕ್ರಮ ಕೈಗೊಳ್ಳಬೇಕಾಗಿದೆ. ಮುಖ್ಯಮಂತ್ರಿಯೂ ಇದಕ್ಕೆ ಅನುಮೋದನೆ ನೀಡಿದ್ದಾರೆ' ಎಂದು ಎಸಿಎಸ್‌ಗೆ ಬರೆದ ಟಿಪ್ಪಣಿಯಲ್ಲಿ ಡಿಪಿಎಆರ್ ಉಲ್ಲೇಖಿಸಿದೆ.

ದಿನೇ ದಿನೇ ಹೆಚ್ಚುತ್ತಿರುವ ಪ್ರಕರಣಗಳು: ಹೈಕೋರ್ಟ್ ಆತಂಕ

ಮಹಿಳಾ ದೌರ್ಜನ್ಯ ತಡೆ ಕಾಯ್ದೆ ದುರ್ಬಳಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಿಳೆಯರ ಮೇಲಿನ ದೌರ್ಜನ್ಯ ತಡೆಗಟ್ಟುವುದಕ್ಕೆ ರೂಪಿಸಲಾಗಿರುವ ಭಾರತೀಯ ದಂಡ ಸಂಹಿತೆ–1860ರ (ಐಪಿಸಿ) ಕಲಂ 498ಎ ಅನ್ನು ದುರುಪಯೋಗ ಮಾಡಿಕೊಳ್ಳುತ್ತಿರುವ ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಿವೆ' ಎಂದು ಹೈಕೋರ್ಟ್ ತೀವ್ರ ಕಳವಳ ವ್ಯಕ್ತಪಡಿಸಿದೆ.

ಕೌಟುಂಬಿಕ ಪ್ರಕರಣವೊಂದರಲ್ಲಿ ಪತಿಯ ವಿರುದ್ಧದ ಪ್ರಕರಣದಲ್ಲಿ ಈ ಅಭಿಪ್ರಾಯ ವ್ಯಕ್ತಪಡಿಸಿರುವ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಪತಿಯ ಕುಟುಂಬದವರನ್ನು ಅನಗತ್ಯವಾಗಿ ಅಪರಾಧ ಕೃತ್ಯದ ಜಾಲದಲ್ಲಿ ಸಿಲುಕಿಸುವಂತಹ ಪ್ರಕರಣಗಳನ್ನು ಮುಂದುವರಿಸುವುದು ಕಾನೂನಿನ ದುರ್ಬಳಕೆಯಾಗುತ್ತದೆ' ಎಂದು ಹೇಳಿದೆ.

'ದುರ್ಬಳಕೆ ಪ್ರಕರಣಗಳ ಬಗ್ಗೆ ಹೈಕೋರ್ಟ್ ಈ ಹಿಂದೆಯೇ ಹಲವು ಬಾರಿ ಎಚ್ಚರಿಸಿದ್ದರೂ ಇಂತಹ ಪ್ರಕರಣ ಮರುಕಳಿಸುತ್ತಲೇ ಇವೆ. ಈ ಪ್ರಕರಣಗಳಲ್ಲಿ ಪತಿಯ ವಿರುದ್ಧ ಮಾತ್ರವಲ್ಲದೆ, ಅವರ ಕುಟುಂಬದವರನ್ನೂ ಅನಗತ್ಯವಾಗಿ ಎಳೆಯಲಾಗುತ್ತಿದೆ. ಇವುಗಳನ್ನು ಸೂಕ್ತ ರೀತಿಯಲ್ಲಿ ಪರಿಶೀಲಿಸಿ ಕ್ರಮ ಕೈಗೊಳ್ಳದೇ ಹೋದರೆ ಈ ದಿಸೆಯಲ್ಲಿ ರೂಪಿಸಲಾಗಿರುವ ಕಾನೂನಿನ ದುರುಪಯೋಗ ಹೆಚ್ಚುತ್ತದೆ. ಆದ್ದರಿಂದ, ವಿಚಾರಣಾ ನ್ಯಾಯಾಲಯಗಳು ಪತಿಯ ಕುಟುಂಬದವರ ವಿರುದ್ಧದ ಪ್ರಕರಣಗಳನ್ನು ಮುಂದುವರಿಸುವಾಗ ತುಂಬಾ ಜಾಗ್ರತೆ ವಹಿಸಬೇಕು' ಎಂದು ನ್ಯಾಯಪೀಠ ಆದೇಶಿಸಿದೆ.

ನ್ಯಾ. ನಾಗಪ್ರಸನ್ನ ಪೀಠದಲ್ಲಿ 600 ಅರ್ಜಿ ವಿಚಾರಣೆ

ಬೆಂಗಳೂರು: ರಾಜ್ಯ ಹೈಕೋರ್ಟ್ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ಏಕಸದಸ್ಯ ನ್ಯಾಯಪೀಠ ಮಂಗಳವಾರ (ಜೂನ್ 18) 600 ಅರ್ಜಿಗಳ ವಿಚಾರಣೆ ನಡೆಸಲಿದೆ.

ಕೋರ್ಟ್ ಹಾಲ್ 19ರ ನ್ಯಾಯಪೀಠದಲ್ಲಿರುವ ನ್ಯಾಯಮೂರ್ತಿ ನಾಗಪ್ರಸನ್ನ ಅವರು ಸಿಆರ್‌ಪಿಸಿ ಕಲಂ 482ರ ಅಡಿಯಲ್ಲಿ ಅಂದರೆ; ನ್ಯಾಯಾಲಯದ ಪ್ರಕ್ರಿಯೆಯ ದುರುಪಯೋಗ ತಡೆಗಟ್ಟಲು ಅಥವಾ ಭದ್ರತೆ ಪಡೆಯಲು ಅಗತ್ಯವಿರುವಂತಹ ಆದೇಶಗಳನ್ನು ಮಾಡುವ ಈ ಕಾಯ್ದೆಯಡಿ ಸಲ್ಲಿಸಲಾಗಿರುವ ಕ್ರಿಮಿನಲ್ ಅರ್ಜಿಗಳು ಮತ್ತು ಸಾಮಾನ್ಯವಾದ ವಿವಿಧ

ಉಳಿಕೆ ವಿಷಯಗಳಿಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆ ನಡೆಸಲಿದ್ದಾರೆ. ಕೋರ್ಟ್ ಹಾಲ್ 19ರ ಜೂನ್ 18ರಂದು ವಿಚಾರಣೆಗೆ ಬರಲಿರುವ ಪ್ರಕರಣಗಳ ಪಟ್ಟಿ 53 ಪುಟಗಳಷ್ಟಿದ್ದು, ಇವುಗಳಲ್ಲಿ 257 ಹೊಸ ಅರ್ಜಿಗಳಿವೆ.

ಹೈಕೋರ್ಟ್‌ನಲ್ಲಿ ನ್ಯಾಯಮೂರ್ತಿಗಳು ದಿನದಲ್ಲಿ ನಡೆಸುವ ಸಿಟ್ಟಿಂಗ್ ಅವಧಿಯು, ಮಧ್ಯಾಹ್ನದ ಭೋಜನ ವೇಳೆಯನ್ನು ಹೊರತುಪಡಿಸಿದಂತೆ ಒಟ್ಟು 5.15 ನಿಮಿಷಗಳ ಅವಧಿಯಷ್ಟು ಮಾತ್ರವೇ. ಕಾನೂನಿನ ಚೌಕಟ್ಟಿನಲ್ಲಿ ನ್ಯಾಯಮೂರ್ತಿಗಳು 24X7 ನ್ಯಾಯಮೂರ್ತಿ ಗಳಾಗಿಯೇ ಕಾರ್ಯ ನಿರ್ವಹಿಸಬೇಕಾಗುತ್ತದೆ. ಆದರೆ, ದಿನವೊಂದಕ್ಕೆ ಕಡ್ಡಾಯದ ಅವಧಿ ಒಟ್ಟು 5.15 ನಿಮಿಷ.

ಈ ಅವಧಿಯನ್ನು ಮೀರಿಯೂ ನ್ಯಾಯಮೂರ್ತಿಗಳು ಸಿಟ್ಟಿಂಗ್ (ಕಲಾಪ) ಮುಂದುವರಿಸುವ ವಿವೇಚನಾಧಿಕಾರ ಹೊಂದಿರುತ್ತಾರೆ. ದಿನದ ಪಟ್ಟಿಯಲ್ಲಿರುವ ಪ್ರಕರಣಗಳ ವಿಚಾರಣೆ ಬೇಗನೇ ಮುಗಿದರೆ ಕಲಾಪವನ್ನು ಆ ಸಮಯಕ್ಕೆ ಅಂತ್ಯಗೊಳಿಸುವುದು ಸಾಮಾನ್ಯ. ತೀರಾ ಇತ್ತೀಚೆಗಷ್ಟೇ 861 ಪ್ರಕರಣಗಳ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಕ್ಷಿಪ್ರಗತಿಯ ವಿಲೇವಾರಿಗಾಗಿ ಹೆಚ್ಚು ಸುದ್ದಿಯಲ್ಲಿದ್ದಾರೆ.

ಮಹತ್ವದ ಸಾಕ್ಷ್ಯ ಇರುವ ಸಾಧ್ಯತೆ: ರೇಣುಕಸ್ವಾಮಿ ಮೊಬೈಲ್‌ಗಾಗಿ ರಾಜಕಾಲುವೆಯಲ್ಲಿ ಶೋಧ

ಕ್ಷಮೆ ಕೇಳಿಸಿ ವಿಡಿಯೊ ಚಿತ್ರೀಕರಣ

ಪ್ರಜಾವಾಣಿ ವಾರ್ತೆ


ರಾಜು

ಬೆಂಗಳೂರು: ಕೊಲೆಯಾದ ರೇಣುಕಸ್ವಾಮಿ ಮೊಬೈಲ್ ಎಸೆದಿದ್ದ ಸುಮನಹಳ್ಳಿ ರಾಜಕಾಲುವೆಯಲ್ಲಿ ಮೊಬೈಲ್‌ಗಾಗಿ ಪೊಲೀಸರು ಸೋಮವಾರ ತೀವ್ರ ಶೋಧ ನಡೆಸಿದರು.

ಸ್ಥಳಕ್ಕೆ ಹತ್ತಕ್ಕೂ ಹೆಚ್ಚು ಪೌರ ಕಾರ್ಮಿಕರನ್ನು ಕರೆಸಿ ರಾಜಕಾಲುವೆಯಲ್ಲಿ ಹುಡುಕಾಟ ನಡೆಸಲಾಯಿತು. ರಾಜಕಾಲುವೆಗೆ ಇಳಿದು ಕಾರ್ಮಿಕರು ಎರಡು ತಾಸು, 200 ಮೀಟರ್ ಉದ್ದಕ್ಕೂ ಶೋಧಿಸಿದರು. ಆದರೆ, ಮೊಬೈಲ್ ಪತ್ತೆಯಾಗದ ಕಾರಣ ಶೋಧ ಕಾರ್ಯ ಸ್ಥಗಿತ ಮಾಡಲಾಯಿತು.

ಪಟ್ಟಣಗೆರೆಯ ಶೆಡ್‌ನಲ್ಲಿ ಜೂನ್ 9ರ ರಾತ್ರಿ ರೇಣುಕಸ್ವಾಮಿ ಕೊಲೆ ಮಾಡಿದ ಬಳಿಕ ಆರೋಪಿಗಳು ಮುಂಜಾನೆ ಸುಮಾರು 3.30ಕ್ಕೆ ಸ್ಕಾರ್ಪಿಯೊ ಕಾರಿನಲ್ಲಿ ಮೃತದೇಹವನ್ನು ಹಾಕಿಕೊಂಡು ಸುಮನಹಳ್ಳಿ ಸತ್ವ ಅಪಾರ್ಟ್‌ಮೆಂಟ್ ಎದುರಿನ ರಾಜಕಾಲುವೆ ಬಳಿ ಎಸೆದು ಪರಾರಿಯಾಗಿದ್ದರು.

ವಿಚಾರಣೆ ವೇಳೆ ಆರೋಪಿಗಳು, ರೇಣುಕಸ್ವಾಮಿಯ ಮೊಬೈಲ್ ರಾಜಕಾಲುವೆಯಲ್ಲಿ ಎಸೆದಿರುವ ಬಗ್ಗೆ ಹೇಳಿದ್ದರು. ಪೊಲೀಸರು ಆರೋಪಿ ಪ್ರದೂಷ್‌ನನ್ನು ರಾಜಕಾಲುವೆ ಬಳಿ ಕರೆತಂದು ಸ್ಥಳ ಮಹಜರು ನಡೆಸಿದರು. ಬಳಿಕ ಪೌರಕಾರ್ಮಿಕರ ಸಹಾಯ ಪಡೆದು ರಾಜಕಾಲುವೆಯಲ್ಲಿ ಮೊಬೈಲ್ ಪತ್ತೆಗೆ ಹುಡುಕಾಟ ನಡೆಸಿದರು.

‘ರೇಣುಕಾಸ್ವಾಮಿ ಕೊಲೆಯಾಗಿ 10 ದಿನ ಕಳೆದಿದೆ. ಆತನ ಮೊಬೈಲ್ ಇನ್ನೂ ಪತ್ತೆಯಾಗಿಲ್ಲ. ರೇಣುಕಸ್ವಾಮಿ ಮೊಬೈಲ್‌ನಲ್ಲಿ ಪ್ರಮುಖ ಸಾಕ್ಷ್ಯಗಳು ಇರುವ ಸಾಧ್ಯತೆಯಿದೆ’ ಎಂದು ತನಿಖಾಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಡೆಯದಾಗಿ ರೇಣುಕಸ್ವಾಮಿ ಮೊಬೈಲ್ ಟವರ್ ಲೊಕೇಶನ್ ರಾಜಕಾಲುವೆ ಬಳಿ ಪತ್ತೆಯಾಗಿದೆ.

‘ಪಟ್ಟಣಗೆರೆಯ ಶೆಡ್‌ಗೆ ರೇಣುಕಸ್ವಾಮಿ ಅವರನ್ನು ಕರೆ ತಂದ ಬಳಿಕ ಪವಿತ್ರಾಗೌಡ ತೋರಿಸಿ ‘ಇವರಿಗೇನಾ ಅಶ್ಲೀಲ ಸಂದೇಶ ಕಳುಹಿಸಿದ್ದು’ ಎಂದು ಆರೋಪಿಗಳು ಬೆದರಿಸಿದ್ದರು. ನಂತರ, ರೇಣುಕಸ್ವಾಮಿ ಮೊಬೈಲ್ ಕಸಿದುಕೊಂಡು ಕ್ಷಮೆ ಕೇಳಿಸಿ ಅದನ್ನು ಚಿತ್ರೀಕರಿಸಿಕೊಂಡಿದ್ದರು’ ಎಂದು ಪೊಲೀಸರು ಹೇಳಿದರು.

ಮೆಗ್ಗರ್ ಸಾಧನ ಕೊಟ್ಟವರಿಗೆ ಹುಟುಕಾಟ: ರೇಣುಕಸ್ವಾಮಿಗೆ ಎಲೆಕ್ಟ್ರಿಕ್ ಶಾಕ್ ನೀಡಿದ್ದ ರಾಜು ಎಂಬವರನ್ನು ಬಂಧಿಸಿರುವ ಪೊಲೀಸರು, ಅವರಿಗೆ ಮೆಗ್ಗರ್ ಸಾಧನ ನೀಡಿದ್ದ ವ್ಯಕ್ತಿಗೆ ಹುಡುಕಾಟ ನಡೆಸುತ್ತಿದ್ದಾರೆ.

‘ಎರಡು ತಿಂಗಳ ಹಿಂದೆಯೇ ಈ ಸಾಧನವನ್ನು ವ್ಯಕ್ತಿಯೊಬ್ಬರಿಂದ ಖರೀಸಿದ್ದೆ. ಬಂಧಿತ ದೀಪಕ್ ಸಹ ಈ ಸಾಧನವನ್ನು ಶೆಡ್‌ಗೆ ಆಗಾಗ್ಗೆ ಕೊಂಡೊಯ್ಯುತ್ತಿದ್ದ ಎಂದು ವಿಚಾರಣೆ ವೇಳೆ ರಾಜು ಬಾಯ್ಬಿಟ್ಟಿದ್ದಾನೆ’ ಎಂದು ಪೊಲೀಸರು ತಿಳಿಸಿದರು.

ನಟ ಯಶಸ್ ಸೂರ್ಯಗೆ ನೋಟಿಸ್?

‘ದರ್ಶನ್ ಆಪ್ತನಾಗಿರುವ ‘ಗರಡಿ’ ಸಿನಿಮಾದ ನಾಯಕ ನಟ ಯಶಸ್ ಸೂರ್ಯ ರೆಸ್ಟೋರೆಂಟ್‌ನಲ್ಲಿ ನಡೆದ ಪಾರ್ಟಿಯಲ್ಲಿ ಭಾಗಿಯಾಗಿದ್ದರು ಎಂಬ ಮಾಹಿತಿ ಸಿಕ್ಕಿದೆ. ಇದಕ್ಕೆ ಸಂಬಂಧಿಸಿದ ದೃಶ್ಯಾವಳಿಗೆ ಹುಡುಕಾಟ ನಡೆಸುತ್ತಿದ್ದೇವೆ’ ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

‘ಸೂಕ್ತ ಸಾಕ್ಷ್ಯ ಲಭಿಸಿದರೆ ನೋಟಿಸ್ ಕೊಟ್ಟು ವಿಚಾರಣೆಗೆ ಹಾಜರಾಗುವಂತೆ ಸೂಚಿಸುತ್ತೇವೆ’ ಎಂದು ಹೇಳಿದ್ದಾರೆ.

‘ಪಾರ್ಟಿ ಸ್ಥಳದಲ್ಲಿ ನಟ ದರ್ಶನ್, ಅವರ ಆಪ್ತೆ ಪವಿತ್ರಾಗೌಡ, ಆರೋಪಿಗಳಾದ ವಿನಯ್, ದೀಪಕ್ ಸಹ ಇದ್ದರು. ದರ್ಶನ್‌ಗೆ ಕರೆ ಬರುತ್ತಿದ್ದಂತೆ ಸಿಟ್ಟಿನಿಂದ ಕುರ್ಚಿಯನ್ನು ಒದ್ದು ತೆರಳಿದ್ದರು. ಅಲ್ಲಿಂದ ಕಾರಿನಲ್ಲಿ ಪಟ್ಟಣಗೆರೆ ಶೆಡ್‌ಗೆ ಹೋಗಿದ್ದರು. ಶೆಡ್ ಆವರಣದ ಒಳಕ್ಕೆ ಕಾರು ಹಾಗೂ ಜೀಪು ತೆರಳುತ್ತಿದ್ದ ದೃಶ್ಯ ಸಹ ಸಿಕ್ಕಿದೆ’ ಎಂದು ಮೂಲಗಳು ಹೇಳಿವೆ.

‘ಪವಿತ್ರಾಗೌಡರ ಸಹಾಯಕ ಪವನ್ ಎಂಬಾತ ರೇಣುಕಸ್ವಾಮಿಯನ್ನು ಅಪಹರಿಸಿ ಶೆಡ್‌ಗೆ ಕರೆ ತಂದಿದ್ದ ಮಾಹಿತಿಯನ್ನು ರೆಸ್ಟೋರೆಂಟ್‌ನಲ್ಲಿದ್ದಾಗ ದರ್ಶನ್‌ಗೆ ಕರೆ ಮಾಡಿ ತಿಳಿಸಿದ್ದರು’ ಎಂದು ಪೊಲೀಸರು ಹೇಳಿದರು.

ಅವರ ಮ್ಯಾನೇಜರ್ ಪತ್ರ ಬರೆದಿಟ್ಟು ಕಣ್ಮರೆಯಾದರು ಎಂದು ಹೇಳುತ್ತಾರೆ. ಪತ್ರ ದರ್ಶನ್ ಬರೆದಿಟ್ಟು ಕೊಲೆ ಮಾಡಿರಬಹುದೇ ಎಂಬ ಸಂಶಯವೂ ಬರುತ್ತದೆ. ಈ ಪ್ರಕರಣದ ತನಿಖೆಯೂ ಆಗಬೇಕು

ಎಂ.ಪಿ.ಅಪ್ಪಚ್ಚುರಂಜನ್, ಬಿಜೆಪಿ ಮುಖಂಡ

ಒಬ್ಬ ಸಾರ್ವಜನಿಕ ವ್ಯಕ್ತಿಯ ವಿಚಾರಣೆ ಸಾರ್ವಜನಿಕವಾಗೇ ಸಂಪೂರ್ಣ ಪಾರದರ್ಶಕವಾಗಿ ಆಗಬೇಕು. ವಿಚಾರಣೆಯ ವಿಡಿಯೊ ದಾಖಲೆಗಳನ್ನು ಮತ್ತು ಸಾಕ್ಷಿಗಳ ಎಲ್ಲಾ ವಿವರಗಳನ್ನು ಪೊಲೀಸರು ಆಗಾಗ ಸಾರ್ವಜನಿಕವಾಗಿ ತೆರೆದಿಡಬೇಕು

ಉಪೇಂದ್ರ, ನಟ

ಚಿತ್ರದುರ್ಗ: ಮಫ್ತಿಯಲ್ಲಿ ಪೊಲೀಸರ ಹುಡುಕಾಟ

ಚಿತ್ರದುರ್ಗ: ರೇಣುಕಸ್ವಾಮಿ ಕೊಲೆ ಪ್ರಕರಣ ಸಂಬಂಧ ಬೆಂಗಳೂರಿನ ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಸ್ಥಳ ಮಹಜರು ನಡೆಸಿದ ನಂತರ ಭಾನುವಾರ ರಾತ್ರಿ ಹಾಗೂ ಸೋಮವಾರ ಮಧ್ಯಾಹ್ನದವರೆಗೂ ನಗರದ ವಿವಿಧೆಡೆ ಮಹತ್ವದ ಸಾಕ್ಷ್ಯಗಳಿಗಾಗಿ ಹುಡುಕಾಟ ನಡೆಸಿದರು.

ರೇಣುಕಸ್ವಾಮಿ ಅಪಹರಣ ಪ್ರಕರಣದಲ್ಲಿ ಭಾಗಿಯಾಗಿರುವ ನಾಲ್ವರು ಸ್ಥಳೀಯ ಆರೋಪಿಗಳ ಮನೆಗೆ ತೆರಳಿ ಭಾನುವಾರ ರಾತ್ರಿಯವರೆಗೂ ತಪಾಸಣೆ ನಡೆಸಿದ್ದರು. ಭಾನುವಾರ ರಾತ್ರಿ ಮಫ್ತಿಯಲ್ಲಿ ರೇಣುಕಸ್ವಾಮಿ ಮನೆಗೆ ತೆರಳಿದ್ದ ಪೊಲೀಸರು ಆತನ ಪತ್ನಿ ಹಾಗೂ ತಂದೆ–ತಾಯಿ ಜೊತೆ ಮಾತನಾಡಿದರು. ರೇಣುಕಸ್ವಾಮಿಯ ಸ್ಕೂಟರ್, ಮೊಬೈಲ್ ಫೋನ್‌ಗಳ ಬಗ್ಗೆ ಮಾಹಿತಿ ಪಡೆದರು ಎಂದು ಮೂಲಗಳು ತಿಳಿಸಿವೆ.

‘ಪ್ರಕರಣದ 4ನೇ ಆರೋಪಿ ರಾಘವೇಂದ್ರ ಮನೆಯಲ್ಲಿ ಸಿಕ್ಕಿದ್ದ ರೇಣುಕಸ್ವಾಮಿ ಧರಿಸಿದ್ದ ಚಿನ್ನದ ಸರ, ಉಂಗುರ, ಬೆಳ್ಳಿಯ ಕಡಗ, ಇಷ್ಟಲಿಂಗ ಇರಿಸುವ ಬೆಳ್ಳಿಯ ಕರಡಿಗೆಯನ್ನು ಪಾಲಕರು ಗುರುತಿಸಿದ್ದಾರೆ. ಮೊಬೈಲ್ ಫೋನ್ ರೇಣುಕಸ್ವಾಮಿ ಬಳಿಯೇ ಇತ್ತು ಎಂದು ಪಾಲಕರು ಮಾಹಿತಿ ನೀಡಿದ್ದಾರೆ’ ಎಂದು ಪೊಲೀಸ್ ಸಿಬ್ಬಂದಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ರೇಣುಕಸ್ವಾಮಿ ಸ್ನೇಹಿತರು, ಸಂಬಂಧಿಕರು ಹಾಗೂ ಅವರು ಕೆಲಸ ಮಾಡುತ್ತಿದ್ದ ಫಾರ್ಮಸಿಗೆ ಭೇಟಿ ನೀಡಿ ಮಾಹಿತಿ ಕಲೆ ಹಾಕಿದ್ದಾರೆ ಎಂಬ ಮಾಹಿತಿ ಲಭಿಸಿದೆ.

‘ದರ್ಶನ್‌ರನ್ನು ಕೃಷಿ ರಾಯಭಾರಿ ಮಾಡಿದ್ದೆ; ಆಗ ಪ್ರಕರಣ ಇರಲಿಲ್ಲ’

ಹಾವೇರಿ: ‘ನಾನು ಕೃಷಿ ಸಚಿವನಾಗಿದ್ದ ವೇಳೆ ರೈತರಿಗೆ ಮಾದರಿಯಾಗಲಿ ಮತ್ತು ಮಾರ್ಗದರ್ಶನ ಸಿಗಲಿಯೆಂದು ನಟ ದರ್ಶನ್ ಅವರನ್ನು ಕೃಷಿ ರಾಯಭಾರಿ ಮಾಡಿದ್ದೆ. ಆಗ ಅವರ ಮೇಲೆ ಯಾವುದೇ ಪ್ರಕರಣ ಇರಲಿಲ್ಲ. ದರ್ಶನ್ ನಟಗಾಗಿ ಅಷ್ಟೇ ಗೊತ್ತು. ಅವರ ಬಗ್ಗೆ ಬೇರೆ ಮಾಹಿತಿ ಗೊತ್ತಿಲ್ಲ’ ಎಂದು ಮಾಜಿ ಸಚಿವ ಬಿ.ಸಿ.ಪಾಟೀಲ ಹೇಳಿದರು.

‘ಚಿತ್ರದುರ್ಗದ ರೇಣುಕಸ್ವಾಮಿ ಹತ್ಯೆ ಕ್ಷಮಿಸಲಾರದಂತಹ ಹೇಯಕೃತ್ಯ. ಕಾನೂನಿಗಿಂತ ದೊಡ್ಡವರು ಯಾರೂ ಇಲ್ಲ. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. ರೇಣುಕಸ್ವಾಮಿ ಕುಟುಂಬಕ್ಕೆ ನ್ಯಾಯ ಸಿಗಬೇಕು’ ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

‘ಕೊಲೆ ಪ್ರಕರಣದಲ್ಲಿ ಬಂಧಿಸಲಾಗಿರುವ ದರ್ಶನ್ ಅವರನ್ನು ಸಿನಿಮಾಗಳಿಂದ ನಿಷೇಧಿಸಬೇಕಾ’ ಎಂಬ ಪ್ರಶ್ನೆಗೆ ಉತ್ತರಿಸಿದ ಪಾಟೀಲ, ‘ದರ್ಶನ್ ಈಗ ಅಪರಾಧಿಯಲ್ಲ. ಆರೋಪಿ ಮಾತ್ರ. ಪೊಲೀಸರು ಪ್ರಕರಣದ ಸಂಪೂರ್ಣ ತನಿಖೆ ನಡೆಸಿ, ಯಾರು ಎ1 ಆರೋಪಿ ಹಾಗೂ ಎ2 ಆರೋಪಿ ಎಂಬುದನ್ನು ಪುರಾವೆ ಸಮೇತ ದೋಷಾರೋಪ ಪಟ್ಟಿಯಲ್ಲಿ ದಾಖಲಿಸುತ್ತಾರೆ. ಏನೇ ಆದರೂ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು’ ಎಂದರು. ‘ಮಹರ್ಷಿ ವಾಲ್ಮೀಕಿ ನಿಗಮದ ₹187 ಕೋಟಿ ಹಣವನ್ನು ಅಕ್ರಮವಾಗಿ ವರ್ಗಾಯಿಸಿ, ಆಂಧ್ರಪ್ರದೇಶದ ಚುನಾವಣೆಗೆ ಬಳಸಲಾಗಿದೆ. ಈ ಅಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪಾತ್ರವಿದ್ದು, ರಾಜೀನಾಮೆ ನೀಡಬೇಕು’ ಎಂದರು.

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಇಟ್ನಾಳ ಗ್ರಾಮದ ರೈತ ಶಿವಪ್ಪ ಶೆಂಡೂರೆ ಅವರು ತಾವು ಸಾಕಿದ ಪಂಜಾಬ್‌ನ ಬೀಟಲ್ ತಳಿಯ 4 ಅಡಿ ಎತ್ತರ 170 ಕೆ.ಜಿ. ತೂಕದ ಮೇಕೆಯನ್ನು ಬಕ್ರೀದ್ ಹಬ್ಬದ ಸಂದರ್ಭದಲ್ಲಿ ₹1.80 ಲಕ್ಷಕ್ಕೆ ಮಾರಿದ್ದಾರೆ. ವಾಸೀಂ ಬಿಜಾಪುರ ಎಂಬುವರು ಖರೀದಿಸಿದ್ದಾರೆ

3 ವರ್ಷಗಳಲ್ಲಿ 1,603 ಬಾಲ ಕಾರ್ಮಿಕರ ರಕ್ಷಣೆ

• ಬಸವರಾಜ ಹವಾಲ್ದಾರ

ಬಾಗಲಕೋಟೆ: ರಾಜ್ಯದ ವಿವಿಧೆಡೆ ಕಾರ್ಮಿಕ ಇಲಾಖೆ ಮೂರು ವರ್ಷಗಳಲ್ಲಿ ನಡೆಸಿದ ದಾಳಿಗಳಲ್ಲಿ 1,603 ಬಾಲ ಕಾರ್ಮಿಕರನ್ನು ರಕ್ಷಿಸಲಾಗಿದೆ. 519 ಪ್ರಕರಣಗಳು ದಾಖಲಾಗಿದ್ದು, 66 ಪ್ರಕರಣಗಳಲ್ಲಿ ಮಾತ್ರ ಶಿಕ್ಷೆಯಾಗಿದೆ.

ಕಾರ್ಮಿಕ ಇಲಾಖೆಯು 2021ರಿಂದ 2023ರ ಅಂತ್ಯದವರೆಗೆ ರಾಜ್ಯದಲ್ಲಿ 77,486 ಕಡೆ ದಾಳಿ ನಡೆಸಿ,₹18,59 ಲಕ್ಷ ದಂಡ ವಿಧಿಸಿದೆ. ಈ ವರ್ಷವೂ 8,445 ಕಡೆ ದಾಳಿ ನಡೆಸಿ, 235 ಮಕ್ಕಳನ್ನು ರಕ್ಷಿಸಿದೆ.

ಬೆಂಗಳೂರು ಗ್ರಾಮಾಂತರ, ಧಾರವಾಡ, ಬಾಗಲಕೋಟೆ ಸೇರಿ ಹಲವು ಜಿಲ್ಲೆಗಳಲ್ಲಿ ದಾಳಿ ನಡೆಸಿ, ರಕ್ಷಿಸಲಾಗಿದೆ. ಆದರೆ, ಪ್ರಕರಣಗಳನ್ನು ದಾಖಲಿಸಿಲ್ಲ. ಮಕ್ಕಳನ್ನು ದುಡಿಸಿಕೊಳ್ಳುವವರಿಗೆ ಎಚ್ಚರಿಕೆ ನೀಡಿ, ಮುಚ್ಚಳಿಕೆ ಪತ್ರ ಬರೆಯಿಸಿಕೊಂಡು ಬಿಡಲಾಗುತ್ತದೆ.

ಎಲ್ಲೆಲ್ಲಿ ಹೆಚ್ಚು: ಹೋಟೆಲ್, ಖಾನಾವಳಿ, ಮನೆ ನಿರ್ಮಾಣ, ಕೃಷಿ ಚಟುವಟಿಕೆ, ಉಪಕಸುಬಾದ ದನ, ಕುರಿ ಕಾಯುವವಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬಾಲ ಕಾರ್ಮಿಕರನ್ನು ದುಡಿಸಿಕೊಳ್ಳಲಾಗುತ್ತದೆ. ಅಸಂಘಟಿತ ವಲಯದಲ್ಲಿ ದುಡಿಸಿಕೊಳ್ಳುವ ಮಕ್ಕಳನ್ನು ಪತ್ತೆ ಮಾಡುವುದು ಅಧಿಕಾರಿಗಳಿಗೆ ಸವಾಲಾಗಿದೆ.

14 ವರ್ಷದೊಳಗಿನ ಮಕ್ಕಳನ್ನು ದುಡಿಮೆಗೆ ಬಳಸುವಂತಿಲ್ಲ. ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಹೋಟೆಲ್, ಕಾರ್ಖಾನೆಗಳ ಮೇಲೆ ಆಗಾಗ ದಾಳಿ ನಡೆಸಿ ಪರಿಶೀಲಿಸಲಾಗುತ್ತದೆ. ಅಲ್ಲಿರುವ ಮಕ್ಕಳನ್ನು ರಕ್ಷಿಸಲಾಗುತ್ತದೆ. ಬಾಲ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳಬಾರದು ಎಂದು ಜಾಗೃತಿಯನ್ನೂ ಮೂಡಿಸಲಾಗುತ್ತದೆ’ ಎಂದು ಬಾಗಲಕೋಟೆ ಜಿಲ್ಲಾ ಬಾಲಕಾರ್ಮಿಕರ ಯೋಜನಾ ಸಂಸ್ಥೆ ಯೋಜನಾ ನಿರ್ದೇಶಕ ಸುಧಾಕರ ಬಡಿಗೇರ ತಿಳಿಸಿದರು.

ಬಾಲ ಕಾರ್ಮಿಕರು ಪತ್ತೆಯಾದ ಕಾರ್ಖಾನೆಗಳ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಬೇಕು. ಜೊತೆಗೆ ಶಿಕ್ಷೆಯನ್ನೂ ಕೊಡಿಸಬೇಕು.

ಶಶಿಧರ ಕೋಸುಂಬೆ, ಸದಸ್ಯ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ

ಯೋಗ ಒಲಿಂಪಿಯಾಡ್ ಇಂದಿನಿಂದ

ಪ್ರಜಾವಾಣಿ ವಾರ್ತೆ

ಮೈಸೂರು: ‘ಇಲ್ಲಿನ ಪ್ರಾದೇಶಿಕ ಶಿಕ್ಷಣ ಸಂಸ್ಥೆಯ (ಆರ್‌ಐಇ) ಆವರಣದಲ್ಲಿ ಜೂನ್ 18ರಿಂದ 20ರವರೆಗೆ ರಾಷ್ಟ್ರೀಯ ಯೋಗ ಒಲಿಂಪಿಯಾಡ್ ನಡೆಯಲಿದ್ದು, ದೇಶದ ವಿವಿಧ ಶಿಕ್ಷಣ ಸಂಸ್ಥೆಗಳ 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ’ ಎಂದು ಎನ್‌ಸಿಇಆರ್‌ಟಿ ನಿರ್ದೇಶಕ ದಿನೇಶ್‌ಪ್ರಸಾದ್ ಸಕ್ಲಾನಿ ತಿಳಿಸಿದರು.

‘ವಿದ್ಯಾರ್ಥಿಗಳಲ್ಲಿ ಯೋಗ ಜಾಗೃತಿಯ ಆಶಯದೊಂದಿಗೆ ಪ್ರತಿ ವರ್ಷ ಒಲಿಂಪಿಯಾಡ್ ಆಯೋಜಿಸಲಾಗುತ್ತಿದೆ. ಕೇಂದ್ರೀಯ ವಿದ್ಯಾಲಯ, ನವೋದಯ, ಸಿಬಿಎಸ್‌ಇ, ಪ್ರಾದೇಶಿಕ ಶಿಕ್ಷಣ ಸಂಸ್ಥೆಗಳು ಸೇರಿದಂತೆ ವಿವಿಧ ಶಾಲೆಗಳ ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ’ ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿಡದರು.

‘18ರಂದು ಬೆಳಿಗ್ಗೆ 11ಕ್ಕೆ ಕೆಎಸ್‌ಒಯು ಘಟಿಕೋತ್ಸವ ಭವನದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಒಲಿಂಪಿಯಾಡ್ ಉದ್ಘಾಟಿಸಲಿದ್ದಾರೆ. ಆರ್‌ಐಇ ಆವರಣದಲ್ಲಿ ಸ್ಪರ್ಧೆಗಳು ನಡೆಯಲಿವೆ’ ಎಂದರು.

ಎನ್‌ಸಿಇಆರ್‌ಟಿ ಹೊಣೆಯಲ್ಲ: ‘ಈಚೆಗೆ ನಡೆದ ನೀಟ್ ಪರೀಕ್ಷೆಯ ಪ್ರಶ್ನೆಗಳ ಆಯ್ಕೆಯಲ್ಲಿ ಕಂಡುಬಂದ ಲೋಪಕ್ಕೆ ಎನ್‌ಸಿಇಆರ್‌ಟಿ ಹೊಣೆಯಲ್ಲ. ನಾವು 2020ರಲ್ಲಿ ಪಠ್ಯ ಪರಿಷ್ಕರಿಸಿದ್ದು, ಅದು ಮುದ್ರಣ ಹಾಗೂ ಆನ್‌ಲೈನ್ ಎರಡೂ ಮಾಧ್ಯಮದಲ್ಲೂ ಲಭ್ಯವಿದೆ. ಹೀಗಿದ್ದೂ 2020ಕ್ಕಿಂತ ಮುಂಚಿನ ಪಠ್ಯ ಆಧರಿಸಿ ಪ್ರಶ್ನೆಪತ್ರಿಕೆ ರೂಪಿಸಿದ್ದಕ್ಕೆ ಎನ್‌ಟಿಎ ಉತ್ತರಿಸಬೇಕು’ ಎಂದು ಎನ್‌ಸಿಇಆರ್‌ಟಿ ನಿರ್ದೇಶಕ ದಿನೇಶ್‌ಪ್ರಸಾದ್ ಸಕ್ಲಾನಿ ಪ್ರತಿಕ್ರಿಯಿಸಿದರು.

‘ದೇಶದಾದ್ಯಂತ ಒಂದೊಂದೇ ರಾಜ್ಯ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅಳವಡಿಸಿಕೊಳ್ಳುತ್ತಿದೆ. ಆದರೆ, ಕರ್ನಾಟಕ, ಕೇರಳ ಸೇರಿದಂತೆ ಕೆಲವೇ ರಾಜ್ಯಗಳು ಹಿಂಜರಿದಿವೆ. ಶಿಕ್ಷಣ ನೀತಿ ನಿರೂಪಣೆಗಳಿಗೆ ಸಂಬಂಧಿಸಿ ಎನ್‌ಸಿಇಆರ್‌ಟಿ ಸಲಹಾ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿದೆ. ಹೀಗಾಗಿ ಯಾರನ್ನೂ ಒತ್ತಾಯಿಸುವುದಿಲ್ಲ. ದೇಶದಾದ್ಯಂತ ಒಂದೇ ಶಿಕ್ಷಣ ನೀತಿ ಹೊಂದುವುದು ಉತ್ತಮ’ ಎಂದರು.

ಆರ್‌ಐಇ ಪ್ರಾಂಶುಪಾಲ ವೈ. ಶ್ರೀಕಾಂತ್, ಕಾರ್ಯಕ್ರಮ ಸಂಯೋಜಕಿ ಕಲ್ಪನಾ ವೇಣುಗೋಪಾಲ್ ಇದ್ದರು.

ಬೈಕ್ ಕೊಟ್ಟ ಅಣ್ಣನಿಗೆ ದಂಡ

ಕಲಬುರಗಿ: ನಿರ್ಲಕ್ಷ್ಯದಿಂದ ಬೈಕ್ ಚಲಾಯಿಸಿ ಇನ್ನೊಂದು ವಾಹನಕ್ಕೆ ಡಿಕ್ಕಿ ಹೊಡೆಸಿದ ಬಾಲಕನಿಗೆ ಬೈಕ್ ಕೊಟ್ಟಿದ್ದ ಆತನ ಅಣ್ಣನಿಗೆ ಇಲ್ಲಿನ 1ನೇ ಜೆಎಂಎಫ್‌ಸಿ ನ್ಯಾಯಾಲಯವು ₹25 ಸಾವಿರ ದಂಡ ವಿಧಿಸಿದೆ.

ಅಬ್ದುಲ್ ನಫಿಯಾನ್ ಅಬ್ದುಲ್ ಸಲಾಂ ಅವರು ವಯಸ್ಕನಲ್ಲದ ತಮ್ಮನಿಗೆ ಕಳೆದ ಮಾರ್ಚ್ 8ರಂದು ರಾತ್ರಿ ದ್ವಿಚಕ್ರ ವಾಹನ ಚಲಾಯಿಸಲು ನೀಡಿದ್ದರು. ಬಾಲಕನು ನಿರ್ಲಕ್ಷ್ಯದಿಂದ ವಾಹನ ಚಲಾಯಿಸಿದ್ದರಿಂದ ಎದುರಿಗೆ ಬರುತ್ತಿದ್ದ ಬೈಕ್‌ಗೆ ಡಿಕ್ಕಿ ಹೊಡೆದಿದ್ದ.

भारतीय रिज़र्व बैंक

पर्यवेक्षण विभाग

क्षेत्रीय कार्यालय, बेंगलूरु

www.rbi.org.in

सार्वजनिक सूचना

भारतीय रिज़र्व बैंक अधिनियम, 1934 की धारा 45-आईए (6) (i) द्वारा प्रदत्त शक्तियों का प्रयोग करते हुए, भारतीय रिज़र्व बैंक ने निम्नलिखित गैर-बैंकिंग वित्तीय कंपनी (एनबीएफ़सी) को जारी किए गए पंजीकरण प्रमाणपत्र (सीओआर) को निरस्त कर दिया है :

क्र. सं.	एनबीएफ़सी का नाम	पंजीकृत कार्यालय का पता	सीओआर सं.	सीओआर जारी करने की तिथि
1	मेसर्स वियान ग्रोथ कैपिटल प्राइवेट लिमिटेड	दूसरी मंजिल, नंबर 2151, केईबी के सामने, 17 वां मेन, एचएएल द्वितीय चरण, बेंगलूरु 560008	एन-02.00351	19 सितंबर 2022

अत:, उपर्युक्त कंपनी भारतीय रिज़र्व बैंक अधिनियम, 1934 की धारा 45-आई के खंड (क) में यथापरिभाषित गैर-बैंकिंग वित्तीय संस्था (एनबीएफआई) का कारोबार नहीं करेगी।

स्थान: बेंगलूरु

हस्ता/-

महाप्रबंधक

ಭಾರತೀಯ ರಿಸರ್ವ್ ಬ್ಯಾಂಕ್

ಮೇಲ್ವಿಚಾರಣಾ ವಿಭಾಗ, ಬೆಂಗಳೂರು

ಪ್ರಾದೇಶಿಕ ಕಛೇರಿ ಬೆಂಗಳೂರು

www.rbi.org.in

ಸಾರ್ವಜನಿಕ ಸೂಚನೆ

ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ 1934ರ ಪ್ರಕರಣ 45–IA (6) (i) ರ ಅಡಿಯಲ್ಲಿ ನೀಡಲಾದ ಅಧಿಕಾರವನ್ನು ಬಳಸಿ ಕೆಳಕಂಡ ಬ್ಯಾಂಕಿಂಗೇತರ ಹಣಕಾಸು ಕಂಪೆನಿಗೆ ನೀಡಲಾಗಿದ್ದ ನೋಂದಣಿ ಪ್ರಮಾಣ ಪತ್ರವನ್ನು ಭಾರತೀಯ ರಿಸರ್ವ್ ಬ್ಯಾಂಕ್ ರದ್ದುಪಡಿಸಿದೆ.

ಸಂಖ್ಯೆ	ಎನ್ ಬಿ ಎಫ್ ಸಿ ಯ ಹೆಸರು	ನೋಂದಣಿಯಾದ ಕಛೇರಿಯ ವಿಳಾಸ	ಸಿ ಓ ಆರ್(CoR) ಸಂಖ್ಯೆ	ಸಿ ಓ ಆರ್ ನೀಡಿದ ದಿನಾಂಕ
1	ಮೆಸರ್ಸ್ ವಿಯಾನ್ ಗ್ರೋತ್ ಕ್ಯಾಪಿಟಲ್ ಪ್ರೈವೇಟ್ ಲಿಮಿಟೆಡ್	2ನೇ ಮಹಡಿ, ಸಂಖ್ಯೆ 2151, ಕೆ ಇ ಬಿ, ಎದುರು, 17ನೇ ಮುಖ್ಯ ರಸ್ತೆ, ಎಚ್ ಎ ಎಲ್ 2ನೇ ಘಟ್ಟ, ಬೆಂಗಳೂರು 560008	ಎನ್ – 02.00351	ಸೆಪ್ಟೆಂಬರ್ 19, 2022

ಆದ್ದರಿಂದ ಮೇಲಿನ ಕಂಪೆನಿಯು ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ, 1934 ರ ಪ್ರಕರಣ 45–I ಷರತ್ತು (ಎ) ಅಡಿಯಲ್ಲಿ ವ್ಯಾಖ್ಯಾನಿಸಲಾದ ಬ್ಯಾಂಕಿಂಗೇತರ ಹಣಕಾಸು ವ್ಯವಹಾರಗಳನ್ನು ನಡೆಸುವಂತಿಲ್ಲ.

ಸ್ಥಳ : ಬೆಂಗಳೂರು

ಸಹಿ/–

ಮಹಾ ವ್ಯವಸ್ಥಾಪಕರು

ಬಸವಕಲ್ಯಾಣದ ಈದ್ಗಾ ಮೈದಾನದಲ್ಲಿ ಸೋಮವಾರ ಕೆಲ ಮುಸ್ಲಿಮರು ಪ್ಯಾಲೆಸ್ಟೀನ್ ಪರ ಹಾಗೂ ಇಸ್ರೇಲ್ ವಿರುದ್ಧ ಪೋಸ್ಟರ್ ಪ್ರದರ್ಶಿಸಿದರು

ಪ್ಯಾಲೆಸ್ಟೀನ್ ಪರ, ಇಸ್ರೇಲ್ ವಿರುದ್ಧ ಘೋಷಣೆ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ (ಬೀದರ್ ಜಿಲ್ಲೆ): ಬಕ್ರೀದ್ ಹಬ್ಬದ ಅಂಗವಾಗಿ ನಗರದ ಈದ್ಗಾ ಮೈದಾನದಲ್ಲಿ ಸೋಮವಾರ ಸಾಮೂಹಿಕ ಪ್ರಾರ್ಥನೆಯ ನಂತರ ಕೆಲವರು ಪ್ಯಾಲೆಸ್ಟೀನ್ ಪರ ಹಾಗೂ ಇಸ್ರೇಲ್ ವಿರುದ್ಧ ಪೋಸ್ಟರ್ ಪ್ರದರ್ಶಿಸಿ ಘೋಷಣೆಗಳನ್ನು ಕೂಗಿದರು.

ಪ್ರಾರ್ಥನೆಯಲ್ಲಿ ನೂರಾರು ಜನ ಪಾಲ್ಗೊಂಡು ನಿರ್ಗಮಿಸಿದ್ದರು. ಕೆಲವರು ಪೋಸ್ಟರ್ ಹಿಡಿದುಕೊಂಡು, ಇಸ್ರೇಲ್ ಅನ್ಯಾಯ ನಿಲ್ಲಲಿ ಎಂದು ಘೋಷಣೆಗಳನ್ನು ಕೂಗಿದರು. ಪ್ರಮುಖರಾದ ರಿಯಾಜ್ ಪಟೇಲ್, ಜುಬೇರ್, ಮುಜಾಹೀದ್ ಪಾಶಾ ಮತ್ತಿತರರು ಈ ವೇಳೆ ಹಾಜರಿದ್ದರು.

ಕಲಾಂ ವಿ.ವಿ ಸ್ಥಾಪನೆಗೆ ಚಿಂತನೆ

ಶ್ರೀರಂಗಪಟ್ಟಣ: ‘ಮಾಜಿ ರಾಷ್ಟ್ರಪತಿ ಎಪಿಜೆ ಅಬ್ದುಲ್ ಕಲಾಂ ಹೆಸರಿನಲ್ಲಿ ಪಟ್ಟಣದಲ್ಲಿ ವಿಶ್ವವಿದ್ಯಾಲಯ ಮತ್ತು ಟಿಪ್ಪು ಸುಲ್ತಾನ್ ಸಂಶೋಧನಾ ಕೇಂದ್ರ ತೆರೆಯುವ ಕುರಿತು ಚಿಂತನೆ ನಡೆದಿದ್ದು, ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರ ಜತೆ ಚರ್ಚೆ ನಡೆಸಿದ್ದೇನೆ’ ಎಂದು ಶಾಸಕ ರಮೇಶ ಬಂಡಿಸಿದ್ದೇಗೌಡ ತಿಳಿಸಿದರು.

ಪಟ್ಟಣದ ಈದ್ಗಾ ಮೈದಾನದಲ್ಲಿ ಸೋಮವಾರ ಮುಸ್ಲಿಂ ಬಾಂಧವರಿಗೆ ಬಕ್ರೀದ್ ಹಬ್ಬದ ಶುಭಾಶಯ ಕೋರಿ ಮಾತನಾಡಿದ ಅವರು, ‘ಯುದ್ಧ ಭೂಮಿಯಲ್ಲಿ ವಿಶ್ವದಲ್ಲೇ ಮೊದಲು ರಾಕೆಟ್ ಬಳಸಿದ್ದು ಟಿಪ್ಪು ಸುಲ್ತಾನ್. ಬ್ರಿಟಿಷರ ವಿರುದ್ಧ ನಡೆದ ಯುದ್ಧದಲ್ಲಿ ಆತ ಬಳಸಿದ ರಾಕೆಟ್‌ಗಳು ಈಗಲೂ ಬ್ರಿಟಿಷ್ ಮ್ಯೂಸಿಯಂನಲ್ಲಿವೆ. ಈ ಕಾರಣಕ್ಕೆ ಅಬ್ದುಲ್ ಕಲಾಂ ಅವರಿಗೆ ಟಿಪ್ಪು ಮತ್ತು ಈ ಊರಿನ ಬಗ್ಗೆ ವಿಶೇಷ ಆಸಕ್ತಿ ಇತ್ತು’ ಎಂದರು.

‘ಕಲಾಂ ಅವರು ರಾಷ್ಟ್ರಪತಿಯಾಗಿದ್ದಾಗ ಇಲ್ಲಿಗೆ ಭೇಟಿ ನೀಡುವ ಕಾರ್ಯಕ್ರಮ ನಿಗದಿಯಾಗಿತ್ತು. ಕಾರಣಾಂತರಗಳಿಂದ ರದ್ದಾಯಿತು. 9ನೇ ಶತಮಾನದಿಂದಲೂ ಈ ಪಟ್ಟಣ ರಾಜರ ಆಳ್ವಿಕೆಗೆ ಒಳಪಟ್ಟಿದ್ದು, ಜಾಗತಿಕ ಭೂಪಟದಲ್ಲಿ ವಿಶಿಷ್ಟ ಸ್ಥಾನ ಪಡೆದಿದೆ. ಈ ಪಾರಂಪರಿಕ ಪಟ್ಟಣದಲ್ಲಿ ಸ್ಥಾಪಿಸುವ ವಿಶ್ವವಿದ್ಯಾಲಯದಲ್ಲಿ ಪ್ರಾಥಮಿಕ ಹಂತದಿಂದ ಸ್ನಾತಕೋತ್ತರ ಪದವಿವರೆಗೆ ಶಿಕ್ಷಣ ಸಿಗುವಂತೆ ಯೋಜಿಸಲಾಗುವುದು’ ಎಂದರು.

‘ಕಾಂಗ್ರೆಸ್‌ನ 40 ಶಾಸಕರಿಂದ ರಾಜೀನಾಮೆಗೆ ಚಿಂತನೆ’

ಪ್ರಜಾವಾಣಿ ವಾರ್ತೆ

ಗೋವಿಂದ ಕಾರಜೋಳ

ಚಿತ್ರದುರ್ಗ: ‘ಕಾಂಗ್ರೆಸ್‌ನ 40 ಜನ ಶಾಸಕರು ರಾಜೀನಾಮೆ ನೀಡಲು ಚಿಂತನೆ ನಡೆಸಿದ್ದಾರೆ’ ಎಂದು ಸಂಸದ ಗೋವಿಂದ ಕಾರಜೋಳ ಹೇಳಿದರು.

‘ಯಾವುದೇ ವಿವೇಚನೆ, ಲೆಕ್ಕಾಚಾರ ಇಲ್ಲದೇ ಗ್ಯಾರಂಟಿ ಯೋಜನೆ ಜಾರಿಗೊಳಿಸಿದ ನಂತರ ಅಭಿವೃದ್ಧಿ ಕೆಲಸಗಳಿಗೆ ಅನುದಾನದ ಕೊರತೆಯುಂಟಾಗಿದೆ. ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ಸಿಗದ ಹಿನ್ನೆಲೆಯಲ್ಲಿ ಬೇಸತ್ತಿರುವ ಕಾಂಗ್ರೆಸ್‌ನ 40 ಜನ ಶಾಸಕರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲು ಮುಂದಾಗಿದ್ದಾರೆ’ ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಮುದ್ದೇಬಿಹಾಳ ಶಾಸಕ ಸಿ.ಎಸ್. ನಾಡಗೌಡ ಅವರು ಈಚೆಗೆ ತಮ್ಮ ಸರ್ಕಾರದ ವಿರುದ್ಧವೇ ಬಹಿರಂಗವಾಗಿ ಅಸಮಾಧಾನ ಹೊರಹಾಕಿದ್ದಾರೆ. ಸರ್ಕಾರದ ಬೊಕ್ಕಸ ಖಾಲಿಯಾಗಿದ್ದು, ದಿವಾಳಿಯ ಅಂಚಿಗೆ ತಲುಪಿದೆ. ಇದರ ವಿರುದ್ಧ ಒಬ್ಬೊಬ್ಬರೇ ಶಾಸಕರು ಬಂಡೇಳುತ್ತಿದ್ದಾರೆ. ಗ್ಯಾರಂಟಿ ಯೋಜನೆಗಳಿಗೆ ಹಣಕಾಸು ಹೊಂದಿಸಿಕೊಳ್ಳಲು ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಮಾಡಿದ್ದಾರೆ’ ಎಂದು ಅವರು ಆರೋಪಿಸಿದರು.

‘ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ನೇತೃತ್ವದ ಆಡಳಿತದ ಅವಧಿಯಲ್ಲಿ ಜಾರಿಗೊಳಿಸಿದ್ದ ಯೋಜನೆ ಮುಂದುವರಿಸಲು ಹಣ ಬಿಡುಗಡೆ ಮಾಡಿಲ್ಲ. ಎಸ್‌ಸಿಪಿ–ಟಿಎಸ್‌ಪಿ ಯೋಜನೆಗಳಿಗಾಗಿ ಮೀಸಲಿಟ್ಟಿದ್ದ ₹24,000 ಕೋಟಿ ಹಣವನ್ನು ಅನ್ಯ ಉದ್ದೇಶಗಳಿಗೆ ಬಳಸಿಕೊಳ್ಳಲಾಗಿದೆ. ಕೂಡಲೇ ಆ ಹಣವನ್ನು ವಾಪಸ್ ಹಾಕಿ ಪರಿಶಿಷ್ಟ ಜಾತಿ, ಪಂಗಡಗಳ ಪ್ರಗತಿಗಾಗಿ ವಿನಿಯೋಗ ಮಾಡಬೇಕು’ ಎಂದು ಒತ್ತಾಯಿಸಿದರು.

SAD DEMISE

Dr. A. S. Arvind

18-04-1954 - 16-06-2024

It is with great sorrow that we announce the passing of Dr. A. S. Arvind.
He was a distinguished physician and a remarkable administrator, whose career was marked by compassion, integrity, and a commitment to excellence.
He touched the lives of many with his kindness and wisdom.

In Fond remembrance

Dr. Kamini. A. Rao,

Pooja Rao, Sidharth Rao, and Poorvi Rao

Dr. Vyshnavi Rao, Dr. Prashant C.D, Daivik and Avni

Sandhya Rao Atignal

ಮೊದಲನೇ ವರ್ಷದ ಪುಣ್ಯಸ್ಮರಣೆ

ಶ್ರೀ ಎಂ. ಗಿರಿಗೌಡರು

ಸಂಸ್ಥಾಪಕರು ಮತ್ತು ಅಧ್ಯಕ್ಷರು

ಗಂಗೋತ್ರಿ ಸಮೂಹ ಶಿಕ್ಷಣ ಸಂಸ್ಥೆಗಳು

13ನೇ ಜನವರಿ 1950 ▪ 18ನೇ ಜೂನ್ 2023

ಶಿಸ್ತುಬದ್ಧವಾದ ಮತ್ತು ಸಂಸ್ಕಾರಯುತ ಬದುಕನ್ನು ನಡೆಸಿ ನಮ್ಮೆಲ್ಲರ ಜೀವನಕ್ಕೆ ಬೆಳಕಾಗಿ ಸದಾಕಾಲ ಎಲ್ಲರ ಒಳಿತನ್ನು ಬಯಸುತ್ತಿದ್ದ ನಿಮ್ಮ ದೂರದೃಷ್ಟಿಯು ನಮ್ಮನ್ನು ಈ ಮಟ್ಟಕ್ಕೆ ತಲುಪಿಸಿದೆ, ಪ್ರೀತಿ ವಾತ್ಸಲ್ಯದ ಪ್ರತಿರೂಪವಾಗಿದ್ದ ನಿಮ್ಮನ್ನು ಅಗಲಿ ಇಂದಿಗೆ ವರ್ಷ ಕಳೆದರೂ ನಿಮ್ಮ ನೆನಪುಗಳು ಹಾಗೂ ಆದರ್ಶಗಳೊಂದಿಗೆ ಬದುಕನ್ನು ಸಾಗಿಸುತ್ತಾ ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಇಂತಿ ದುಃಖತಪ್ತರು

ಶ್ರೀಮತಿ ಲಕ್ಷ್ಮಮ್ಮ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

ವಿಚಾರಣೆಗೆ ಹಾಜರಾದ ರೇವಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅತ್ಯಾಚಾರ ಸಂತ್ರಸ್ತೆ ಅಪಹರಣ' ಪ್ರಕರಣದ ಆರೋಪಿಯಾಗಿರುವ ಜೆಡಿಎಸ್ ಶಾಸಕ ಎಚ್.ಡಿ. ರೇವಣ್ಣ ಅವರು ಸೋಮವಾರ ಎಸ್ಐಟಿ ತನಿಖಾಧಿಕಾರಿಗಳ ಎದುರು ವಿಚಾರಣೆಗೆ ಹಾಜರಾದರು.

ರೇವಣ್ಣ ಹೇಳಿಕೆಯನ್ನು ತನಿಖಾಧಿಕಾರಿಗಳು ದಾಖಲಿಸಿಕೊಂಡರು. ಸಿಐಡಿ ಕಚೇರಿಗೆ ಬಂದ ಅವರನ್ನು ತನಿಖಾಧಿಕಾರಿಗಳು ವಿಚಾರಣೆಗೆ ಒಳಪಡಿಸಿದರು.

ಕೆ.ಆರ್.ನಗರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆ ಕೈಗೆತ್ತಿಕೊಂಡಿದ್ದ ಅಧಿಕಾರಿಗಳು, ರೇವಣ್ಣ ಅವರನ್ನು ಮೇ 4ರಂದು ಬಂಧಿಸಿದ್ದರು. ಮರುದಿನವೇ ನ್ಯಾಯಾಧೀಶರ ಎದುರು ಹಾಜರುಪಡಿಸಿ, ವಿಚಾರಣೆಗಾಗಿ ಕಸ್ಟಡಿಗೆ ಪಡೆದುಕೊಂಡಿದ್ದರು.

ಕಸ್ಟಡಿ ಅವಧಿ ಮುಗಿದ ಮೇಲೆ ನ್ಯಾಯಾಲಯಕ್ಕೆ ರೇವಣ್ಣ ಅವರನ್ನು ಹಾಜರುಪಡಿಸಲಾಗಿತ್ತು. ನ್ಯಾಯಾಧೀಶರು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದರು. ರೇವಣ್ಣ ಅವರು ಜಾಮೀನಿನ ಮೇಲೆ ಬಿಡುಗಡೆಯಾಗಿದ್ದು ಸೋಮವಾರ ಮಧ್ಯಾಹ್ನ ಎಸ್ಐಟಿ ಎದುರು ವಿಚಾರಣೆಗೆ ಹಾಜರಾದರು.

ಜಿಮ್ಸ್, ಜಯದೇವ ಆಸ್ಪತ್ರೆಗಳಲ್ಲಿ ನೀರಿನ ಕೊರತೆ: ಕ್ಯಾನ್ ನೀರಿಗೆ ಮೊರೆ

ತುರ್ತಿಲ್ಲದ ಶಸ್ತ್ರಚಿಕಿತ್ಸೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಇಲ್ಲಿನ ಗುಲಬರ್ಗಾ ವೈದ್ಯಕೀಯ ವಿಜ್ಞಾನ ಸಂಸ್ಥೆ (ಜಿಮ್ಸ್) ಹಾಗೂ ಇದೇ ಕಟ್ಟಡದಲ್ಲಿರುವ ಜಯದೇವ ಹೃದ್ರೋಗ ಮತ್ತು ಸಂಶೋಧನಾ ಸಂಸ್ಥೆಗೆ ನೀರಿನ ತೀವ್ರ ಕೊರತೆ ಎದುರಾಗಿದ್ದು, ತುರ್ತು ಶಸ್ತ್ರಚಿಕಿತ್ಸೆ ಹೊರತುಪಡಿಸಿ ಉಳಿದ ಶಸ್ತ್ರಚಿಕಿತ್ಸೆಗಳನ್ನು ಮುಂದೂಡಲಾಗಿದೆ. ರೋಗಿಗಳು ಸಹ ಕುಡಿಯಲು ನೀರಿಲ್ಲದೆ ಪರದಾಡುತ್ತಿದ್ದಾರೆ.

ಆಸ್ಪತ್ರೆಗೆ ಎಲ್ ಅಂಡ್ ಟಿ ಕಂಪನಿಯು ನಿತ್ಯ ನೀರು ಸರಬರಾಜು ಮಾಡುತ್ತದೆ. ಭೀಮಾ ಮತ್ತು ಬೆಣ್ಣೆತೋರಾ ನದಿಯ ಜಲಾನಯನ ಪ್ರದೇಶದಲ್ಲಿ ಮಳೆ ಸುರಿದ ಪರಿಣಾಮ ಮಣ್ಣು ಮಿಶ್ರಿತ ಕಲುಷಿತ ನೀರು ಪೂರೈಕೆ ಆಗುತ್ತಿದೆ. ಸ್ವಚ್ಛತೆಗೂ ಬಳಸಲು ಯೋಗ್ಯವಲ್ಲದ ನೀರಿನಿಂದಾಗಿ ವೈದ್ಯರು ಹಾಗೂ ರೋಗಿಗಳು ಪರಿತಪಿಸುತ್ತಿದ್ದಾರೆ. ಎಲ್ ಅಂಡ್ ಟಿ ಕಂಪನಿಗೆ ಆಸ್ಪತ್ರೆಗೆ ಅಗತ್ಯವಾದ ಕನಿಷ್ಠ ಪ್ರಮಾಣದ ನೀರು ಪೂರೈಸಲು ಸಾಧ್ಯವಾಗುತ್ತಿಲ್ಲ.

ಜಿಮ್ಸ್‌ಗೆ ನಿತ್ಯ 600ಕ್ಕೂ ಅಧಿಕ ಹೊರರೋಗಿಗಳು ಹಾಗೂ 100ಕ್ಕೂ ಹೆಚ್ಚು ಒಳರೋಗಿಗಳು

ಕಲಬುರಗಿಯ ಜಿಮ್ಸ್ ಆವರಣದ ಶೌಚಾಲಯಕ್ಕೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಯಿತು

ದಾಖಲಾಗುತ್ತಾರೆ. ಮೂರು ಶಿಫ್ಟ್‌ಗಳಲ್ಲಿ 1,000ಕ್ಕೂ ಹೆಚ್ಚು ಸಿಬ್ಬಂದಿ ಕೆಲಸ ನಿರ್ವಹಿಸುತ್ತಾರೆ. ಪ್ರತಿದಿನ ಶಸ್ತ್ರಚಿಕಿತ್ಸೆ ಉಪಕರಣಗಳ ಸ್ವಚ್ಛತೆ, ರೋಗಿಗಳ ಆರೈಕೆ, ಶೌಚಾಲಯ, ಸ್ನಾನಕ್ಕೆ, ಬಟ್ಟೆ ಶುಚಿಗೊಳಿಸಲು ಸುಮಾರು 1.50 ಲಕ್ಷ ಲೀಟರ್ ನೀರಿನ ಅವಶ್ಯವಿದೆ. ಕಳೆದ ಒಂದು ವಾರದಿಂದ ಅಗತ್ಯದಷ್ಟು ನೀರು ಪೂರೈಕೆ ಆಗುತ್ತಿಲ್ಲ.

ನೀರಿನ ಅಲಭ್ಯತೆಗೆ ಆಸ್ಪತ್ರೆಯಲ್ಲಿ ಶೌಚಾಲಯ ಹಾಗೂ ಸ್ನಾನದ ಕೊಠಡಿಗಳು ಮುಚ್ಚಲಾಗಿದೆ. ಇದರಿಂದ ರೋಗಿಗಳಿಗೆ ಹಾಗೂ ಆರೈಕೆ ಮಾಡುವವರಿಗೆ ತೊಂದರೆ ಆಗುತ್ತಿದೆ. ಆಸ್ಪತ್ರೆಯ ವಾರ್ಡ್‌ಗಳಲ್ಲಿ ಬ್ಯಾರೆಲ್‌ಗಳನ್ನು ಇರಿಸಿ ನೀರು ಸಂಗ್ರಹಿಸಲಾಗುತ್ತಿದೆ. ತುರ್ತು ಶಸ್ತ್ರಚಿಕಿತ್ಸೆಗೆ 20 ಲೀಟರ್ ನೀರಿನ ಕ್ಯಾನ್ ಬಳಸುವಂತಹ ಪರಿಸ್ಥಿತಿ ಬಂದಿದೆ. ತುರ್ತು ಅಲ್ಲದ ಚಿಕಿತ್ಸೆಗಳನ್ನು ಮುಂದೂಡಲಾಗಿದೆ.

'ಆಸ್ಪತ್ರೆಗೆ ಬಂದು ನಾಲ್ಕು ದಿನ ಆಗಿದೆ. ಕುಡಿಯಲು, ಶೌಚಾಲಯ ಬಳಕೆಗೆ ನೀರಿಲ್ಲ. ಹೊರಗಡೆಯಿಂದ ಹಣ ಕೊಟ್ಟು ನೀರು ತರುತ್ತಿದ್ದೇವೆ' ಎನ್ನುತ್ತಾರೆ ರೋಗಿಯ ಸಂಬಂಧಿಕ ಸಂಗಣ್ಣ.

'ಟ್ಯಾಂಕರ್ ನೀರು ಕಳುಹಿಸುವಂತೆ ಎಲ್ ಅಂಡ್ ಟಿಗೆ ಕರೆ ಮಾಡಿದರೆ ಸರಿಯಾಗಿ ಸ್ಪಂದಿಸುತ್ತಿಲ್ಲ. ತಮಗೆ ಸಂಬಂಧವೇ ಇಲ್ಲ ಎಂಬಂತೆ ವರ್ತಿಸುತ್ತಿದ್ದಾರೆ. ಇರುವಷ್ಟು ನೀರಿನಲ್ಲಿ ಹಂಚಿಕೆ ಮಾಡುವಂತೆ ನಿರ್ದೇಶಕರು ಸೂಚಿಸಿದ್ದಾರೆ. ರೋಗಿಗಳ ಹಾಗೂ ಅವರ ಸಂಬಂಧಿಕರ ಸಂಕಷ್ಟ ನೋಡಲು ಆಗುತ್ತಿಲ್ಲ' ಎನ್ನುತ್ತಾರೆ ಜಿಮ್ಸ್‌ನ ಪಂಪ್ ಆಪರೇಟರ್ ಅಶೋಕ ಪಂಚಾಳ.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಜಿಮ್ಸ್ ವೈದ್ಯಕೀಯ ಅಧೀಕ್ಷಕ ಡಾ.ಶಿವಕುಮಾರ ಸಿ.ಆರ್., 'ಈ ಹಿಂದೆ ಬೇಸಿಗೆಯಲ್ಲಿ ಒಂದು ದಿನ ಕೊಳಚೆ ನೀರು ಪೂರೈಕೆ ಆಗಿತ್ತು. ಆ ಬಳಿಕ ಇದೇ ಮೊದಲ ಬಾರಿಗೆ ಆರೇಳು ದಿನಗಳಿಂದ ಮಣ್ಣು ಮಿಶ್ರಿತ ಕೊಳಚೆ ನೀರು ಬರುತ್ತಿದೆ. ನಿತ್ಯ ಸುಮಾರು 1.50 ಲಕ್ಷ ಲೀಟರ್ ನೀರು ಬೇಕಾಗುತ್ತದೆ. ಆದರೆ, ಎಲ್ ಅಂಡ್ ಟಿ ಕಂಪನಿಯವರು 7ರಿಂದ 8 ಟ್ಯಾಂಕರ್‌ಗಳ ಮೂಲಕ 30,000 ಲೀಟರ್ ನೀರು ಪೂರೈಸುತ್ತಿದ್ದಾರೆ. ಇದು ಯಾವುದಕ್ಕೂ ಸಾಲುತ್ತಿಲ್ಲ. 20 ಲೀಟರ್ ಕ್ಯಾನ್ ನೀರು ತಂದು ಶಸ್ತ್ರಚಿಕಿತ್ಸೆಗಳನ್ನು ನಿರ್ವಹಣೆ ಮಾಡುತ್ತಿದ್ದೇವೆ' ಎಂದರು.

'ಬಳಕೆಗೆ ಯೋಗ್ಯವಲ್ಲದಂತಹ ಗಲೀಜು ನೀರು ಬರುತ್ತಿದೆ. ಬಳಕೆ ಯೋಗ್ಯದ 21 ಪ್ಯಾರಾಮೀಟರ್‌ಗಳ ಪೈಕಿ 7ರಿಂದ 8 ಪ್ಯಾರಾಮೀಟರ್‌ಗಳೂ ಹೊಂದಾಣಿಕೆ ಆಗುತ್ತಿಲ್ಲ. ಟ್ಯಾಂಕರ್ ನೀರು ಪೂರೈಸುತ್ತಿದ್ದರೂ ಆಸ್ಪತ್ರೆಗಳ ಬೇಡಿಕೆಗೆ ಸಾಲುತ್ತಿಲ್ಲ' ಎಂದು ಎಲ್ ಅಂಡ್ ಟಿ ಸಾಮಾಜಿಕ ಅಭಿವೃದ್ಧಿ ಅಧಿಕಾರಿ ಎಸ್.ವೈ.ಸಾಲಿಮನಿ ಅವರು ಅಸಹಾಯಕತೆ ವ್ಯಕ್ತಪಡಿಸಿದರು.

> **ಆಸ್ಪತ್ರೆಗಳಿಗೆ ಅಗತ್ಯವಾದಷ್ಟು ಟ್ಯಾಂಕರ್ ನೀರು ಸರಬರಾಜು ಮಾಡುವಂತೆ ಎಲ್ ಆ್ಯಂಡ್ ಟಿ ಕಂಪನಿ ಹಾಗೂ ಪಾಲಿಕೆಯ ಅಧಿಕಾರಿಗಳಿಗೆ ಈಗಾಗಲೇ ಸೂಚನೆ ನೀಡಲಾಗಿದೆ**
> **ಬಿ. ಫೌಜಿಯಾ ತರನ್ನುಮ್** ಜಿಲ್ಲಾಧಿಕಾರಿ

> **ರಾಡಿ ನೀರು ಬರುತ್ತಿದ್ದರಿಂದ 3-4 ದಿನದ ಮಟ್ಟಿಗೆ ಶಸ್ತ್ರಚಿಕಿತ್ಸೆ ನಿಲ್ಲಿಸಿದ್ದೇವೆ. ತುರ್ತು ಶಸ್ತ್ರಚಿಕಿತ್ಸೆಗೆ ವ್ಯವಸ್ಥೆ ಮಾಡಿಕೊಂಡಿದ್ದೇವೆ**
> **ಡಾ.ವೀರೇಶ ಪಾಟೀಲ** ಜಯದೇವ ಹೃದ್ರೋಗ ಮತ್ತು ಸಂಶೋಧನಾ ಸಂಸ್ಥೆಯ ವೈದ್ಯ

ಸುದ್ದಿ 2 ನಿಮಿಷ

ತೈಲ ಬೆಲೆ ಏರಿಕೆ ಸಾಮಾನ್ಯರನ್ನು ಬಾಧಿಸದು: ಸಚಿವ ಮುನಿಯಪ್ಪ

ವಿಜಯಪುರ(ದೇವನಹಳ್ಳಿ): 'ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡಿಸೇಲ್ ಬೆಲೆ ಕಡಿಮೆ ಇದೆ. ಸ್ವಲ್ಪ ಪ್ರಮಾಣದಲ್ಲಿ ಬೆಲೆ ಏರಿಕೆ ಮಾಡಲಾಗಿದೆ. ರೈತರು ಮತ್ತು ಸಾರ್ವಜನಿಕರನ್ನು ಇದು ಬಾಧಿಸದು' ಎಂದು ಸಚಿವ ಕೆ.ಎಚ್.ಮುನಿಯಪ್ಪ ಹೇಳಿದ್ದಾರೆ.

ಪಟ್ಟಣದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆಂಧ್ರಪ್ರದೇಶ, ತೆಲಂಗಾಣ ರಾಜ್ಯಗಳಿಗಿಂತ ರಾಜ್ಯದಲ್ಲಿ ತೈಲ ಬೆಲೆ ಕಡಿಮೆ ಇದೆ. ಸಾಮಾನ್ಯ ವರ್ಗದ ಜನರನ್ನು ಗಮನದಲ್ಲಿ ಇಟ್ಟುಕೊಂಡೆ ಬೆಲೆಯನ್ನು ಸ್ವಲ್ಪ ಪ್ರಮಾಣದಲ್ಲಿ ಏರಿಕೆ ಮಾಡಲಾಗಿದೆ ಎಂದರು.

ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು, 'ಸರ್ಕಾರದ ವಿರುದ್ಧ ಜನರು ದಂಗೆ ಏಳಬೇಕು' ಎಂದು ನೀಡಿರುವ ಹೇಳಿಕೆಗೆ ಪ್ರತಿಕ್ರಿಯೆಗೆ ಅರ್ಹ ಅಲ್ಲ ಎಂದರು.

ಆಡಳಿತ ವೈಫಲ್ಯ: ಜಿ.ಪರಮೇಶ್ವರ ನಾಯಕತ್ವಕ್ಕೆ ಕಾಗೇರಿ ಒತ್ತಾಯ

ಶಿರಸಿ: 'ರಾಜ್ಯದಲ್ಲಿ ಸಮರ್ಥ ಆಡಳಿತ ನೀಡುವಲ್ಲಿ ವಿಫಲರಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ರಾಜೀನಾಮೆ ನೀಡಬೇಕು. ಗ್ಯಾರಂಟಿ ಹೆಸರು ಹೇಳಿ, ಆ ಸ್ಥಾನಗಳಲ್ಲಿ ಮುಂದುವರಿಯಬಾರದು. ಜಿ.ಪರಮೇಶ್ವರ ಅವರ ನಾಯಕತ್ವವನ್ನು ಒಪ್ಪಿಕೊಳ್ಳಬೇಕು' ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

'ಬೆಲೆ ಏರಿಕೆ, ಅಲ್ಪಸಂಖ್ಯಾತರ ತುಷ್ಟೀಕರಣ, ಅಪರಾಧ ಕೃತ್ಯಗಳ ಹೆಚ್ಚಳ, ಮಿತಿಮೀರಿದ ಭ್ರಷ್ಟಾಚಾರ ಸೇರಿ ಹಲವು ವಿಷಯಗಳ ನಿರ್ವಹಣೆಯಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ' ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

'ಮಹಾರಾಷ್ಟ್ರ, ಹರಿಯಾಣ, ಜಾರ್ಖಂಡ್ ಸೇರಿ ಮುಂಬರುವ ಚುನಾವಣಾ ಖರ್ಚುವೆಚ್ಚ ನಿರ್ವಹಿಸಲು ಕಾಂಗ್ರೆಸ್ ಪಕ್ಷದ ಹಿತದೃಷ್ಟಿಯಿಂದ ರಾಜ್ಯವನ್ನು ಎಟಿಎಂ ಆಗಿ ಮಾರ್ಪಾಡು ಮಾಡಿಕೊಳ್ಳಲಾಗಿದೆ. ಇದರ ಭಾಗವಾಗಿ ರಾಜ್ಯದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯಾಗಿದೆ' ಎಂದರು.

ಭವಾನಿ ಅರ್ಜಿ: ಇಂದು ಆದೇಶ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಅತ್ಯಾಚಾರ ಆರೋಪ ಪ್ರಕರಣದಲ್ಲಿ; ಸಂತ್ರಸ್ತೆಯೊಬ್ಬರ ಅಪಹರಣದ ಆರೋಪಕ್ಕೆ ಗುರಿಯಾಗಿ ನಿರೀಕ್ಷಣಾ ಜಾಮೀನು ಕೋರಿ ಭವಾನಿ ರೇವಣ್ಣ ಸಲ್ಲಿಸಿದ್ದ ಅರ್ಜಿ ಮೇಲಿನ ಕಾಯ್ದಿರಿಸಿದ ಆದೇಶವನ್ನು ಹೈಕೋರ್ಟ್ ಇದೇ 18ರಂದು ಪ್ರಕಟಿಸಲಿದೆ.

'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ಪೀಠದಲ್ಲಿದ್ದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ (ಜೂನ್ 18) ತನ್ನ ಆದೇಶ ಪ್ರಕಟಿಸಲಿದೆ.

ಏನಿದು ಪ್ರಕರಣ?: ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯ ಆರೋಪದ ಪ್ರಕರಣದಲ್ಲಿ ಸಂತ್ರಸ್ತೆಯನ್ನು ಅಪಹರಿಸಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಕೆ.ಆರ್.ನಗರ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಿಸಲಾಗಿದೆ.

ಭವಾನಿ

ಪ್ರಕರಣದ ಮೊದಲ ಆರೋಪಿ ಎಚ್.ಡಿ.ರೇವಣ್ಣ ಬಂಧನಕ್ಕೊಳಗಾಗಿದ್ದರು. ನಂತರ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಅವರಿಗೆ ಷರತ್ತುಬದ್ಧ ಜಾಮೀನು ನೀಡಿತ್ತು. ಪ್ರಕರಣದಲ್ಲಿ ಭವಾನಿ ಅವರ ಹೆಸರೂ ಇದ್ದುದರಿಂದ ಅವರು ನಿರೀಕ್ಷಣಾ ಜಾಮೀನು ಕೋರಿದ್ದರು. ಅವರನ್ನು ಬಂಧಿಸದಂತೆ ಹೈಕೋರ್ಟ್‌ನ ಜನಪ್ರತಿನಿಧಿಗಳ ವಿಶೇಷ ನ್ಯಾಯಪೀಠ ಮಧ್ಯಂತರ ಜಾಮೀನು ನೀಡಿತ್ತು. ತನಿಖಾಧಿಕಾರಿ ಮುಂದೆ ಹಾಜರಾಗಿ ತನಿಖೆಗೆ ಸಹಕರಿಸುವಂತೆ ಇದೇ 7ರಂದು ಸೂಚಿಸಿತ್ತು.

ರೇವಣ್ಣ ಮತ್ತು ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯದ ಆರೋಪಕ್ಕೆ ಸಂಬಂಧಿಸಿದಂತೆ ಹೊಳೆನರಸೀಪುರ ಟೌನ್ ಪೊಲೀಸ್ ಠಾಣೆಯಲ್ಲಿ 2024ರ ಏಪ್ರಿಲ್ 28 ರಂದು ಪ್ರಕರಣ ದಾಖಲಿಸಲಾಗಿದೆ.

ಬಿಎಸ್‌ವೈ ಹೇಳಿಕೆ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೋಕ್ಸೊ ಪ್ರಕರಣವೊಂದರಲ್ಲಿ ಹೈಕೋರ್ಟ್ ಸೂಚನೆ ಮೇರೆಗೆ ಸೋಮವಾರ ಸಿಐಡಿ ವಿಚಾರಣೆಗೆ ಹಾಜರಾದ ಬಿಜೆಪಿಯ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರ ಹೇಳಿಕೆಯನ್ನು ತನಿಖಾಧಿಕಾರಿಗಳು ದಾಖಲಿಸಿಕೊಂಡರು.

ಅರಮನೆ ರಸ್ತೆಯಲ್ಲಿರುವ ಸಿಐಡಿ ಕಚೇರಿಗೆ ಬಂದ ಯಡಿಯೂರಪ್ಪ ಅವರನ್ನು ಬೆಳಿಗ್ಗೆ 11ರಿಂದ ಮಧ್ಯಾಹ್ನ 2ರ ವರೆಗೆ ವಿಚಾರಣೆ ನಡೆಸಲಾಯಿತು. ತನಿಖಾಧಿಕಾರಿ ಡಿವೈಎಸ್‌ಪಿ ಪುನೀತ್ ಎದುರು ಯಡಿಯೂರಪ್ಪ ಹೇಳಿಕೆ ನೀಡಿದರು ಎಂದು ಗೊತ್ತಾಗಿದೆ.

'ಮೊದಲು ಕೆಲವು ಪ್ರಶ್ನೆಗಳನ್ನು ಕೇಳಲಾಯಿತು. ನಂತರ ವಿಡಿಯೊ ಹೇಳಿಕೆ ದಾಖಲು ಮಾಡಿಕೊಳ್ಳಲಾಯಿತು. ಇದನ್ನು ಕೋರ್ಟ್‌ಗೆ ಸಲ್ಲಿಕೆ ಮಾಡಲಾಗುವುದು' ಎಂದು ಮೂಲಗಳು ತಿಳಿಸಿವೆ.

ಹದಿನೇಳು ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪದಡಿ ತಮ್ಮ ವಿರುದ್ಧ ದಾಖಲಾಗಿದ್ದ ಪೋಕ್ಸೊ ಸಂಬಂಧ ವಿಚಾರಣೆಗೆ ಯಡಿಯೂರಪ್ಪ ಹಾಜರಾಗಿದ್ದರು.

'ಮಗಳ ಮೇಲೆ ನಡೆದಿದ್ದ ಅತ್ಯಾಚಾರ ಪ್ರಕರಣದಲ್ಲಿ ನ್ಯಾಯ ಒದಗಿಸುವಂತೆ ಕೋರಿ ಯಡಿಯೂರಪ್ಪ ಅವರ ಮನೆಗೆ ತೆರಳಿದ್ದೆ. ಅಂದು ಪುತ್ರಿ ಸಹ ನನ್ನ ಜೊತೆಗೆ ಇದ್ದಳು. ಆಗ, ಯಡಿಯೂರಪ್ಪ ಸಹಾಯ ಮಾಡುವ ನೆಪದಲ್ಲಿ ಮಗಳನ್ನು ಕೊಠಡಿಗೆ ಕರೆದೊಯ್ದು ಲೈಂಗಿಕ ದೌರ್ಜನ್ಯ ಎಸಗಿದ್ದಾರೆ' ಎಂದು ಆರೋಪಿಸಿ ಮಹಿಳೆ ದೂರು ನೀಡಿದ್ದರು.

ಪ್ರಕರಣ ಏನು ಎತ್ತ?

ಬಿ.ಎಸ್. ಯಡಿಯೂರಪ್ಪ

- ಫೆ.2ರಂದು ನ್ಯಾಯ ಕೇಳಿ ಬಿ.ಎಸ್ .ಯಡಿಯೂರಪ್ಪ ಮನೆಗೆ ತೆರಳಿದ್ದ ಸಂತ್ರಸ್ತೆ ಹಾಗೂ ಆಕೆಯ ತಾಯಿ.
- ಮಾ. 3ರಂದು ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ಸಂತ್ರಸ್ತೆಯ ತಾಯಿಯಿಂದ ದೂರು ದಾಖಲು.
- ಮಾ. 14ರಂದು ಸದಾಶಿವನಗರ ಠಾಣೆಯಲ್ಲಿ ಬಿಎಸ್‌ವೈ ವಿರುದ್ಧ ಪೋಕ್ಸೊ ಪ್ರಕರಣ ದಾಖಲು. ನಂತರ, ಎಸಿಎಂಎಂ 25ನೇ ನ್ಯಾಯಾಧೀಶರ ಎದುರು ಸಂತ್ರಸ್ತೆಯ ಹೇಳಿಕೆ ದಾಖಲು.
- ಮಾ. 14ರಂದೇ ಪ್ರಕರಣವನ್ನು ಸಿಐಡಿಗೆ ಹಸ್ತಾಂತರಿಸಿದ್ದ ಸರ್ಕಾರ.
- ಏ. 12ರಂದು ವಿಚಾರಣೆಗೆ ಹಾಜರಾಗುವಂತೆ ಬಿಎಸ್‌ವೈಗೆ ಸಿಐಡಿ ನೋಟಿಸ್, ನಂತರ ತನಿಖಾಧಿಕಾರಿಗಳು ಧ್ವನಿ ಮಾದರಿ ಸಂಗ್ರಹಿಸಿದ್ದರು.
- ಜೂ. 12ರಂದು ಬಂಧನ ವಾರಂಟ್ ಜಾರಿಗೊಂಡಿತ್ತು.
- ಜೂ. 14ರಂದು ಮುಂದಿನ ವಿಚಾರಣೆ ನಡೆಯುವವರೆಗೂ ಯಡಿಯೂರಪ್ಪ ಅವರನ್ನು ಬಂಧಿಸದಂತೆ ಸೂಚಿಸಿದ್ದ ಹೈಕೋರ್ಟ್, ಸಿಐಡಿ ವಿಚಾರಣೆಗೆ ಹಾಜರಾಗಲು ಸೂಚಿಸಿತ್ತು.

ಬಿಜೆಪಿಗೆ ನೈತಿಕ ಹಕ್ಕು ಎಲ್ಲಿದೆ?– ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜನರಿಗೆ ಹೆಚ್ಚಿನ ಹೊರೆಯಾಗದ ರೀತಿಯಲ್ಲಿ ರಾಜ್ಯದ ಅಭಿವೃದ್ಧಿ ಕೆಲಸಗಳಿಗೆ ಸಂಪನ್ಮೂಲ ಕ್ರೋಡೀಕರಣ ಉದ್ದೇಶದಿಂದ ಪೆಟ್ರೋಲ್, ಡೀಸೆಲ್ ಮಾರಾಟ ತೆರಿಗೆಯನ್ನು ₹3ರಷ್ಟು ಹೆಚ್ಚಿಸಲಾಗಿದೆ. ಇದನ್ನು ವಿರೋಧಿಸಿ ಪ್ರತಿಭಟನೆ ಮಾಡುವ ನೈತಿಕ ಹಕ್ಕು ಬಿಜೆಪಿಯವರಿಗೆ ಎಲ್ಲಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ಕೇಂದ್ರ ಸರ್ಕಾರ ಜಿಎಸ್‌ಟಿ ವ್ಯವಸ್ಥೆ ಜಾರಿಗೊಳಿಸಿದ ನಂತರ ರಾಜ್ಯ ಸರ್ಕಾರಗಳ ಸಂಪನ್ಮೂಲ ಕ್ರೋಡೀಕರಣಕ್ಕೆ ಇರುವ ಅವಕಾಶ ಸೀಮಿತಗೊಂಡಿದೆ. ರಾಜ್ಯ ಸರ್ಕಾರಕ್ಕೆ ನೋಂದಣಿ ಮತ್ತು ಮುದ್ರಾಂಕ ಶುಲ್ಕ, ವಾಹನ ತೆರಿಗೆ, ಪೆಟ್ರೋಲ್, ಡೀಸೆಲ್ ಮೇಲಿನ ಮಾರಾಟ ತೆರಿಗೆ ಹಾಗೂ ಮದ್ಯದ ಮೇಲಿನ ಮಾರಾಟ ತೆರಿಗೆ ಹೊರತುಪಡಿಸಿ ಯಾವುದೇ ಮೂಲಗಳಿಲ್ಲ' ಎಂದರು.

'ಮನಮೋಹನ್ ಸಿಂಗ್ ಅವರ ಅವಧಿಯಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ 113 ಡಾಲರ್ ಇತ್ತು. 2015ರಲ್ಲಿ ಈ ಬೆಲೆ ಅರ್ಧಕ್ಕರ್ಧ ಕಡಿಮೆಯಾದರೂ, ಬೆಲೆ ಇಳಿಸಿ, ಜನರ ಹೊರೆ ಕಡಿಮೆ ಮಾಡುವ ಕಾಳಜಿಯನ್ನು ನರೇಂದ್ರ ಮೋದಿಯವರು ತೋರಲಿಲ್ಲ. ಬಿಜೆಪಿಯವರು ಯಾರ ವಿರುದ್ಧ ಹೋರಾಡಬೇಕು' ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

'ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಮೌಲ್ಯವರ್ಧಿತ ತೆರಿಗೆ ಹೆಚ್ಚಳದಿಂದ ಸಂಗ್ರಹವಾಗುವ ಅಂದಾಜು ₹3 ಸಾವಿರ ಕೋಟಿ ರಾಜ್ಯದ ಖಜಾನೆಗೆ ಸಂದಾಯವಾಗಲಿದೆ. ಆ ಹಣ ಜನರ ಕಲ್ಯಾಣ ಕಾರ್ಯಕ್ರಮಗಳಿಗೆ ವಿನಿಯೋಗ ಆಗಲಿದೆಯೇ ಹೊರತು, ನಮ್ಮ ಜೇಬಿಗೆ ಹೋಗುವುದಿಲ್ಲ. ಜನವಿರೋಧಿ ಬಿಜೆಪಿ ನಾಯಕರಿಗೆ ಜನಕಲ್ಯಾಣಕ್ಕಾಗಿ ಸ್ವಲ್ಪ ಪ್ರಮಾಣದ ತೆರಿಗೆ ಹೆಚ್ಚಿಸಿದ್ದನ್ನು ಪ್ರಶ್ನಿಸುವ ಯೋಗ್ಯತೆ ಎಲ್ಲಿದೆ' ಎಂದು ಪ್ರಶ್ನಿಸಿದರು.

'ರಾಜ್ಯ ಸರ್ಕಾರ ಪಾಪರ್ ಆಗಿದೆ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಗೆ ಹೇಳುತ್ತಾರೆ. ನಾವು ಯಾರದ್ದಾದರೂ ಸಂಬಳ ನಿಲ್ಲಿಸಿದ್ದೇವೆಯೇ' ಎಂದೂ ಕೇಳಿದರು.

ಶತಕ ದಾಟಿಸಿದ್ದೇ ಬಿಜೆಪಿ ಸರ್ಕಾರ: 'ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಹೆಚ್ಚು ಮಾಡಲಾಗಿದೆ ಎಂದು ಬಿಜೆಪಿ ನಾಯಕರು ಬೊಬ್ಬೆ ಹಾಕುತ್ತಿದ್ದಾರೆ. ಆದರೆ, ರಾಜ್ಯದಲ್ಲಿ ಪೆಟ್ರೋಲ್ ಬೆಲೆ ಶತಕ ದಾಟಿಸಿದ್ದೇ ಬಿಜೆಪಿ ಸರ್ಕಾರ' ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ಆಕ್ರೋಶ ವ್ಯಕ್ತಪಡಿಸಿದರು.

> **ಕುಮಾರಸ್ವಾಮಿ ದಂಗೆ ಏಳಿ ಎಂದಿದ್ದಾರೆ. ಇದು ಕೇಂದ್ರದ ಮಂತ್ರಿ ಹೇಳುವ ಮಾತೇ? ಮೈತ್ರಿ ಇಲ್ಲದಿದ್ದಾಗ ಕೇಂದ್ರ ಸರ್ಕಾರದ ವಿರುದ್ಧ ಒಂದು ದಿನವೂ ಮಾತನಾಡಲಿಲ್ಲ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

'ದರ ಏರಿಸಲ್ಲ'

ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, 'ಬಸ್ ಪ್ರಯಾಣ ದರ ಏರಿಕೆ ಮಾಡಿ ಎಷ್ಟು ವರ್ಷ ಆಗಿದೆ ಗೊತ್ತೇ? ಇಲಾಖೆಯ ಅಧಿಕಾರಿಗಳ ಜೊತೆ ಚರ್ಚೆ ಮಾಡುತ್ತೇನೆ. ಏರಿಕೆ ಮಾಡುವುದಿಲ್ಲ' ಎಂದರು.

'ಇವಿಎಂ ಹ್ಯಾಕ್ ಮಾಡಿ 136 ಸ್ಥಾನ ಗೆದ್ದರೇ?'

ಕೇಂದ್ರ ಉಕ್ಕು ಹಾಗೂ ಬೃಹತ್ ಕೈಗಾರಿಕೆ ಸಚಿವ ಎಚ್.ಡಿ.ಕುಮಾರಸ್ವಾಮಿ ಕಿಡಿ

ಪ್ರಜಾವಾಣಿ ವಾರ್ತೆ

ತುಮಕೂರು: 'ವಿದ್ಯುನ್ಮಾನ ಮತಯಂತ್ರ (ಇವಿಎಂ) ಹ್ಯಾಕ್‌ಮಾಡಿ ರಾಜ್ಯದಲ್ಲಿ ಕಾಂಗ್ರೆಸ್‌ನವರು 136 ವಿಧಾನಸಭಾ ಕ್ಷೇತ್ರಗಳಲ್ಲಿ ಜಯಗಳಿಸಿದ್ದಾರೆಯೇ' ಎಂದು ಕೇಂದ್ರ ಉಕ್ಕು ಹಾಗೂ ಬೃಹತ್ ಕೈಗಾರಿಕೆ ಸಚಿವ ಎಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು,'ಇವಿಎಂ ಹ್ಯಾಕ್ ಮಾಡಬಹುದು ಎಂದು ಹೇಳುತ್ತಿರುವವರು ಮೊದಲು ಸಾಕ್ಷಿ ಕೊಡಲಿ. ಆ ನಂತರ ಸತ್ಯ ಏನೆಂಬುದು ಗೊತ್ತಾಗಲಿದೆ' ಎಂದರು.

ಈ ಬಗ್ಗೆ ಹಲವು ವರ್ಷಗಳಿಂದ ಆರೋಪ ಮಾಡಿಕೊಂಡು ಬರಲಾಗುತ್ತಿದೆ. ಆದರೆ ಯಾರೂ ಖಚಿತಪಡಿಸಲು ಸಾಧ್ಯವಾಗಿಲ್ಲ. ಇದೆಲ್ಲ ಊಹಾಪೋಹ ಎಂದು ಚುನಾವಣಾ ಆಯೋಗವೂ ಹೇಳಿದೆ. ಸುಪ್ರೀಂ ಕೋರ್ಟ್‌ನಲ್ಲೂ ಚರ್ಚೆ ನಡೆದಿವೆ ಎಂದು ಹೇಳಿದರು.

ಕೈಗಾರಿಕೆಗಳಲ್ಲಿ ಸ್ಥಳೀಯರಿಗೆ ಉದ್ಯೋಗ ಸಿಗುತ್ತಿಲ್ಲ ಎಂಬ ಕೂಗು ಇದೆ. ಉದ್ಯಮಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ತಿಳಿವಳಿಕೆ ಮೂಡಿಸಿ ಸ್ಥಳೀಯರಿಗೆ ಉದ್ಯೋಗ ಕೊಡಿಸಲು ಪ್ರಯತ್ನಿಸಲಾಗುವುದು. ರಾಜ್ಯಕ್ಕೆ ಯಾವೆಲ್ಲ ಕೈಗಾರಿಕೆ ತರಬಹುದು ಎಂಬ ಬಗ್ಗೆ ಗಮನ ಹರಿಸಲಾಗಿದೆ ಎಂದರು.

ತೈಲ ದರ ಏರಿಸಿಲ್ಲ: ಜೆಡಿಎಸ್ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿ, 'ನಾನು ಮುಖ್ಯಮಂತ್ರಿ ಆಗಿದ್ದ ಸಮಯದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳುತ್ತಿದ್ದಾರೆ. ಹಾಗಿದ್ದರೆ ದಾಖಲೆ ಕೊಡಲಿ. ಸುಳ್ಳು ಹೇಳಲು ಒಂದು ಮಿತಿ ಇರಬೇಕು' ಎಂದು ಕಿಡಿಕಾರಿದರು.

'ರೈತರ ಸಾಲ ಮನ್ನಾ ಮಾಡಿದ ಸಮಯದಲ್ಲಿ ₹25 ಸಾವಿರ ಕೋಟಿ ಹೊಂದಿಸಲು ತೈಲ ದರ ಹೆಚ್ಚಿಸಲು ಪ್ರಯತ್ನಿಸಿದ್ದೆ. ಆದರೆ ಅದಕ್ಕೆ ಸಿದ್ದರಾಮಯ್ಯ ಅವರೇ ಅವಕಾಶ ನೀಡಲಿಲ್ಲ. ಈಗ ನೋಡಿದರೆ ಬೆಲೆ ಹೆಚ್ಚು ಮಾಡಿದ್ದೇನೆಂದು ಸುಳ್ಳು ಹೇಳುತ್ತಿದ್ದಾರೆ' ಎಂದರು.

ಕಲ್ಯಾಣ ಕರ್ನಾಟಕದ ವಿವಿಧೆಡೆ ಮಳೆ

ಪ್ರಜಾವಾಣಿ ವಾರ್ತೆ

ಕಲಬುರಗಿ ವರದಿ: ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್, ರಾಯಚೂರು ಜಿಲ್ಲೆಗಳಲ್ಲಿ ಸೋಮವಾರ ಉತ್ತಮವಾಗಿ ಮಳೆ ಸುರಿಯಿತು.

ಕಲಬುರಗಿ ನಗರದಲ್ಲಿ ಬೆಳಿಗ್ಗೆಯಿಂದ ಧಗೆ ಇತ್ತು. ಸಂಜೆ ಸುಮಾರು 15 ನಿಮಿಷ ಬಿರುಸಿನಿಂದ ಮಳೆ ಸುರಿದಿದ್ದರಿಂದ ನಗರ ತಂಪಾಯಿತು.

ಜಿಲ್ಲೆಯ ಆಳಂದ ತಾಲ್ಲೂಕಿನ ಹಲವೆಡೆ ಮಳೆಯಾಗಿದೆ.

ಬೀದರ್, ಭಾಲ್ಕಿ, ಹುಲಸೂರು, ಕಮಲನಗರ ಸೇರಿದಂತೆ ವಿವಿಧೆಡೆ ಸಾಧಾರಣ ಮಳೆ ಸುರಿಯಿತು. ರಾಯಚೂರು ನಗರದಲ್ಲಿ ಒಂದು ಗಂಟೆ ಕಾಲ ಜಿಟಿಜಿಟಿ ಮಳೆ ಸುರಿದಿದೆ.

ನಾಗಮಂಗಲ ವರದಿ (ಮಂಡ್ಯ ಜಿಲ್ಲೆ): ಪಟ್ಟಣ ವ್ಯಾಪ್ತಿ ಸೇರಿದಂತೆ ತಾಲ್ಲೂಕಿನ ವಿವಿಧ ಭಾಗಗಳಲ್ಲಿ ಸೋಮವಾರ ಸಂಜೆ ಭಾರಿ ಗಾಳಿಯೊಂದಿಗೆ ಅರ್ಧ ಗಂಟೆಗೂ ಹೆಚ್ಚು ಕಾಲ ಸೋನೆ ಮಳೆ ಸುರಿಯಿತು.

ಕೊಡಗು ಜಿಲ್ಲೆಯ ಮಡಿಕೇರಿ ಮತ್ತು ಗೋಣಿಕೊಪ್ಪದಲ್ಲಿ ಸಾಧಾರಣ ಮಳೆಯಾಯಿತು.

'ಗೊಲ್ಲರಿಗೆ ಮೀಸಲು'

ತುಮಕೂರು: ಕಾಡುಗೊಲ್ಲರನ್ನು ಎಸ್.ಟಿ ಮೀಸಲಾತಿಗೆ ಸೇರಿಸುವಂತೆ ಸಾಕಷ್ಟು ವರ್ಷಗಳಿಂದ ಬೇಡಿಕೆ ಸಲ್ಲಿಸಿದ್ದಾರೆ. ಈ ಬಗ್ಗೆ ಕೇಂದ್ರದ ಮೇಲೆ ಒತ್ತಡ ತಂದು ಮೀಸಲಾತಿ ಕೊಡಿಸಲು ಪ್ರಯತ್ನಿಸುವೆ ಎಂದು ಎಚ್.ಡಿ.ಕುಮಾರಸ್ವಾಮಿ ಭರವಸೆ ನೀಡಿದರು.

ಜೆಡಿಎಸ್ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿ, 'ಕುಂಚಿಟಿಗ ಒಕ್ಕಲಿಗರು ಕೇಂದ್ರದ ಒಬಿಸಿ ಪಟ್ಟಿಗೆ ಸೇರಿಸು ವಂತೆ ಸಾಕಷ್ಟು ಪ್ರಯತ್ನಿಸಿದ್ದರೂ ಸಾಧ್ಯವಾಗಿಲ್ಲ. ಪ್ರಧಾನಿ ನರೇಂದ್ರ ಮೋದಿಗೆ ಮನವರಿಕೆ ಮಾಡಿಕೊಟ್ಟು ಮೀಸಲಾತಿ ಕಲ್ಪಿಸಲು ಪ್ರಯತ್ನಿಸಲಾಗುವುದು ಎಂದು ಹೇಳಿದರು.

ಕಾಸಿಗೆ 25 ಸಾವಿರ ಎಕರೆ ಆಸರೆ

ಒಂದನೇ ಪುಟದಿಂದ...

'ಪ್ರಜಾವಾಣಿ'ಗೆ ಲಭ್ಯವಾಗಿರುವ ಮಾಹಿತಿ ಪ್ರಕಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ತಾಲ್ಲೂಕಿನ ನಂದಗುಡಿಯಲ್ಲಿರುವ 15,000 ಎಕರೆ ಮತ್ತು ಬಿಡದಿಯಲ್ಲಿರುವ 9,800 ಎಕರೆ ಜಮೀನುಗಳನ್ನು ವರಮಾನ ಸಂಗ್ರಹಕ್ಕೆ ಬಳಸಿಕೊಳ್ಳಲು ರಾಜ್ಯ ಸರ್ಕಾರ ಪ್ರಾಥಮಿಕ ಹಂತದಲ್ಲಿ ಗುರುತಿಸಿದೆ. ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ (ಬಿಎಂಆರ್‌ಡಿಎ) ವ್ಯಾಪ್ತಿಯಲ್ಲಿ 73 ಸ್ಥಳಗಳಲ್ಲಿ ಇರುವ 300ರಿಂದ 400 ಎಕರೆ ಜಮೀನುಗಳನ್ನೂ ಈ ಉದ್ದೇಶಕ್ಕೆ ಬಳಸಿಕೊಳ್ಳುವ ಯೋಚನೆ ಇದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಸ್ವಾಧೀನದಲ್ಲಿದ್ದು, ಬಳಕೆಯಾಗದೇ ಇರುವ ಜಮೀನುಗಳನ್ನೂ ವರಮಾನ ಸಂಗ್ರಹಕ್ಕೆ ಬಳಸಿಕೊಳ್ಳುವ ಪ್ರಸ್ತಾವವಿದೆ.

ವಾಹನ ದಟ್ಟಣೆ

ವಾರದ ಕೊನೆ ಮತ್ತು ಬಕ್ರೀದ್ ರಜೆ ಇದ್ದ ಕಾರಣ ಕಾಫಿನಾಡಿಗೆ ಪ್ರವಾಸಿಗರು ಲಗ್ಗೆ ಇಟ್ಟರು. ಚಿಕ್ಕಮಗಳೂರು ಜಿಲ್ಲೆಯ ಮುಳ್ಳಯ್ಯನಗಿರಿಯಲ್ಲಿ ಸೋಮವಾರ ಭಾರಿ ಪ್ರಮಾಣದಲ್ಲಿ ವಾಹನ ದಟ್ಟಣೆ ಉಂಟಾಯಿತು –ಪಿಟಿಐ ಚಿತ್ರ

ಮೊಳಕಾಲ್ಮುರು: ಶತಕ ಬಾರಿಸಿದ ಟೊಮೆಟೊ ದರ

ಪ್ರಜಾವಾಣಿ ವಾರ್ತೆ

ಮೊಳಕಾಲ್ಮುರು: ಟೊಮೆಟೊ ದರ ಮತ್ತೆ ದಾಖಲೆ ದರಕ್ಕೆ ಏರಿಕೆಯಾಗುತ್ತಿದ್ದು, ಸೋಮವಾರ ತಾಲ್ಲೂಕಿನ ವಾರದ ಸಂತೆಗಳಲ್ಲಿ ₹ 100ಕ್ಕೆ ಮಾರಾಟವಾಗಿದೆ.

ತಾಲ್ಲೂಕಿನ ರಾಂಪುರ, ಕೊಂಡ್ಲಹಳ್ಳಿಯಲ್ಲಿ ಸೋಮವಾರ ನಡೆದ ಸಂತೆಯಲ್ಲಿ ಉತ್ತಮ ಗಾತ್ರದ ಟೊಮೆಟೊ ಒಂದು ಕೆ.ಜಿಗೆ ₹ 100ಕ್ಕೆ ಮಾರಾಟ ಆಗಿದೆ. ಚಿಕ್ಕ ಗಾತ್ರದ ಹಣ್ಣುಗಳು ಪ್ರತಿ ಕೆ.ಜಿ.ಗೆ ₹ 50ರಿಂದ ₹ 60ಕ್ಕೆ ಮಾರಾಟವಾದವು.

ಮೊಳಕಾಲ್ಮುರು, ಚಳ್ಳಕೆರೆ, ಚಿತ್ರದುರ್ಗ ಮತ್ತು ನೆರೆಯ ಆಂಧ್ರ ಪ್ರದೇಶದ ರಾಯದುರ್ಗ ಭಾಗದಿಂದ ಇಲ್ಲಿನ ವಾರದ ಸಂತೆಗಳಿಗೆ ಟೊಮೆಟೊ ಪೂರೈಕೆಯಾಗುತ್ತದೆ. ಈಗ ಆಂಧ್ರಪ್ರದೇಶದ ಮದನಪಲ್ಲಿ ಮಾರುಕಟ್ಟೆ ಹಾಗೂ ಕೋಲಾರ ಮಾರುಕಟ್ಟೆಯಿಂದ ಪೂರೈಕೆಯಾಗುತ್ತಿದೆ. ಪ್ರತಿ 30 ಕೆ.ಜಿ ಹಣ್ಣಿನ ಬಾಕ್ಸ್‌ಗೆ ₹ 1,000ರಿಂದ ₹ 1,500ರವರೆಗೂ ಮಾರಾಟವಾಗಿದೆ ಎಂದು ತರಕಾರಿ ವ್ಯಾಪಾರಿ ಮಲ್ಲಿಕಾರ್ಜುನ್ ಹೇಳಿದರು.

'ಬೇಡಿಕೆಗೆ ತಕ್ಕಂತೆ ಪೂರೈಕೆ ಇಲ್ಲದಿದ್ದರಿಂದ ದರ ಕಡಿಮೆಯಾಗುವ ಸಾಧ್ಯತೆ ಇಲ್ಲ' ಎಂದು ತೋಟಗಾರಿಕೆ ಇಲಾಖೆ ಉಪನಿರ್ದೇಶಕಿ ಸವಿತಾ ಹೇಳಿದರು.

ಕೆಲವೆಡೆ ಟೊಮೆಟೊ ಬೆಳೆಗೆ ರೋಗ ಬಾಧೆ ಆವರಿಸಿದೆ. ಈಗ ನಾಟಿ ಮಾಡಿರುವ ಬೆಳೆ ಇಳುವರಿ ಆರಂಭವಾಗಲು ಇನ್ನೂ ಒಂದು ತಿಂಗಳು ಬೇಕಿದೆ. ಕಳೆದ ವರ್ಷ ಇದೇ ಸಮಯಕ್ಕೆ ದಾಖಲೆ ದರ ಸಿಕ್ಕಿತ್ತು ಎಂದು ಬೆಳೆಗಾರ ಮಂಜುನಾಥ್ ಹೇಳಿದರು.

ರಾಜ್ಯದಾದ್ಯಂತ ಬಿಜೆಪಿ ಪ್ರತಿಭಟನೆ ತೀವ್ರ

ಒಂದನೇ ಪುಟದಿಂದ...

ದಕ್ಷಿಣಕನ್ನಡ, ಉಡುಪಿ, ಬೆಳಗಾವಿ, ಮಂಡ್ಯ, ಮೈಸೂರು, ಶಿವಮೊಗ್ಗ, ದಾವಣಗೆರೆ, ರಾಯಚೂರು, ಕೊಪ್ಪಳ, ಹುಬ್ಬಳ್ಳಿ- ಧಾರವಾಡ, ಹಾವೇರಿ, ಚಾಮರಾಜನಗರ, ತುಮಕೂರು, ಬಾಗಲಕೋಟೆ ಸೇರಿ ಬಿಜೆಪಿಯ 29 ಸಂಘಟನಾತ್ಮಕ ಜಿಲ್ಲೆಗಳಲ್ಲಿ ವಿನೂತನ ರೀತಿಯಲ್ಲಿ ಪ್ರತಿಭಟನೆ ನಡೆದಿದೆ. ಕೆಲವೆಡೆ ಕಾರಿಗೆ ಹಗ್ಗ ಕಟ್ಟಿ ಎಳೆದರೆ, ಕೆಲವು ಜಿಲ್ಲೆಗಳಲ್ಲಿ ಎತ್ತಿನಗಾಡಿ ಮೆರವಣಿಗೆ ನಡೆಸಿದರು, ತೆಂಗಿನ ಚಿಪ್ಪು ಹಿಡಿದುಕೊಂಡು ಕಿವಿಗೆ ಹೂವು ಇಟ್ಟುಕೊಂಡು ಪ್ರತಿಭಟನೆ ನಡೆಸಿದರು. ಕೆಲವು ಕಡೆಗಳಲ್ಲಿ ಅಣಕು ಶವಯಾತ್ರೆ ನಡೆಸಿದರು.

ಉಡುಪಿಯಲ್ಲಿ ಶಾಸಕ ವಿ.ಸುನಿಲ್ ಕುಮಾರ್ ನೇತೃತ್ವದಲ್ಲಿ ಜಿಲ್ಲೆಯ ಶಾಸಕರು ಮತ್ತು ಕಾರ್ಯಕರ್ತರು ಪ್ರತಿಭಟನೆ ನಡೆಸಿ, ಕಡಿಯಾಳಿ ಬಳಿ, ಮಣಿಪಾಲ- ಉಡುಪಿ ರಸ್ತೆಯಲ್ಲಿ ಅಲ್ಪಕಾಲ ವಾಹನಗಳ ಸಂಚಾರಕ್ಕೆ ತಡೆಯೊಡ್ಡಿದ್ದರು.

ರಾಜ್ಯಸಭೆ ಸದಸ್ಯ ಈರಣ್ಣ ಕಡಾಡಿ ಮತ್ತು ಶಾಸಕ ಅಭಯ ಪಾಟೀಲ ಅವರ ನೇತೃತ್ವದಲ್ಲಿ ಬೆಳಗಾವಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಎತ್ತುಗಳಿಗೆ ಬೈಕ್- ಸ್ಕೂಟರ್‌ಗಳನ್ನು ಕಟ್ಟಿ ಎಳೆದು ಆಕ್ರೋಶ ವ್ಯಕ್ತಪಡಿಸಿದರು. ಈರಣ್ಣ ಕಡಾಡಿ ಮತ್ತು ಅಭಯಪಾಟೀಲ ಅವರು ಬೈಕ್‌ಗಳನ್ನು ತಳ್ಳಿದರು. ರಾಣಿ ಚೆನ್ನಮ್ಮ ವೃತ್ತದಲ್ಲಿ ಕೆಲ ಕಾಲ ಸಂಚಾರ್ ಬಂದ್ ಮಾಡಲಾಯಿತು.

ಮಂಡ್ಯದ ಸಂಜಯ ವೃತ್ತದಲ್ಲಿ ನಡೆದ ಪ್ರತಿಭಟನೆಯಲ್ಲಿ ನೂರಾರು ಸಂಖ್ಯೆಯ ಕಾರ್ಯಕರ್ತರು ಪಾಲ್ಗೊಂಡಿದ್ದರು. ಬಾಯಿ ಬಾಯಿ ಬಡಿದುಕೊಂಡು ಪ್ರತಿಭಟನೆ ನಡೆಸಿದರು.

ತುಮಕೂರಿನಲ್ಲಿ ಭದ್ರಾವೃತ್ತದಿಂದ ಜಿಲ್ಲಾಧಿಕಾರಿಗಳ ಕಚೇರಿವರೆಗೆ ಶಾಸಕ ಜ್ಯೋತಿ ಗಣೇಶ್ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.

ಬಾಗಲಕೋಟೆಯಲ್ಲಿ ಬಿಜೆಪಿ ಮುಖಂಡರು ಕಾರಿಗೆ ಹಗ್ಗ ಕಟ್ಟಿ ಎಳೆದುಕೊಂಡು ಹೋಗುವ ಮೂಲಕ ಪ್ರತಿಭಟನೆ ನಡೆಸಿದರು. ರಾಜ್ಯಸಭೆ ಸದಸ್ಯ ನಾರಾಯಣ ಭಾಂಡಗೆ, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಶಾಂತಗೌಡ ಪಾಟೀಲ, ಬಸವರಾಜ ಯಂಕಂಚಿ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.

ಚಾಮರಾಜನಗರದ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನದಿಂದ ಭುವನೇಶ್ವರಿ ವೃತ್ತದವರೆಗೂ ತಳ್ಳು ಗಾಡಿಯ ಮೇಲೆ ಸ್ಕೂಟರ್ ಇರಿಸಿ ಮೆರವಣಿಗೆ ನಡೆಸಿದ ಕಾರ್ಯಕರ್ತರು ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. 'ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ತೈಲ ಬೆಲೆ ಹೆಚ್ಚಿಸುವ ಮೂಲಕ ಜನಸಾಮಾನ್ಯರ ಮೇಲೆ ಆರ್ಥಿಕ ಹೊರೆ ಹಾಕಿದೆ' ಎಂದು ಮಾಜಿ ಶಾಸಕ ಎನ್.ಮಹೇಶ್ ವಾಗ್ದಾಳಿ ನಡೆಸಿದರು. ಮಡಿಕೇರಿಯಲ್ಲಿ ಮಾಜಿ ಶಾಸಕ ಅಪ್ಪಚ್ಚು ರಂಜನ್ ಸೈಕಲ್ ಸವಾರಿ ಮೂಲಕ ಪ್ರತಿಭಟನೆ ನಡೆಸಿದರು.

ಏರಿಕೆ ಹಿಂಪಡೆಯುವವರೆಗೆ ಹೋರಾಟ ನಿಲ್ಲದು: ವಿಜಯೇಂದ್ರ

'ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಮಾರಾಟ ತೆರಿಗೆ ಏರಿಸಿರುವುದು ಅವಿವೇಕದ ಮತ್ತು ಜನವಿರೋಧಿ ನಿರ್ಧಾರ. ಸರ್ಕಾರ ತನ್ನ ನಿರ್ಧಾರ ಹಿಂಪಡೆಯುವವರೆಗೆ ಹೋರಾಟವನ್ನು ಮುಂದುವರಿಸುತ್ತೇವೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಪ್ರತಿಭಟನಾ ಸಭೆ ಉದ್ದೇಶಿಸಿ ಮಾತನಾಡಿದ ಅವರು, 'ಬೆಲೆ ಏರಿಕೆ, ಹಣದುಬ್ಬರದ ಬಗ್ಗೆ ಅರಿವಿದ್ದರೂ ಸಿದ್ದರಾಮಯ್ಯ ಅವರು ಲೋಕಸಭಾ ಚುನಾವಣೆ ಬಳಿಕ ತೈಲ ಬೆಲೆ ಏರಿಕೆ ಮಾಡಿರುವುದು ಅಕ್ಷಮ್ಯ ಅಪರಾಧ' ಎಂದರು.

ಲೋಕಸಭಾ ಚುನಾವಣೆಯಲ್ಲಿ 20ಕ್ಕೂ ಹೆಚ್ಚು ಸ್ಥಾನ ಗೆಲ್ಲುವ ನಿರೀಕ್ಷೆ ಇಟ್ಟುಕೊಂಡಿದ್ದ ಕಾಂಗ್ರೆಸ್ ಮುಖಂಡರು ಫಲಿತಾಂಶ ಬಂದ ಬಳಿಕ ಹತಾಶರಾಗಿದ್ದಾರೆ ಎಂದರು.

'ಜನರು ದಂಗೆ ಎದ್ದು ಸರ್ಕಾರ ಕಿತ್ತು ಹಾಕಬೇಕು': ಮುಖ್ಯಮಂತ್ರಿ ಸಿದ್ದರಾಮಯ್ಯ ನುಂಗಣ್ಣನಂತೆ ಎಲ್ಲವನ್ನೂ ನುಂಗುತ್ತಿದ್ದಾರೆ, ಅದರ ಜೊತೆಗೆ ತೈಲ ದರ ಏರಿಕೆ ಮಾಡಿ ಜನರನ್ನು ಲೂಟಿ ಮಾಡುತ್ತಿದ್ದಾರೆ. ಜನರು ದಂಗೆ ಎದ್ದು ಸರ್ಕಾರವನ್ನು ಕಿತ್ತು ಹಾಕಬೇಕಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

ಸಿದ್ದರಾಮಯ್ಯ ಅವರಿಗೆ ಎರಡು ನಾಲಗೆ ಇರಬೇಕು. ಹಿಂದೆ ವಿರೋಧ ಪಕ್ಷದಲ್ಲಿ ಇದ್ದಾಗ ಪೆಟ್ರೋಲಿಯಂ ಉತ್ಪನ್ನಗಳ ದರ ಏರಿಕೆಯನ್ನು ಖಂಡಿಸಿದ್ದರು. ಈಗ ಬೆಲೆ ಏರಿಕೆ ಮಾಡಿ ಸಮರ್ಥಿಸಿಕೊಳ್ಳುತ್ತಿದ್ದಾರೆ ಎಂದು ಹೇಳಿ ಸಿದ್ದರಾಮಯ್ಯ ಅವರ ಹಳೆಯ ವಿಡಿಯೊ ಒಂದನ್ನು ಪ್ರದರ್ಶಿಸಿದರು.

ಕಾಂಗ್ರೆಸ್ ಸರ್ಕಾರ ಬಸ್ ಪ್ರಯಾಣದ ಟಿಕೆಟ್ ದರ ಶೇ 12ರಷ್ಟು ಹೆಚ್ಚಿಸಲು ಚರ್ಚೆ ನಡೆಸಿದೆ. ಕಾಫಿ, ಟೀ ದರವೂ ಹೆಚ್ಚಲಿದೆ ಎಂದರು.

ಮದುವೆಗೆ ಪೋಷಕರ ಅಸ್ತು

ಪೋಕ್ಸೊ ಆರೋಪಿಗೆ ಹೈಕೋರ್ಟ್ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ನ್ಯಾಯಾಂಗ ಬಂಧನದಲ್ಲಿರುವ 23 ವರ್ಷದ ಯುವಕ (ವಿಚಾರಣಾಧೀನ ಕೈದಿ), ಸಂತ್ರಸ್ತೆಯನ್ನು ಮದುವೆಯಾಗಲು ನಿಶ್ಚಯಿಸಿರುವುದರಿಂದ ಆರೋಪಿಗೆ ಹೈಕೋರ್ಟ್ ಮಧ್ಯಂತರ ಜಾಮೀನು ನೀಡಿದೆ.

ಈ ಸಂಬಂಧ ಜಾಮೀನು ಕೋರಿ ಆರೋಪಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮನ್ನಿಸಿದ್ದು, 'ಈ ಪ್ರಕರಣದಲ್ಲಿ ಮಗು, ಸಂತ್ರಸ್ತೆಯ ಹಿತ ರಕ್ಷಿಸಬೇಕಿರುವ ಕಾರಣ ಮತ್ತು ಮಗುವಿಗೆ ಭವಿಷ್ಯದಲ್ಲಿ ಯಾವುದೇ ರೀತಿಯ ತೊಂದರೆ ಆಗ ಬಾರದು' ಎಂಬ ಅಭಿಪ್ರಾಯದೊಂದಿಗೆ ಜಾಮೀನು ಮಂಜೂರು ಮಾಡಿದೆ.

'ಆರೋಪಿಯು ಸಂತ್ರಸ್ತೆಯನ್ನು ಮದುವೆಯಾಗಿ ಜುಲೈ 3ರ ಸಂಜೆ ಹಿಂದಿರುಗಬೇಕು. ಜುಲೈ 4ರಂದು ವಿವಾಹ ನೋಂದಣಿ ಪತ್ರವನ್ನು ಕೋರ್ಟ್‌ಗೆ ಸಲ್ಲಿಸಬೇಕು. ಈ ನಡುವೆ ಸಂಬಂಧಿಸಿದ ಪೊಲೀಸ್ ಠಾಣೆಗೆ ವಾರಕ್ಕೊಮ್ಮೆ ಹಾಜರಾಗಬೇಕು. 2024ರ ಜೂನ್ 17ರಿಂದ ಅನ್ವಯವಾಗುವಂತೆ ಜುಲೈ 3ರವರೆಗೆ ಬಿಡುಗಡೆ ಮಾಡಬೇಕು' ಎಂದು ಜೈಲಿನ ಅಧಿಕಾರಿಗಳಿಗೆ ಆದೇಶಿಸಿದೆ.

ಪ್ರಕರಣವೇನು?: 'ಆರೋಪಿಯು 2023ರಲ್ಲಿ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದಾನೆ' ಎಂದು ಬಾಲಕಿಯ ತಾಯಿ ಪೊಲೀಸರಿಗೆ ದೂರು ನೀಡಿದ್ದರು. ಇದರ ಅನುಸಾರ ಯುವಕನ ವಿರುದ್ಧ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ–2012) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿತ್ತು.

ದೂರು ದಾಖಲಿಸಿದ ದಿನದಿಂದ ಆರೋಪಿ ನ್ಯಾಯಾಂಗ ಬಂಧನದಲ್ಲಿದ್ದು ವಿಚಾರಣೆ ಎದುರಿಸುತ್ತಿದ್ದಾರೆ. ಏತನ್ಮಧ್ಯೆ, ಪ್ರಕರಣ ವಿಚಾರಣಾ ಕೋರ್ಟ್‌ನಲ್ಲಿ ವಿಚಾರಣೆಗೆ ಬಂದಾಗ ಪೋಷಕರು, 'ಯುವಕ ಬಂಧನಕ್ಕೆ ಒಳಗಾಗುವ ದಿನದಂದು ಸಂತ್ರಸ್ತೆಗೆ 18 ವರ್ಷ ತುಂಬಿರಲಿಲ್ಲ. ಈಗ 18 ವರ್ಷ ತುಂಬಿದೆ. ಅವರಿಬ್ಬರೂ ಮದುವೆಯಾಗಲು ನಿರ್ಧರಿಸಿದ್ದಾರೆ. ಇದಕ್ಕೆ ನಮ್ಮ ಸಮ್ಮತಿಯೂ ಇದೆ. ಹೀಗಾಗಿ, ರಾಜಿ ಸಂಧಾನ ಪರಿಗಣಿಸಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕು' ಎಂದು ಕೋರಿದ್ದರು.

ಪೋಷಕರ ಮನವಿಯನ್ನು ಪರಿಗಣಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ನ್ಯಾಯಪೀಠವು, 'ಬಾಲಕಿಯ ಮಗುವಿನ ಜೈವಿಕ ತಂದೆ ಬಗ್ಗೆ ಡಿಎನ್ಎ ವರದಿ ಸ್ಪಷ್ಟಪಡಿಸುತ್ತದೆ. ಸಂಕಷ್ಟದಲ್ಲಿರುವ ತಾಯಿ ಮತ್ತು ಮಗುವಿನ ಪರಿಸ್ಥಿತಿಯನ್ನು ಪರಿಗಣಿಸಿದರೆ, ಸಂತ್ರಸ್ತೆಯನ್ನು ಮದುವೆಯಾಗಲು ಯುವಕನಿಗೆ ಅನುಮತಿ ನೀಡಿ ಅವರಿಬ್ಬರ ಕುಟುಂಬಗಳ ಕಷ್ಟ ಪರಿಹರಿಸುವುದು ಸೂಕ್ತವಾಗಿದೆ. ಹಾಗಾಗಿ, ಈ ಮಧ್ಯಂತರ ಜಾಮೀನು ನೀಡಿ ಸಂತ್ರಸ್ತೆಯನ್ನು ಮದುವೆಯಾಗಲು ಅನುಮತಿ ನೀಡಲಾಗುತ್ತಿದೆ' ಎಂದು ತಿಳಿಸಿದೆ.

ಪಠ್ಯ ಪರಿಷ್ಕರಣೆ ಗೊಂದಲ– ಎನ್‌ಸಿಇಆರ್‌ಟಿಗೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ತರಾಟೆ

‘ಪಠ್ಯಪುಸ್ತಕ ರೂಪಿಸಿ, ರಾಜಕೀಯ ಕರಪತ್ರವಲ್ಲ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಎನ್‌ಸಿಇಆರ್‌ಟಿ ತನ್ನ ಮುಖ್ಯ ಕೆಲಸ ಪಠ್ಯಪುಸ್ತಕ ರೂಪಿಸುವುದು, ರಾಜಕೀಯ ಕರಪತ್ರ ತಯಾರಿಸುವುದು ಅಥವಾ ಪ್ರಚಾರ ಮಾಡುವುದಲ್ಲ’ ಎಂದು ತಿಳಿದುಕೊಳ್ಳಬೇಕು’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಚಾಟಿ ಬೀಸಿದ್ದಾರೆ



ಜೈರಾಮ್ ರಮೇಶ್

ಪಠ್ಯಪುಸ್ತಕ ಪರಿಷ್ಕರಣೆ ವಿವಾದ, ನೀಟ್ 2024ರ ಗೊಂದಲದ ಹಿನ್ನೆಲೆಯಲ್ಲಿ ಎಕ್ಸ್ ಜಾಲತಾಣದಲ್ಲಿ ಪ್ರತಿಕ್ರಿಯಿಸಿರುವ ಅವರು, ‘ಎನ್‌ಸಿಇಆರ್‌ಟಿ ಎಂದರೆ ನಾಗಪುರ ಅಥವಾ ನರೇಂದ್ರ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯಲ್ಲ ಎಂಬುದನ್ನು ಅರಿತುಕೊಳ್ಳಲಿ’ ಎಂದೂ ವ್ಯಂಗ್ಯವಾಡಿದ್ದಾರೆ.

ಎನ್‌ಸಿಇಆರ್‌ಟಿ ವೃತ್ತಿಪರ ಸಂಸ್ಥೆಯಾಗಿ ಉಳಿದಿಲ್ಲ ಎಂಬುದು ನಿಜ. 2014ರಿಂದಲೂ ಆರ್‌ಎಸ್‌ಎಸ್ ಮಾನ್ಯತೆ ಪಡೆದ ಸಂಸ್ಥೆಯಾಗಿಯೇ ಕೆಲಸ ಮಾಡುತ್ತಿದೆ. 11ನೇ ತರಗತಿಯ ಪರಿಷ್ಕೃತ ಪಠ್ಯದಲ್ಲಿ ಜಾತ್ಯತೀತತೆ ಚಿಂತನೆಗಳನ್ನು ಟೀಕಿಸಿರುವುದು ಈಗ ಬಹಿರಂಗವಾಗಿದೆ ಎಂದು ಅವರು ಹೇಳಿದ್ದಾರೆ.

ಜಾತ್ಯತೀತತೆ ಭಾರತ ಗಣರಾಜ್ಯದ ಆಧಾರಸ್ತಂಭ ಎಂದು ಸಂವಿಧಾನದ ಪೀಠಿಕೆಯಲ್ಲಿದೆ. ಸುಪ್ರೀಂ ಕೋರ್ಟ್‌ನ ಹಲವು ತೀರ್ಪುಗಳೂ ಜಾತ್ಯತೀತತೆ ಸಂವಿಧಾನದ ಮೂಲ ಆಶಯದ ಭಾಗ ಎಂದು . ಎನ್‌ಸಿಇಆರ್‌ಟಿ ಈಗ ಸಂವಿಧಾನದ ಆಶಯಗಳ ಮೇಲೆ ದಾಳಿ ನಡೆಸುತ್ತಿದೆ ಎಂದು ಅವರು ಟೀಕಿಸಿದ್ದಾರೆ.

‘ಪರಿಷ್ಕರಣೆ ವಾರ್ಷಿಕ ಪ್ರಕ್ರಿಯೆಯ ಭಾಗ’: ಈ ಮಧ್ಯೆ ಪಿಟಿಐಗೆ ಪ್ರತಿಕ್ರಿಯಿಸಿರುವ ಎನ್‌ಸಿಇಆರ್‌ಟಿ ನಿರ್ದೇಶಕ ದಿನೇಶ್ ಪ್ರಸಾದ್ ಸಕ್ಲಾನಿ ಅವರು, ‘ಪಠ್ಯ ಪರಿಷ್ಕರಣೆಯು ವಾರ್ಷಿಕ ಪ್ರಕ್ರಿಯೆಯ ಭಾಗ. ಟೀಕೆ ಅಥವಾ ಚರ್ಚಾಸ್ಪದ ವಸ್ತುವಲ್ಲ’ ಎಂದು ಹೇಳಿದ್ದಾರೆ.

12ನೇ ತರಗತಿ ಪಠ್ಯಪುಸ್ತಕದಿಂದ ಬಾಬರಿ ಮಸೀದಿ ಕುರಿತ ಭಾಗಶಃ ಅಂಶಗಳನ್ನು ಕೈಬಿಟ್ಟಿದ್ದನ್ನು ಅವರು ಸಮರ್ಥಿಸಿಕೊಂಡಿದ್ದು, ‘ಮಕ್ಕಳಿಗೆ ‘ಗಲಭೆ’ಯನ್ನು ಬೋಧಿಸುವ ಅಗತ್ಯವಿಲ್ಲ’ ಎಂದಿದ್ದಾರೆ.

ಹೆಸರು ಕೈಬಿಡಿ (ಪಿಟಿಐ ವರದಿ): ‘ಪಠ್ಯ ಪರಿಷ್ಕರಣೆಯಿಂದ ನಾವು ದೂರ ಉಳಿದಿದ್ದೇವೆ. ಪರಿಷ್ಕೃತ ಪಠ್ಯಪುಸ್ತಕಗಳಲ್ಲಿ ನಮ್ಮ ಹೆಸರಿನ ಉಲ್ಲೇಖ ಸರಿಯಲ್ಲ. ನಮ್ಮ ಹೆಸರುಗಳುಳ್ಳ ಪುಸ್ತಕಗಳನ್ನು ಹಿಂದೆ ಪಡೆಯಿರಿ. ಇಲ್ಲದಿದ್ದಲ್ಲಿ ಕಾನೂನುಕ್ರಮಕ್ಕೆ ಮುಂದಾಗುವುದು ಅನಿವಾರ್ಯವಾಗಲಿದೆ’ ಎಂದು ರಾಜ್ಯಶಾಸ್ತ್ರ ಪರಿಣತರಾದ ಯೋಗೇಂದ್ರ ಯಾದವ್, ಸುಹಾಸ್ ಪಾಲ್‌ಶಿಕಾರ್ ಹೇಳಿದ್ದಾರೆ.

ಈ ಕುರಿತು ಇಬ್ಬರೂ ಎನ್‌ಸಿಇಆರ್‌ಟಿಗೆ ಪತ್ರ ಬರೆದಿದ್ದಾರೆ. ರಾಜಕೀಯ ಪಕ್ಷಪಾತದ, ಶೈಕ್ಷಣಿಕವಾಗಿ ಅಸಮರ್ಥನೀಯವಾದ ಪಠ್ಯಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ವರ್ಗಾಹಿಸಿ, ನಮ್ಮ ಹೆಸರಿನ ಹಿಂದೆ ಎನ್‌ಸಿಇಆರ್‌ಟಿ ‘ಅಡಗಿಕೊಳ್ಳಬೇಕು’ ಎಂದು ನಾವು ಬಯಸುವುದಿಲ್ಲ ಎಂದು ಹೇಳಿದ್ದಾರೆ.

ಈ ಇಬ್ಬರು ರಾಜ್ಯಶಾಸ್ತ್ರ ಪಠ್ಯಪುಸ್ತಕಗಳ ರಚನಾ ಸಮಿತಿಗೆ ಮುಖ್ಯ ಸಲಹೆಗಾರರಾಗಿದ್ದರು. ಪರಿಷ್ಕೃತ ಪಠ್ಯಪುಸ್ತಕಗಳಲ್ಲಿ ಇಬ್ಬರನ್ನೂ ಮುಖ್ಯ ಸಲಹೆಗಾರರರು ಎಂದೇ ಉಲ್ಲೇಖಿಸಲಾಗಿದೆ.

ಪಠ್ಯಪುಸ್ತಕದಲ್ಲಿ ‘ವೋಟ್‌ಬ್ಯಾಂಕ್ ರಾಜಕಾರಣ..’

ನವದೆಹಲಿ: ‘ವೋಟ್ ಬ್ಯಾಂಕ್ ರಾಜಕಾರಣದಿಂದ ಸಮಾನತೆಯನ್ನು ಕಡೆಗಣಿಸಿದಂತೆ ಆಗಲಿದ್ದು, ಅಲ್ಪಸಂಖ್ಯಾತರ ಓಲೈಕೆಗೆ ಉತ್ತೇಜನ ನೀಡಲಿದೆ...’ –11ನೇ ತರಗತಿಯ ರಾಜಕೀಯ ವಿಜ್ಞಾನ ವಿಷಯದ ‘ಜಾತ್ಯತೀತತೆ’ ಪಾಠದಲ್ಲಿರುವ ಸಾಲುಗಳಿವು.

ಪಠ್ಯಪುಸ್ತಕದ ಪರಿಷ್ಕರಣೆ ವಿವಾದ ತೀವ್ರಗೊಂಡಂತೆ ಈ ಅಂಶ ಬಯಲಾಗಿದೆ. ಕೋವಿಡ್ ವೇಳೆ ವಿದ್ಯಾರ್ಥಿಗಳ ಮೇಲಿನ ಭಾರ ತಗ್ಗಿಸಲು ಪರಿಷ್ಕರಿಸಲಾಗಿತ್ತು ಎಂದು ಎನ್‌ಸಿಇಆರ್‌ಟಿ ಈ ಹಿಂದೆ ಪರಿಷ್ಕರಣೆಯನ್ನು ಸಮರ್ಥಿಸಿಕೊಂಡಿತ್ತು.

‘ಜಾತ್ಯತೀತತೆ’ ಪಾಠದಲ್ಲಿ ಇರುವ ಒಂದು ಪ್ರಶ್ನೆ: ಒಂದು ನಿರ್ದಿಷ್ಟ ವರ್ಗದ ಕಲ್ಯಾಣ ಕಾರ್ಯಕ್ರಮಗಳು ಇನ್ನೊಂದು ವರ್ಗದ ಮೇಲೆ ಪರಿಣಾಮ ಬೀರಲಿವೆಯೇ?’

ಪೂರಕವಾಗಿ ನೀಡಿರುವ ಅಡಕದ ಪ್ರಕಾರ ಇದಕ್ಕೆ ಉತ್ತರ: ‘ವಾಸ್ತವವಾಗಿ, ವೋಟ್ ಬ್ಯಾಂಕ್ ರಾಜಕಾರಣ ತಪ್ಪಲ್ಲ. ಆದರೆ, ಚುನಾವಣೆ ಹೊತ್ತಿನಲ್ಲಿ ಇದು ನಿರ್ದಿಷ್ಟ ಪಕ್ಷ ಮತ್ತು ಅಭ್ಯರ್ಥಿ ಪರವಾಗಿ ಸಮೂಹವೊಂದನ್ನು ಕ್ರೋಡೀಕರಿಸಿದಲ್ಲಿ ಅದರಿಂದ ಚುನಾವಣಾ ರಾಜಕಾರಣವೇ ವಿರೂಪಗೊಳ್ಳಲಿದೆ. ಮತದಾನದ ವೇಳೆ ಇಡೀ ಸಮೂಹ ಏಕಪ್ರಕಾರವಾಗಿ ನಡೆದುಕೊಳ್ಳಲಿದೆ’.

ಮೇಲಿನ ಸಾಲುಗಳು ಪರಿಷ್ಕರಣೆ ಪೂರ್ವದ ಪಠ್ಯಕ್ರಮದಲ್ಲಿ ಇರಲಿಲ್ಲ.

ಚರ್ಚೆಗೀಡಾಗಿರುವ ಇನ್ನೊಂದು ಬದಲಾವಣೆ ಬಾಬರಿ ಮಸೀದಿ ಕುರಿತ ಅಡಕಗಳನ್ನು 12ನೇ ತರಗತಿ ಪಠ್ಯದಿಂದ ಕೈಬಿಟ್ಟಿರುವುದು. ಪರಿಷ್ಕರಣೆಯಲ್ಲಿ ಮಸೀದಿ ಎಂಬುದಕ್ಕೆ ಬದಲಾಗಿ ಸಂಕೀರ್ಣವನ್ನು ಮೂರು ಗೋಪುರಗಳ ಕಟ್ಟಡ ಎಂದು ಉಲ್ಲೇಖಿಸಲಾಗಿದೆ.

ಚರ್ಚೆಯೇ ನಿಷ್ಪ್ರಯೋಜಕ – ಎನ್‌ಸಿಇಆರ್‌ಟಿ

ದಿನೇಶ್ ಪ್ರಸಾದ್ ಸಕ್ಲಾನಿ

ನವದೆಹಲಿ (ಪಿಟಿಐ): ‘ಸಂವಿಧಾನದಲ್ಲಿ ಇರುವಂತೆ ಪಠ್ಯಪುಸ್ತಕಗಳಲ್ಲೂ ಪರ್ಯಾಯವಾಗಿ ‘ಭಾರತ’ ಅಥವಾ ‘ಇಂಡಿಯಾ’ ಬಳಸಲಾಗುತ್ತದೆ. ಈ ಕುರಿತ ಚರ್ಚೆಯೇ ನಿಷ್ಪ್ರಯೋಜಕ’ ಎಂದು ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎನ್‌ಸಿಇಆರ್‌ಟಿ) ಪ್ರತಿಕ್ರಿಯಿಸಿದೆ.

ಪಿಟಿಐ ಜೊತೆಗೆ ಮಾತನಾಡಿರುವ ಎನ್‌ಸಿಇಆರ್‌ಟಿ ನಿರ್ದೇಶಕ ದಿನೇಶ್ ಪ್ರಸಾದ್ ಸಕ್ಲಾನಿ, ‘ಪಠ್ಯಗಳಲ್ಲಿ ಎರಡೂ ಪದಗಳನ್ನು ಬಳಸಲಾಗುತ್ತದೆ. ‘ಭಾರತ’ ಅಥವಾ ‘ಇಂಡಿಯಾ’ ಪದವನ್ನು ಎನ್‌ಸಿಇಆರ್‌ಟಿ ತಿರಸ್ಕರಿಸಿಲ್ಲ’ ಎಂದು ಸ್ಪಷ್ಟಪಡಿಸಿದರು.

‘ನಮ್ಮ ಸಂವಿಧಾನದಲ್ಲಿ ಹೇಳಿರುವುದನ್ನು ಎತ್ತಿಹಿಡಿಯುವುದು ನಮ್ಮ ಕೆಲಸ. ನಾವು ಭಾರತ ಅಥವಾ ಇಂಡಿಯಾ ಬಳಸಬಹುದು. ಅದರಲ್ಲಿ ಸಮಸ್ಯೆ ಏನಿದೆ? ಈ ಕುರಿತ ಚರ್ಚೆಯಲ್ಲಿ ನಾವು ಭಾಗಿಯಾಗುವುದಿಲ್ಲ. ಯಾವುದು ಸೂಕ್ತವೋ ಅದನ್ನು ಬಳಸುತ್ತೇವೆ’ ಎಂದು ಸಕ್ಲಾನಿ ಅವರು ಹೇಳಿದರು.

ಸಮಾಜ ವಿಜ್ಞಾನ ಪಠ್ಯ ಪರಿಷ್ಕರಣೆಗೆ ಎನ್‌ಸಿಇಆರ್‌ಟಿ ರಚಿಸಿದ್ದ ಉನ್ನತ ಮಟ್ಟದ ಸಮಿತಿಯು ಎಲ್ಲ ತರಗತಿಗಳ ಪಠ್ಯಪುಸ್ತಕದಲ್ಲಿ ‘ಇಂಡಿಯಾ’ ಬದಲಿಗೆ ‘ಭಾರತ’ ಪದ ಬಳಸಲು ಕಳೆದ ವರ್ಷ ಶಿಫಾರಸು ಮಾಡಿತ್ತು.

ಈ ಕುರಿತು ಸಮಿತಿಯ ಅಧ್ಯಕ್ಷ ಸಿ.ಐ.ಐಸಾಕ್ ಅವರು, ಪಠ್ಯದಲ್ಲಿ ಪ್ರಾಚೀನ ಇತಿಹಾಸ ಬದಲಿಗೆ ಶಾಸ್ತ್ರೀಯ ಇತಿಹಾಸ ಪರಿಚಯಿಸಲಾಗುವುದು’ ಎಂದು ತಿಳಿಸಿದ್ದರು.

> **ಬಾಬರಿ ಮಸೀದಿ ಧ್ವಂಸದ ವಿಷಯವನ್ನು ಶಾಲಾ ಪಠ್ಯದಿಂದ ಕೈಬಿಡುವ ಮೂಲಕ ಸರ್ಕಾರದ ಎಲ್ಲ ವ್ಯವಸ್ಥೆಯನ್ನು ಕೋಮುವಾದಗೊಳಿಸುವ ಕ್ರಮವಾಗಿದೆ., ಇದರ ವಿರುದ್ಧ ಒಗ್ಗಟ್ಟಿನಿಂದ ಖಂಡಿಸಬೇಕು**
> **ಎಂ.ಬಿ. ರಾಜೇಶ್,** ಕೇರಳಸಚಿವ

‘ಪೌರ ಸಂಸ್ಥೆಗಳ ಆಯುಕ್ತರ ಕಾರ್ಯಶೈಲಿ ತನಿಖೆ ಮಾಡಿ’

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ರಾಜ್‌ಕೋಟ್‌ನ ಗೇಮಿಂಗ್ ಜೋನ್ ಅಗ್ನಿ ಅವಘಡ, ಮೊರ್ಬಿ ಸೇತುವೆ ದುರಂತ ಮತ್ತು ಹರ್ನಿ ಸರೋವರದಲ್ಲಿ ನಡೆದಿದ್ದ ದೋಣಿ ಅವಘಡಗಳನ್ನು ಗಮನಕ್ಕೆ ತೆಗೆದುಕೊಂಡಿರುವ ಗುಜರಾತ್ ಹೈಕೋರ್ಟ್, ಎಲ್ಲ ಪೌರ ಸಂಸ್ಥೆಗಳ ಆಯುಕ್ತರ ಕಾರ್ಯವೈಖರಿ ಬಗ್ಗೆ ತನಿಖೆ ನಡೆಸುವಂತೆ ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ. ಅಧಿಕಾರಿಗಳು ತಮ್ಮ ಕೆಲಸದಿಂದ ವಿಮುಖರಾಗಿರುವಂತೆ ತೋರುತ್ತಿದೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

ಈ ಬಗ್ಗೆ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿದ್ದ ಸಾರ್ವಜನಿಕ ಹಿತಾಸಕ್ತಿಯ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸುನೀತಾ ಅಗರ್ವಾಲ್ ಮತ್ತು ನ್ಯಾಯಮೂರ್ತಿ ಪ್ರಣವ್ ತ್ರಿವೇದಿ ಅವರಿದ್ದ ವಿಭಾಗೀಯ ಪೀಠವು, ‘ಪೌರ ಸಂಸ್ಥೆಗಳ ಮುಖ್ಯಸ್ಥರು ತಮ್ಮ ಕರ್ತವ್ಯದಿಂದ ವಿಮುಖರಾಗಿರುವುದರಿಂದ ಹೆಚ್ಚು ಜನ ಸೇರುವ ಸಾರ್ವಜನಿಕ ಸ್ಥಳಗಳು ಮತ್ತು ಮನರಂಜನಾ ಚಟುವಟಿಕೆಗಳು ನಡೆಯುವ ಸ್ಥಳಗಳು ಜನರ ಪ್ರಾಣಕ್ಕೆ ಅಪಾಯಕಾರಿಯಾಗಿ ಪರಿಣಮಿಸಿವೆ’ ಎಂದು ಹೇಳಿದೆ.

ಭವಿಷ್ಯದಲ್ಲಿ ಇಂಥ ಅವಘಡಗಳು ನಡೆಯದಂತೆ ಕಠಿಣ ಕ್ರಮ ಜರುಗಿಸಬೇಕು ಎಂದು ಸೂಚಿಸಿರುವ ಹೈಕೋರ್ಟ್, ಈ ಬಗ್ಗೆ ತನಿಖೆ ನಡೆಸಿ, ಏನು ಕ್ರಮ ಕೈಗೊಳ್ಳಲಾಗಿದೆ ಎಂಬ ಬಗ್ಗೆ ಒಂದು ತಿಂಗಳಲ್ಲಿ ವರದಿ ನೀಡುವಂತೆ ಪ್ರಧಾನ ಕಾರ್ಯದರ್ಶಿಗೆ ಆದೇಶಿಸಿದೆ.

ಉಗ್ರರ ದಾಳಿ ಕೃತ್ಯ: ಎನ್‌ಐಎ ತನಿಖೆಗೆ

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ರಿಯಾಸಿಯಲ್ಲಿ ಈಚೆಗೆ ಪ್ರಯಾಣಿಕರ ಬಸ್‌ನ ಮೇಲೆ ನಡೆದಿದ್ದ ಭಯೋತ್ಪಾದಕರ ದಾಳಿ ಕೃತ್ಯದ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ಒಪ್ಪಿಸಿ ಕೇಂದ್ರ ಗೃಹ ಸಚಿವಾಲಯವು ಆದೇಶಿಸಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಈಚೆಗೆ ನಡೆಸಿದ್ದ ಸಭೆಯಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಕಾನೂನು ಸುವ್ಯವಸ್ಥೆ ಸ್ಥಿತಿ, ಅಮರನಾಥ ಯಾತ್ರೆಗೆ ನಡೆದಿರುವ ಸಿದ್ಧತೆಗಳನ್ನು ಕುರಿತು ಪರಿಶೀಲಿಸಿದ್ದರು. ಸಭೆಯ ಹಿಂದೆಯೇ ಈ ಅದೇಶ ಹೊರಬಿದ್ದಿದೆ.ಉಗ್ರರ ದಾಳಿ ಕೃತ್ಯದಲ್ಲಿ ಮೂವರು ಮಹಿಳೆಯರು ಸೇರಿ ಒಂಬತ್ತು ಮಂದಿ ಸತ್ತಿದ್ದರು. ಬಸ್‌ನಲ್ಲಿ ಉತ್ತರಪ್ರದೇಶ, ರಾಜಸ್ಥಾನ, ದೆಹಲಿಯ ಸುಮಾರು 41 ಪ್ರಯಾಣಿಕರಿದ್ದರು. ಉಗ್ರರ ದಾಳಿ ಹಿಂದೆಯೇ ಚಾಲಕನ ನಿಯಂತ್ರಣ ತಪ್ಪಿದ್ದ ಬಸ್ ಕಂದಕ್ಕೆ ಉರುಳಿತ್ತು.

ಜೂನ್ 9ರಂದು ಉಗ್ರರ ದಾಳಿ ನಡೆದಿದ್ದು, ಪ್ರಯಾಣಿಕರು ಶಿವ್‌ಖೋರಿ ದೇವಸ್ಥಾನ ಭೇಟಿಯ ಬಳಿಕ ಕಾತ್ರಾದ ಮಾತಾ ವೈಷ್ಣೋದೇವಿ ದೇವಸ್ಥಾನಕ್ಕೆ ತೆರಳುವಾಗ ಕೃತ್ಯ ನಡೆದಿತ್ತು.

ಬೆಳಿಗ್ಗೆಯಿಂದಲೇ ಕೈಕೊಟ್ಟಿದ್ದ ಸಿಗ್ನಲ್ ವ್ಯವಸ್ಥೆ

ನವದೆಹಲಿ (ಪಿಟಿಐ): ರಾಣಿಪತ್ರಾ ರೈಲು ನಿಲ್ದಾಣ ಹಾಗೂ ಛತ್ತರ್ ಹಾಟ್ ಜಂಕ್ಷನ್ ನಡುವಿನ ಸ್ವಯಂಚಾಲಿತ ಸಿಗ್ನಲ್ ವ್ಯವಸ್ಥೆಯು ಸೋಮವಾರ ಬೆಳಿಗ್ಗೆ 5.50ರಿಂದಲೇ ಸರಿಯಾಗಿ ಕೆಲಸ ಮಾಡುತ್ತಿರಲಿಲ್ಲ ಎಂದು ರೈಲ್ವೆ ಇಲಾಖೆಯ ಮೂಲಗಳು ತಿಳಿಸಿವೆ.

ಸ್ವಯಂಚಾಲಿತ ಸಿಗ್ನಲ್ ವ್ಯವಸ್ಥೆ ವಿಫಲವಾಗಿದ್ದರಿಂದ ಆ ಮಾರ್ಗದಲ್ಲಿ ಬರುವ ಎಲ್ಲ ಕೆಂಪು ಸಿಗ್ನಲ್‌ಗಳನ್ನು ದಾಟಲು ರಾಣಿಪತ್ರಾ ಸ್ಟೇಷನ್ ಮಾಸ್ಟರ್ ಅವರು ಗೂಡ್ಸ್ ರೈಲಿನ ಚಾಲಕನಿಗೆ ಅನುಮತಿ ನೀಡಿದ್ದರು. ಹಾಗಾಗಿ, ಈ ಅಪಘಾತದಲ್ಲಿ ಗೂಡ್ಸ್ ರೈಲಿನ ಚಾಲಕನ ತಪ್ಪಿಲ್ಲ ಎಂದು ರೈಲ್ವೆಯ ಆಂತರಿಕ ದಾಖಲೆ ಹೇಳಿದೆ.

‘ಚಾಲಕನಿಗೆ ನೀಡಲಾಗಿರುವ ‘ಟಿಎ 912’ ಎಂಬ ಅನುಮತಿ ಪತ್ರದಲ್ಲಿ ಇದನ್ನು ನಮೂದಿಸಲಾಗಿದೆ’ ಎಂದು ರೈಲ್ವೆ ಮೂಲವೊಂದು ಹೇಳಿದೆ.

ಎರಡೂ ನಿಲ್ದಾಣಗಳ ನಡುವೆ ಒಂಬತ್ತು ಸಿಗ್ನಲ್‌ಗಳಿದ್ದು, ಅವುಗಳಲ್ಲಿ ಕೆಂಪು ಅಥವಾ ಎಚ್ಚರಿಕೆಯ ಸಿಗ್ನಲ್ (ಒಂದು ಹಳದಿ ದೀಪ ಅಥವಾ ಎರಡು ಹಳದಿ ದೀಪಗಳು) ಇದ್ದರೂ, ವೇಗವಾಗಿ ಸಂಚರಿಸಲು ಚಾಲಕನಿಗೆ ಅನುಮತಿ ನೀಡಲಾಗಿತ್ತು.

‘ಮಾರ್ಗದಲ್ಲಿ ರೈಲು ಸಂಚಾರ ಇಲ್ಲದಿದ್ದರೆ ಅಥವಾ ಯಾವುದೇ ಸಂಚಾರಕ್ಕೆ ಅಡೆತಡೆ ಇಲ್ಲದಿದ್ದರೆ ಟಿಎ 912 ನೀಡಲಾಗುತ್ತದೆ. ಈ ದಾಖಲೆಯು ಕೆಂಪು ಅಥವಾ ಎಚ್ಚರಿಕೆಯ ಸಿಗ್ನಲ್‌ಗಳನ್ನು ದಾಟಲು ಚಾಲಕರಿಗೆ ಅನುಮತಿ ನೀಡುತ್ತದೆ. ಸ್ಟೇಷನ್ ಮಾಸ್ಟರ್ ಯಾಕೆ ಅನುಮತಿ ನೀಡಿದರು ಎಂಬುದನ್ನು ತನಿಖೆ ನಡೆಸಬೇಕಾಗಿದೆ. ಹಿಂದಿನ ರೈಲು ಆ ನಿಲ್ದಾಣದ ವಿಭಾಗವನ್ನು ದಾಟಿ, ಇನ್ನೊಂದು ವಿಭಾಗಕ್ಕೆ ತಲುಪಿರಬಹುದು ಎಂದು ಅವರು ಭಾವಿಸಿರುವ ಸಾಧ್ಯತೆ ಇದೆ’ ಎಂದು ರೈಲ್ವೆ ಮೂಲ ವಿವರಿಸಿದೆ.

‘ಕಾಂಚನ್‌ಜುಂಗಾ ಎಕ್ಸ್‌ಪ್ರೆಸ್ ರಂಗಾಪಾಣಿ ರೈಲು ನಿಲ್ದಾಣದಿಂದ ಬೆಳಿಗ್ಗೆ 8.27ಕ್ಕೆ ಹೊರಟಿತ್ತು. ರಾಣಿಪತ್ರಾ ರೈಲು ನಿಲ್ದಾಣ ಮತ್ತು ಛತ್ತರ್ ಹಾಟ್ ಜಂಕ್ಷನ್ ನಡುವಿನ ಮಾರ್ಗದಲ್ಲಿ ನಿಂತಿತ್ತು. ರೈಲನ್ನು ನಿಲ್ಲಿಸಲು ಏನು ಕಾರಣ ಎಂಬುದು ಗೊತ್ತಿಲ್ಲ’ ಎಂದು ರೈಲ್ವೆ ಮೂಲವು ಪಿಟಿಐಗೆ ತಿಳಿಸಿದೆ.

ಗೂಡ್ಸ್ ರೈಲು ರಂಗಾಪಾಣಿ ನಿಲ್ದಾಣದಿಂದ ಬೆಳಿಗ್ಗೆ 8.42ಕ್ಕೆ ಹೊರಟಿತ್ತು. ಗೂಡ್ಸ್ ರೈಲಿನ ಚಾಲಕ ಸಿಗ್ನಲ್‌ಗಳನ್ನು ಉಲ್ಲಂಘಿಸಿದ್ದರಿಂದ ಅಪಘಾತ ಸಂಭವಿಸಿದೆ ಎಂದು ರೈಲ್ವೆಮಂಡಳಿಯು ಆರಂಭದಲ್ಲಿ ಹೇಳಿತ್ತು.

ಸೋಮವಾರ ಅಪಘಾತ ನಡೆದ ಸ್ಥಳದಲ್ಲಿ ರೈಲು ಪುನರ್ ಸಂಚಾರ ಆರಂಭಿಸಲು ಇಲಾಖೆ ನೌಕರರು ಕೆಲಸದಲ್ಲಿ ತೊಡಗಿದ್ದರು —ಎಎಫ್‌ಪಿ ಚಿತ್ರ

2020ರ ನಂತರ ನಡೆದ ಪ್ರಮುಖ ರೈಲು ಅಪಘಾತಗಳು

- **ಮೇ 8, 2020:** ಮಹಾರಾಷ್ಟ್ರದ ಔರಂಗಾಬಾದ್ ಜಿಲ್ಲೆಯ ಕರ್ಮಾಡ್ ಪೊಲೀಸ್ ಠಾಣೆ ಬಳಿಯ ರೈಲ್ವೆ ಹಳಿ ಮೇಲೆ ವಿಶ್ರಾಂತಿ ಪಡೆಯುತ್ತಿದ್ದ ಮಧ್ಯಪ್ರದೇಶದ ವಲಸೆ ಕಾರ್ಮಿಕರ ಮೇಲೆ ಗೂಡ್ಸ್ ರೈಲು ಹರಿದು 16 ಮಂದಿ ಸಾವು (ಕೋವಿಡ್ ಲಾಕ್ ಡೌನ್ ಸಮಯದಲ್ಲಿ ಈ ಕಾರ್ಮಿಕರು ಕಾಲ್ನಡಿಗೆಯಲ್ಲಿ ತಮ್ಮ ಊರಿಗೆ ಹೊರಟಿದ್ದರು)
- **ಜನವರಿ 12, 2023:** ಪಶ್ಚಿಮ ಬಂಗಾಳದ ಆಲಿಪುರದ್ವಾರ ಪ್ರದೇಶದಲ್ಲಿ ಬೀಕಾನೇರ್–ಗುವಾಹಟಿ ಎಕ್ಸ್‌ಪ್ರೆಸ್‌ನ 12 ಬೋಗಿಗಳು ಹಳಿತಪ್ಪಿ ಒಂಬತ್ತು ಪ್ರಯಾಣಿಕರು ಸಾವು, 36 ಮಂದಿಗೆ ಗಾಯ
- **ಜೂನ್ 2, 2023:** ಒಡಿಶಾದ ಬಾಲೇಶ್ವರದಲ್ಲಿ ಬೆಂಗಳೂರು–ಹೌರಾ ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್, ಶಾಲಿಮಾರ್ ಚೆನ್ನೈ ಸೆಂಟ್ರಲ್ ಕೋರಮಂಡಲ್ ಎಕ್ಸ್‌ಪ್ರೆಸ್ ಮತ್ತು ಗೂಡ್ಸ್ ರೈಲಿನ ನಡುವೆ ಡಿಕ್ಕಿ. 296 ಮಂದಿ ಸಾವು, 1,200 ಜನರಿಗೆ ಗಾಯ
- **ಆಗಸ್ಟ್ 26, 2023:** ತಮಿಳುನಾಡಿನ ಮದುರೆ ನಿಲ್ದಾಣದ ಬಳಿ ಲಖನೌ–ರಾಮೇಶ್ವರ ರೈಲಿನ ಬೋಗಿಯೊಂದರಲ್ಲಿ ಬೆಂಕಿ ಆಕಸ್ಮಿಕ ಅನಾಹುತ ಸಂಭವಿಸಿ ಒಂಬತ್ತು ಪ್ರಯಾಣಿಕರ ಸಾವು, 20 ಜನರಿಗೆ ಗಾಯ
- **ಅಕ್ಟೋಬರ್ 11, 2023:** ಬಿಹಾರದ ಬಕ್ಸಾರ್ ಸಮೀಪದ ರಘುನಾಥಪುರ ರೈಲು ನಿಲ್ದಾಣದಲ್ಲಿ 12,506 ನಾರ್ತ್ ಈಸ್ಟ್ ಎಕ್ಸ್‌ಪ್ರೆಸ್ ರೈಲಿನ ಆರು ಬೋಗಿಗಳು ಹಳಿತಪ್ಪಿದ್ದರಿಂದ ನಾಲ್ವರು ಮೃತಪಟ್ಟು, 70 ಮಂದಿಗೆ ಗಾಯ
- **ಅಕ್ಟೋಬರ್ 29, 2023:** ಆಂಧ್ರಪ್ರದೇಶದ ವಿಶಾಖಪಟ್ಟಣ ಜಿಲ್ಲೆಯ ಹೌರಾ–ಚೆನ್ನೈ ಮಾರ್ಗದಲ್ಲಿ ರಾಯಗಡ ಪ್ಯಾಸೆಂಜರ್ ರೈಲಿಗೆ ವಿಶಾಖಪಟ್ಟಣ–ಪಾಲಾಷ ಎಕ್ಸ್‌ಪ್ರೆಸ್ ಡಿಕ್ಕಿ ಹೊಡೆದು 14 ಪ್ರಯಾಣಿಕರು ಮೃತಪಟ್ಟು, 50 ಜನರಿಗೆ ಗಾಯ

ಕಾಂಗ್ರೆಸ್ ಆರೋಪ

ನವದೆಹಲಿ(ಪಿಟಿಐ): ರೈಲ್ವೆ ಇಲಾಖೆಯನ್ನು ಕೇಂದ್ರ ಸರ್ಕಾರವು ಸಂಪೂರ್ಣವಾಗಿ ಅವ್ಯವಸ್ಥೆಗೆ ನೂಕಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

‘ರೈಲು ಅಪಘಾತವು ಬಹಳ ಸಂಕಟ ಉಂಟುಮಾಡಿದೆ... ದುಃಖದ ಈ ಸಂದರ್ಭದಲ್ಲಿ ನಾವು, ಮೃತಪಟ್ಟವರ ಕುಟುಂಬಗಳಿಗೆ ಸಂತಾಪ ಸೂಚಿಸುತ್ತೇವೆ. ಗಾಯಾಳುಗಳು ಶೀಘ್ರ ಗುಣಮುಖರಾಗಲಿ ಎಂದು ಹಾರೈಸುತ್ತೇವೆ. ತೊಂದರೆಗೆ ಒಳಗಾದವರಿಗೆ ತಕ್ಷಣ, ಪೂರ್ಣ ಪ್ರಮಾಣದಲ್ಲಿ ಪರಿಹಾರ ನೀಡಬೇಕು’ ಎಂದು ಖರ್ಗೆ ಒತ್ತಾಯಿಸಿದ್ದಾರೆ.

ಕಳೆದ ಹತ್ತು ವರ್ಷಗಳಲ್ಲಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ರೈಲ್ವೆ ಸಚಿವಾಲಯವನ್ನು ಸಂಪೂರ್ಣವಾಗಿ ಅವ್ಯವಸ್ಥೆಗೆ ತಳ್ಳಿದೆ ಎಂದು ಖರ್ಗೆ ಆರೋಪಿಸಿದ್ದಾರೆ. ‘ಮೋದಿ ನೇತೃತ್ವದ ಸರ್ಕಾರವು ರೈಲ್ವೆ ಸಚಿವಾಲಯವನ್ನು ಸ್ವಪ್ರಚಾರದ ವೇದಿಕೆಯನ್ನಾಗಿ ಹೇಗೆ ವ್ಯವಸ್ಥಿತವಾಗಿ ಪರಿವರ್ತಿಸಿದೆ ಎಂಬುದನ್ನು ಒತ್ತಿಹೇಳುವುದು ಜವಾಬ್ದಾರಿಯುತ ಪ್ರತಿಪಕ್ಷವಾಗಿ ನಮ್ಮ ಕರ್ತವ್ಯ’ ಎಂದು ಹೇಳಿದ್ದಾರೆ.

ರೈಲಿನ ಮಾರ್ಗ ಬದಲಾವಣೆ ಕೆಲವರಿಗೆ ವರ, ಕೆಲವರಿಗೆ ಶಾಪ

ಜಲಪಾಇಗುಡಿ (ಪಶ್ಚಿಮ ಬಂಗಾಳ) (ಪಿಟಿಐ): ಅಸ್ಸಾಂನ ಲಮ್‌ಡಿಂಗ್ ರೈಲು ನಿಲ್ದಾಣದ ಮೂಲಕ ಹಾದು ಹೋಗುವ ರೈಲುಗಳಿಗೆ ಮಾಡಲಾಗುವ ಮಾರ್ಗದ ದಿಕ್ಕು ಬದಲಾವಣೆ ಪ್ರಕ್ರಿಯೆಯು ಸೋಮವಾರ ಅಪಘಾತಕ್ಕೀಡಾದ ಕಾಂಚನ್‌ಜುಂಗಾ ಎಕ್ಸ್‌ಪ್ರೆಸ್ ರೈಲಿನಲ್ಲಿದ್ದ ಕೆಲವರ ಜೀವ ಉಳಿಸಿದರೆ, ಇನ್ನೂ ಕೆಲವರ ಪ್ರಾಣಕ್ಕೆ ಕುತ್ತು ತಂದಿದೆ.

ಲಮ್‌ಡಿಂಗ್‌ನಲ್ಲಿ ರೈಲಿನ ಮಾರ್ಗದ ದಿಕ್ಕನ್ನು ಬದಲಾಯಿಸಲಾಗುತ್ತದೆ. ಅಂದರೆ, ಎದುರಿಗೆ ಇದ್ದ ಎಂಜಿನ್ ಅನ್ನು ಹಿಂಭಾಗಕ್ಕೆ ಜೋಡಿಸಲಾಗುತ್ತದೆ. ಈ ಸಂದರ್ಭದಲ್ಲಿ ಆರಂಭದಲ್ಲಿ ಮುಂಭಾಗದಲ್ಲಿದ್ದ ಬೋಗಿಗಳು ನಂತರ ಹಿಂಭಾಗದಲ್ಲಿರುತ್ತವೆ.

‘ರಂಗಾಪಾಣಿಯಲ್ಲಿ ಸಂಭವಿಸಿದ ಅಪಘಾತದಲ್ಲಿ ಹಾನಿಗೀಡಾದ ಬೋಗಿಗಳು ಲಮ್‌ಡಿಂಗ್‌ವರೆಗೂ ಮುಂಭಾಗದಲ್ಲಿದ್ದವು’ ಎಂದು ರೈಲಿನ ಸ್ಲೀಪರ್ ಕೋಚ್‌ನಲ್ಲಿದ್ದ ಪ್ರಯಾಣಿಕರೊಬ್ಬರು ಹೇಳಿದರು.

‘ಅಪಘಾತದಲ್ಲಿ ಪ್ರಯಾಣಿಕರಿದ್ದ ಸಾಮಾನ್ಯ ಬೋಗಿ, ಎರಡು ಪಾರ್ಸೆಲ್ ಬೋಗಿಗಳು ಮತ್ತು ಕಾವಲು ಸಿಬ್ಬಂದಿಯ ಬೋಗಿಗಳು ಹಾನಿಗೀಡಾಗಿದ್ದು, ರೈಲಿನ ಮಾರ್ಗ ಬದಲಾವಣೆಯ ನಂತರ ಈ ಬೋಗಿಗಳು ಹಿಂಭಾಗಕ್ಕೆ ಬಂದಿದ್ದವು. ನಾಲ್ಕು ಬೋಗಿಗಳ ಪೈಕಿ ಸಾಮಾನ್ಯ ಬೋಗಿಗೆ ಹೆಚ್ಚು ಹಾನಿಯಾಗಿದ್ದು, ಗೂಡ್ಸ್ ರೈಲು ಗುದ್ದಿದ ರಭಸಕ್ಕೆ ಬೋಗಿಯು ಪಕ್ಕದ ಹಳಿಗಳಿಗೆ ಅಪ್ಪಳಿಸಿದೆ’ ಎಂದು ಅವರು ವಿವರಿಸಿದರು.

ಮಾರ್ಗದಲ್ಲಿಲ್ಲ ‘ಕವಚ್’

ಜಯಾ ವರ್ಮಾ ಸಿನ್ಹಾ

ಕೋಲ್ಕತ್ತ (ಪಿಟಿಐ): ರೈಲುಗಳ ನಡುವೆ ಡಿಕ್ಕಿ ಆಗುವುದನ್ನು ತಪ್ಪಿಸುವ ‘ಕವಚ್’ ವ್ಯವಸ್ಥೆಯನ್ನು ಗುವಾಹಟಿ–ದೆಹಲಿ ರೈಲು ಮಾರ್ಗದಲ್ಲಿ ಅಳವಡಿಸಿಲ್ಲ ಎಂದು ರೈಲ್ವೆ ಮಂಡಳಿಯ ಅಧ್ಯಕ್ಷೆ ಜಯಾ ವರ್ಮಾ ಸಿನ್ಹಾ ಹೇಳಿದ್ದಾರೆ. ಕಾಂಚನ್‌ಜುಂಗಾ ಎಕ್ಸ್‌ಪ್ರೆಸ್ ರೈಲಿಗೆ ಸರಕು ಸಾಗಣೆ ರೈಲೊಂದು ಡಿಕ್ಕಿ ಹೊಡೆದಿರುವುದು ಇದೇ ಮಾರ್ಗದಲ್ಲಿ.

ಈ ಮಾರ್ಗದಲ್ಲಿ ಕವಚ್ ವ್ಯವಸ್ಥೆಯನ್ನು ಅಳವಡಿಸುವ ಯೋಜನೆ ಇದೆ ಎಂದು ಸಿನ್ಹಾ ಹೇಳಿದ್ದಾರೆ. ಸರಕು ಸಾಗಣೆ ರೈಲಿನ ಚಾಲಕ ಸಿಗ್ನಲ್‌ಗಳನ್ನು ಉಪೇಕ್ಷಿಸಿದ ಕಾರಣಕ್ಕೆ ಅಪಘಾತ ಉಂಟಾಗಿರಬಹುದು ಎಂದು ಅವರು ತಿಳಿಸಿದ್ದಾರೆ.

ಗಾರ್ಡ್ ಇರುವ ಬೋಗಿ ಹಾಗೂ ರೈಲಿನ ಪಾರ್ಸೆಲ್ ವ್ಯಾನ್‌ಗಳಿಗೆ ಹಾನಿ ಆಗಿದೆ. ಹೀಗಾಗಿ ಪ್ರಯಾಣಿಕರ ಕೋಚ್‌ಗೆ ಹೆಚ್ಚಿನ ಹಾನಿ ಉಂಟಾಗಿಲ್ಲ ಎಂದು ಅವರು ತಿಳಿಸಿದ್ದಾರೆ.

ಕವಚ್ ವ್ಯವಸ್ಥೆಯನ್ನು ಅಳವಡಿಸುವ ಕಾರ್ಯವನ್ನು ತ್ವರಿತವಾಗಿ ಮಾಡಲಾಗುತ್ತಿದೆ. ಈ ವ್ಯವಸ್ಥೆಯು ಒಟ್ಟು 1,500 ಕಿ.ಮೀ. ಉದ್ದದ ರೈಲು ಮಾರ್ಗದಲ್ಲಿ ಅಳವಡಿಕೆ ಆಗಿದೆ. ಈ ವರ್ಷದ ಅಂತ್ಯದ ವೇಳೆಗೆ ಇನ್ನೂ 3,000 ಕಿ.ಮೀ. ಉದ್ದದ ಮಾರ್ಗಕ್ಕೆ ಇದನ್ನು ಅಳವಡಿಸಲಾಗುತ್ತದೆ ಎಂದು ಅವರು ಹೇಳಿದ್ದಾರೆ.ಕವಚ್ ವ್ಯವಸ್ಥೆಯನ್ನು ಅಳವಡಿಸುವ ಕಾರ್ಯವು ವೇಗ ಪಡೆದುಕೊಳ್ಳಬೇಕು ಎಂದಾದರೆ ಅದನ್ನು ಪೂರೈಸುವ ಕಂಪನಿಗಳು ಉತ್ಪಾದನೆಯನ್ನು ಹೆಚ್ಚಿಸಬೇಕು ಎಂದಿದ್ದಾರೆ.

ಗೂಡ್ಸ್ ರೈಲು ಡಿಕ್ಕಿ: 9 ಸಾವು

ಒಂದನೇ ಪುಟದಿಂದ...

ದುರ್ಘಟನೆಗೆ ಕಾರಣ ಏನು ಎಂಬ ಬಗ್ಗೆ ರೈಲ್ವೆ ಸುರಕ್ಷತಾ ಆಯುಕ್ತರು ತನಿಖೆ ಆರಂಭಿಸಿದ್ದಾರೆ ಎಂದು ವೈಷ್ಣವ್ ತಿಳಿಸಿದ್ದಾರೆ. ಈ ಅಪಘಾತ ಸಂಭವಿಸಲು ಕಾರಣವಾದ ಸಂದರ್ಭ ಮತ್ತೊಮ್ಮೆ ಎದುರಾಗದಂತೆ ನೋಡಿಕೊಳ್ಳಲು ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದ್ದಾರೆ.

ದೇಶದ ಈಶಾನ್ಯ ಭಾಗವನ್ನು ಇತರ ಪ್ರದೇಶಗಳೊಂದಿಗೆ ಬೆಸೆಯುವ ರೈಲು ಮಾರ್ಗದಲ್ಲಿ ಸಂಚಾರವು ಸಹಜ ಸ್ಥಿತಿಗೆ ಬರುವಂತೆ ಮಾಡುವುದು ಮೊದಲ ಆದ್ಯತೆಯ ಕೆಲಸ ಎಂದು ಸಚಿವರು ಹೇಳಿದ್ದಾರೆ.

ರೈಲ್ವೆ ಅಧಿಕಾರಿಗಳು ನೀಡಿದ ಪ್ರಾಥಮಿಕ ಮಾಹಿತಿ ಅನ್ವಯ, ನಿಂತಿದ್ದ ಪ್ರಯಾಣಿಕ ರೈಲಿಗೆ ಸರಕು ಸಾಗಣೆ ರೈಲು ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ಸ್ವಯಂಚಾಲಿತ ಸಿಗ್ನಲಿಂಗ್ ವ್ಯವಸ್ಥೆಯು ವಿಫಲಗೊಂಡಿದ್ದ ಕಾರಣಕ್ಕೆ ಸರಕು ಸಾಗಣೆ ರೈಲಿಗೆ ಎಲ್ಲ ರೆಡ್ ಸಿಗ್ನಲ್‌ಗಳನ್ನು ದಾಟಿ ಹೋಗಲು ಅವಕಾಶ ನೀಡಲಾಗಿತ್ತು ಎಂಬುದು ರೈಲ್ವೆಯ ಆಂತರಿಕ ದಾಖಲೆಗಳಿಂದ ಗೊತ್ತಾಗಿದೆ.

ಎಲ್ಲ ರೆಡ್ ಸಿಗ್ನಲ್‌ಗಳನ್ನು ದಾಟಲು ಸರಕು ಸಾಗಣೆ ರೈಲಿನ ಚಾಲಕನಿಗೆ ರಾಣಿಪತ್ರ ನಿಲ್ದಾಣದ ಸ್ಟೇಷನ್ ಮಾಸ್ಟರ್ ಅನುಮತಿ ನೀಡಿದ್ದರು ಎಂದು ಮೂಲಗಳು ಹೇಳಿವೆ. ಕಾಂಚನ್‌ಜುಂಗಾ ಎಕ್ಸ್‌ಪ್ರೆಸ್ ರೈಲು ರಂಗಾಪಾಣಿ ನಿಲ್ದಾಣದಿಂದ ಬೆಳಿಗ್ಗೆ 8.27ಕ್ಕೆ ಹೊರಟು, ರಂಗಾಪಾಣಿ ಹಾಗೂ ಛತ್ತರ್ ಹಾಟ್ ನಡುವೆ ನಿಂತಿತ್ತು. ಅದು ಅಲ್ಲಿ ನಿಂತಿದ್ದಕ್ಕೆ ಕಾರಣ ಗೊತ್ತಾಗಿಲ್ಲ ಎಂದು ಮೂಲವೊಂದು ಹೇಳಿದೆ.

ಅಪಘಾತ ನಡೆದ ಸ್ಥಳದಲ್ಲಿ ಥಂಡಿ ಗಾಳಿ ಬೀಸುತ್ತಿರುವುದು ಪರಿಹಾರ ಕಾರ್ಯಗಳಿಗೆ ಅಡ್ಡಿ ಉಂಟುಮಾಡಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಈಗಿನ ದುರಂತವು ಒಡಿಶಾದಲ್ಲಿ ಒಂದು ವರ್ಷದ ಹಿಂದೆ ನಡೆದ ಕೋರಮಂಡಲ್ ಎಕ್ಸ್‌ಪ್ರೆಸ್ ದುರಂತದ ನೆನಪು ಮರುಕಳಿಸುವಂತೆ ಮಾಡಿದೆ. ಕೋರಮಂಡಲ್ ಎಕ್ಸ್‌ಪ್ರೆಸ್ ದುರಂತದಲ್ಲಿ ಅಂದಾಜು 300 ಮಂದಿ ಪ್ರಾಣ ಕಳೆದುಕೊಂಡಿದ್ದರು, ಒಂದು ಸಾವಿರಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು.

ಅಪಘಾತ ನಡೆದ ನಂತರದಲ್ಲಿ ಕಾಂಚನ್‌ಜುಂಗಾ ಎಕ್ಸ್‌ಪ್ರೆಸ್ ರೈಲು, ಹಾನಿ ಆಗಿರದ ಬೋಗಿಗಳಲ್ಲಿನ ಪ್ರಯಾಣಿಕರನ್ನು ಹೊತ್ತು ಕೋಲ್ಕತ್ತ ಕಡೆ ತೆರಳಿತು. ಅಪಘಾತದ ಕಾರಣದಿಂದಾಗಿ ಹಲವು ರೈಲುಗಳ ಸಂಚಾರಕ್ಕೆ ಅಡ್ಡಿ ಉಂಟಾಯಿತು. ಗುವಾಹಟಿ–ಬೆಂಗಳೂರು ಎಕ್ಸ್‌ಪ್ರೆಸ್ ಸೇರಿದಂತೆ ಕೆಲವು ರೈಲುಗಳ ಮಾರ್ಗಬದಲಿಸಲಾಯಿತು.

ಕಾಂಚನ್‌ಜುಂಗಾ ರೈಲಿನ ಬೋಗಿಯೊಂದರಲ್ಲಿ ಇದ್ದ ಪ್ರಯಾಣಿಕರೊಬ್ಬರು ತಮ್ಮ ಅನುಭವವನ್ನು ಹಂಚಿಕೊಂಡರು. ತಮ್ಮ ಬೋಗಿಯನ್ನು ಇದ್ದಕ್ಕಿದ್ದಂತೆ ನೂಕಿದಂತಾಯಿತು, ನಂತರ ಕರ್ಕಶ ಧ್ವನಿಯೊಂದಿಗೆ ಬೋಗಿಯು ನಿಂತಿತು ಎಂದು ಅವರು ತಿಳಿಸಿದ್ದಾರೆ.

> **ಪಶ್ಚಿಮ ಬಂಗಾಳದಲ್ಲಿ ನಡೆದ ರೈಲು ಅಪಘಾತವು ಖೇದಕರ. ಪ್ರೀತಿಪಾತ್ರರನ್ನು ಕಳೆದುಕೊಂಡವರಿಗೆ ಸಂತಾಪಗಳು. ರೈಲ್ವೆ ಅಧಿಕಾರಿಗಳ ಜೊತೆ ಮಾತನಾಡಿ, ಪರಿಸ್ಥಿತಿಯ ಮಾಹಿತಿ ಪಡೆದಿದ್ದೇನೆ**
> **ನರೇಂದ್ರ ಮೋದಿ,** ಪ್ರಧಾನಿ

‘ಅಪ್ಪ–ಅಮ್ಮ ಇಲ್ಲದಂತಾದ ರೈಲ್ವೆ’

ರೈಲ್ವೆಯು ಅಪ್ಪ–ಅಮ್ಮ ಇಲ್ಲದಂತಹ ಸ್ಥಿತಿ ತಲುಪಿದೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ದೂರಿದ್ದಾರೆ. ಮಮತಾ ಅವರು ಈ ಹಿಂದೆ ರೈಲ್ವೆ ಸಚಿವರಾಗಿಯೂ ಕೆಲಸ ಮಾಡಿದ್ದಾರೆ.

ರೈಲ್ವೆ ಇಲಾಖೆಯು ಸೇವಾ ಶುಲ್ಕವನ್ನು ಹೆಚ್ಚಿಸಲು ಮಾತ್ರ ಆಸಕ್ತಿ ತೋರುತ್ತಿದೆ, ಪ್ರಯಾಣಿಕರಿಗೆ ನೀಡುವ ಸೌಲಭ್ಯಗಳನ್ನು ಸುಧಾರಿಸಲು ಆಸಕ್ತಿ ತೋರುತ್ತಿಲ್ಲ ಎಂದು ಹೇಳಿದ್ದಾರೆ.

‘ರೈಲ್ವೆ ಸಚಿವಾಲಯ ಇದೆಯಾದರೂ, ಹಳೆಯ ವೈಭವ ಕಾಣುತ್ತಿಲ್ಲ. ಅಂದ ಹೆಚ್ಚಿಸುವ ಕೆಲಸ ಮಾತ್ರ ಮಾಡಲಾಗುತ್ತಿದೆ. ಆದರೆ ಅವರಿಗೆ ಪ್ರಯಾಣಿಕರಿಗೆ ಒದಗಿಸಬೇಕಿರುವ ಸೌಲಭ್ಯಗಳ ಬಗ್ಗೆ ಕಾಳಜಿ ಇಲ್ಲ’ ಎಂದು ಮಮತಾ ಆರೋಪಿಸಿದರು.

ವಯನಾಡ್‌ಗೆ ಪ್ರಿಯಾಂಕಾ

ಒಂದನೇ ಪುಟದಿಂದ...

ವಯನಾಡ್ ಸುರಕ್ಷಿತ ಕ್ಷೇತ್ರವಾಗಿದ್ದು, ಪ್ರಿಯಾಂಕಾ ಈ ಮೂಲಕ ಚುನಾವಣಾ ರಾಜಕಾರಣ ಪ್ರವೇಶಿಸಲಿ ಎಂದು ಪಕ್ಷ ತೀರ್ಮಾನಿಸಿತು.

ಆದರೆ, ರಾಹುಲ್ ಅವರು ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗುವರೇ ಎಂಬ ಬಗ್ಗೆ ಪಕ್ಷ ಯಾವುದೇ ತೀರ್ಮಾನ ಪ್ರಕಟಿಸಿಲ್ಲ. ರಾಹುಲ್ ಅವರೇ ಈ ಹೊಣೆ ಹೊರಬೇಕು ಎಂದ ಪಕ್ಷದ ಕಾರ್ಯಕಾರಿ ಸಮಿತಿ ನಿರ್ಣಯ ಅಂಗೀಕರಿಸಿತ್ತು.

‘ರಾಹುಲ್ ಅವರು ಎರಡು ಕ್ಷೇತ್ರಗಳಿಂದ ಆಯ್ಕೆಯಾಗಿದ್ದರು. ನಿಯಮದಂತೆ, ಒಂದು ಕ್ಷೇತ್ರಕ್ಕೆ ಮಂಗಳವಾರದ ಒಳಗೆ ರಾಜೀನಾಮೆ ನೀಡಬೇಕು. ಇಂದು ಸಭೆಯಲ್ಲಿ ಈ ವಿಷಯ ಚರ್ಚಿಸಲಾಯಿತು. ರಾಹುಲ್ ರಾಯ್‌ಬರೇಲಿ ಕ್ಷೇತ್ರ ಉಳಿಸಿಕೊಳ್ಳುವರು’ ಎಂದು ಖರ್ಗೆ ಸಭೆಯ ಬಳಿಕ ತಿಳಿಸಿದರು.

‘ವಯನಾಡ್ ಕ್ಷೇತ್ರದ ಜೊತೆ ನನಗೆ ಭಾವನಾತ್ಮಕ ಬಾಂಧವ್ಯವಿದೆ. ಈಗ ಪ್ರಿಯಾಂಕಾ ಆ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ. ನಾನೂ ನಿಯಮಿತವಾಗಿ ಭೇಟಿ ಕೊಡಲಿದ್ದೇನೆ. ಯಾವುದಾದರೂ ಒಂದು ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳುವುದು ನನಗೆ ಕಷ್ಟದ ಕೆಲಸವಾಗಿತ್ತು’ ಎಂದು ರಾಹುಲ್ ಹೇಳಿದರು.

ರಾಯ್‌ಬರೇಲಿ ಕ್ಷೇತ್ರ ಉಳಿಸಿಕೊಳ್ಳುವ ಮೂಲಕ ಕಾಂಗ್ರೆಸ್ ಪಕ್ಷವು ಉತ್ತರ ಭಾರತದಲ್ಲಿ ತನ್ನ ನೆಲೆಯನ್ನು ಭದ್ರಪಡಿಸಿಕೊಳ್ಳಲು ಒತ್ತು ನೀಡಿರುವುದು ಸ್ಪಷ್ಟವಾಗಿದೆ.

ಪ್ರಿಯಾಂಕಾ ಅವರು ಚುನಾವಣಾ ರಾಜಕಾರಣವನ್ನು ಪ್ರವೇಶಿಸಲು ದಕ್ಷಿಣ ಭಾರತದಲ್ಲಿ ಸುರಕ್ಷಿತ ಕ್ಷೇತ್ರವನ್ನು ಕಾಂಗ್ರೆಸ್ ಪಕ್ಷ ಅಂತಿಮಗೊಳಿಸಿದೆ. ಸಾರ್ವತ್ರಿಕ ಚುನಾವಣೆಯಲ್ಲಿಯೇ ಪ್ರಿಯಾಂಕಾ ಅವರು ರಾಯ್‌ಬರೇಲಿ ಅಥವಾ ಅಮೇಠಿಯಿಂದ ಸ್ಪರ್ಧಿಸುವರು ಎಂಬ ವದಂತಿ ದಟ್ಟವಾಗಿತ್ತು.

ದಕ್ಷಿಣ ಭಾರತದ ಕ್ಷೇತ್ರದಿಂದ ಪ್ರಿಯಾಂಕಾ ಅವರು ಚುನಾವಣಾ ರಾಜಕಾರಣ ಪ್ರವೇಶಿಸಿದಲ್ಲಿ ಗಾಂಧಿ ಕುಟುಂಬದ ಒಬ್ಬರು ದಕ್ಷಿಣ ಭಾರತ ಹಾಗೂ ಮತ್ತೊಬ್ಬರು ಉತ್ತರ ಭಾರತವನ್ನು ಪ್ರತಿನಿಧಿಸುವರು ಎಂಬ ಸಂದೇಶವನ್ನು ರವಾನಿಸಲು ಕಾಂಗ್ರೆಸ್ ಪಕ್ಷಕ್ಕೆ ನೆರವಾಗಲಿದೆ ಎನ್ನಲಾಗಿದೆ.

ಬಿಜೆಪಿ ಉಸ್ತುವಾರಿ, ಸಹ ಉಸ್ತುವಾರಿಗಳ ನೇಮಕ

ಜೆ.ಪಿ.ನಡ್ಡಾ

ವಿಧಾನಸಭಾ ಚುನಾವಣೆ

ನವದೆಹಲಿ(ಪಿಟಿಐ): ಮಹಾರಾಷ್ಟ್ರ, ಹರಿಯಾಣ, ಜಾರ್ಖಂಡ್, ಜಮ್ಮು ಮತ್ತು ಕಾಶ್ಮೀರ ವಿಧಾನಸಭೆ ಚುನಾವಣೆಗೆ ಈಗಿನಿಂದಲೇ ಸಿದ್ಧತೆ ನಡೆಸಲು ಮುಂದಾಗಿರುವ ಬಿಜೆಪಿ, ಈ ಸಂಬಂಧ ಚುನಾವಣಾ ಉಸ್ತುವಾರಿಗಳು ಮತ್ತು ಸಹ ಉಸ್ತುವಾರಿಗಳನ್ನು ನೇಮಿಸಿದೆ.

ಬಿಜೆಪಿಯ ಹಿರಿಯ ನಾಯಕ ಮತ್ತು ಕೇಂದ್ರ ಸಚಿವ ಭೂಪೇಂದರ್ ಯಾದವ್ ಅವರನ್ನು ಮಹಾರಾಷ್ಟ್ರದ ಉಸ್ತುವಾರಿಯನ್ನಾಗಿ ನೇಮಿಸಲಾಗಿದ್ದು, ಮತ್ತೊಬ್ಬ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಅವರನ್ನು ಸಹ ಉಸ್ತುವಾರಿಯನ್ನಾಗಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ನೇಮಿಸಿದ್ದಾರೆ ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.

ಹರಿಯಾಣದ ಉಸ್ತುವಾರಿಯಾಗಿ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್, ಸಹ ಉಸ್ತುವಾರಿಯಾಗಿ ತ್ರಿಪುರಾದ ಮಾಜಿ ಮುಖ್ಯಮಂತ್ರಿ ಬಿಪ್ಲವ್ ಕುಮಾರ್ ದೇವ್ ಅವರನ್ನು ನೇಮಿಸಲಾಗಿದೆ.

ಕೇಂದ್ರ ಸಚಿವ ಶಿವರಾಜ್‌ಸಿಂಗ್ ಚೌಹಾಣ್ ಅವರನ್ನು ಜಾರ್ಖಂಡ್‌ನ ಉಸ್ತುವಾರಿಯಾಗಿ ನೇಮಿಸಿದ್ದರೆ, ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಸಹ ಉಸ್ತುವಾರಿಯಾಗಿದ್ದಾರೆ. ಜಮ್ಮು ಮತ್ತು ಕಾಶ್ಮೀರದ ಚುನಾವಣಾ ಉಸ್ತುವಾರಿಯಾಗಿ ಕೇಂದ್ರ ಸಚಿವ ಜಿ. ಕಿಶನ್ ರೆಡ್ಡಿ ಅವರನ್ನು ನೇಮಿಸಲಾಗಿದೆ ಎಂದು ತಿಳಿಸಿದೆ.

ಈ ವರ್ಷಾಂತ್ಯದಲ್ಲಿ ಮಹಾರಾಷ್ಟ್ರ, ಹರಿಯಾಣ ಮತ್ತು ಜಾರ್ಖಂಡ್‌ನ ವಿಧಾನಸಭೆಗೆ ಚುನಾವಣೆ ನಡೆಯಲಿದೆ. ಸುಪ್ರೀಂ ಕೋರ್ಟ್ ಸೂಚನೆಯಂತೆ ಚುನಾವಣಾ ಆಯೋಗವು ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಗೆ ಸೆಪ್ಟೆಂಬರ್ ಒಳಗೆ ಚುನಾವಣೆ ನಡೆಸುವ ಸಾಧ್ಯತೆ ಇದೆ.

2023ರಲ್ಲಿ ಅಣ್ವಸ್ತ್ರಗಳ ಆಧುನೀಕರಣ, ಹೊಸ ಶಸ್ತ್ರಾಸ್ತ್ರ ವ್ಯವಸ್ಥೆ ಬಗ್ಗೆ ‘ಸಿಪ್ರಿ’ ವಿಶ್ಲೇಷಣೆ

ಭಾರತ ಸೇರಿ 9 ರಾಷ್ಟ್ರಗಳ ಅಣ್ವಸ್ತ್ರ ಶಕ್ತಿ ಮತ್ತಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಭಾರತ ಸೇರಿದಂತೆ ಅಣ್ವಸ್ತ್ರಗಳನ್ನು ಹೊಂದಿರುವ ಜಗತ್ತಿನ ಒಂಬತ್ತು ರಾಷ್ಟ್ರಗಳು 2023ರಲ್ಲಿ ಅಣ್ವಸ್ತ್ರಗಳನ್ನು ಆಧುನೀಕರಣಗೊಳಿಸುವುದರ ಜೊತೆಗೆ ಹೊಸ ಪರಮಾಣು ಸಾಮರ್ಥ್ಯದ ಶಸ್ತ್ರಾಸ್ತ್ರ ವ್ಯವಸ್ಥೆಗಳನ್ನು ನಿಯೋಜಿಸಿವೆ ಎಂದು ಸ್ವೀಡನ್‌ನ ಚಿಂತಕರ ಚಾವಡಿ ಸಂಸ್ಥೆ ‘ಸಿಪ್ರಿ’ (ಸ್ಟಾಕ್‌ಹೋಮ್ ಇಂಟರ್‌ನ್ಯಾಷನಲ್ ಪೀಸ್ ರೀಸರ್ಚ್ ಇನ್‌ಸ್ಟಿಟ್ಯೂಟ್) ಸೋಮವಾರ ಹೇಳಿದೆ.

ಭಾರತ ಮಾತ್ರವಲ್ಲದೆ, ಅಮೆರಿಕ, ರಷ್ಯಾ, ಫ್ರಾನ್ಸ್, ಚೀನಾ ಮತ್ತು ಪಾಕಿಸ್ತಾನ, ದಕ್ಷಿಣ ಕೊರಿಯಾ ಮತ್ತು ಇಸ್ರೇಲ್ ದೇಶಗಳನ್ನು ‘ಸಿಪ್ರಿ’ ಹೆಸರಿಸಿದೆ.

‘2023ರ ಜನವರಿಯಲ್ಲಿ ಚೀನಾವು 410 ಅಣ್ವಸ್ತ್ರ ಸಿಡಿತಲೆಗಳನ್ನು ಹೊಂದಿತ್ತು. 2024ರ ಜನವರಿ ವೇಳೆಗೆ ಇದು 500ಕ್ಕೆ ಹೆಚ್ಚಾಗಿದೆ. ಈ ಸಂಖ್ಯೆ ಇನ್ನಷ್ಟು ಹೆಚ್ಚಾಗುವ ನಿರೀಕ್ಷೆ ಇದೆ’ ಎಂದು ಸಂಸ್ಥೆಯು ತನ್ನ ವಿಶ್ಲೇಷಣಾತ್ಮಕ ವರದಿಯಲ್ಲಿ ಹೇಳಿದೆ.

ಜಗತ್ತಿನಾದ್ಯಂತ ಸುಮಾರು 2,100ರಷ್ಟು ಅಣ್ವಸ್ತ್ರ ಸಿಡಿತಲೆಗಳನ್ನು ಗುರಿ ನಿರ್ದೇಶಿತ (ಬ್ಯಾಲಿಸ್ಟಿಕ್) ಕ್ಷಿಪಣಿಗಳಲ್ಲಿ ಅಳವಡಿಸಿ ಕಾರ್ಯಾಚರಣೆಗೆ ಸನ್ನದ್ಧ ಸ್ಥಿತಿಯಲ್ಲಿ ಇಡಲಾಗಿದೆ. ಈ ಪೈಕಿ ಬಹುತೇಕ ಎಲ್ಲ ಅಣ್ವಸ್ತ್ರಗಳು ರಷ್ಯಾ ಅಥವಾ ಅಮೆರಿಕಕ್ಕೆ ಸೇರಿವೆ ಎಂದು ‘ಸಿಪ್ರಿ’ ಹೇಳಿದೆ.

‘ಇದೇ ಮೊದಲ ಬಾರಿಗೆ ಚೀನಾವು ಪರಮಾಣು ಅಸ್ತ್ರಗಳನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಿದೆ ಎಂದು ನಂಬಲಾಗಿದೆ’ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

‘ಈ ವರ್ಷದ ಜನವರಿ ವೇಳೆಗೆ ಜಗತ್ತಿನ ಶಸ್ತ್ರಾಸ್ತ್ರಗಳ ಕೋಠಿಯಲ್ಲಿ 12,121 ಪರಮಾಣು ಸಿಡಿತಲೆಗಳಿವೆ ಎಂದು ಅಂದಾಜಿಸಲಾಗಿದ್ದು, ಈ ಪೈಕಿ 9,585 ಅಣ್ವಸ್ತ್ರಗಳು ಸೇನಾ ಸಂಗ್ರಹಾಗಾರಗಳಲ್ಲಿವೆ’ ಎಂದು ವರದಿ ಹೇಳಿದೆ.

ಅಂದಾಜು 3,904 ಸಿಡಿತಲೆಗಳನ್ನು ಗುರಿ ನಿರ್ದೇಶಿತ ಕ್ಷಿಪಣಿಗಳು ಮತ್ತು ಯುದ್ಧವಿಮಾನಗಳಲ್ಲಿ ಅಳವಡಿಸಲಾಗಿದೆ. ಉಳಿದವುಗಳು ಕೇಂದ್ರ ಸಂಗ್ರಹಾಗಾರಗಳಲ್ಲಿವೆ. 2023ರ ಜನವರಿಗೆ ಹೋಲಿಸಿದರೆ, ವರ್ಷದ ಅವಧಿಯಲ್ಲಿ ಕ್ಷಿಪಣಿ ಮತ್ತು ವಿಮಾನಗಳಲ್ಲಿ ಅಳವಡಿಸಿರುವ ಪರಮಾಣು ಬಾಂಬುಗಳ ಸಂಖ್ಯೆ 60 ಜಾಸ್ತಿಯಾಗಿದೆ.

‘ಭಾರತ, ಪಾಕಿಸ್ತಾನ ಮತ್ತು ಉತ್ತರ ಕೊರಿಯಾಗಳು ಗುರಿನಿರ್ದೇಶಿತ ಕ್ಷಿಪಣಿಗಳಲ್ಲಿ ಒಂದಕ್ಕಿಂತ ಹೆಚ್ಚು ಸಿಡಿತಲೆಗಳನ್ನು ಹೊತ್ತೊಯ್ಯುವ ಸಾಮರ್ಥ್ಯವನ್ನು ಹೊಂದಲು ಪ್ರಯತ್ನಿಸುತ್ತಿವೆ. ರಷ್ಯಾ, ಫ್ರಾನ್ಸ್, ಇಂಗ್ಲೆಂಡ್, ಅಮೆರಿಕ ದೇಶಗಳು ಈಗಾಗಲೇ ಈ ತಂತ್ರಜ್ಞಾನ ಹೊಂದಿವೆ. ಚೀನಾ ಇತ್ತೀಚೆಗೆ ಈ ಸಾಮರ್ಥ್ಯವನ್ನು ತನ್ನದಾಗಿಸಿಕೊಂಡಿದೆ’ ಎಂದು ‘ಸಿಪ್ರಿ’ ಹೇಳಿದೆ.

ಜಗತ್ತಿನಲ್ಲಿರುವ ಒಟ್ಟು ಅಣ್ವಸ್ತ್ರಗಳಲ್ಲಿ ರಷ್ಯಾ ಮತ್ತು ಅಮೆರಿಕಗಳು ಶೇ 90ರಷ್ಟು ಅಸ್ತ್ರಗಳನ್ನು ಹೊಂದಿವೆ.

‘2023ರಲ್ಲಿ ಎರಡೂ ರಾಷ್ಟ್ರಗಳ ಸೇನಾ ಸಂಗ್ರಹದಲ್ಲಿರುವ ಅಣ್ವಸ್ತ್ರಗಳ ಸಂಖ್ಯೆ ಸ್ಥಿರವಾಗಿದ್ದಂತೆ ಕಾಣುತ್ತಿದೆ. ಹಾಗಿದ್ದರೂ, 2023ರ ಜನವರಿಗೆ ಹೋಲಿಸಿದರೆ, ವರ್ಷದ ಅವಧಿಯಲ್ಲಿ ರಷ್ಯಾವು 36 ಹೆಚ್ಚು ಸಿಡಿತಲೆಗಳನ್ನು ಕಾರ್ಯಾಚರಣೆ ನಡೆಸುವ ಪಡೆಗಳಿಗೆ ಒದಗಿಸಿದೆ ಎಂದು ಅಂದಾಜಿಸಲಾಗಿದೆ’ ಎಂದು ವರದಿ ಹೇಳಿದೆ.

ಅಣ್ವಸ್ತ್ರ ಸಿಡಿತಲೆ ಹೊತ್ತೊಯ್ಯಬಲ್ಲ ಸಾಮರ್ಥ್ಯದ ಅಗ್ನಿ–5 ಕ್ಷಿಪಣಿ

ಭಾರತದ ಬಳಿ 172 ಅಣ್ವಸ್ತ್ರ

ಪಾಕಿಸ್ತಾನಕ್ಕೆ ಹೋಲಿಸಿದರೆ ಭಾರತದ ಬಳಿ ಎರಡು ಪರಮಾಣು ಬಾಂಬ್‌ಗಳು ಹೆಚ್ಚಿವೆ. ಭಾರತದ ಬಳಿ 172 ಅಣ್ವಸ್ತ್ರ ಸಿಡಿತಲೆಗಳಿದ್ದರೆ, ಪಾಕಿಸ್ತಾನವು 170 ಸಿಡಿತಲೆಗಳನ್ನು ಹೊಂದಿದೆ ಎಂದು ‘ಸಿಪ್ರಿ’ ಹೇಳಿದೆ.

2023ರಲ್ಲಿ ಭಾರತವು ತನ್ನ ಅಣ್ವಸ್ತ್ರ ಸಾಮರ್ಥ್ಯವನ್ನು ಸ್ವಲ್ಪ ಪ್ರಮಾಣದಲ್ಲಿ ಹೆಚ್ಚಿಸಿದೆ. ಈ ವರ್ಷ ಭಾರತ ಮತ್ತು ಪಾಕಿಸ್ತಾನ ಅಣ್ವಸ್ತ್ರಗಳನ್ನು ಹೊತ್ತೊಯ್ಯುವ ಹೊಸ ಕ್ಷಿಪಣಿ ವ್ಯವಸ್ಥೆಗಳನ್ನು ಅಭಿವೃದ್ಧಿ ಪಡಿಸುವ ಕಾರ್ಯ ಮುಂದುವರಿಸಿದ್ದವು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

’ಭಾರತವು ಪಾಕಿಸ್ತಾನವನ್ನು ಕೇಂದ್ರವಾಗಿಸಿಕೊಂಡು ಅಣ್ವಸ್ತ್ರ ನಿರೋಧಕ ವ್ಯವಸ್ಥೆ ಅಭಿವೃದ್ಧಿ ಪಡಿಸಿರುವುದರ ಜೊತೆಗೆ, ಚೀನಾದಾದ್ಯಂತ ಇರುವ ಗುರಿಗಳನ್ನು ತಲುಪುವುದೂ ಸೇರಿದಂತೆ ದೂರಗಾಮಿ ಸಾಮರ್ಥ್ಯದ ಅಣ್ವಸ್ತ್ರ ಕ್ಷಿಪಣಿ ತಂತ್ರಜ್ಞಾನ ಅಭಿವೃದ್ಧಿಗೆ ಒತ್ತು ನೀಡುತ್ತಿದೆ’ ಎಂದು ‘ಸಿಪ್ರಿ’ ವಿಶ್ಲೇಷಿಸಿದೆ.

ಐವರು ನಕ್ಸಲರ ಹತ್ಯೆ

ಚಾಯ್‌ಬಾಸಾ (ಪಿಟಿಐ): ಜಾರ್ಖಂಡ್‌ನ ಪಶ್ಚಿಮ ಸಿಂಹಭೂಮ್ ಜಿಲ್ಲೆಯಲ್ಲಿ ಸೋಮವಾರ ಮುಂಜಾನೆ ಪೊಲೀಸರು ನಡೆಸಿದ ಎನ್‌ಕೌಂಟರ್‌ನಲ್ಲಿ ಮಹಿಳೆ ಸೇರಿದಂತೆ ಐವರು ನಕ್ಸಲರು ಹತರಾಗಿದ್ದಾರೆ.

ಟೊಂಟೊ ಮತ್ತು ಗೋಯಿಲ್ಕೆರಾ ಪ್ರದೇಶದಲ್ಲಿ ನಕ್ಸಲರು ಮತ್ತು ಪೊಲೀಸರ ನಡುವೆ ಗುಂಡಿನ ಚಕಮಕಿ ನಡೆದಿದೆ. ಈ ವೇಳೆ ನಾಲ್ವರು ನಕ್ಸಲರು ಹತರಾಗಿದ್ದರೆ, ಮಹಿಳೆ ಸೇರಿದಂತೆ ಇಬ್ಬರು ನಕ್ಸಲರನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸ್ಥಳದಲ್ಲಿ ಶೋಧ ಕಾರ್ಯಾಚರಣೆ ಮುಂದುವರಿದಿದೆ. ಹತರಾದ ನಾಲ್ವರು ನಕ್ಸಲರ ಪೈಕಿ ನಕ್ಸಲ್ ಸಂಘಟನೆಯ ವಲಯ ಕಮಾಂಡರ್, ಉಪ ವಲಯ ಕಮಾಂಡರ್, ಸ್ಥಳೀಯ ಕಮಾಂಡರ್ ಮತ್ತು ಕೇಡರ್ ಸೇರಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಸುಭಾಷಿತ

ಮಹತ್ವದ ಕಾರ್ಯ ಮಾಡಲು ಇರುವ ಏಕೈಕ ಮಾರ್ಗವೆಂದರೆ, ನೀವು ಮಾಡುವ ಕೆಲಸವನ್ನು ಪ್ರೀತಿಸುವುದು.

-ಸ್ಟೀವ್ ಜಾಬ್ಸ್

ಸ್ವಾಯತ್ತ ಸಾಂಸ್ಕೃತಿಕ ಸಂಸ್ಥೆಗಳು ಆಳುವ ಪಕ್ಷಗಳ ಮುಖವಾಣಿ ಆಗದಿರಲಿ

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಕಚೇರಿಯಲ್ಲಿ ನಡೆದ ಸಭೆಯೊಂದರಲ್ಲಿ ಸಾಂಸ್ಕೃತಿಕ ಅಕಾಡೆಮಿ ಹಾಗೂ ಪ್ರಾಧಿಕಾರಗಳ ಅಧ್ಯಕ್ಷರು ಭಾಗವಹಿಸಿರುವುದು ಸಮಾಜಕ್ಕೆ ತಪ್ಪು ಸಂದೇಶ ನೀಡುವ ನಡೆಯಾಗಿದೆ. ಸ್ವಾಯತ್ತ ಸಂಸ್ಥೆಗಳನ್ನು ಪ್ರತಿನಿಧಿಸುವವರು ಪಕ್ಷವೊಂದರ ಮುಖವಾಣಿಗಳಂತೆ ಗುರುತಿಸಿಕೊಳ್ಳುವುದು ಸರಿಯಲ್ಲ. ಕೆಪಿಸಿಸಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಭಾಗವಹಿಸಿದ್ದವರನ್ನು ಉದ್ದೇಶಿಸಿ, 'ಈ ಹುದ್ದೆಗಳು ರಾಜಕಾರಣಕ್ಕೆ ಮೆಟ್ಟಿಲುಗಳಾಗಿದ್ದು, ಕೈ ಮತ್ತು ಬಾಯಿ ಶುದ್ಧವಾಗಿರಬೇಕು' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಿವಿಮಾತು ಹೇಳಿರುವುದಾಗಿ ವರದಿಯಾಗಿದೆ. ನಿಗಮ-ಮಂಡಳಿ, ಅಕಾಡೆಮಿ ಹಾಗೂ ಪ್ರಾಧಿಕಾರಗಳ ಅಧ್ಯಕ್ಷರು ಚುನಾವಣೆಗಳಲ್ಲಿ ಕಾಂಗ್ರೆಸ್ ಪರವಾಗಿ ಸಕ್ರಿಯ ಪಾತ್ರ ವಹಿಸಬೇಕಾದ ಅಗತ್ಯದ ಬಗ್ಗೆಯೂ ಮಾತನಾಡಿದ್ದಾರೆ ಎನ್ನಲಾಗಿದೆ. ಈ ಮಾತುಗಳಿಗೆ ಸ್ಪಂದಿಸುವವರಂತೆ, 'ಕಾಂಗ್ರೆಸ್ ಪಕ್ಷವನ್ನು ಸರಿದಾರಿಗೆ ತರುವ ಜವಾಬ್ದಾರಿ ನಮ್ಮಂತಹವರ ಮೇಲಿದ್ದು, ನಾವು ಕೊಳೆಗೇರಿಗೂ ಕಾಂಗ್ರೆಸ್ ಕಚೇರಿಗೂ ಹೋಗಲು ತಯಾರಿದ್ದೇವೆ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಅವರು ಸಭೆಯಲ್ಲಿ ಭಾಗವಹಿಸಿದ್ದನ್ನು ಸಮರ್ಥಿಸಿಕೊಂಡಿದ್ದಾರೆ. ಅವರು ಕೊಳೆಗೇರಿಗೆ ಹೋಗುವುದಕ್ಕೆ ಯಾರ ಅಡ್ಡಿಯೂ ಇಲ್ಲ. ಆದರೆ, ಅಕಾಡೆಮಿ ಅಧ್ಯಕ್ಷರಾಗಿ ರಾಜಕೀಯ ಪಕ್ಷವೊಂದರ ಕಚೇರಿಗೆ ಹೋಗುವುದು ಅವರು ಪ್ರತಿನಿಧಿಸುವ ಸ್ಥಾನದ ವಿಶ್ವಾಸಾರ್ಹತೆಗೆ, ಘನತೆಗೆ ತಕ್ಕುದಾದ ನಡವಳಿಕೆಯಲ್ಲ. ಅಕಾಡೆಮಿಗಳ ಅಧ್ಯಕ್ಷರು ತಮ್ಮ ಪಾಲಿನ ಕರ್ತವ್ಯವನ್ನು ಅಚ್ಚುಕಟ್ಟಾಗಿ ಮಾಡಿದರೆ ಸಾಕು. ಆಡಳಿತ ಪಕ್ಷವನ್ನು ಸರಿದಾರಿಗೆ ತರುವ ಕೆಲಸ ಆ ಪಕ್ಷಕ್ಕೆ ಸಂಬಂಧಿಸಿದವರದೇ ವಿನಾ ಸಾಂಸ್ಕೃತಿಕ ಸಂಸ್ಥೆಗಳ ಪದಾಧಿಕಾರಿಗಳದ್ದಲ್ಲ. ಪಕ್ಷದ ಚಟುವಟಿಕೆಗಳಲ್ಲಿ ಭಾಗವಹಿಸುವ ಉತ್ಸಾಹವಿರುವ ಅಕಾಡೆಮಿ, ಪ್ರಾಧಿಕಾರಗಳ ಪದಾಧಿಕಾರಿಗಳು ತಮ್ಮ ಸ್ಥಾನಗಳನ್ನು ಬಿಟ್ಟುಕೊಟ್ಟು ಸಕ್ರಿಯ ರಾಜಕೀಯದಲ್ಲಿ ಭಾಗಿಯಾಗುವುದಕ್ಕೆ ಯಾರ ಅಡ್ಡಿಯೂ ಇಲ್ಲ. ರಾಜಕೀಯ ಪಕ್ಷದ ಕಚೇರಿಯಲ್ಲಿ ಹಿಂದೆಂದೂ ಇಂಥ ಸಭೆ ನಡೆದಿರಲಿಲ್ಲ. ಅಕಾಡೆಮಿ ಮತ್ತು ಪ್ರಾಧಿಕಾರದ ಅಧ್ಯಕ್ಷರು ಆಡಳಿತ ಪಕ್ಷದ ಕಚೇರಿಯಲ್ಲಿ ಮಕ್ಕಳಂತೆ ರಾಜಕಾರಣಿಗಳಿಂದ ಪಾಠ ಹೇಳಿಸಿಕೊಳ್ಳುವಂಥ ಸ್ಥಿತಿಯೂ ಕರ್ನಾಟಕಕ್ಕೆ ಹೊಸತು. ಅಕಾಡೆಮಿ, ಪ್ರಾಧಿಕಾರಗಳ ಅಧ್ಯಕ್ಷರ ಸಭೆ ನಡೆಸುವ ಅಗತ್ಯ ಸರ್ಕಾರಕ್ಕಿದ್ದರೆ, ಆ ಸಭೆಯನ್ನು ವಿಧಾನಸೌಧದಲ್ಲಿ ನಡೆಸಬಹುದಿತ್ತು. ಅಕಾಡೆಮಿಗಳ ಕಾರ್ಯವ್ಯಾಪ್ತಿಗೆ ಸಂಬಂಧಿಸಿದ ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವರ ಅನುಪಸ್ಥಿತಿಯಲ್ಲಿ ನಡೆದಿರುವ ಸಭೆಯು ರಾಜಕೀಯ ಬಣ್ಣಗಳನ್ನು ಪಡೆದುಕೊಂಡಿರುವುದು ಸಹಜವಾಗಿದೆ.

ಸಾಂಸ್ಕೃತಿಕ ವಲಯದಲ್ಲಿ ಹಸ್ತಕ್ಷೇಪ ಮಾಡುವುದನ್ನು ಸರ್ಕಾರ ನಿಲ್ಲಿಸಲಿ. ಅಕಾಡೆಮಿ–ಪ್ರಾಧಿಕಾರಗಳ ಪದಾಧಿಕಾರಿಗಳು ಆಡಳಿತ ಪಕ್ಷದ ಓಲೈಕೆಯಿಂದ ದೂರವಿರಲಿ

ಅಕಾಡೆಮಿ ಹಾಗೂ ಪ್ರಾಧಿಕಾರಗಳು ಸ್ವಾಯತ್ತ ಸಂಸ್ಥೆಗಳೆನ್ನುವ ಅರಿವನ್ನು ಮರೆತು, ಸರ್ಕಾರವನ್ನು ಓಲೈಸುವ ನಡವಳಿಕೆಯನ್ನು ಒಪ್ಪುವುದು ಸಾಧ್ಯವಿಲ್ಲ. ಸಾಹಿತಿಯೊಬ್ಬ ರಾಜಕೀಯ ಒಲವು ನಿಲುವು ಹೊಂದಿರುವುದು ತಪ್ಪೇನೂ ಅಲ್ಲ. ಆದರೆ, ಸಾರ್ವಜನಿಕ ಸಂಸ್ಥೆಗಳನ್ನು ಪ್ರತಿನಿಧಿಸುವ ಅವಕಾಶ ದೊರೆತ ಸಂದರ್ಭದಲ್ಲಿ ಲೇಖಕ ತನ್ನ ವೈಯಕ್ತಿಕ ಭಾವನೆಗಳನ್ನು ನಿಯಂತ್ರಿಸಿಕೊಳ್ಳಬೇಕಾಗುತ್ತದೆ. ಅಕಾಡೆಮಿಗಳನ್ನು ಪ್ರತಿನಿಧಿಸುವವರು ಬದ್ಧರಾಗಿ ಇರಬೇಕಾದುದು ಜನರಿಗೇ ಹೊರತು ಜನಪ್ರತಿನಿಧಿಗಳಿಗಲ್ಲ. ಸ್ವಾಯತ್ತ ಸ್ಥಾನಮಾನ ಹೊಂದಿರುವ ಸಂಸ್ಥೆಗಳ ಘನತೆಯನ್ನು ಕುಗ್ಗಿಸುವ ಕೆಲಸವನ್ನು ಸರ್ಕಾರವೂ ಮಾಡಬಾರದು, ಆ ಸಂಸ್ಥೆಗಳನ್ನು ಪ್ರತಿನಿಧಿಸುವವರೂ ಮಾಡಬಾರದು. ಸಂಘಪರಿವಾರದ ಚಿಂತನೆ ಇರುವವರನ್ನು ಅಕಾಡೆಮಿ, ಪ್ರಾಧಿಕಾರಗಳ ಅಧ್ಯಕ್ಷ, ಸದಸ್ಯ ಸ್ಥಾನಕ್ಕೆ ನೇಮಕ ಮಾಡಲಾಗಿದೆ ಎನ್ನುವ ದೂರುಗಳನ್ನು ಆಧರಿಸಿ, ಸರ್ಕಾರ ಕೆಲವು ನೇಮಕಗಳನ್ನು ರದ್ದುಪಡಿಸಿ ಆ ಸ್ಥಾನಗಳಿಗೆ ಬೇರೆಯವರನ್ನು ನೇಮಿಸಿದ್ದೂ ಸರಿಯಾದ ನಡೆಯಲ್ಲ. ಸಂಘ ಪರಿವಾರದ ಚಿಂತನೆಗಳನ್ನು ಹೊಂದಿರುವವರನ್ನು ಸಾಂಸ್ಕೃತಿಕ ಸಂಸ್ಥೆಗಳಿಂದ ದೂರ ಇಡಬೇಕೆನ್ನುವುದಾದರೆ, ಈಗಿನ ಅಕಾಡೆಮಿ–ಪ್ರಾಧಿಕಾರಗಳ ಪದಾಧಿಕಾರಿಗಳನ್ನು ಆಡಳಿತ ಪಕ್ಷಕ್ಕೆ ಸೇರಿದವರು ಎನ್ನಬೇಕಾಗುತ್ತದೆ. ಈ ಬಗೆಯ ರಾಜಕೀಯ ನಿಲುವುಗಳನ್ನು ಸಾಂಸ್ಕೃತಿಕ ವಲಯದಲ್ಲಿ ಹೇರುವ ಪ್ರಯತ್ನಗಳು ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಸಲ್ಲದು. ಇನ್ನು ಮುಂದಾದರೂ ಸಾಂಸ್ಕೃತಿಕ ವಲಯದಲ್ಲಿ ಹಸ್ತಕ್ಷೇಪ ಮಾಡುವುದನ್ನು ಸರ್ಕಾರ ನಿಲ್ಲಿಸಲಿ. ಹಾಗೆಯೇ, ಅಕಾಡೆಮಿ–ಪ್ರಾಧಿಕಾರಗಳ ಪದಾಧಿಕಾರಿಗಳು ಆಡಳಿತ ಪಕ್ಷದ ಓಲೈಕೆಯಿಂದ ದೂರವಿರಲಿ. ಪದಾಧಿಕಾರಿಗಳ ನೇಮಕ ನನೆಗುದಿಗೆ ಬಿದ್ದು, ಸುಮಾರು ಎರಡು ವರ್ಷಗಳಿಂದ ಅಕಾಡೆಮಿ ಮತ್ತು ಪ್ರಾಧಿಕಾರಗಳ ಕಾರ್ಯಚಟುವಟಿಕೆಗಳು ಸ್ಥಗಿತಗೊಂಡಿದ್ದವು. ಆ ಚಟುವಟಿಕೆಗಳಿಗೆ ಮರುಜೀವ ನೀಡುವ ಮೂಲಕ ಸಾಂಸ್ಕೃತಿಕ ನಿರ್ವಾತವನ್ನು ಬಗೆಹರಿಸುವ ಗುರುತರ ಜವಾಬ್ದಾರಿಯನ್ನು ನಿರ್ವಹಿಸಬೇಕಾದವರು ಆಡಳಿತ ಪಕ್ಷದ ಆಗುಹೋಗುಗಳ ಬಗ್ಗೆ ತಲೆಕೆಡಿಸಿಕೊಳ್ಳುವುದನ್ನು ಯಾವ ಕಾರಣಕ್ಕೂ ಒಪ್ಪಲಾಗದು.

ಅಮೆರಿಕದ ಕ್ರಿಕೆಟ್ ಅಂಗಳದಲ್ಲಿ ಭಾರತೀಯ ಪ್ರತಿಭೆಗಳ ಪಾರಮ್ಯ

ಸಪ್ತ ಸಾಗರದಾಚೆ ಕೈಗೂಡಿದ ಕನಸು

ವಿಶ್ಲೇಷಣೆ

ಗಿರೀಶ ದೊಡ್ಡಮನಿ

ಸೌರಭ್ ನೇತ್ರಾವಳ್ಕರ್, ನಾಸ್ತುಷ್ ಕೆಂಜಿಗೆ, ಮೊನಾಂಕ್ ಪಟೇಲ್, ಹರ್ಮಿತ್ ಸಿಂಗ್, ಮಿಲಿಂದ್ ಕುಮಾರ್, ನಿತೀಶ್ ಕುಮಾರ್...

ಹದಿನೈದು ದಿನಗಳಿಂದ ಕ್ರಿಕೆಟ್ ವಲಯದಲ್ಲಿ ಪ್ರತಿಧ್ವನಿಸುತ್ತಿರುವ ಹೆಸರುಗಳು ಇವು. ಸದ್ಯ ಅಮೆರಿಕ -ವೆಸ್ಟ್ ಇಂಡೀಸ್ ಜಂಟಿ ಆತಿಥ್ಯದಲ್ಲಿ ನಡೆಯುತ್ತಿರುವ ಐಸಿಸಿ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಗಮನಸೆಳೆದಿರುವ ಆಟಗಾರರು ಇವರು. ಭಾರತ ಮೂಲದ ಈ ಆಟಗಾರರಿಂದಾಗಿ ಅಮೆರಿಕದಲ್ಲಿಯೂ ಕ್ರಿಕೆಟ್ ಕಲರವ ಹೆಚ್ಚುತ್ತಿದೆ. ಬೇಸ್‌ಬಾಲ್, ಬ್ಯಾಸ್ಕೆಟ್‌ಬಾಲ್ ಪ್ರಿಯರೂ ಕ್ರಿಕೆಟ್‌ನತ್ತ ನೋಡುತ್ತಿದ್ದಾರೆ.

ಅದಕ್ಕೆ ಕಾರಣ ಹತ್ತು ದಿನಗಳ ಹಿಂದೆ ಟೂರ್ನಿಯ 'ಎ' ಗುಂಪಿನ ಪಂದ್ಯದಲ್ಲಿ ಅಮೆರಿಕ ತಂಡವು ಬಲಾಢ್ಯ ಪಾಕಿಸ್ತಾನ ತಂಡದ ಎದುರು ಜಯಿಸಿ ದೊಡ್ಡ ಸುದ್ದಿಯಾಗಿದ್ದು. ಪಾಕ್ ಎದುರಿನ ಸೂಪರ್ ಓವರ್‌ನಲ್ಲಿ ಮಿಂಚಿದ ಎಡಗೈ ವೇಗಿ ನೇತ್ರಾವಳ್ಕರ್ ರಾತ್ರಿ ಬೆಳಗಾಗುವುದರೊಳಗೆ ಹೀರೊ ಆಗಿಬಿಟ್ಟರು. ಅವರು ಭಾರತ ತಂಡದ ಎದುರಿನ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರಿಬ್ಬರ ವಿಕೆಟ್ ಕೂಡ ಗಳಿಸಿದರು. ಸಾಮಾಜಿಕ ಜಾಲತಾಣಗಳಲ್ಲಿರುವ ಅವರ ಖಾತೆಗಳಿಗೆ ಸಾವಿರಾರು ಜನರು ಲಗ್ಗೆ ಹಾಕಿದರು. ಒರಾಕಲ್ ಕಂಪನಿಯ ಉದ್ಯೋಗಿಯೂ ಆಗಿರುವ ಅವರ ಕ್ರಿಕೆಟ್ ಪ್ರೀತಿ ಗಮನಸೆಳೆಯಿತು.

ಅದೇ ರೀತಿ ಕನ್ನಡಿಗ, ಸ್ಪಿನ್ನರ್ ನಾಸ್ತುಷ್ ಕೆಂಜಿಗೆ ಕೂಡ ಗಮನ ಸೆಳೆದರು. ತಂಡದ ನಾಯಕ ಮೊನಾಂಕ್ ಪಟೇಲ್ ಸೇರಿದಂತೆ ಅಮೆರಿಕ ತಂಡವೊಂದರಲ್ಲಿಯೇ ಇರುವ ಭಾರತ ಮೂಲದ ಒಂಬತ್ತು ಆಟಗಾರರ ಹೆಸರುಗಳೂ ನಲಿದಾಡತೊಡಗಿದವು. ಕೆನಡಾ ತಂಡದಲ್ಲಿರುವ ದಾವಣಗೆರೆ ಹುಡುಗ ಶ್ರೇಯಸ್ ಮೊವಾ ಕೂಡ ಗಮನಸೆಳೆದರು. ಈ ತಂಡದಲ್ಲಿರುವ ರವೀಂದರ್ ಪಾಲ್ ಸಿಂಗ್, ದಿಲ್‌ಪ್ರೀತ್ ಬಜ್ವಾ, ರಿಶಿವ್ ಜೋಶಿ ಹಾಗೂ ಪರ್ಗತ್ ಸಿಂಗ್ ಕೂಡ ಭಾರತ ಮೂಲದವರು.

ಇವರೆಲ್ಲ ಇಷ್ಟು ದಿನ ಎಲ್ಲಿದ್ದರು? ಒಂದೊಮ್ಮೆ ಅಮೆರಿಕದಲ್ಲಿ ವಿಶ್ವಕಪ್ ಟೂರ್ನಿ ನಡೆಯದೇ ಹೋಗಿದ್ದರೆ ಇವರೆಲ್ಲ ಅಜ್ಞಾತರಾಗಿಯೇ ಇರುತ್ತಿದ್ದರಲ್ಲವೆ?

ಭಾರತದಲ್ಲಿ ಇವತ್ತು ಕ್ರಿಕೆಟ್ ತಾರೆಯರಾಗಬೇಕೆಂದು ಕನವರಿಸುವ ಸಾವಿರಾರು ಮಕ್ಕಳು ಕ್ರಿಕೆಟ್ ಅಂಗಳದಲ್ಲಿ ಬೆವರು ಹರಿಸುತ್ತಿದ್ದಾರೆ. ಇಷ್ಟು ದೊಡ್ಡ ಸಮೂಹದಲ್ಲಿ ಭಾರತ ತಂಡ, ರಾಜ್ಯ ತಂಡಗಳು ಮತ್ತು ಐಪಿಎಲ್‌ನಲ್ಲಿ ಆಡುವ ಅವಕಾಶ ಸಿಗುವುದು ಕೆಲವರಿಗೆ ಮಾತ್ರ. ಇಂತಹ ಕಡುಕಠಿಣ ಪೈಪೋಟಿಯಲ್ಲಿ (ಆಡಳಿತ ವ್ಯವಸ್ಥೆಯೊಳಗಿನ ರಾಜಕೀಯ, ಸ್ವಜನಪಕ್ಷಪಾತ ಹಾಗೂ ಆಯ್ಕೆ ಪ್ರಕ್ರಿಯೆಯ ಲೋಪಗಳೂ ಸೇರಿರಬಹುದು) ನಿರೀಕ್ಷಿತ ಯಶಸ್ಸು ಸಿಗದೇ ಕ್ರಿಕೆಟ್ ಕಿಟ್ ಪಕ್ಕಕ್ಕಿಟ್ಟವರ ಸಂಖ್ಯೆಯೇ ದೊಡ್ಡದು. ಇವರೆಲ್ಲಾ ಕ್ರಿಕೆಟ್‌ನಲ್ಲಿ ಸಿಗದ ಭವಿಷ್ಯವನ್ನು ವೃತ್ತಿ, ಉದ್ಯೋಗದಲ್ಲಿ ರೂಪಿಸಿಕೊಳ್ಳುವತ್ತ ಮುಖಮಾಡಿದ ಹುಡುಗರು. ಉದ್ಯೋಗ, ಉನ್ನತ ವ್ಯಾಸಂಗಕ್ಕಾಗಿ ಅಮೆರಿಕ, ಕೆನಡಾ ಸೇರಿದ ಹುಡುಗರೇ ಈಗ ಅಲ್ಲಿಯ ಕ್ರಿಕೆಟ್ ತಾರೆಗಳಾಗಿದ್ದಾರೆ. ತಮ್ಮ ಎದೆಗಳಲ್ಲಿ ಬೆಚ್ಚಗೆ ಕಾಪಿಟ್ಟುಕೊಂಡಿದ್ದ ಕ್ರಿಕೆಟ್ ಪ್ರೀತಿ ಅವರೆಲ್ಲರನ್ನೂ ಇವತ್ತು ಪ್ರಸಿದ್ಧಿಯ ಹಾದಿಗೆ ತಂದು ನಿಲ್ಲಿಸಿದೆ.

ಅವರೆಲ್ಲರೂ ಬಹುಶಃ ಭಾರತದಲ್ಲಿಯೇ ಉಳಿದು ಐಟಿ ಉದ್ಯೋಗಿಗಳಾಗಿದ್ದರೂ ಕೈತುಂಬ ಹಣ ಸಂಪಾದಿಸುತ್ತಿದ್ದರು. ಆದರೆ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಅವಕಾಶ ಸಿಗುತ್ತಿರಲಿಲ್ಲ. ಅಮೆರಿಕಕ್ಕೆ ಉದ್ಯೋಗ, ಉನ್ನತ ವ್ಯಾಸಂಗಕ್ಕೆ ಹೋಗಿ ಕ್ರಿಕೆಟಿಗರಾಗುವ ಕನಸನ್ನೂ ನನಸು ಮಾಡಿಕೊಂಡಿದ್ದಾರೆ.

ನೇತ್ರಾವಳ್ಕರ್ ಅವರ ಉದಾಹರಣೆಯನ್ನೇ ನೋಡಿ. ಅವರು ಮೂಲತಃ ಮುಂಬೈನವರು. ಕಂಪ್ಯೂಟರ್ ಎಂಜಿನಿಯರ್. ಮುಂಬೈನ 16 ವರ್ಷ, 19 ವರ್ಷ ವಯೋಮಿತಿಯ ತಂಡಗಳಲ್ಲಿ ಆಡಿದ್ದರು. ಆಗ ಅವರೊಂದಿಗೆ ರೋಹಿತ್ ಶರ್ಮಾ ಮತ್ತು ಸೂರ್ಯಕುಮಾರ್ ಯಾದವ್ ಕೂಡ ಆಡಿದ್ದರು. 2010ರಲ್ಲಿ ನಡೆದಿದ್ದ 19 ವರ್ಷದೊಳಗಿನವರ ವಿಶ್ವಕಪ್ ಟೂರ್ನಿಯಲ್ಲಿ ನೇತ್ರಾವಳ್ಕರ್ ಅವರು ಆಡಿದ್ದ ಭಾರತ ತಂಡದಲ್ಲಿ ಕೆ.ಎಲ್. ರಾಹುಲ್, ಮಯಂಕ್ ಅಗರವಾಲ್ ಹಾಗೂ ಜಯದೇವ್ ಉನದ್ಕತ್ ಕೂಡ ಆಡಿದ್ದರು. ಆದರೆ ಆ ದಿನಗಳಲ್ಲಿ ಮುಂಬೈ ಸೀನಿಯರ್ ತಂಡದಲ್ಲಿ ಸ್ಥಾನ ಪಡೆಯಲು ಅಪಾರ ಪೈಪೋಟಿಯಿತ್ತು. ಅವರಿಗೆ ಸ್ಥಾನ ಸಿಗಲಿಲ್ಲ. ಆದ್ದರಿಂದ ಓದಿನ ಕಡೆಯೇ ಗಮನ ನೀಡಿದರು. ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್ ಮುಗಿಸಿ ಒಂಬತ್ತು ವರ್ಷಗಳ ಹಿಂದೆ ಉನ್ನತ ಶಿಕ್ಷಣಕ್ಕೆ ಅಮೆರಿಕಕ್ಕೆ ಹೋದವರು ಅಲ್ಲಿಯೇ ಉಳಿದರು. ಇತ್ತೀಚೆಗೆ ನಾಸೌ ಕೌಂಟಿ ಕ್ರೀಡಾಂಗಣದಲ್ಲಿ ಪಂದ್ಯ ನಡೆದ ಸಂದರ್ಭದಲ್ಲಿ ಹಳೆಯ ಗೆಳೆಯರಾದ ರೋಹಿತ್ ಮತ್ತು ಸೂರ್ಯ ಅವರನ್ನು ಭೇಟಿಯಾಗಿ ಬಾಲ್ಯದ ನೆನಪುಗಳನ್ನು ಮೆಲುಕು ಹಾಕಿದರು.

ನೇತ್ರಾವಳ್ಕರ್ ಅವರು ವಿಶ್ವಕಪ್ ಆಡುತ್ತಿರುವ ಈ ಹೊತ್ತಿನಲ್ಲಿಯೂ ಕಚೇರಿ ಕೆಲಸಕ್ಕೆ ಬಿಡುವು ಪಡೆದಿಲ್ಲ. ಪಂದ್ಯ ಮುಗಿದ ಕೂಡಲೇ ತಮ್ಮ ಕೋಣೆ ಸೇರಿ ಲ್ಯಾಪ್‌ಟಾಪ್‌ನಲ್ಲಿ ಕೆಲಸ ಮಾಡುತ್ತಾರಂತೆ.

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆಯ ನಾಸ್ತುಷ್ ಪ್ರದೀಪ್ ಕೆಂಜಿಗೆ ಅವರು ಕರ್ನಾಟಕ ವಯೋಮಿತಿಯ ತಂಡಗಳಲ್ಲಿ ಆಡಿದವರು. ಬೆಂಗಳೂರಿನಲ್ಲಿಯೇ ಎಂಜಿನಿಯರಿಂಗ್ ಪದವಿ ಗಳಿಸಿದವರು. ಆ ಸಂದರ್ಭದಲ್ಲಿ ಕ್ರಿಕೆಟ್‌ನಲ್ಲಿ ಉನ್ನತ ಭವಿಷ್ಯ ಸಿಗದು ಎಂದು ಅನ್ನಿಸಿದಾಗ ಸ್ಕ್ವಾಷ್ ಆಡಲು ಆರಂಭಿಸಿದ್ದರು. ಅವರು ವೃತ್ತಿಗಾಗಿ ಅಮೆರಿಕಕ್ಕೆ ಹೋಗುವಾಗ ತಮ್ಮೊಂದಿಗೆ ತೆಗೆದುಕೊಂಡು ಹೋಗಿದ್ದು ಸ್ಕ್ವಾಷ್ ರೆಕೆಟ್ ಅನ್ನೇ, ಕ್ರಿಕೆಟ್ ಕಿಟ್ಟನ್ನಲ್ಲ!

ಅಮೆರಿಕದಲ್ಲಿ ಪರಿಚಯವಾದ ವೆಸ್ಟ್ ಇಂಡೀಸ್‌ನ ಆಟಗಾರರೊಬ್ಬರು ನಾಸ್ತುಷ್ ಮತ್ತೆ ಕ್ರಿಕೆಟ್ ಅಂಗಳಕ್ಕೆ ಬರಲು ಕಾರಣರಾದರು. ಅಮೆರಿಕ ತಂಡ ಸೇರಲು ನೌಕರಿಯನ್ನೂ ಬಿಟ್ಟು ಅಭ್ಯಾಸ ಮಾಡಿದರು. ಅದರ ಫಲ ಈಗ ಸಿಗುತ್ತಿದೆ. ಪಾಕ್ ಎದುರಿನ ಪಂದ್ಯದಲ್ಲಿ ಅವರಿಗೆ ಮೊದಲ ಓವರ್ ಬೌಲಿಂಗ್ ಮಾಡುವ ಅವಕಾಶ ಸಿಕ್ಕಿತು. ಒಟ್ಟು 3 ವಿಕೆಟ್ ಕೂಡ ಗಳಿಸಿದರು.

ಅಮೆರಿಕ ತಂಡದ ನಾಯಕ ಮೊನಾಂಕ್ ಪಟೇಲ್ ಗುಜರಾತಿನವರು. ತಮ್ಮ ರಾಜ್ಯದ 16 ಮತ್ತು 18 ವರ್ಷದೊಳಗಿನವರ ತಂಡಗಳಲ್ಲಿ ಆಡಿದವರು. ಆದರೆ ಅದೃಷ್ಟ ಒಲಿಯಲಿಲ್ಲ. 2010ರಲ್ಲಿ ಅಮೆರಿಕದ ಗ್ರೀನ್ ಕಾರ್ಡ್ ಪಡೆದರು. ಎಂಟು ವರ್ಷಗಳ ಹಿಂದೆ ನ್ಯೂಜೆರ್ಸಿಯಲ್ಲಿ ಹೋಟೆಲ್ ಆರಂಭಿಸಿ ಅಲ್ಲಿಯೇ ನೆಲಸಿದರು. 2018ರಲ್ಲಿ ಸ್ಥಳೀಯ ಕ್ರಿಕೆಟ್ ಕ್ಲಬ್‌ನಲ್ಲಿ ಆಡಲು ಆರಂಭಿಸಿದರು. ತಮ್ಮ ಬಿರುಸಾದ ಬ್ಯಾಟಿಂಗ್ ಮತ್ತು ಚುರುಕಾದ ಕೀಪಿಂಗ್ ಮೂಲಕ ಗಮನ ಸೆಳೆದರು. ಫ್ರ್ಯಾಂಚೈಸಿ ಲೀಗ್‌ನಲ್ಲಿಯೂ ಅವಕಾಶ ಪಡೆದರು. ರುಚಿಕಟ್ಟಾದ ಅಡುಗೆ ಮಾಡಬಲ್ಲ ಮೊನಾಂಕ್ ಪಾಕಿಸ್ತಾನ ಎದುರಿನ ಪಂದ್ಯದಲ್ಲಿ ಅಚ್ಚುಕಟ್ಟಾದ ಅರ್ಧಶತಕ ಗಳಿಸಿದರು. ಆದರೆ ಭಾರತದ ಎದುರಿನ ಪಂದ್ಯದಲ್ಲಿ ಗಾಯದಿಂದಾಗಿ ಅವರು ಕಣಕ್ಕಿಳಿಯಲಿಲ್ಲ.

ಅಮೆರಿಕ ತಂಡದ ಆಲ್‌ರೌಂಡರ್ ನಿತೀಶ್ ಕುಮಾರ್ 2011ರಲ್ಲಿ ನಡೆದಿದ್ದ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಕೆನಡಾ ತಂಡದಲ್ಲಿ ಆಡಿದ್ದರು. ನಂತರ ಅಮೆರಿಕಕ್ಕೆ ಬಂದರು. ಅಲ್ಲಿಯ ತಂಡದಲ್ಲಿ ಆಡುತ್ತಿದ್ದಾರೆ. ಕ್ರಿಕೆಟಿಗನಾಗಿ ಬೆಳೆಯಲು ಹಲವಾರು ಸ್ಥಳೀಯ ತಂಡಗಳಲ್ಲಿ ಆಡಿ ತಮ್ಮನ್ನು ಪರೀಕ್ಷೆಗೆ ಒಡ್ಡಿಕೊಂಡವರು. ಇದೇ ತಂಡದ ಮಿಲಿಂದ್ ಕುಮಾರ್ ದೆಹಲಿ, ಸಿಕ್ಕಿಂ ತಂಡಗಳಿಗೆ ಆಡಿದ್ದರು. ಐಪಿಎಲ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿ ಆಡಿದ್ದರು. 33 ವರ್ಷದ ಮಿಲಿಂದ್ ಅಮೆರಿಕಕ್ಕೆ ವಲಸೆ ಹೋಗಿ ವೃತ್ತಿಜೀವನದ 'ಎರಡನೇ ಇನಿಂಗ್ಸ್' ಆಡುತ್ತಿದ್ದಾರೆ.

ಭಾರತ ಮೂಲದ ಆಟಗಾರರು ಬೇರೆ ದೇಶಗಳಲ್ಲಿ ಆಡುವುದು ಹೊಸದೇನಲ್ಲ. ನ್ಯೂಜಿಲೆಂಡ್, ಇಂಗ್ಲೆಂಡ್, ದಕ್ಷಿಣ ಆಫ್ರಿಕಾ, ವೆಸ್ಟ್ ಇಂಡೀಸ್ ಮತ್ತು ಆಸ್ಟ್ರೇಲಿಯಾ ತಂಡಗಳಲ್ಲಿ ಆಡಿದ್ದಾರೆ. ಈಗಲೂ ಆಡುತ್ತಿದ್ದಾರೆ. ಆದರೆ ಅವರಲ್ಲಿ ಬಹುತೇಕರು ತಮ್ಮ ಪೂರ್ವಜರೊಂದಿಗೆ ಹೋಗಿ ಅಲ್ಲಿಯ ಪ್ರಜೆಗಳಾದವರು. ಆದರೆ ಇದೀಗ ಅಮೆರಿಕ, ಕೆನಡಾ ದೇಶಗಳಲ್ಲಿ ಆಡುತ್ತಿರುವವರದ್ದು ವಿಭಿನ್ನ ಕತೆ. ಸ್ವದೇಶದಲ್ಲಿ ಕಮರಿದ ಕನಸನ್ನು ಅಲ್ಲಿ ನನಸುಗೊಳಿಸಿಕೊಂಡವರ ಯಶೋಗಾಥೆ. ಅವರಿಂದಾಗಿ ಅಮೆರಿಕ ಸೂಪರ್ 8 ಪ್ರವೇಶಿಸಿದೆ. ಈ ಹಂತದಲ್ಲಿರುವ ಅನುಭವಿ ತಂಡಗಳ ಎದುರು ಅಚ್ಚರಿಯ ಗೆಲುವು ಸಾಧಿಸಿದರೆ ಸಪ್ತ ಸಾಗರದಾಚೆಯೂ ಭಾರತೀಯ ಕ್ರಿಕೆಟಿಗರ ಹಿರಿಮೆ ಮತ್ತಷ್ಟು ಎತ್ತರಕ್ಕೇರಬಹುದು.

ಚುರುಮುರಿ



ಗ್ಯಾಂಬಲೂರು

• ಲಿಂಗರಾಜು ಡಿ.ಎಸ್.

'ರಾಜಧಾನೀಲಿ ದಿನದಿನಕ್ಕೂ ಕೊಲೆ, ಸುಲಿಗೆ, ದಬಾವಣೆ, ಹಲ್ಲೆ, ಅಕ್ರಮ, ಲಂಚ ಪ್ರಕರಣ, ಬುಕ್ಕಿಗಳ ಗ್ಯಾಂಬ್ಲಿಂಗ್ ಜಾಸ್ತಿಯಾಯ್ತಾ ಅದೆ' ಅಂತ ಕೊರಗಿದೆ.

'ಅದೀಯೇ! ನಿಗಮ, ಮಂಡಳಿಗಳ ಕಾಸು ಹೆಂಡದಂಗಡಿ, ಚಿನ್ನದ ಅಂಗಡಿ ಸೇರ್ಯದಂತೆ. ನಿಗಮದ ಕಾಸು ಯಾರ ಮನೇಲೋ ಸಿಕ್ತಂತೆ. ಇದು ಯುಕ್ತಿ ಯೋಜನೆ ಇರಬಕು' ಯಂಟಪ್ಪಣ್ಣ ಬೆರಗಾಯ್ತು.

'ಜನ ಮಳ್ಳಿಯಂಗಿದ್ರೆ ಇನ್ನೇನಾದದು? ಗುಂಡಿ ಬಿದ್ದು ಗಟಾರಾಗಿರ ರೋಡು ಬಿಬಿಎಂಪಿಯೋರು ಮುಚ್ತಿಲ್ಲ. ಜನ ಮಾತ್ರ 'ಹಳೆ ಕಲ್ಲು, ಹೊಸ ಬಿಲ್ಲು' ಅಂತ ನಗಾಡಿಕ್ಯಂಡು ಸುಮ್ಮಗಾಯ್ತರೆ. ಪಾಪದ ಪೋಲೀಸಿನೋರು ಸವಾರರ ಕಷ್ಟ ನೋಡನಾರದೇ ತ್ಯಾಪೆ ಹಾಕಬೇಕಾಗ್ಯದೆ. ಅಧಿಕಾರಸ್ಥರು ಜನದ ಕಷ್ಟ ನೀಸದು ಬುಟ್ಟು ಪೆಟ್ರೋಲ್-ಡೀಸೆಲ್ ರೇಟ್ ಏರಿಸೋ ಕ್ಯಾಮೆ ಮಾಡ್ತಾವ್ರೆ' ಚಂದ್ರು ಗರಂ ಆದ.

'ಮೊನ್ನೆ 'ಜನ ಯಂಗೆ ಎದ್ದೇಳಬಕು' ಅಂತ ಕರೆ ಕೊಟ್ಟವ್ರೆ ರಾಜಕಾರಣಿಗಳು. ಜನ ಮಾತ್ರ 'ಟೈಂ ವೇಸ್ಟು. ನೋಡನ ತಡೀರಿ ಆಮೇಲೆ. ಈಗ ಆಪೀಸಿಗೋಗ್ಬಕು' ಅಂತ ಹಂಗೆ ಕುಕಂತರೆ' ಯಂಟಪ್ಪಣ್ಣ ಹೇಳಿತು.

'ರಾಜಕಾರಣಿಗಳ ಗ್ಯಾಪ್ತಿಗೆ ತಕ್ಕಬ್ಯಾಡ ಕನೋ. ನೆನೆಸಿಗ್ಯಂಡೇಟಿಗೆ 'ಹೋದಾ ರಾಜಕಾರಣಿ ಅಂದ್ರೆ ಇಲ್ಲ ಕನಣ್ಣೆ ಬಂದೆ ವಾಟ್ಸಪ್ ಗವಾಕ್ಷೀಲಿ' ಅಂತ ಪ್ರತ್ಯಕ್ಷ ಆಯ್ತವೆ' ಅಂತ ತುರೇಮಣೆ ಚುಚ್ಚಿದರು.

'ಸರಿ ಕಾ ಬುಡಿ ಸಾ. ಇಂಥಾ ಅವಕಾಶವಾದಿ ರಾಜಕೀಯ ದೌರ್ಜನ್ಯದಿಂದ ಪಾರಾಗದು ಯಂಗೇ ಅಂತ?' ಪರಿಹಾರ ಕೇಳಿದೆ.

'ರಾಜಕೀಯದವುಕ್ಕೆ ಮೂರುಭಂಗದ ಭಯವೇ ಇಲ್ಲಾಗ್ಯದೆ' ಯಂಟಪ್ಪಣ್ಣನಿಗೆ ಬೇಜಾರಾಯ್ತು.

'ಏನಾದ್ರೂ ಉಪಾಯ ವೇದಾಂತ ಹೇಳಿ ಸಾ' ಅಂತ ಗೋಗರೆದೆ.

'ಇದು ಕಲಿಗಾಲ ಕಯ್ಯಾ. ಕರ್ಮಕ್ಕೆ ಬಲ ಜಾಸ್ತಿ. ಅವಸಾನ ಪರ್ವದಲ್ಲಿ ಕರ್ಮಗೇಡಿಗಳಿಗೇ ಭವಿಷ್ಯ ಅಂತ ಹೇಳ್ಯದೆ. ಇದು ಹಿಂಗೇ ನಡೀತಿದ್ರೆ ಬೆಂಗಳೂರು ಹೆಸರನ್ನ ಗ್ಯಾಂಬಲೂರು ಅಂತ ಬದ್ಲಾಸಬೇಕಾಯ್ತದೆ' ತುರೇಮಣೆ ಉವಾಚ.

ದಿನದ ಟ್ವೀಟ್

ಟ್ಯೂಷನ್ ಅನಿವಾರ್ಯವೇ?

ಟ್ಯೂಷನ್ ಎಂಬುದು ಭಾರತದಾದ್ಯಂತ ಬಹುಕೋಟಿ ವ್ಯವಹಾರದ ಉದ್ದಿಮೆಯಾಗಿದೆ. ಐಐಟಿ, ಜೆಇಇ, ನೀಟ್, ಯುಪಿಎಸ್‌ಸಿ, ಕೆಪಿಎಸ್‌ಸಿ, ಬ್ಯಾಂಕಿಂಗ್... ಬೋಧನಾ ಕ್ಷೇತ್ರದಲ್ಲಿ ಅದು ಉದ್ಯೋಗಗಳನ್ನು ಸೃಷ್ಟಿಸುತ್ತಿದೆಯಾದರೂ ವಿದ್ಯಾರ್ಥಿಗಳು ಟ್ಯೂಷನ್ ಇಲ್ಲದೆ ಪರೀಕ್ಷೆ ಎದುರಿಸಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿರುವುದು ಕಳವಳಕಾರಿ.

ನಾಗೇಂದ್ರ ಶಾಸ್ತ್ರಿ, ಸಾಫ್ಟ್‌ವೇರ್ ಎಂಜಿನಿಯರ್

ಕಿಡಿನುಡಿ

ಬರ್ತಾ ಬರ್ತಾ ಈ ಅಭಿಮಾನಿ ಅನ್ನೋ ಪದಾನೇ ಅಸಹ್ಯ ಅನ್ನಿಸ್ತಿದೆ (ಯಾರದೇ ಆಗಿರಲಿ).



ವೇದಾವತಿ ಎಸ್.

25 ವರ್ಷಗಳ ಹಿಂದೆ

ಶುಕ್ರವಾರ, 18-6-1999

• **ಭಾರತ ಗಡಿಯನ್ನು ಬಿಡಿ ಪಾಕ್‌ಗೆ ರಷ್ಯಾ ಸೂಚನೆ**

ಮಾಸ್ಕೊ, ಜೂನ್ 17 (ಪಿಟಿಐ)- ವಾಸ್ತವ ಹತೋಟಿ ರೇಖೆಯನ್ನು ಬದಲಾಯಿಸುವ ಪಾಕಿಸ್ತಾನದ ಪ್ರಯತ್ನವು ಗಂಭೀರ ಪರಿಣಾಮಗಳಿಗೆ ಕಾರಣವಾದೀತು ಎಂದು ರಷ್ಯಾ ಇಂದು ಪಾಕಿಸ್ತಾನಕ್ಕೆ ಎಚ್ಚರಿಕೆಯನ್ನು ನೀಡಿದ್ದು, ಭಾರತದ ನೆಲದಿಂದ ಶಸ್ತ್ರಧಾರಿ ಅತಿಕ್ರಮಣಕಾರರನ್ನು ವಾಪಸು ಕರೆಸಿಕೊಳ್ಳುವಂತೆ ಕಟ್ಟುನಿಟ್ಟಾಗಿ ಆದೇಶಿಸಿದೆ. ಈ ಮಧ್ಯೆ, ಕಾರ್ಗಿಲ್‌ನಿಂದ ಸೇನೆಯನ್ನು ವಾಪಸು ತೆಗೆಯುವ ಬಗ್ಗೆ ಅಮೆರಿಕದ ಮಾತಿಗೆ ಮನ್ನಣೆ ಸಿಗದೇ ಹೋದರೆ ಪಾಕಿಸ್ತಾನದ ವಿರುದ್ಧ ಕಠಿಣ ಆರ್ಥಿಕ ನಿಷೇಧ ಹೇರುವ ಬಗ್ಗೆ ಅಮೆರಿಕ ಆಲೋಚಿಸುತ್ತಿದೆ ಎಂದು ವಾಷಿಂಗ್ಟನ್‌ನಿಂದ ವರದಿಯಾಗಿದೆ.

ಕಾರ್ಗಿಲ್‌ನ ಇಂದಿನ ಬಿಕ್ಕಟ್ಟಿಗೆ ಪಾಕಿಸ್ತಾನವೇ ಕಾರಣ ಎಂದು ರಷ್ಯಾ ಹೇಳಿದೆ.

• **ಕೊಡಗಿನಲ್ಲಿ ವ್ಯಾಪಕ ಮಳೆ ಹಾರಂಗಿ ಜಲಾಶಯಕ್ಕೆ ನೀರು**

ಮಡಿಕೇರಿ, ಜೂನ್ 17- ಕೊಡಗು ಜಿಲ್ಲೆಯಾದ್ಯಂತ ವ್ಯಾಪಕವಾಗಿ ಮಳೆ ಸುರಿಯುತ್ತಿದ್ದು, ಕಳೆದ ಸಾಲಿಗೆ ಹೋಲಿಸಿದಲ್ಲಿ ಈ ಬಾರಿ ಮಳೆ ಪ್ರಮಾಣ ಇಮ್ಮಡಿಸಿದೆ.

ಕಾವೇರಿ ಜಲಾನಯನ ಪ್ರದೇಶವಾದ ಭಾಗಮಂಡಲದಲ್ಲಿ ಇಂದು 46.8 ಮಿ.ಮೀ. ಮಳೆ ದಾಖಲಾಗಿದೆ. ಇದರೊಂದಿಗೆ ಪ್ರಸಕ್ತ ವರ್ಷಾರಂಭದಿಂದ ಈ ದಿನದವರೆಗೆ ಇಲ್ಲಿ 1068.7 ಮಿ. ಮೀ. ಮಳೆ ಸುರಿದಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಕೇವಲ 476.6 ಮಿ.ಮೀ.ನಷ್ಟು ಮಳೆ ಆಗಿತ್ತು.

50 ವರ್ಷಗಳ ಹಿಂದೆ

ಮಂಗಳವಾರ, 18-6-1974

• **ಪಟ್ಟಭದ್ರರಿಂದ ಹರಿಜನ, ಗಿರಿಜನರ ಪ್ರಗತಿಗೆ ಅಡ್ಡಿ: ಸಚಿವ ರಾಚಯ್ಯ**

ಬೆಂಗಳೂರು, ಜೂನ್ 17- ಸಂವಿಧಾನದಲ್ಲಿ ಹರಿಜನ- ಗಿರಿಜನರಿಗಾಗಿ ಕಲ್ಪಿಸಲಾಗಿರುವ ಹಕ್ಕು ಬಾಧ್ಯತೆಗಳನ್ನು ಜಾರಿಗೆ ತರಲು ಪ್ರಧಾನಿ ಹಾಗೂ ಮುಖ್ಯಮಂತ್ರಿಯವರು ಪ್ರಾಮಾಣಿಕವಾಗಿ ಪ್ರಯತ್ನ ನಡೆಸುತ್ತಿದ್ದರೆ, ಆ ಪ್ರಯತ್ನಗಳನ್ನು ವಿಫಲಗೊಳಿಸಲು ಆಡಳಿತ ವರ್ಗದ ಪಟ್ಟಭದ್ರ ಹಿತಾಸಕ್ತಿಗಳು ಕೆಲಸ ಮಾಡುತ್ತಿವೆ ಎಂದು ಸಮಾಜ ಕಲ್ಯಾಣ ಸಚಿವ ಶ್ರೀ ಎನ್.ರಾಚಯ್ಯ ಅವರು ಇಂದು ಇಲ್ಲಿ ಆಕ್ಷೇಪಿಸಿದರು.

ವಿದ್ಯಾವಂತ ಹೆಣ್ಣುಮಕ್ಕಳು ಗ್ರಾಮಾಂತರ ಹಾಗೂ ಕೊಳಚೆ ಪ್ರದೇಶಗಳಿಗೆ ಭೇಟಿ ಇತ್ತು, ಅಲ್ಲಿನ ಹೆಣ್ಣುಮಕ್ಕಳಿಗೆ ಶೈಕ್ಷಣಿಕ, ರಾಜಕೀಯ ಹಾಗೂ ಸಾಮಾಜಿಕ ವಿಚಾರಗಳ ಬಗ್ಗೆ ತಿಳಿವಳಿಕೆ ನೀಡಬೇಕೆಂದು ಅವರು ಕರೆ ನೀಡಿದರು.

• **ವರ ನಾಪತ್ತೆ: ವಿವಾಹ ಸುಗಮ**

ಹಾಸನ, ಜೂನ್ 17- ಇಲ್ಲಿನ ಕಲ್ಯಾಣ ಮಂಟಪವೊಂದರಲ್ಲಿ ನಡೆಸಲು ನಿಶ್ಚಯಿಸಲಾಗಿದ್ದ ಮದುವೆಯೊಂದು ಮುಹೂರ್ತದ ಸಮಯದಲ್ಲಿ ವರ ನಾಪತ್ತೆಯಾದರೂ ಸುಗಮವಾಗಿ ನಡೆಯಿತು.

ಇಲ್ಲಿನ ಪ್ರಮುಖ ವ್ಯಾಪಾರಿಯೊಬ್ಬರ ಪುತ್ರಿ ಮತ್ತು ಹಿರಿಯೂರಿನ ವರ್ತಕರೊಬ್ಬರ ಪುತ್ರನ ಮದುವೆ ನಿನ್ನೆ ನಡೆಯಬೇಕಾಗಿತ್ತು. ಆದರೆ ಬೆಳಿಗ್ಗೆ 10.30ರ ಸಮಯದಲ್ಲಿ ಯಾರೋ ಅಪರಿಚಿತರು ಬಂದು ವರನನ್ನು ಹೊರಕ್ಕೆ ಕರೆದುಕೊಂಡು ಹೋಗಿ, ಯಾರಿಗೂ ತಿಳಿಸದೆ ಕಾರಿನಲ್ಲಿ ಕೂಡಿಸಿಕೊಂಡು ಹೊರಟುಹೋದರು. ಇದರಿಂದ ಕಲ್ಯಾಣ ಮಂಟಪದಲ್ಲಿ ಗೊಂದಲ ಪ್ರಾರಂಭವಾಯಿತು.

ವರನ ತಂದೆಯಾಗಲಿ, ಅವರ ಕಡೆಯ ಇತರರಾಗಲಿ ಸತ್ಯ ಸಂಗತಿಯನ್ನು ತಿಳಿಸಲು ಮುಂದೆ ಬರಲಿಲ್ಲ. ಪರಿಸ್ಥಿತಿ ಕೈಮೀರಬಹುದೆಂದು ಭಾವಿಸಿದ ವೈಶ್ಯ ನಾಯಕರು ಮತ್ತು ಯುವಜನರು ವಧುವಿನ ತಂದೆಯ ಭಾವನ ಮನವೊಲಿಸಿ, ಅವರ ಪುತ್ರ ವರನಾಗಲು ಸಮ್ಮತಿ ದೊರಕಿಸಿಕೊಂಡರು.

ಸಂಗತ

ಜಾಲತಾಣ ಮತ್ತು ಕೊಳಕು ಮನಸ್ಸು

ಸಾಮಾಜಿಕ ಜಾಲತಾಣಗಳ ಎಗ್ಗಿಲ್ಲದ ಟ್ರೋಲ್ ಪಡೆಗಳಿಗೆ ನಿಯಂತ್ರಣ ಬೇಕಾಗಿದೆ

• ಭಾರತಿ ದೇವಿ ಪಿ.

ಸಾಮಾಜಿಕ ಜಾಲತಾಣಗಳ ಒಳಹೊಕ್ಕರೆ ಸಾಕು, ವೈಯಕ್ತಿಕ ದಾಳಿ, ಖಾಸಗಿ ವಿಷಯಗಳ ಬಗ್ಗೆ ಹಿಂದುಮುಂದಿಲ್ಲದೆ ಮಾತಾಡುವುದು, ಅವಾಚ್ಯ ಶಬ್ದಗಳಿಂದ ನಿಂದಿಸುವುದು, ತಮ್ಮ ಮೂಗಿನ ನೇರಕ್ಕೆ ಪ್ರತಿಕ್ರಿಯಿಸುವುದು, ಅಸಭ್ಯ ಸಂದೇಶಗಳು ಬಾಣಗಳಂತೆ ಒಂದಾದ ಮೇಲೊಂದರಂತೆ ಬಂದು ಎರಗುತ್ತಿರುತ್ತವೆ. ಇತ್ತೀಚೆಗಂತೂ ವಿವಿಧ ಪ್ರಕರಣಗಳಲ್ಲಿ ಸಿಲುಕಿಹಾಕಿಕೊಂಡಿರುವ ರಾಜಕೀಯ ವ್ಯಕ್ತಿಗಳು, ಸಿನಿಮಾ ತಾರೆಯರ ಚಂದದ ಚಿತ್ರ, ಪ್ರಚೋದನಕಾರಿ ಸಂದೇಶ ಹಾಕಿ, ಅತ್ಯಂತ ಕೊಳಕಾದ ಕಾಮೆಂಟ್‌ಗಳ ಮಹಾಪೂರವನ್ನೇ ಹರಿಸಲಾಗುತ್ತಿದೆ.

ನಮ್ಮ ಸಮಾಜದ ಆರೋಗ್ಯ ನಿಜಕ್ಕೂ ಇಷ್ಟೊಂದು ಹದಗೆಟ್ಟಿದೆಯೇ ಎಂದು ಆತಂಕವಾಗುತ್ತದೆ, ವಿಚಿತ್ರ ಕಿರಿಕಿರಿ ಉಂಟಾಗುತ್ತದೆ. ನಮಗೆ ಬೇಕಿಲ್ಲದಿದ್ದರೂ ಕಾಣಿಸಿಕೊಳ್ಳುವ ವಾಣಿಜ್ಯ ಜಾಹೀರಾತುಗಳ ಜೊತೆಗೇ ಬರುವ ಈ ಬಗೆಯ ಪೋಸ್ಟ್‌ಗಳ ಉದ್ದೇಶ ಜಾಸ್ತಿ ಲೈಕ್, ವ್ಯೂ ಬರುವ ಹಾಗೆ ಮಾಡುವುದರ ಮೂಲಕ ಹೆಚ್ಚು ಜನರನ್ನು ತಲುಪುವುದು, ಲಾಭ ಗಳಿಸುವುದೇ ಆಗಿದೆ ಎಂಬುದು ಎಲ್ಲರಿಗೂ ತಿಳಿದ ವಿಚಾರ. ಆದರೆ ಇಂತಹ ಲಾಭಕ್ಕಾಗಿ ಎಷ್ಟು ಕೀಳು ಮಟ್ಟಕ್ಕೆ ಬೇಕಾದರೂ ಇಳಿಯಬಹುದೇ? ನಾಗರಿಕ ಸಮಾಜವಾಗಿ ನಾವು ಇಂಥವುಗಳನ್ನು ಬೈದುಕೊಂಡು ಅಲಕ್ಷ್ಯ ಮಾಡುವುದರಾಚೆಗೆ ಇನ್ನೇನಾದರೂ ಮಾಡದೇ ಹೋದಲ್ಲಿ ಇದು ಇನ್ನೂ ಭೀಕರವಾಗಲಿದೆ.

ಯಾರ ಮೇಲಾಗಲೀ ಶೋಷಣೆ ನಡೆಯುವುದನ್ನು ವಿರೋಧಿಸಬೇಕು ನಿಜ. ಅದರಾಚೆಗೆ ಪ್ರಾಯ ಪ್ರಬುದ್ಧರ ಒಪ್ಪಿತ ಸಂಬಂಧಗಳು, ಹೊಂದಾಣಿಕೆಯಾಗದ ಕಾರಣಕ್ಕೆ ನಡೆಯುವ ವಿಚ್ಛೇದನಗಳು ಅವರವರ ವೈಯಕ್ತಿಕ ಬದುಕಿಗೆ ಸಂಬಂಧಿಸಿದವು. ಇದನ್ನು ಇನ್ನೂ ಗ್ರಹಿಸಲಾಗದಷ್ಟು ನಮ್ಮ ಸುತ್ತಲಿನ ಸಮಾಜ ಅಪ್ರಬುದ್ಧವಾಗಿದೆ. ನಾವು ರೂಪಿಸಿಕೊಂಡಿರುವ ಹುಸಿ ನೈತಿಕ ನಿಲುವುಗಳು ಎಷ್ಟೋ ಬಾರಿ ಆಷಾಢಭೂತಿತನವನ್ನು ತೆರೆದು ತೋರುವಂತೆ ಇರುತ್ತವೆ.

ಹೆಣ್ಣೊಬ್ಬಳನ್ನು ಅತೀ ಕೊಳಕು ಭಾಷೆಯಿಂದ ನಿಂದಿಸುವ ಹೊತ್ತಲ್ಲೇ ಇಷ್ಟದ ನಟನ ಹಲವು ಸಂಬಂಧಗಳು, ಅವನು ನಡೆಸಿದ ದೌರ್ಜನ್ಯವು ವೀರತನದ ಹಾಗೆ ಕಾಣುತ್ತಾ ಇರುತ್ತದೆ. ಸಾಪೇಕ್ಷ ಮೌಲ್ಯಗಳು, ಜಾತಿ ಪೂರ್ವಗ್ರಹಗಳು, ಹೆಣ್ಣುಮಕ್ಕಳ ಬಗ್ಗೆ ತಾತ್ಸಾರ, ಇನ್ನೊಂದು ಧರ್ಮದವರ ಬಗೆಗಿನ ದ್ವೇಷ ಇವೇ ಇಲ್ಲಿ ಎದ್ದು ಕಾಣುತ್ತಿರುತ್ತವೆ. ಸಂಸ್ಕೃತಿ ರಕ್ಷಕರೆಂದು ಹೇಳಿಕೊಳ್ಳುವವರಿಗೆ ಮಾತೆತ್ತಿದರೆ ಹೆಣ್ಣಿನ ಲೈಂಗಿಕತೆ, ಗಂಡಿನ ಪೌರುಷದಾಚೆಗೆ ಬೇರೆ ನುಡಿಗಟ್ಟುಗಳಿಲ್ಲ.

ಯಾವುದೋ ಒಂದು ಸಂದರ್ಭದಲ್ಲಿ ವಿಶಾಲ ಆವರಣದಲ್ಲಿ ಆಡಿದ ಮಾತನ್ನು ಅದರ ಸಂದರ್ಭದಿಂದ ಕಿತ್ತುಹಾಕಿ, ವಿವಾದಾತ್ಮಕವೆಂದು ಕಾಣುವ ಒಂದು ಸಾಲನ್ನು ಎತ್ತಿ ಟಿಆರ್‌ಪಿಗಾಗಿ ದೃಶ್ಯಮಾಧ್ಯಮಗಳು ಪ್ರಚೋದನಾತ್ಮಕವಾಗಿ ಬಿತ್ತರಿಸುವುದು ಮಾಮೂಲಿಯಾಗಿದೆ. ಅದೇ ರೀತಿ ವ್ಯೂಸ್‌ಗಾಗಿ ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಗೊಳ್ಳುತ್ತವೆ. ಗೌರಿ ಲಂಕೇಶ್ ಹತ್ಯೆಯಾಗುವ ಮೊದಲು ಅವರು ಭಾಷಣದ ಸಂದರ್ಭದಲ್ಲಿ ಆಡಿದ ಮಾತಿನ ತುಣುಕು, ಅದಕ್ಕೆ ವ್ಯಕ್ತವಾದ ಪ್ರತಿಕ್ರಿಯೆಯನ್ನು ನೆನಪಿಸಿಕೊಳ್ಳಬಹುದು. ಯು.ಆರ್.ಅನಂತಮೂರ್ತಿ, ಪ್ರೊ. ಎಂ.ಎಂ. ಕಲಬುರಗಿ ಅವರ ಮಾತುಗಳ ವಿಚಾರದಲ್ಲೂ ಹೀಗೇ ಆಗಿತ್ತು. ಮೆದುಳಿರದ ಟ್ರೋಲ್ ಪಡೆಗಳು ಪೂರ್ವಾಪರ ವಿವೇಚನೆಯಿಲ್ಲದೆ, ವೈಚಾರಿಕ ಪರಂಪರೆ, ಕನ್ನಡದ ವಿವೇಕ, ಈ ಮಹನೀಯರ ಕೊಡುಗೆ ಯಾವುದರ ಅರಿವೂ ಇಲ್ಲದೆ ಕೊಳಕು ಮಾತುಗಳಿಂದ ನಿಂದಿಸಿದ್ದವು. ಈಗ ಇದು ಇನ್ನಷ್ಟು ವಿಕೃತವಾಗಿ ಕಾಣಿಸಿಕೊಳ್ಳುತ್ತಿದೆ.

ಹೀಗೆ ಟ್ರೋಲ್ ಮಾಡುವ ಬಹುತೇಕ ಹೆಸರುಗಳು ನಿಜ ಜೀವನದಲ್ಲಿ ಅಸ್ತಿತ್ವದಲ್ಲೇ ಇರುವುದಿಲ್ಲ. ಕೆಲವೇ ವ್ಯಕ್ತಿಗಳು ಹತ್ತಾರು ಹೆಸರುಗಳಲ್ಲಿ ಫೇಕ್ ಅಕೌಂಟ್ ಸೃಷ್ಟಿಸಿಕೊಂಡು ಏಕಕಾಲದಲ್ಲಿ ದಾಳಿಯಿಡುತ್ತಾರೆ. ಪ್ರತಿಕ್ರಿಯಿಸಲು ಹೋದಷ್ಟೂ ಇದು ತೀವ್ರವಾಗುತ್ತದೆ. ವಾಣಿಜ್ಯ ಕಾರಣಕ್ಕೆ, ಐಡಿಯಾಲಜಿಯ ಕಾರಣಕ್ಕೆ ಸೃಷ್ಟಿಯಾದ ಇಂಥ ಪಡೆಗಳು ಪಿಡುಗಾಗಿ ಬೆಳೆದುಬಿಟ್ಟಿವೆ. ಇವು ಬದುಕಿದ್ದಾಗಷ್ಟೇ ಅಲ್ಲ ಸತ್ತ ಮೇಲೂ ಆ ವ್ಯಕ್ತಿಯ ಮನೆಯವರ ಮೇಲೆ, ಸಮಾಜದ ಮೇಲೆ ಇದು ಬೀರುವ ಪರಿಣಾಮ ಏನಿರಬಹುದು ಎಂಬುದನ್ನು ಲೆಕ್ಕಿಸದೇ ದಾಳಿ ಮಾಡುವ ರಣಹದ್ದುಗಳಂತೆ ಇವೆ. ಭಾರತ ಇಡೀ ವಿಶ್ವದಲ್ಲಿ ಸೈಬರ್ ಬುಲ್ಲಿಯಿಂಗ್‌ನಲ್ಲಿ ಮುಂಚೂಣಿಯಲ್ಲಿ ಇರುವುದು ಆತಂಕದ ವಿಷಯ.



ಶೋಚನೀಯ ವಿಚಾರವೆಂದರೆ, ನೇರವಾಗಿ ವಾಣಿಜ್ಯ ಉದ್ದೇಶವುಳ್ಳ ತಾಣಗಳಲ್ಲದೆ ಸಾಹಿತ್ಯ, ಸಂಸ್ಕೃತಿಗೆ ಉತ್ತೇಜನ ನೀಡುವ ಹೆಸರಿನಲ್ಲಿ ಶುರುವಾದ ತಾಣಗಳೂ ವಿವೇಚನೆ ಇಲ್ಲದಂತೆ ವರ್ತಿಸುತ್ತಿವೆ. ಯಾವುದು ಪ್ರಚೋದನಕಾರಿ ಆಗಬಹುದು ಎಂದು ತಿಳಿದೂ ಅಂಥವನ್ನೇ ಮುನ್ನೆಲೆಗೆ ಹಾಕಿ, ಆ ಮಾತುಗಳನ್ನಾಡಿದವರಿಗೆ ಎಷ್ಟೇ ಅವಹೇಳನಕಾರಿ ಕಾಮೆಂಟ್‌ಗಳು ಬಂದರೂ ಜಾಣಗುರುಡುತನ ಪ್ರದರ್ಶಿಸುತ್ತಿವೆ. ಇವರ ಉದ್ದೇಶವಾದರೂ ಏನು? ಇವರ ಈ ನಡೆಯಿಂದ ಸಾಹಿತ್ಯ, ಸಂಸ್ಕೃತಿ, ವ್ಯಕ್ತಿ ಘನತೆಗೆ ಯಾವ ಗೌರವ ಬಂದಂತಾಯಿತು? ಮಾಧ್ಯಮ ಸ್ವಾತಂತ್ರ್ಯ ಮತ್ತು ಹೊಣೆಗಾರಿಕೆಯ ಬಗ್ಗೆ ಮಾತನಾಡುವವರು ತಮ್ಮ ಮೌನ ಮುರಿದು ಮಾತನಾಡಬೇಕಾಗಿದೆ.

ಎಲ್ಲರಿಗೂ ತಮಗನಿಸಿದ್ದನ್ನು ಮುಕ್ತವಾಗಿ ಹೇಳುವ ಅವಕಾಶವಿದೆ. ಆದರೆ ವೈಯಕ್ತಿಕ ನಿಂದನೆ, ಗಡಿ ದಾಟಿ ಮಾತನಾಡಲು ಯಾರಿಗೂ ಹಕ್ಕಿಲ್ಲ. ಪ್ರಜಾಪ್ರಭುತ್ವದಲ್ಲಿ ಸಂವಿಧಾನಬದ್ಧ ಅಭಿಪ್ರಾಯ ಸ್ವಾತಂತ್ರ್ಯವಿದೆ, ಜೊತೆಗೆ ಖಾಸಗಿತನವನ್ನು ಗೌರವಿಸಬೇಕು ಮತ್ತು ಎದುರಿಗಿರುವವರನ್ನು ಅವಹೇಳನ ಮಾಡದೇ ಅವರ ಘನತೆಯನ್ನು ಮನ್ನಿಸಬೇಕು ಎಂಬುದನ್ನೂ ಅದು ಒತ್ತಿ ಹೇಳುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಿದೆ. ಅಲ್ಲದೆ, ಇದನ್ನು ಮೀರಿ ನಡೆದುಕೊಂಡಾಗ ಸೈಬರ್ ಬುಲ್ಲಿಯಿಂಗ್ ತಡೆಗಟ್ಟುವ ದಿಸೆಯಲ್ಲಿ ಕಟ್ಟುನಿಟ್ಟಾದ ಮಾರ್ಗಸೂಚಿಗಳನ್ನು ರೂಪಿಸಬೇಕಾದ ಅಗತ್ಯವಿದೆ.

ವಾಚಕರ ವಾಣಿ

ಉತ್ಸವ ಸಮಿತಿಗೂ ವಿಧಿಸಬೇಕಿದೆ ಕಟ್ಟಲೆ

ಪಿಒಪಿ ಗಣೇಶ ಮೂರ್ತಿಗಳನ್ನು ತಯಾರಿಸದಂತೆ ಮೂರ್ತಿಕಾರರಿಗೆ ಸರ್ಕಾರ ಮುನ್ನೆಚ್ಚರಿಕೆ ನೀಡಿರುವುದು ಸಮಂಜಸವೆ. ಇದರೊಂದಿಗೆ ಇನ್ನೊಂದು ಪರಿಣಾಮಕಾರಿ ವಿಧಾನ ಎಂದರೆ, ಗಣೇಶೋತ್ಸವ ಸಮಿತಿಯವರಿಗೂ ಕಟ್ಟಲೆ ವಿಧಿಸುವುದು. ಮಂಟಪದ (ಪೆಂಡಾಲ್) ಮುಖ್ಯ ದ್ವಾರದ ಬಳಿ, 'ಪಿಒಪಿ ಮೂರ್ತಿ ಅಳವಡಿಸಿಲ್ಲ' ಹಾಗೂ 'ಮೂರ್ತಿ ವಿಸರ್ಜನಾ ಮೆರವಣಿಗೆಯಲ್ಲಿ ಹಸಿರು ಪಟಾಕಿಗಳನ್ನಷ್ಟೇ ಉಪಯೋಗಿಸುತ್ತೇವೆ' ಎಂಬ ಫಲಕವನ್ನು ದೊಡ್ಡ ಅಕ್ಷರಗಳಲ್ಲಿ, ಉತ್ಸವ ಸಮಿತಿಯ ಅಧ್ಯಕ್ಷರ ಸಹಿಯೊಂದಿಗೆ ಅಳವಡಿಸುವುದನ್ನು ಕಡ್ಡಾಯ ಮಾಡಬೇಕು. ಆಗ ಅದೊಂದು ಪರಿಸರ ಕಾಳಜಿಯ ಪ್ರಮುಖ ಹೆಜ್ಜೆಯಾದೀತು.

ರಾಮಚಂದ್ರ ಎಸ್. ಕುಲಕರ್ಣಿ, ಧಾರವಾಡ

ಪರೀಕ್ಷಾರ್ಥಿಗಳ ಬಗ್ಗೆ ಅಸಡ್ಡೆಯೇ?

ಯುಪಿಎಸ್‌ಸಿ ಪೂರ್ವಭಾವಿ ಪರೀಕ್ಷೆ ಭಾನುವಾರ ನಡೆಯಿತು. ಮೊದಲ ಪರೀಕ್ಷೆ ಬೆಳಿಗ್ಗೆ 9.30ರಿಂದ 11.30ರವರೆಗೆ ಇತ್ತು. ಧಾರವಾಡದ ರಾಜೀವ್ ಗಾಂಧಿ ವಿದ್ಯಾಲಯದಲ್ಲಿ ನಾನು ಪರೀಕ್ಷೆ ಬರೆದೆ. ಈ ವಿದ್ಯಾಲಯದ ಪಕ್ಕದಲ್ಲಿಯೇ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯಕ್ರಮವೊಂದರ ಪ್ರಯುಕ್ತ ರಥದ ಮೆರವಣಿಗೆ ನಡೆಯಿತು. ಅದರ ಅಂಗವಾಗಿ ಇದ್ದ ಡೊಳ್ಳು ಬಾರಿಸುವ ಶಬ್ದ ಮತ್ತು ಸಿನಿಮಾ ಹಾಡು ಪರೀಕ್ಷಾರ್ಥಿಗಳಿಗೆ ಬಹಳಷ್ಟು ಕಿರಿಕಿರಿ ಉಂಟುಮಾಡಿದವು.

ನಾಗರಿಕ ಸೇವಾ ಪರೀಕ್ಷೆ ನಡೆಯುವ ಪರೀಕ್ಷಾ ಕೇಂದ್ರ ಪಕ್ಕದಲ್ಲಿಯೇ ಇದೆ ಎಂಬುದು ಕಾರ್ಯಕ್ರಮ ಆಯೋಜಕರ ಗಮನಕ್ಕೆ ಬರಲಿಲ್ಲವೇ ಅಥವಾ ಪರೀಕ್ಷಾರ್ಥಿಗಳ ಬಗ್ಗೆ ಅವರಿಗೆ ಅಷ್ಟೊಂದು ಅಸಡ್ಡೆಯೇ ಎಂಬುದು ತಿಳಿಯದಾಯಿತು. ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮುನ್ನ, ಅಕ್ಕಪಕ್ಕ ಯಾವುದೇ ಪರೀಕ್ಷೆ ನಡೆಯುತ್ತಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುವ ತಿಳಿವಳಿಕೆ ಇನ್ನು ಮುಂದಾದರೂ ಆಯೋಜಕರಿಗೆ ಬರಲಿ.

ಬಿ.ಎಂ.ಪಾಟೀಲ, ಹುಬ್ಬಳ್ಳಿ

ವೈರುಧ್ಯ...

ಸಿನಿಮಾಗಳಲ್ಲಿ ನಾಯಕನಟರು
ಕಾನೂನು ಕೈಗೆತ್ತಿಕೊಂಡರೆ
ಅಭಿಮಾನಿಗಳಿಂದ ಬೀಳುತ್ತವೆ
ಭಾರಿ ಸಿಳ್ಳೆ, ಚಪ್ಪಾಳೆ,
ನಿಜಜೀವನದಲ್ಲಿ ಹೀಗಾದರೆ
ಅದೇ ಅಭಿಮಾನಿ ದೇವರುಗಳಿಂದ
ಉದುರಲಾರಂಭಿಸುತ್ತದೆ
ಖಂಡನೆಯ ಸುರಿಮಳೆ!

ಆನಂದ ರಾಮತೀರ್ಥ, ಜಮಖಂಡಿ

ಗೋಡೆ ಬರಹದ ವಿರುದ್ಧ ದಿಟ್ಟ ನಡೆ

ಶೌಚಾಲಯದ ಗೋಡೆ ಮೇಲೆ ಮಹಿಳೆಯೊಬ್ಬರ ಫೋನ್ ನಂಬರ್ ಬರೆದು ಸಿಕ್ಕಿಬಿದ್ದಿರುವ ವ್ಯಕ್ತಿಯ ಪ್ರಕರಣವನ್ನು ರದ್ದು ಮಾಡದಿರುವ ಮೂಲಕ ಹೈಕೋರ್ಟ್, ಮಹಿಳೆಯರ ಗೌರವ ಹಾಗೂ ಘನತೆಯನ್ನು ಎತ್ತಿಹಿಡಿಯುವ ಶ್ಲಾಘನೀಯ ಕೆಲಸ ಮಾಡಿದೆ. ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿರುವ ವಿಕೃತ ಕೃತ್ಯ ಇದಾಗಿದ್ದು, ಬಹಳಷ್ಟು ಹೆಣ್ಣುಮಕ್ಕಳು ಅನ್ನಲಾಗದೆ, ಅನುಭವಿಸಲಾಗದೆ ಮೂಕ ವೇದನೆ ಅನುಭವಿಸಿದ್ದಾರೆ. ಶೌಚಾಲಯಗಳ ತುಂಬಾ ಹೆಣ್ಣುಮಕ್ಕಳ ಬಗ್ಗೆ ಕೆಟ್ಟದಾಗಿ ಬರೆದು ವಿಕೃತ ಆನಂದವನ್ನು ಪಡೆಯುವ ಶೌಚಾಲಯ ಸಾಹಿತ್ಯ ಪ್ರವೀಣರು ಖಂಡಿತ ಶಿಕ್ಷಾರ್ಹರು. ಗ್ರಾಮೀಣ ಪ್ರದೇಶದ ಹಲವು ಕಾಲೇಜುಗಳು ಹಾಗೂ ಸಾರ್ವಜನಿಕ ಶೌಚಾಲಯಗಳು ಇಂತಹ ಅಸಭ್ಯ ಬರಹಗಳಿಂದ ತುಂಬಿ ತುಳುಕುತ್ತಿರುತ್ತವೆ. ವಿಷಾದದ ಸಂಗತಿ ಎಂದರೆ, ಗಂಡಸರು ಇಂತಹ ಕೆಟ್ಟ ಬರಹಗಳನ್ನು ನೋಡಿಯೂ ತಮಗೆ ಸಂಬಂಧವೇ ಇಲ್ಲದಂತೆ ಹೋಗುವುದು.

ಹಿಂದೊಮ್ಮೆ ಬೆಂಗಳೂರಿನ ಕೆ.ಆರ್. ಮಾರುಕಟ್ಟೆಯ ಶೌಚಾಲಯವೊಂದರಲ್ಲಿ ನಾವು ಸ್ನೇಹಿತರು, ಇಂತಹ ಅವಾಚ್ಯ ನಿಂದನೆಗಳನ್ನು ಉಜ್ಜಿ ಅಳಿಸಿದ್ದೆವು. ಅದೇನೇ ಇರಲಿ, ಈ ಕುರಿತು ಧೈರ್ಯದಿಂದ ದೂರು ನೀಡಿರುವ ಆ ನೊಂದ ಮಹಿಳೆ ನಿಜಕ್ಕೂ ಅಭಿನಂದನಾರ್ಹರು.

ಎಲ್.ಎನ್.ಪ್ರಸಾದ್, ತುರುವೇಕೆರೆ

ಪಕ್ಷವನ್ನು ಸರಿದಾರಿಗೆ ತರಲು ಶ್ರಮಿಸಲಿ!

ಕಾಂಗ್ರೆಸ್ ಪಕ್ಷವನ್ನು ಸರಿದಾರಿಗೆ ತರುವ ಜವಾಬ್ದಾರಿ ನಮ್ಮಂತಹವರ ಮೇಲಿದೆ' ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್.ಮುಕುಂದರಾಜ್ ಅವರು ಹೇಳಿರುವುದಾಗಿ ವರದಿಯಾಗಿದೆ (ಪ್ರ.ವಾ., ಜೂನ್ 17). ಅಂದರೆ, 'ಕಾಂಗ್ರೆಸ್ ಪಕ್ಷ ಈಗ ಸರಿದಾರಿಯಲ್ಲಿ ಇಲ್ಲ' ಎಂದು ಅವರು ಬಹಿರಂಗವಾಗಿ ಘೋಷಿಸಿದ್ದಾರೆ.

ಕಾಂಗ್ರೆಸ್ ಪಕ್ಷವನ್ನು ಸರಿದಾರಿಗೆ ತರಬೇಕಾದದ್ದು ಅವರ ತಕ್ಷಣದ ಗುರಿ ಅಂದ ಮೇಲೆ ಪಕ್ಷದಲ್ಲಿ ಅದಕ್ಕೆ ಅಗತ್ಯವಾದ ಹಲವಾರು ಹುದ್ದೆಗಳು ಇವೆ. ಅವರು ಅಂತಹ ಹುದ್ದೆಯನ್ನು ಅಲಂಕರಿಸಲಿ. ಅದಕ್ಕೆ ಯಾರ ತಕರಾರೂ ಇಲ್ಲ. ಆದರೆ ಸಾಹಿತ್ಯ ಅಕಾಡೆಮಿಗೆ ಅದರದ್ದೇ ಆದ ಸಾಂಸ್ಕೃತಿಕ, ಸಾಮಾಜಿಕ ಕರ್ತವ್ಯಗಳಿವೆ. ಆ ಕರ್ತವ್ಯಗಳನ್ನು ನಿರ್ವಹಿಸಲು ಇತರ ಯೋಗ್ಯ ವ್ಯಕ್ತಿಗೆ ಬಿಟ್ಟುಕೊಟ್ಟು, ಬಳಿಕ ಕಾಂಗ್ರೆಸ್ ಪಕ್ಷವನ್ನು ಸರಿದಾರಿಗೆ ತರಲು ಶ್ರಮಿಸುವ ಪವಿತ್ರ ಕಾರ್ಯ ನಿರ್ವಹಿಸಲಿ.

ಟಿ.ಸುರೇಂದ್ರ ರಾವ್, ಬೆಂಗಳೂರು

ಭ್ರೂಣ ಹತ್ಯೆ ಮತ್ತು ಕಾರ್ನಾಡರ ಆತ್ಮಕಥೆ!

ರಾಜ್ಯದಲ್ಲಿ ಭ್ರೂಣಹತ್ಯೆಯ ಹೆಚ್ಚು ಪ್ರಕರಣಗಳು ವರದಿಯಾಗುತ್ತಿರುವ ಈ ಸಂದರ್ಭದಲ್ಲಿ, ನಾಟಕಕಾರ ಗಿರೀಶ ಕಾರ್ನಾಡ ಅವರು ತಮ್ಮ 'ಆಡಾಡತ ಆಯುಷ್ಯ' ಕೃತಿಯನ್ನು ವೈದ್ಯೆಯೊಬ್ಬರಿಗೆ 'ಅರ್ಪಣೆ' ಮಾಡಿದ ಕುತೂಹಲದ ಸಂಗತಿ ನೆನಪಾಗುತ್ತದೆ.

'ಅರ್ಪಣೆ' ಬರಹದ ಸಂಕ್ಷಿಪ್ತ ರೂಪ ಇಷ್ಟು: ನಾನು ಪುಣೆಯ ಫಿಲ್ಮ್ ಹಾಗೂ ಟೆಲಿವಿಜನ್ ಸಂಸ್ಥೆಯ ನಿರ್ದೇಶಕನಾಗಿ ನೇಮಕಗೊಂಡಿದ್ದೆ. ಮನೆಯ ಒಟ್ಟು ವಾತಾವರಣ ಆನಂದದಿಂದ ಬೀಗುತ್ತಿತ್ತು. 'ನಾವು ಇವನು ಬೇಡ ಅಂತ ಅಂದುಕೊಂಡಿದ್ದೆವು!' ಎಂದು ಹೇಳಿ ಸ್ವಲ್ಪ ಸಂಕೋಚಗೊಂಡ ಅಮ್ಮ ಮಾತು ನಿಲ್ಲಿಸಿದಳು. ನನ್ನ ಕುತೂಹಲ ಕೆರಳಿತು. ಕೆದಕಿ ಕೇಳಿದೆ. 'ನೀನು ಹೊಟ್ಟೆಯಲ್ಲಿದ್ದಾಗ, ಇನ್ನು ಮಕ್ಕಳು ಸಾಕು ಅನಿಸಿತು. ಅದಕ್ಕಾಗಿ ಪುಣೆಯಲ್ಲಿಯ ಕ್ಲಿನಿಕ್ಕಿಗೆ ಹೋದೆವು. ಬಹಳ ಸಮಯ ಕಾಯ್ದರೂ ವೈದ್ಯೆ ಬರಲೇ ಇಲ್ಲ. ಬೇಸತ್ತು ಮನೆಗೆ ಬಂದುಬಿಟ್ಟೆವು. ಮತ್ತೆ ಹೊರಳಿ ಆ ಕಡೆಗೆ ಹೋಗಲೇ ಇಲ್ಲ' ಎಂದು ಅಮ್ಮ ನಿಧಾನವಾಗಿ ಹೇಳಿದಳು. ಅಮ್ಮನ ಮಾತಿನಿಂದ ನಾನು ಗರಬಡಿದವನಂತಾದೆ. ಮಂಕಾಗಿ ಕೂತೆ. ಅಂದು ಡಾಕ್ಟರ್ ಕ್ಲಿನಿಕ್ಕಿಗೆ ಬಂದಿದ್ದರೆ ಈ ಆತ್ಮಕಥೆ ಮಾತ್ರವಲ್ಲ, ಇದರ ಉತ್ತಮ ಪುರುಷನಾದ ನಾನೇ ಇರುತ್ತಿರಲಿಲ್ಲ. ಆದ್ದರಿಂದ ಇವೆಲ್ಲವುಗಳ ಅಸ್ತಿತ್ವಕ್ಕೆ ಕಾರಣೀಭೂತಳಾದ ಡಾ. ಮಧುಮಾಲತಿ ಗುಣೆಯ ನೆನಪಿಗೆ ಕೃತಿ ಅರ್ಪಿಸಿದ್ದೇನೆ.

ಮಲ್ಲಿಕಾರ್ಜುನ ಹೆಗ್ಗಳಗಿ, ಮುಧೋಳ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕುಲುಕಾಡಿದ ಮತಬುಟ್ಟಿಗಳು...

● ಯೋಗೇಂದ್ರ ಯಾದವ್, ರಾಹುಲ್ ಶಾಸ್ತ್ರಿ, ಶ್ರೇಯಸ್ ಸರ್ದೇಸಾಯಿ

ಬಿಜೆಪಿ ಈ ಹಿಂದೆ ಅಧಿಕಾರಕ್ಕೆ ಬರುವಲ್ಲಿ ಅದು ಸೃಷ್ಟಿಸಿಕೊಂಡ ಮತದಾರರ ಸಮುದಾಯದ್ದೇ ಪ್ರಮುಖ ಪಾತ್ರ. 90ರ ದಶಕದಲ್ಲಿ 'ಮೇಲ್ಜಾತಿ'ಗಳು, ಮಧ್ಯಮ ವರ್ಗ, ನಗರ ಪ್ರದೇಶದ ಮತದಾರರು ಮತ್ತು ಪುರುಷ ಮತದಾರರನ್ನು ಒಳಗೊಂಡ ಒಂದು 'ಪ್ರಬಲ ಮತ ಸಮುದಾಯ'ವನ್ನು ಬಿಜೆಪಿ ರೂಪಿಸಿತ್ತು. ಆನಂತರದ ಚುನಾವಣೆಗಳಲ್ಲಿ ಈ ಪ್ರಬಲ ಮತ ಸಮುದಾಯವೇ ಬಿಜೆಪಿಯನ್ನು ಅಧಿಕಾರಕ್ಕೆ ತರುತ್ತಾ ಬಂದಿದೆ. 2014 ಮತ್ತು 2019ರ ಚುನಾವಣೆಯಲ್ಲಿ ಈ ವರ್ಗದ ಮತಗಳು ಬಿಜೆಪಿಗೇ ಹೆಚ್ಚಿನ ಸಂಖ್ಯೆಯಲ್ಲಿ ಬಂದಿರುವುದನ್ನು ಚುನಾವಣಾ ದತ್ತಾಂಶಗಳು ಹೇಳುತ್ತವೆ. ಆದರೆ ಇವುಗಳಲ್ಲಿ ಕೆಲವು ವರ್ಗದ ಮತಗಳು ಬಿಜೆಪಿಯಿಂದ ತುಸು ದೂರ ಸರಿದಿರುವುದಕ್ಕೆ 2024ರ ಚುನಾವಣೆ ಸಾಕ್ಷಿಯಾಗಿದೆ.

ಚುನಾವಣಾ ಫಲಿತಾಂಶ ವರದಿಗಳು ಮತ್ತು ಲೋಕನೀತಿ–ಸಿಎಸ್‌ಡಿಎಸ್ ಮತದಾನೋತ್ತರ ಸಮೀಕ್ಷಾ ವರದಿಗಳಲ್ಲಿನ ದತ್ತಾಂಶಗಳನ್ನು ಬಳಸಿಕೊಂಡು ಈ ವರದಿಯನ್ನು ಸಿದ್ಧಪಡಿಸಲಾಗಿದೆ. ಈ ಎಲ್ಲಾ ದತ್ತಾಂಶಗಳು ಸಂಬಂಧಿತ ಜಾಲತಾಣಗಳಲ್ಲಿ ಲಭ್ಯವಿವೆ. ಸಮೀಕ್ಷಾ ವರದಿಗಳು 'ದಿ ಹಿಂದೂ' ಪತ್ರಿಕೆಯಲ್ಲಿ ಪ್ರಕಟವಾಗಿದ್ದು, ಅದರ ಜಾಲತಾಣದಲ್ಲಿ ಸಂಬಂಧಿತ ದತ್ತಾಂಶಗಳು ಲಭ್ಯವಿವೆ.

ನರೇಂದ್ರ ಮೋದಿ ಅವರು ರಾಷ್ಟ್ರ ರಾಜಕಾರಣದಲ್ಲಿ ಮುನ್ನೆಲೆಗೆ ಬಂದ ನಂತರ ಮತ್ತು ಅವರು ಪ್ರಧಾನಿಯಾಗಿ ಅಧಿಕಾರಕ್ಕೆ ಬಂದ ನಂತರ ಬಿಜೆಪಿಯ ಈ 'ಪ್ರಬಲ ಮತ ಸಮುದಾಯ'ವು ಮತ್ತಷ್ಟು ವಿಸ್ತರಣೆಯಾಯಿತು. ಅತ್ಯಂತ ಹಿಂದುಳಿದ ವರ್ಗಗಳು (ಇಬಿಸಿ), ಬಡವರು ಮತ್ತು ಆದಿವಾಸಿಗಳನ್ನು ಬಿಜೆಪಿ ತನ್ನತ್ತ ಸೆಳೆದುಕೊಂಡಿತು. ಈ ವರ್ಗದ ಮತದಾರರು ಬಿಜೆಪಿಗೆ ಹೆಚ್ಚಿನ ಸಂಖ್ಯೆಯಲ್ಲಿ ಮತಹಾಕಿದ್ದಾರೆ ಎಂಬುದನ್ನು ದತ್ತಾಂಶಗಳು ಹೇಳುತ್ತವೆ.

2024ರ ಚುನಾವಣೆಯಲ್ಲಿ ಬಿಜೆಪಿಗೆ ಗಣನೀಯ ಮಟ್ಟದಲ್ಲಿ ಹಿನ್ನಡೆ ಆಗಿದ್ದರೂ, ವಿವಿಧ ಸಾಮಾಜಿಕ ಸಮುದಾಯಗಳಲ್ಲಿ ಅದರ ಮತ ಬೆಂಬಲಕ್ಕೆ ಯಾವುದೇ ಧಕ್ಕೆಯಾಗಿಲ್ಲ. ಈ ಮತ ಸಮುದಾಯಗಳಿಂದ ಹೊರಗೆ ಉಳಿದ ಬಡವರು, ದಲಿತರು, ಇತರೆ ಹಿಂದುಳಿದ ವರ್ಗಗಳು, ಗ್ರಾಮೀಣ ಮತ್ತು ಅಲ್ಪಸಂಖ್ಯಾತರ ಮತಗಳನ್ನು ಒಗ್ಗೂಡಿಸುವುದು ಸುಲಭದ ಕೆಲಸವೇನಲ್ಲ. ಸಾಮಾಜಿಕವಾಗಿ ಬಹುಸಂಖ್ಯಾತರಾಗಿರುವ ಈ ಸಮುದಾಯಗಳನ್ನು ಇನ್ನೊಂದು 'ಪ್ರಬಲ ಮತ ಸಮುದಾಯ'ವನ್ನಾಗಿ ರೂಪಿಸಲು ಅವಕಾಶವಿದೆ. ಅಂತಹ ಒಂದು ಸವಾಲು ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳ ಎದುರು ಇದೆ.

'ಇಂಡಿಯಾ' ಪರವಾಗಿ ಒಗ್ಗೂಡಿದ ಮುಸ್ಲಿಮರ ಮತ

(ಶೇಕಡಾವಾರು ಪ್ರಮಾಣದಲ್ಲಿ)



- ಪ್ರಧಾನಿಯಾದಿಯಾಗಿ ಬಿಜೆಪಿಯ ಎಲ್ಲ ನಾಯಕರು ಮುಸ್ಲಿಮರ ಮೇಲೆ ವಾಗ್ದಾಳಿ ನಡೆಸಿದ್ದು, ಮುಸ್ಲಿಮರ ಮತಗಳು ಬಿಜೆಪಿ–ಎನ್‌ಡಿಎ ವಿರುದ್ಧವಾಗಿ ಒಟ್ಟುಗೂಡಿಸುವಲ್ಲಿ ಯಶಸ್ವಿಯಾಗಿದೆ. ಪರಿಣಾಮವಾಗಿ ಹಲವು ಕ್ಷೇತ್ರಗಳಲ್ಲಿ ಬಿಜೆಪಿಯು ಸೋಲಬೇಕಾಯಿತು
- ರಾಷ್ಟ್ರಮಟ್ಟದಲ್ಲಿ ಮುಸ್ಲಿಂ ಮತಗಳ ಪ್ರಮಾಣ ಕಡಿಮೆ ಇದ್ದರೂ ಬಿಜೆಪಿ ವಿರುದ್ಧ ಚಲಾವಣೆಯಾದ ಮುಸ್ಲಿಮರ ಮತ ಶೇ 65ರಷ್ಟಾಗಿದೆ. ಇದು ಈವರೆಗಿನ ಗರಿಷ್ಠ ಪ್ರಮಾಣ. 'ಇಂಡಿಯಾ' ಮೈತ್ರಿಕೂಟಕ್ಕೆ ಟಿಎಂಸಿಯ ಮುಸ್ಲಿಂ ಮತಗಳನ್ನೂ ಸೇರಿಸಿದರೆ, ಈ ಪ್ರಮಾಣ ಇನ್ನಷ್ಟು ಹೆಚ್ಚಾಗಲಿದೆ
- ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಮತ್ತು ಎಸ್‌ಪಿ ಒಟ್ಟಿಗೇ ಕಣಕ್ಕೆ ಇಳಿದ ಕಾರಣ, ಮುಸ್ಲಿಮರ ಮತ ವಿಭಜನೆಗೆ ತಡೆಬಿದ್ದಿತು. ಪರಿಣಾಮವಾಗಿಯೇ ಈ ಪಕ್ಷದ ಅಭ್ಯರ್ಥಿಗಳ ಪರವಾಗಿ ಮುಸ್ಲಿಮರ ಮತಗಳು ಹೆಚ್ಚಿನ ಸಂಖ್ಯೆಯಲ್ಲಿ ಬಿದ್ದವು
- ಅಸ್ಸಾಂನ ಮುಸ್ಲಿಮರು ಧರ್ಮಾಧಾರಿತ ಪಕ್ಷದಿಂದ (ಎಐಯುಡಿಎಫ್) ದೂರ ಸರಿದಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಆಲ್ ಇಂಡಿಯಾ ಸೆಕ್ಯುಲರ್ ಫ್ರಂಟ್ ಮುಸ್ಲಿಮರ ಕೆಲವು ಮತಗಳನ್ನು ಸೆಳೆದುಕೊಂಡರೂ ಟಿಎಂಸಿಗೆ ಅದು ಹೊಡೆತವನ್ನೇನೂ ನೀಡಿಲ್ಲ
- ಚಲಾವಣೆಯಾದ ಮುಸ್ಲಿಂ ಮತಗಳಲ್ಲಿ ಕಾಂಗ್ರೆಸ್‌ಗೇ ಗರಿಷ್ಠ ಶೇ 38ರಷ್ಟು ಮತಗಳು ಬಿದ್ದಿವೆ. ಆದರೆ, ಕಾಂಗ್ರೆಸ್‌ಗೆ ದೊರೆತ ಒಟ್ಟು ಮತಗಳಲ್ಲಿ ಮುಸ್ಲಿಮರ ಮತಗಳ ಪ್ರಮಾಣ ಶೇ 25ರ ಆಸುಪಾಸಿನಲ್ಲಷ್ಟೇ ಇದೆ
- ಬಿಜೆಪಿಯೂ ಮುಸ್ಲಿಂ ಮತದಾರರನ್ನು ಹೊಂದಿದ್ದು, ಅದರಲ್ಲಿ ಗಣನೀಯ ಬದಲಾವಣೆ ಏನಾಗಿಲ್ಲ. 2019ಕ್ಕೆ ಹೋಲಿಸಿದರೆ 2024ರಲ್ಲಿ ಬಿಜೆಪಿಗೆ ಬಿದ್ದ ಮುಸ್ಲಿಮರ ಮತ ಪ್ರಮಾಣದಲ್ಲಿ 1 ಶೇಕಡಾವಾರು ಅಂಶದಷ್ಟು ಏರಿಕೆಯಾಗಿದೆ

ಮೊದಲ ಲೇಖಕ: ಭಾರತ ಜೋಡೊ ಯಾತ್ರೆಯ ರಾಷ್ಟ್ರೀಯ ಸಂಚಾಲಕ, **ಎರಡನೇ ಲೇಖಕ:** ಸಂಶೋಧಕ, **ಮೂರನೇ ಲೇಖಕ:** ಸಮೀಕ್ಷಾ ಸಂಶೋಧನೆ ಸಂಶೋಧಕ

ಬಡವ–ಸಿರಿವಂತರ ಮತ: ಕಾಂಗ್ರೆಸ್‌ಗೆ ತುಸು ಮರುಗಳಿಕೆ



- ಕಾಂಗ್ರೆಸ್ ಕಳೆದುಕೊಂಡಿದ್ದ ಅತ್ಯಂತ ಬಡವರ ಮತಗಳಲ್ಲಿ ಸ್ವಲ್ಪ ಪ್ರಮಾಣವನ್ನು ಮರುಗಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಬಡವರ ಪರವಾದ ಗ್ಯಾರಂಟಿಗಳ ಅಭಿಯಾನ ಕಾಂಗ್ರೆಸ್‌ಗೆ ಅನುಕೂಲವಾಗಿದೆ
- ಈ ಸ್ವರೂಪದ ಅಭಿಯಾನ ಮತ್ತು ಘೋಷಣೆಗಳು ಕಾಂಗ್ರೆಸ್‌ಗೆ ಅನುಕೂಲ ಮಾಡಿಕೊಟ್ಟಿದ್ದರೂ ಇದನ್ನು ಪ್ರಬಲ ಮತನೆಲೆಯನ್ನಾಗಿ ರೂಪಿಸಿಕೊಳ್ಳಲು ಇನ್ನಷ್ಟು ಕೆಲಸ ಮಾಡಬೇಕಿದೆ
- ಕಾಂಗ್ರೆಸ್‌ಗೆ ಮತ ನೀಡಿದ ಅತಿಬಡವ ಮತದಾರರ ಪ್ರಮಾಣ ಹೆಚ್ಚಾಗಿರುವಂತೆ, ಕಾಂಗ್ರೆಸ್‌ಗೆ ಮತ ನೀಡಿದ ಅತಿಶ್ರೀಮಂತ ಮತದಾರರ ಪ್ರಮಾಣವೂ ತುಸು ಏರಿಕೆಯಾಗಿದೆ

ಸಿರಿವಂತರ ಮತ: ಬಿಜೆಪಿಗೆ ತುಸು ನಷ್ಟ



- ಬಡವರಲ್ಲಿ ಬಿಜೆಪಿ ಮೊದಲಿಗೆ ಜನಪ್ರಿಯವಾಗಿಯೇನೂ ಇರಲಿಲ್ಲ. ನರೇಂದ್ರ ಮೋದಿ ಅವರನ್ನು ಕರೆತಂದ ನಂತರ ಅತ್ಯಂತ ಬಡವರ ಮತಗಳನ್ನು ಬಿಜೆಪಿ ಸೆಳೆಯಲು ಆರಂಭಿಸಿತು
- 2014ರಿಂದ ಬಿಜೆಪಿಗೆ ಮತ ನೀಡುವ ಅತ್ಯಂತ ಬಡವ ಮತದಾರರ ಪ್ರಮಾಣ ಏರಿಕೆಯಾಗುತ್ತಲೇ ಇದೆ. ಆದರೆ 2024ರ ಚುನಾವಣೆಯಲ್ಲಿ ಈ ಏರಿಕೆ ಪ್ರಮಾಣ ಕುಸಿದಿದೆ
- ಸಿರಿವಂತರ ಮತಗಳು ಹೆಚ್ಚಿನ ಪ್ರಮಾಣದಲ್ಲಿ ಬಿಜೆಪಿಗೇ ಬೀಳುತ್ತವೆ. ಆದರೆ ಈ ಹಿಂದಿನ ಲೋಕಸಭಾ ಚುನಾವಣೆಗೆ ಹೋಲಿಸಿದರೆ, 2024ರ ಚುನಾವಣೆಯಲ್ಲಿ ಬಿಜೆಪಿಗೆ ಮತ ನೀಡಿದ ಅತಿಶ್ರೀಮಂತರ ಪ್ರಮಾಣ ತುಸು ಕಡಿಮೆಯಾಗಿದೆ

ಗ್ರಾಮೀಣ, ನಗರ ಪ್ರದೇಶಗಳಲ್ಲಿ ಮತನಿರ್ಣಯದ ಪರಿ



- ಬಿಜೆಪಿಯು ನಗರ ಪ್ರದೇಶದಲ್ಲಿ ತನಗಿರುವ ಬೆಂಬಲವನ್ನು ಸರಿಸುಮಾರು ಅದೇ ಮಟ್ಟದಲ್ಲಿ ಕಾಯ್ದುಕೊಂಡಿದೆ. ಪಟ್ಟಣ ಮತ್ತು ಗ್ರಾಮೀಣ ಪ್ರದೇಶದಲ್ಲೂ ತನ್ನ ಬೆಂಬಲವನ್ನು ಸರಿಸುಮಾರು ಅದೇ ಮಟ್ಟದಲ್ಲಿ ಕಾಯ್ದುಕೊಂಡಿದೆ. ಆದರೆ ಮೂರೂ ಪ್ರದೇಶಗಳ ಮತ ಪ್ರಮಾಣದಲ್ಲಿ 1 ಶೇಕಡಾವಾರು ಅಂಶದಷ್ಟು ಇಳಿಕೆಯಾಗಿದೆ
- ಶಿವಸೇನಾ (ಯುಬಿಟಿ) ಮುಂಬೈನಲ್ಲಿ ಮತ್ತು ಚೆನ್ನೈನಲ್ಲಿ ಡಿಎಂಕೆ ಪ್ರಬಲ ಪೈಪೋಟಿ ನೀಡಿದ್ದರೂ 'ಇಂಡಿಯಾ' ಮೈತ್ರಿಕೂಟವು ನಗರ ಪ್ರದೇಶಗಳಲ್ಲಿ ತನ್ನ ಮತ ಬೆಂಬಲವನ್ನು ಹೆಚ್ಚಿಸಿಕೊಂಡಿದ್ದು ತುಸು ಮಾತ್ರ. ಆದರೆ ಪಟ್ಟಣ ಮತ್ತು ಗ್ರಾಮೀಣ ಪ್ರದೇಶದಲ್ಲಿ 'ಇಂಡಿಯಾ' ಮೈತ್ರಿಕೂಟದ ಮತ ಪ್ರಮಾಣವು ಗಮನಾರ್ಹ ಮಟ್ಟದಲ್ಲಿ ಏರಿಕೆಯಾಗಿದೆ

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

2ನೇ ಆವೃತ್ತಿ

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ಎರಡನೇ ಆವೃತ್ತಿ ಸಮಾರಂಭ ಜೂನ್ 28ಕ್ಕೆ ನಡೆಯಲಿದೆ. ಇದೀಗ 'ಜನಮೆಚ್ಚಿದ ನಟ' ವಿಭಾಗದಲ್ಲಿರುವ ನಟರನ್ನು ಪರಿಚಯಿಸುವ ಸಮಯ. ನಿಮ್ಮ ನೆಚ್ಚಿನ ನಟರಿಗೆ ವೋಟ್ ಮಾಡಲು ಈ ಲಿಂಕ್‌ಗೆ ಲಾಗ್‌ಇನ್ ಆಗಿ: bit.ly/prajavanicinesammanS2

CASAGRAND building aspirations Presents
ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ
Powered by REACH ROOT Premium Hair Oil

'ಘೋಸ್ಟ್' ಚಿತ್ರದಲ್ಲಿನ ನಟನೆಗಾಗಿ **ಶಿವರಾಜ್‌ಕುಮಾರ್** ನಾಮನಿರ್ದೇಶನಗೊಂಡಿದ್ದಾರೆ. 1986ರಲ್ಲಿ 'ಆನಂದ್' ಚಿತ್ರದ ಮುಖಾಂತರ ಬೆಳ್ಳಿತೆರೆಗೆ ಕಾಲಿಟ್ಟ ಶಿವರಾಜ್‌ಕುಮಾರ್, ಸದ್ಯ ಚಂದನವನದಲ್ಲಿ 38 ವರ್ಷ ಪೂರೈಸಿ ಮುನ್ನಡೆಯುತ್ತಿದ್ದಾರೆ. 125ನೇ ಸಿನಿಮಾ ಪೂರೈಸಿದ ಸಂಭ್ರಮದಲ್ಲಿರುವ ಅವರು ಸದ್ಯ ಗೀತಾ ಪಿಕ್ಚರ್ಸ್‌ನಿಂದ ನಿರ್ಮಾಣವಾಗುತ್ತಿರುವ 'ಭೈರತಿ ರಣಗಲ್', ಅರ್ಜುನ್ ಜನ್ಯ ನಿರ್ದೇಶನದ '45', ರೋಹಿತ್ ಪದಕಿ ನಿರ್ದೇಶನದ 'ಉತ್ತರಕಾಂಡ' ಸಿನಿಮಾದಲ್ಲಿ ತೊಡಗಿಸಿಕೊಂಡಿದ್ದಾರೆ.

'ರಾಘವೇಂದ್ರ ಸ್ಟೋರ್ಸ್' ಸಿನಿಮಾದಲ್ಲಿನ ನಟನೆಗಾಗಿ **ಜಗ್ಗೇಶ್** ನಾಮನಿರ್ದೇಶನಗೊಂಡಿದ್ದಾರೆ. 'ನವರಸ ನಾಯಕ' ಜಗ್ಗೇಶ್ 44 ವರ್ಷಗಳ ಸಿನಿ ಪಯಣ ಪೂರೈಸಿದ್ದಾರೆ. 1978ರಲ್ಲಿ 'ಬನಶಂಕರಿ' ಎಂಬ ಸಿನಿಮಾ ಮೂಲಕ ಮೊದಲ ಬಾರಿ ತೆರೆಯ ಮೇಲೆ ಕಾಣಿಸಿಕೊಂಡ ಅವರು ಬಳಿಕ 1992ರಲ್ಲಿ 'ತರ್ಲೆನನ್ಮಗ' ಚಿತ್ರದಿಂದ ಪೂರ್ಣಪ್ರಮಾಣದ ನಾಯಕ ನಟನಾದರು. 120ಕ್ಕೂ ಅಧಿಕ ಸಿನಿಮಾಗಳಲ್ಲಿ ನಟಿಸಿರುವ ಜಗ್ಗೇಶ್ ನಟನೆ, ನಿರ್ದೇಶನ, ಟಿ.ವಿ. ಕಾರ್ಯಕ್ರಮ, ರಾಜಕಾರಣ–ಹೀಗೆ ಹಲವು ಕ್ಷೇತ್ರಗಳಲ್ಲಿ ಬಿಡುವಿಲ್ಲದೆ ತೊಡಗಿಸಿಕೊಂಡಿದ್ದಾರೆ.

'ಬಾನದಾರಿಯಲಿ' ಸಿನಿಮಾದಲ್ಲಿನ ನಟನೆಗಾಗಿ **ಗಣೇಶ್** ನಾಮನಿರ್ದೇಶನಗೊಂಡಿದ್ದಾರೆ. ಕಿರುತೆರೆಯಲ್ಲಿ ಮಿಂಚಿದ ಗಣೇಶ್, 'ಚೆಲ್ಲಾಟ' ಸಿನಿಮಾ ಮೂಲಕ ನಾಯಕ ನಟನಾಗಿ ಬೆಳ್ಳಿತೆರೆಯಲ್ಲಿ ಮಿಂಚಿದರು. ಯೋಗರಾಜ್ ಭಟ್ ನಿರ್ದೇಶನದ 'ಮುಂಗಾರು ಮಳೆ' ಗಣೇಶ್ ಸಿನಿಪಯಣದ ದಿಕ್ಕನ್ನೇ ಬದಲಿಸಿತು. ಬಳಿಕ 'ಚೆಲುವಿನ ಚಿತ್ತಾರ', 'ಗಾಳಿಪಟ', 'ಮುಗುಳುನಗೆ' ಹೀಗೆ ಹಲವು ಹಿಟ್ ಸಿನಿಮಾಗಳನ್ನು ನೀಡಿದ ಗಣೇಶ್ ಸದ್ಯ 'ಕೃಷ್ಣಂ ಪ್ರಣಯ ಸಖಿ' ಸಿನಿಮಾ ಬಿಡುಗಡೆಗೆ ಎದುರು ನೋಡುತ್ತಿದ್ದಾರೆ.

'ಸಪ್ತ ಸಾಗರದಾಚೆ ಎಲ್ಲೋ–ಸೈಡ್ ಎ' ಚಿತ್ರದಲ್ಲಿನ ನಟನೆಗಾಗಿ **ರಕ್ಷಿತ್ ಶೆಟ್ಟಿ** ನಾಮನಿರ್ದೇಶನಗೊಂಡಿದ್ದಾರೆ. 'ನಮ್ ಏರಿಯಾಲ್ ಒಂದ್ ದಿನ', 'ತುಗ್ಲಕ್' ಮೂಲಕ ಸಿನಿಪಯಣ ಆರಂಭಿಸಿದ ರಕ್ಷಿತ್, ನಂತರದಲ್ಲಿ 'ಸಿಂಪಲ್ಲಾಗ್ ಒಂದ್ ಲವ್ ಸ್ಟೋರಿ' ಹೇಳಿ ಪ್ರೇಕ್ಷಕರನ್ನು ಸೆಳೆದರು. '777 ಚಾರ್ಲಿ' ಸಿನಿಮಾ ಮೂಲಕ ಪ್ಯಾನ್ ಇಂಡಿಯಾ ಮಟ್ಟದಲ್ಲಿ ಮಿಂಚಿದವರು. 'ಕಿರಿಕ್ ಪಾರ್ಟಿ' ಇವರ ಸಿನಿಪಯಣಕ್ಕೆ ತಿರುವು ನೀಡಿದ ಸಿನಿಮಾ. 'ಉಳಿದವರು ಕಂಡಂತೆ' ಸಿನಿಮಾ ಮೂಲಕ ನಿರ್ದೇಶನದ ಸಾಮರ್ಥ್ಯವನ್ನು ತೋರ್ಪಡಿಸಿ, 'ಪರಂವಃ ಸ್ಟುಡಿಯೋಸ್' ಹುಟ್ಟು ಹಾಕಿ ಪ್ರಸ್ತುತ 'ರಿಚರ್ಡ್ ಆಂಟನಿ'ಯನ್ನು ಬೆನ್ನತ್ತಿ ಹೊರಟಿದ್ದಾರೆ.

ವೋಟ್ ಮಾಡಲು ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

'ಗುರುದೇವ್ ಹೊಯ್ಸಳ' ಸಿನಿಮಾದಲ್ಲಿನ ನಟನೆಗಾಗಿ **ಧನಂಜಯ** ನಾಮನಿರ್ದೇಶನಗೊಂಡಿದ್ದಾರೆ. 'ಜಯನಗರ 4th ಬ್ಲಾಕ್' ಕಿರುಚಿತ್ರದ ಮೂಲಕ ಬಣ್ಣದ ಲೋಕಕ್ಕೆ ಹೆಜ್ಜೆ ಇಟ್ಟಿದ್ದ ನಟ ಧನಂಜಯ, ಸಿನಿಮಾ ನಿರ್ಮಾಣ ಕ್ಷೇತ್ರದಲ್ಲೂ ಛಾಪು ಮೂಡಿಸುತ್ತಿದ್ದಾರೆ. ಡಾಲಿ ಪಿಕ್ಚರ್ಸ್ ಸಂಸ್ಥೆಯಡಿ ಸಿನಿಮಾಗಳನ್ನು ನಿರ್ಮಾಣ ಮಾಡಿದ ಇವರು, ಸದ್ಯ 'ಉತ್ತರಕಾಂಡ', 'ಅಣ್ಣ ಫ್ರಂ ಮೆಕ್ಸಿಕೋ' ಚಿತ್ರೀಕರಣದಲ್ಲಿ ತೊಡಗಿಸಿಕೊಂಡಿದ್ದಾರೆ.

'ಟೋಬಿ' ಮತ್ತು 'ಸ್ವಾತಿ ಮುತ್ತಿನ ಮಳೆ ಹನಿಯೇ' ಚಿತ್ರಗಳಲ್ಲಿನ ನಟನೆಗಾಗಿ **ರಾಜ್ ಬಿ.ಶೆಟ್ಟಿ** ನಾಮನಿರ್ದೇಶನಗೊಂಡಿದ್ದಾರೆ. 'ಒಂದು ಮೊಟ್ಟೆಯ ಕಥೆ' ಸಿನಿಮಾದ ಮುಖಾಂತರ ಕನ್ನಡದ ಪ್ರೇಕ್ಷಕರ ಮುಂದೆ ನಟನಾಗಿ, ನಿರ್ದೇಶಕನಾಗಿ ಬಂದ ರಾಜ್, ನಂತರದಲ್ಲಿ 'ಗರುಡ ಗಮನ ವೃಷಭ ವಾಹನ' ಸಿನಿಮಾ ಮೂಲಕ ಪ್ಯಾನ್ ಇಂಡಿಯಾ ಮಟ್ಟದಲ್ಲಿ ಗುರುತಿಸಿಕೊಂಡರು. ಸದ್ಯ ಮಲಯಾಳ ಇಂಡಸ್ಟ್ರಿಗೂ ಹೆಜ್ಜೆ ಇಟ್ಟಿರುವ ರಾಜ್ ಸದ್ಯ ಹೊಸ ಕನ್ನಡ ಸಿನಿಮಾವೊಂದರ ಬರವಣಿಗೆಯಲ್ಲಿದ್ದಾರೆ.

'ಡೇರ್ ಡೆವಿಲ್ ಮುಸ್ತಾಫಾ' ಚಿತ್ರದಲ್ಲಿನ ನಟನೆಗಾಗಿ **ಶಿಶಿರ್ ಬೈಕಾಡಿ** ನಾಮನಿರ್ದೇಶನಗೊಂಡಿದ್ದಾರೆ. ಮೈಸೂರಿನವರಾದ ಇವರು 'ನಟನ' ರಂಗಶಾಲೆಯ ವಿದ್ಯಾರ್ಥಿ. ಆರನೇ ವರ್ಷದಿಂದಲೇ ನಟನೆ ಪ್ರಾರಂಭಿಸಿ, ಪಿಯುಸಿ ಮುಗಿಯುತ್ತಿದ್ದಂತೆ ರಂಗಭೂಮಿಯನ್ನು ಗಂಭೀರವಾಗಿ ಪರಿಗಣಿಸಿ, ಅದರಲ್ಲಿಯೇ ಬದುಕು ಕಟ್ಟಿಕೊಳ್ಳಬೇಕು ಎಂದು ನಿರ್ಧರಿಸಿದರು. ಇದೀಗ ಜಡೇಶ್ ಕೆ. ಹಂಪಿ ನಿರ್ದೇಶನದಲ್ಲಿ, ದುನಿಯಾ ವಿಜಯ್ ನಟಿಸುತ್ತಿರುವ ಚಿತ್ರದಲ್ಲಿ ಪ್ರಮುಖ ಪಾತ್ರ ಮಾಡುತ್ತಿದ್ದಾರೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಜೂನ್ 18, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಏಕಾದಶಿ ಗಂ. 6-25 ನಕ್ಷತ್ರ: ಸ್ವಾತಿ ಗಂ. 15-56 ಯೋಗ: ಶಿವ ಗಂ. 21-39 ಕರಣ: ವಿಷ್ಟಿ ಗಂ. 06-25, ಮಿಥುನ ಮಾಸದ ನೇ 04 ದಿನ, ಮಳೆನಕ್ಷತ್ರ: ಮೃಗಶಿರ 4.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-08 ಸೂರ್ಯಾಸ್ತ : 06-55
ಮುಸ್ಲಿಂ ದಿನಾಂಕ : 11 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 6, 2

ಮೇಷ: ಸಂಗೀತ ಕ್ಷೇತ್ರದಲ್ಲಿ ನೀವಂದುಕೊಂಡ ಸಾಧನೆ ಮಾಡಲಾಗದೆ ಮನಸ್ಸಿನಲ್ಲಿ ದುಃಖವನ್ನು ಅನುಭವಿಸುವಿರಿ. ಉದ್ಯೋಗದಲ್ಲಿ ಸಿಗುವ ವರ್ಗಾವಣೆಯ ಅವಕಾಶಗಳನ್ನು ಯಾವ ಕಾರಣಕ್ಕೂ ಬಿಟ್ಟುಕೊಳ್ಳಬೇಡಿ.

ವೃಷಭ: ಉದ್ಯೋಗದಲ್ಲಿ ವೈಯಕ್ತಿಕ ಅನಿಸಿಕೆಯು ಉತ್ತಮ ರೀತಿಯಲ್ಲಿ ಸಹಕಾರಿ ಆಗುವುದು. ಅಪರೂಪದ ಅತಿಥಿಯ ಆಗಮನ ಸಂತೋಷ ತರಲಿದೆ. ನೆಂಟರಿಷ್ಟರ ಕೊಂಕು ಮಾತುಗಳಿಗೆ ಮುಖ ಬಾಡಬಹುದು.

ಮಿಥುನ: ಮಕ್ಕಳ ವಿಚಾರದಲ್ಲಿ ಭವಿಷ್ಯದ ದೃಷ್ಟಿಯಿಂದ ದೊಡ್ಡದು ಸಣ್ಣದು ಎಂಬ ಭೇದ ಮಾಡದೇ ತಕ್ಷಣ ಕಾರ್ಯೋನ್ಮುಖರಾಗುವುದು ಉತ್ತಮ. ಉತ್ತಮ ವರ್ತನೆಯಿಂದ ಸಂತಸ ಉಂಟಾಗುವುದು.

ಕರ್ಕಾಟಕ: ಮಾತುಗಾರರಿಗೆ, ವಾಗ್ಮಿಗಳಿಗೆ, ಬೋಧಕ ವರ್ಗದವರಿಗೆ ವೃತ್ತಿಯಲ್ಲಿ ಮುಂಬಡ್ತಿ ಅಥವಾ ಸನ್ಮಾನಗಳು ದೊರಕಲಿವೆ. ಮನೋಭಿಲಾಷೆಗಳನ್ನು ವ್ಯಕ್ತಪಡಿಸಲು ಹಿಂಜರಿಯಬೇಡಿ. ವ್ಯಾಪಾರದಲ್ಲಿ ಮಿಶ್ರಫಲವಿರುವುದು.

ಸಿಂಹ: ನ್ಯಾಯಾಂಗ ವಿಭಾಗದ ವಿದ್ಯಾರ್ಥಿಗಳಿಗೆ ಓದಿನಲ್ಲಿ ಇಂದಿನಿಂದ ವಿಶೇಷ ಆಸಕ್ತಿ. ಪೂರ್ಣಾಯುವನ್ನು ಅನುಭವಿಸದೆ ಕುಟುಂಬಸ್ಥರು ನಿಧನರಾದದ್ದು ದುಃಖವಾಗುತ್ತದೆ. ಆರ್ಥಿಕ ಸಮಸ್ಯೆ ನಿದ್ದೆ ಕೆಡಿಸಲಿದೆ.

ಕನ್ಯಾ: ವೃತ್ತಿರಂಗದಲ್ಲಿ ಹೊಸ ಹೆಜ್ಜೆ ಇಡುವವರಿಗೆ ವಿದ್ಯಾರ್ಹತೆಗಿಂತ ಸ್ವ–ಪ್ರತಿಭೆ ಬಹಳ ಮುಖ್ಯ. ಮಕ್ಕಳ ಹಿತಾಸಕ್ತಿಗಳಿಗೆ ಹೆಚ್ಚು ಗಮನ ಕೊಡಿ. ಮಕ್ಕಳ ಅಗತ್ಯಗಳನ್ನು ಪೂರೈಸಿ.

ತುಲಾ: ರಾಜಕೀಯ ವರ್ಗದವರು ರಾಜಕಾರಣದ ತಂತ್ರಗಾರಿಕೆ ನಡೆಸುವುದು ಅಗತ್ಯ. ಹಣಕಾಸಿನ ವ್ಯಾಮೋಹ ತೊಂದರೆಗಳಿಗೆ ಕಾರಣವಾಗದಂತೆ ನೋಡಿಕೊಳ್ಳಿ. ಸ್ನೇಹಿತರ ಮಧ್ಯಸ್ಥಿಕೆಯಿಂದ ಪರಿಹಾರ.

ವೃಶ್ಚಿಕ: ಆನುವಂಶಿಕ ಬೇಡಿಕೆಯೊಂದು ಈಡೇರುವುದರಿಂದ ಕೊಂಚ ನೆಮ್ಮದಿ ಸಿಗಲಿದೆ. ತಂದೆ ತಾಯಿ ಅಥವಾ ಕುಟುಂಬದ ಹಿರಿಯರ ಆರೋಗ್ಯದ ಬಗ್ಗೆ ತಪಾಸಣೆ ಅಗತ್ಯವೆನಿಸಲಿದೆ. ನಂಬಿಕೆ ಪ್ರತಿಪಾದಿಸಲು ಅಂಜಬೇಡಿ.

ಧನು: ಪ್ರಯಾಣದಲ್ಲಿ ವಂಚನೆ, ನಷ್ಟದ ಪ್ರಸಂಗಗಳಿದೆ ಎಚ್ಚರಿಕೆಯಿಂದಿರಿ. ಆರೋಗ್ಯ ಸ್ಥಿತಿಯಲ್ಲಿ ಸುಧಾರಣೆ ಕಂಡು ಬರುತ್ತದೆ. ಉದ್ಯೋಗ ಬದಲಿಸುವ ವಿಚಾರದಲ್ಲಿ ಚೆನ್ನಾಗಿ ಯೋಚಿಸುವುದು ಉತ್ತಮ.

ಮಕರ: ಶ್ರದ್ಧೆ, ತಾಳ್ಮೆಯಿಂದ ಹಾಗೂ ಹಿಂದಿನ ಸೋಲು ಹೇಳಿಕೊಟ್ಟ ಪಾಠವನ್ನು ಪಾಲಿಸಿದರೆ ಕಾರ್ಯ ಸಿದ್ಧಿಯಾಗುವುದು. ಅನವಶ್ಯಕವಾಗಿ ಮನಸ್ಸಿನಲ್ಲಿ ಇಟ್ಟುಕೊಂಡಿರುವ ಅನುಮಾನವನ್ನು ಪ್ರಥಮವಾಗಿ ತೆಗೆದುಹಾಕಿ.

ಕುಂಭ: ಜ್ಞಾನ ಸಂಪಾದನಾ ಮಾರ್ಗದಲ್ಲಿ ಉತ್ತಮ ಗುರುವಿನ ಕೊರತೆಯಿಂದಾಗಿ ವಿಳಂಬವಾಗುವ ಸಾಧ್ಯತೆ ಇದೆ. ಸಾಮಾಜಿಕ ಬದುಕಿನಲ್ಲಿ ಸಕಾರಾತ್ಮಕ ಬದಲಾವಣೆ ಆಗುತ್ತದೆ. ಆ ಮನೋಭಾವವೇ ಗೆಲುವಿಗೆ ಕಾರಣ.

ಮೀನ: ತಿಂಗಳ ಕೊನೆಯಲ್ಲಿ ಅನುಭವಿಸಿದ ಹಣದ ಕಷ್ಟವನ್ನು ಇಂದು ಸಂಪೂರ್ಣವಾಗಿ ನಿವಾರಿಸಿಕೊಳ್ಳುವಿರಿ. ಮನಸ್ಸಿಗೆ ಅಪಾರ ಸಂತಸ ದೊರಕಲಿದೆ. ಅಧಿಕಾರದ ಅನುಭವದಿಂದ ಆತ್ಮಾಭಿಮಾನ ವೃದ್ಧಿಯಾಗಲಿದೆ.

ಜ್ಞಾನ

ನುಡಿ ಬೆಳಗು



ಪಿ. ಚಂದ್ರಿಕಾ

ಊರ ತುಂಬಾ ಸುದ್ದಿ– ಸಂತ ತುಕಾರಾಂನನ್ನು ನೋಡಲು ಮತ್ತೊಬ್ಬ ಮಹಾನ್ ಸಂತ ಬರುತ್ತಿದ್ದಾನೆಂದು. ಬಾಯಿಂದ ಬಾಯಿಗೆ ಹರಡುತ್ತಾ ಈ ವಿಷಯವಾಗಿ ಜನರಲ್ಲಿ ಸಂಚಲನ ಮೂಡಿತು. 'ಏನನ್ನು ಮಾತಾಡುತ್ತಾರೆ ಆಧ್ಯಾತ್ಮವನ್ನು ಬಿಟ್ಟು... ನಮಗೂ ಒಂದಿಷ್ಟು ಒಳ್ಳೆಯ ಸಂಗತಿಗಳನ್ನು ಕೇಳುವ ಮಹದವಕಾಶ' ಎಂದು ಮಾತಾಡಿಕೊಂಡರು ಕೆಲ ಹಿರಿಯರು. ಇನ್ನು ಕೆಲವರು, 'ಇಲ್ಲ ಅವರಿಬ್ಬರೂ ಸಾಧಕರು ನಮಗವರ ಮಾತುಗಳು ಅರ್ಥ ಆಗುತ್ತದೋ ಇಲ್ಲವೋ' ಎಂದು ಸಂದೇಹವನ್ನು ವ್ಯಕ್ತಪಡಿಸಿದರು. ಹೀಗೆ ಅವರವರಿಗೆ ತೋಚಿದಂತೆ ಮಾತಾಡಿಕೊಂಡರು.

ಸಂಜೆಯ ಹೊತ್ತಿಗೆ ಊರ ಮುಂದಿನ ಮರದ ಕೆಳಗೆ ಕುಳಿತಿದ್ದ ತುಕಾರಾಂನನ್ನು ಇನ್ನೊಬ್ಬ ಸಂತ ಬಂದು ಸೇರಿದ. ಕುತೂಹಲದಿಂದ ದೊಡ್ಡವರೆಲ್ಲಾ ಅಲ್ಲಿಗೆ ಬಂದು ಸೇರಿದರು. ಆಡುತ್ತಿದ್ದ ಮಕ್ಕಳನ್ನು ಗದರಿಸಿ ಸುಮ್ಮನಾಗಿಸಿ ದೂರ ಕಳಿಸಿದರು. ಯುವಕರು ಕೂಡ ಏನು ನಡೆಯಬಹುದು ಎಂದು ಬಂದು ನೆರೆದರು. ಊರ ಬಾವಿಯಿಂದ ಹೆಂಗಸರು ನೀರನ್ನು ಸೇದಿ ಕೊಡಗಳಲ್ಲಿ ತರುವಾಗ ಬಳೆಯ ಕಿಣಿಕಿಣಿ, ಕೊಡದ ನೀರ ತುಳುಕಾಟ ಕೇಳುವಷ್ಟು ನಿಶ್ಶಬ್ದ ಆವರಿಸಿತ್ತು ಸ್ವಲ್ಪ ಹೊತ್ತಿನಲ್ಲಿ ಅದೂ ಕೇಳದಂತಾಯಿತು. ಇಬ್ಬರು ಸಂತರು ಎದುರು ಕೂತೇ ಇದ್ದಾರೆ. ಊರವರೆಲ್ಲಾ ಮಾತಿಗಾಗಿ ಕಾಯುತ್ತಲೇ ಇದ್ದಾರೆ.

ತಾಳ್ಮೆಗೆ ಎಲ್ಲೆ ಇರುತ್ತದೆ. ರಾತ್ರಿಯಾಗುತ್ತಿದ್ದಂತೆ ಒಬ್ಬೊಬ್ಬರಾಗಿ ಹೊರಡುತ್ತಾರೆ. ಆದರೆ ಇದ್ಯಾವುದರ ಕಡೆಗೂ ಗಮನವೇ ಇಲ್ಲದ ಇಬ್ಬರು ಸಂತರು ಎದುರು ಕೂತೇ ಇದ್ದಾರೆ ಮಾತೇ ಇಲ್ಲದೆ.

ಕತ್ತಲೆ ಕಳೆದು ಬೆಳಕು ಹರಿಯುವಾಗ ಮತ್ತೆ ಊರಜನ ನಿದ್ದೆಯಿಂದ ತಿಳಿದೆದ್ದು ಓಡಿಬಂದು ನೋಡುತ್ತಾರೆ. ಮತ್ತೆ ಇಬ್ಬರೂ ಹಾಗೇ ಕೂತಿದ್ದಾರೆ ಸೂರ್ಯೋದಯವಾದಾಗ ಒಬ್ಬರಿಗೊಬ್ಬರು ನಮಸ್ಕರಿಸಿಕೊಂಡರು. ಆ ಸಂತ ಅಲ್ಲಿಂದ ಹೊರಟೂ ಹೋದ. ಕುತೂಹಲ ತಡೆಯಲಾಗದೆ ಜನ ತುಕಾರಾಂಗೆ 'ನೀವಿಬ್ಬರೂ ಏನು ಮಾತಾಡದೆ ಹೀಗೆ ಮೌನವಾಗಿ ಕುಳಿತಿದ್ದಿರಲ್ಲಾ' ಎಂದು ಪ್ರಶ್ನಿಸುತ್ತಾರೆ. ಆಗ ತುಕಾರಾಂ, 'ಮತ್ತೆ ಏನನ್ನು ಮಾಡಬೇಕಿತ್ತು? ನಿಮಗೆಲ್ಲಾ ಕೇಳುವ ಹಾಗೆ ಮಾತಾಡಬೇಕಿತ್ತಾ' ಎನ್ನುತ್ತಾನೆ.

'ನಮಗೆ ಕೇಳುವುದು ಬೇಡ ನಿಮಗಾದರೂ ಕೇಳಬೇಕಲ್ಲಾ? ಎಂದರು ನೆರೆದ ಜನ. ಮಾತಾಡುವುದು ಎಂದರೇನು? ಎಲ್ಲವನ್ನೂ ಬಾಯಿಬಿಟ್ಟು ಹೇಳಬೇಕೆನ್ನುವುದೇ? ಮೌನದಲ್ಲಿ ಸಂವಹನವಿಲ್ಲವೇ? ಮಳೆಬಿದ್ದ ತಕ್ಷಣ ಬೀಜಕ್ಕೆ ಮೊಳೆಯುವುದನ್ನು ಯಾವ ಮಾತು ಹೇಳಿಕೊಟ್ಟಿತು? ಎಲ್ಲರಿಗೂ ಎಲ್ಲವೂ ಹೇಳುವುದರಿಂದ ಅರ್ಥವಾಗುವುದಿಲ್ಲ. ಎಲ್ಲ ವಿಷಯಗಳನ್ನು ಎಲ್ಲರೂ ತಿಳಿದುಕೊಳ್ಳಲೂ ಬೇಕಿಲ್ಲ' ಎನ್ನುತ್ತಾನೆ ತುಕಾರಾಂ.

ಜ್ಞಾನ ಎನ್ನುವುದು ಶೋಧವಾಗಬೇಕೇ ಹೊರತು, ನನಗೂ ಗೊತ್ತಿದೆ ಎನ್ನುವ ತೋರುಗಾಣಿಕೆ ಅಲ್ಲ ಎನ್ನುವುದನ್ನು ತುಕಾರಾಂ ಜಗತ್ತಿಗೆ ತಿಳಿಸಿದ್ದು ಹೀಗೆ. ❖

ಪದಬಂಧ 5715

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ರಾಜ ಮಂತ್ರಿಗಳಿಂದಾಡುವ ಒಳಾಂಗಣ ಆಟ (4)
3.ನನ್ನದೆಂಬ ಭಾವನೆ (4)
5.ಬೇಡುವವ ಇಲ್ಲಿದ್ದಾನೆ (3)
6. ಚಾರನ ಒಳ್ಳೆಯ ನಡತೆ (4)
8.ದ್ರವದಿಂದ ತುಂಬಿರುವಂಥದ್ದು (4)
10.ದೇವಾಲಯದ ಸಭಾಮಂಟಪ (4)
12.ವೃಕ್ಷದ ಹತ್ತಿರ ಕಾಣುತ್ತಿರುವ ಪಚ್ಚೆ (4)
13.ಹುಟ್ಟಿದ ಕಾಲ,ನಕ್ಷತ್ರ ಇತ್ಯಾದಿಗಳನ್ನು ತಿಳಿಸುವ ಪತ್ರಿಕೆ (3)
16.ಆರು ಮುಖಗಳನ್ನು ಹೊಂದಿರುವವ (4)
17.ಕತ್ತು ಬಗ್ಗಿಸಿ ಹಾಕಿದ ಸಹಿ (4)

ಮೇಲಿಂದ ಕೆಳಕ್ಕೆ

1.ಹಣವನ್ನು ಸಾಗಿಸುವ ಬಿದಿರಿನ ಚೌಕಟ್ಟು (2)
2.ಸಮಯ ಸೂಚಕ ಯಂತ್ರ (4)
3.ಮರದ ಸುತ್ತ ಹಾರಾಡುತ್ತಿರುವ ದುಂಬಿ (4)
4.ಸರಕುಗಳನ್ನು ಒಂದು ದೇಶದಿಂದ ಹೊರಗೆ ಕಳಿಸುವಿಕೆ (2)
7.ದಾನ ನೀಡಿರುವ ರಾಕ್ಷಸ (3)
9.ಈತ ಹಳಬನೆ ಬಿಡಿ! (3)
11.ಆನೆ ಮೊಗದವನು (4)
12.ಹೂವಿನಲ್ಲಿನ ಸಿಹಿ ರಸ (4)
14.ವಿಷಯದಲ್ಲಿರುವ ನಂಜು! (2)
15.ಒಂದು ಸಲಕ್ಕೆ ನುಂಗುವಷ್ಟು ಆಹಾರ (2)



5714ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿಭೂತಿಪೂಜೆ
3.ಚಮಚ 5.ವರ್ಗೀಕರಣ
7.ಕವಾಟ 8.ಹುಸಿಮುನಿಸು
11.ಕರುಳು 12.ನಾಮಕರಣ
14.ರುಮಾಲು 15.ವಿಮಾನಯಾನ

ಮೇಲಿಂದ ಕೆಳಕ್ಕೆ:
1.ವಿಭಾವನೆ 2.ತಿರುಕ
4.ಚರಟ 6.ರತಾಸಿ
7.ಕಡಸು 8.ಹುರುಳು
9.ನಿಯಮ 10.ಜಾಣತನ
11.ಕಶೇರು 13.ಕದನ

ಸುಡೊಕು 6100

	4		2			6		1
				8		2	7	
			1		4			8
		4				1		
2	8		6	9	1		4	3
		7					6	5
	5			1				7
	1	6	8		2	5	3	
4	2			5			1	6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6099 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

ಸುಧಾ, ಮಯೂರ ಓದಿರಿ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

2ನೇ ವರ್ಷದ ಚಿರಸ್ಮರಣೆ

ಡಾ. ಎಲ್. ಶಿವಲಿಂಗಯ್ಯ ರವರು ಬಿ.ಇ, ಎಫ್.ಐ.ಇ
13-05-1930 18-06-2022
ನಿವೃತ್ತ ಮುಖ್ಯ ಇಂಜಿನಿಯರ್ ಮತ್ತು ವಿಶೇಷ ಕಾರ್ಯದರ್ಶಿಗಳು
ಲೋಕೋಪಯೋಗಿ ಇಲಾಖೆ, ಕರ್ನಾಟಕ ಸರ್ಕಾರ
ಸಂಸ್ಥಾಪಕ ಧರ್ಮದರ್ಶಿಗಳು: ಆನಂದ ಸಾಮಾಜಿಕ ಮತ್ತು ಶೈಕ್ಷಣಿಕ ದತ್ತಿ,
ಡಾ. ಬಿ.ಆರ್ ಅಂಬೇಡ್ಕರ್ ಮೆಡಿಕಲ್, ಡೆಂಟಲ್ ಮತ್ತು ನರ್ಸಿಂಗ್ ಕಾಲೇಜುಗಳು
ಪಾಂಚಜನ್ಯ ವಿದ್ಯಾಪೀಠ ವೆಲ್ ಫೇರ್ ಟ್ರಸ್ಟ್, ಡಾ. ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯ
ಸಂಸ್ಥಾಪಕ ಅಧ್ಯಕ್ಷರು: ಅಂಬೇಡ್ಕರ್ ಮೆಮೋರಿಯಲ್ ಸೊಸೈಟಿ (ರಿ)
ಆನಂದ ಕೋ. ಆಪರೇಟಿವ್ ಬ್ಯಾಂಕ್. ಅಧ್ಯಕ್ಷರು: ದೀನ ಸೇವಾ ಸಂಘ ವಿದ್ಯಾಸಂಸ್ಥೆಗಳು
ನೀವು ನಮ್ಮನ್ನಗಲಿ 2 ವರ್ಷ ಕಳೆದರೂ... ನಿಮ್ಮ ನೆನಪುಗಳು ಮಾತ್ರ ನಮ್ಮ ಹೃದಯದಲ್ಲಿ ಸದಾ ಚಿರಸ್ಮರಣೀಯವಾಗಿದೆ.
ಸದಾ ಸ್ಮರಿಸುವವರು:
ಮೇಲ್ಕಂಡ ಸಂಸ್ಥೆಗಳ ಆಡಳಿತ ಮಂಡಳಿ ಸದಸ್ಯರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವರ್ಗ
ಡಾ. ರವಿಪ್ರಕಾಶ್, ಸಚಿನ, ರೂಪಾಲಿ, ಶಿಫಾಲಿ ಹಾಗೂ ಬಂಧು ಮಿತ್ರರು

ಮೂರನೇ ವರ್ಷದ ಸವಿನೆನಪು

ಶ್ರೀ ಹೆಚ್. ಮುನಿರೆಡ್ಡಿ
ನಿಮ್ಮ ನೆನಪು ನಮ್ಮ ಮನೆ ಮನಗಳಲ್ಲಿ ನಿತ್ಯ ನೂತನ, ನಿರಂತರ ಹಾಗೂ ಅಮರ.
ಸದಾ ನಿಮ್ಮ ನೆನಪಿನಲ್ಲಿ
ಹೆಚ್.ಎಮ್.ಆರ್ ಕುಟುಂಬದವರು, ಬೆಳ್ಳಂದೂರು.

LOOKING FOR JOB OPPORTUNITY
Refer Classifieds on Wednesday

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಡ್ರೈವರ್ಸ್ ಬೇಕಾಗಿದ್ದಾರೆ
ಬೆಂಗಳೂರಿನಲ್ಲಿ ಇಲೆಕ್ಟ್ರಿಕಲ್ ಬಸ್ (EMV) ನಡೆಸಲು ಎರಡು ವರ್ಷಗಳ ಅನುಭವವುಳ್ಳ ಹೇವಿಬ್ಯಾಚ್, ಹಾಗೂ ಹೇವಿ ಲೈಸನ್ಸವುಳ್ಳ ಅನುಭವಿಕ ಡ್ರೈವರ್ಸ್ ಬೇಕಾಗಿದ್ದಾರೆ. ಪ್ರಾರಂಭಿಕ ಸಂಬಳ ರೂ. 20,000/- ಮತ್ತು ESI & PF ಸೌಲಭ್ಯ ಹಾಗೂ ಅವಿವಾಹಿತರಿಗೆ ವಸತಿ ಸೌಲಭ್ಯ ಇರುತ್ತದೆ. ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿ
ಇಂಡಸ್ಟ್ರಿಯಲ್ ಪ್ರೊಟೆಕ್ಷನ್ ಫೋರ್ಸ
ಮೊದಲನೆ ಮಹಡಿ, ಮಾರುತಿ ಕಾಂಪ್ಲೆಕ್ಸ, ಲೈನ್ ಬಜಾರ್ ಧಾರವಾಡ-01

ಚಾಲಕ ಅಗತ್ಯವಿದೆ!
ಬೆಂಗಳೂರಿನಲ್ಲಿ ಎವರೆಸ್ಟ್ ಫ್ಲೀಟ್ CNG ಕಾರ್ ಅನ್ನು ಓಡಿಸಿ ಮತ್ತು ತಿಂಗಳಿಗೆ ₹35,000* ಸಂಪಾದಿಸಿ!! +91 9493275000ಗೆ ಕರೆ ಮಾಡಿ

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000-20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663542555, 9663563555

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಅಣಬೆ ತರಬೇತಿ ಪಡೆದು ಮನೆಯಿಂದಲೇ ಅಣಬೆ ಬೆಳಸಿ ತಿಂಗಳಿಗೆ 30,000ಕ್ಕೂ ಹೆಚ್ಚು ಸಂಪಾದಿಸಿ ತರಬೇತಿಗಾಗಿ ಬೆಂಗಳೂರು 8095555516 ಶಿವಮೊಗ್ಗ 8095555517

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Multiple Vacancy

REQUIRED EXPERIENCED
Telecaller, Field Executive For Bank Loan collection Salary + Incentive, Commission. 9916276701, 9900709308.

Wanted

ವರ್ಕ್ ಫ್ರಮ್ ಹೋಮ್, ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ. 15,000–43,500/–. ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526

ಭವಿಷ್ಯ

Astrology

★ಸ್ತ್ರೀವಶೀಕರಣ ಸ್ಪೆಷಲಿಸ್ಟ್★
ಕೇರಳ ಅಘೋರಿ ನಾಗಸಾಧು, ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದು ನಿಜ ನಂಬಿ ಕರೆಮಾಡಿ. ಪಂಡಿತ್. ಜೈದೇವ್ ಭಟ್. 9901724082

ಪ್ರವಾಸ

Travel

ಗುಜರಾತ್ ಪ್ರವಾಸ 18/7/24 ನೇಪಾಳ ಮುಕ್ತಿನಾಥ ಪ್ರವಾಸ 24/7/24 ಕಾಶಿ ಅಯೋಧ್ಯ ಪ್ರವಾಸ 23/7/24 ಶಿರಡಿ ಪ್ರವಾಸ 12/7/24 ಸುವರ್ಣಯಾತ್ರ 8660233673 9019462508

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
@500/-* PER SQCM
www.dhclassifieds.com
BOOK NOW
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9731810277
+91 9901641752 | 9845114560
*Conditions apply

ವಿನಿಮಯ ದರ

$ ಡಾಲರ್	83.53
£ ಪೌಂಡ್	105.84
€ ಯುರೊ	89.49
¥ ಯೆನ್ (100ಕ್ಕೆ)	53

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು 100ಕ್ಕೆ	₹555
12 ಕ್ಕೆ	₹75
ಮೈಸೂರು 100ಕ್ಕೆ	₹557

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1490 (1500)
ಸೋಯಾ (ರಿಫೈನ್ಡ್)	₹975 (980)
ಸೂರ್ಯಕಾಂತಿ (ರಿಫೈನ್ಡ್)	₹975 (980)
ಪಾಮೋಲಿನ್	₹926 (930)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹295-447
ದ್ವಿತಳಿ (ಬಿ.ವಿ)	₹388-579

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹198.50
ಆರ್‌ಎಸ್‌ಎಸ್-5	₹190
ಗುಡ್ ಲಾಟ್	₹179

(ಪ್ರತಿ ಕೆ.ಜಿಗೆ)

ಅಕಾಲಿಕ ಮಳೆ, ಹವಾಮಾನ ವೈಪರೀತ್ಯದಿಂದ ವೈನ್ ದ್ರಾಕ್ಷಿಗೆ ಹೊಡೆತ

ತಗ್ಗಿದ ಇಳುವರಿ, ಆದಾಯವೂ ಕುಸಿತ

• ಕಲಾವತಿ ಬೈಚಬಾಳ

ಹುಬ್ಬಳ್ಳಿ: ದ್ರಾಕ್ಷಾರಸ ಉತ್ಪಾದನೆಗೆ ಬೇಕಾಗುವ ವೈನ್ ದ್ರಾಕ್ಷಿ ರಾಜ್ಯದ ಬಹುತೇಕ ಕಡೆ ಬೆಳೆಯಲಾಗುತ್ತದೆ. ಆದರೆ, ಕಳೆದ ವರ್ಷ ಅಕಾಲಿಕ ಮಳೆ, ಹವಾಮಾನ ವೈಪರೀತ್ಯದಿಂದ ವೈನ್ ದ್ರಾಕ್ಷಿ ಇಳುವರಿ ನಿರೀಕ್ಷಿತ ಮಟ್ಟದಲ್ಲಿ ಬರಲಿಲ್ಲ.

ಸಾಮಾನ್ಯವಾಗಿ ಜನವರಿಯಿಂದ ಮೇ ಅವಧಿಯಲ್ಲಿ ದ್ರಾಕ್ಷಿ ಬೆಳೆ ಕೈ ಸೇರುತ್ತದೆ. ಈ ವರ್ಷ ಬೆಳೆದ ದ್ರಾಕ್ಷಿ ಮುಂದಿನ ವರ್ಷ ವೈನ್‌ಗೆ ಬಳಕೆ ಆಗುತ್ತದೆ. ಹೀಗಾಗಿ 2022–23ನೇ ಸಾಲಿಗೆ ಹೋಲಿಸಿದರೆ 2023–24ರಲ್ಲಿ ಉತ್ಪಾದನೆ ಕುಸಿದಿದೆ. 2022–23ರಲ್ಲಿ 15 ಸಾವಿರ ಟನ್ ವೈನ್ ದ್ರಾಕ್ಷಿ ಉತ್ಪಾದನೆಯಾಗಿ, 121 ಲಕ್ಷ ಲೀಟರ್ ವೈನ್ ಮಾರಾಟವಾಗಿ ₹401 ಕೋಟಿ ಆದಾಯ ಬಂದಿತ್ತು. ಆದರೆ, 2023–24ರಲ್ಲಿ 14 ಸಾವಿರ ಟನ್ ವೈನ್ ದ್ರಾಕ್ಷಿ ಉತ್ಪಾದನೆಯಾಗಿ, 114 ಲಕ್ಷ ಲೀಟರ್ ವೈನ್ ಮಾರಾಟವಾಗಿ ₹388 ಕೋಟಿ ಮಾತ್ರ ಆದಾಯ ಬಂದಿದೆ.

‘ವಿಜಯಪುರ, ಬಾಗಲಕೋಟೆ, ಬೆಳಗಾವಿ, ಬೀದರ್, ಕಲಬುರಗಿ, ಮೈಸೂರು, ಚಾಮರಾಜನಗರ, ಬೆಂಗಳೂರು (ನಗರ/ಗ್ರಾಮಾಂತರ), ಚಿಕ್ಕಬಳ್ಳಾಪುರ, ಬಳ್ಳಾರಿ ಸೇರಿ ಒಟ್ಟು 16 ಜಿಲ್ಲೆಗಳಲ್ಲಿ ಅಂದಾಜು 2,000 ಎಕರೆ ಪ್ರದೇಶದಲ್ಲಿ ವೈನ್ ದ್ರಾಕ್ಷಿ ಬೆಳೆಯಲಾಗುತ್ತದೆ. ಇದರಲ್ಲಿ ಶೇ 70ರಷ್ಟು ದ್ರಾಕ್ಷಿಯನ್ನು ಒಣದ್ರಾಕ್ಷಿಗಾಗಿ ಬಳಸಿದರೆ, ಶೇ10 ರಷ್ಟನ್ನು ವೈನ್ ಮಾಡಲು ಉಪಯೋಗಿಸಲಾಗುತ್ತದೆ. ಶೇ 20ರಷ್ಟು ದ್ರಾಕ್ಷಿಯನ್ನು ಮಾರಲಾಗುತ್ತದೆ’ ಎಂದು ರಾಜ್ಯ ದ್ರಾಕ್ಷಿ ಮತ್ತು ದ್ರಾಕ್ಷಾರಸ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕ ಟಿ.ಸೋಮು ‘ಪ್ರಜಾವಾಣಿ’ಗೆ ತಿಳಿಸಿದರು.

‘2023–24ರಲ್ಲಿ 1 ಕೆ.ಜಿ ದ್ರಾಕ್ಷಿಗೆ ಹಾಪ್‌ಕಾಮ್ಸ್ ದರ ₹46 ಇತ್ತು (ತಳಿಗಳ ಆಧಾರದ ಮೇಲೆ ದರ ನಿಗದಿ). 1 ಕೆ.ಜಿ ವೈನ್ ದ್ರಾಕ್ಷಿಗೆ ₹55 ರಿಂದ ₹60 ದರ ಇತ್ತು. 2019–20ರಿಂದ ಈವರೆಗೆ ರಾಜ್ಯದಲ್ಲಿ 460 ಲಕ್ಷ ಲೀಟರ್ ವೈನ್ ತಯಾರಿಸಲಾಗಿದೆ. 2019–20ರಿಂದ 2023–24ರವರೆಗೆ ವೈನ್ ಮಾರಾಟದಿಂದ ₹1,602 ಕೋಟಿ ಆದಾಯ ಬಂದಿದೆ’ ಎಂದರು.

ಪ್ರತಿ ಲೀಟರ್‌ಗೆ ₹300 ತೆರಿಗೆ: ‘ಕಳೆದ ಬಾರಿ ಮಹಾರಾಷ್ಟ್ರದ ನಾಸಿಕ್‌ದಿಂದಲೂ ವೈನ್ ದ್ರಾಕ್ಷಿ ತರಿಸಿಕೊಳ್ಳಲಾಗಿತ್ತು. ಇದಕ್ಕೆ ಜಿಎಸ್‌ಟಿ ಮಾತ್ರ ತಗಲುತ್ತದೆ. ಆದರೆ, ಇಲ್ಲಿಂದ ಹೊರರಾಜ್ಯಗಳಿಗೆ ವೈನ್ ಮಾರಲು ಹಾಗೂ ತರಿಸಿಕೊಳ್ಳಲು ಪ್ರತಿ ಲೀಟರ್‌ಗೆ ₹300 ತೆರಿಗೆ ಕಟ್ಟಬೇಕು. ಹೊರ ರಾಜ್ಯದವರು ಇಲ್ಲಿಯೇ ಖಾಸಗಿ ವೈನರಿಗಳನ್ನು ತೆರೆದಿರುವುದರಿಂದ ಮಾರಾಟದಲ್ಲಿ ಇಳಿಕೆ ಆಗಿದೆ’ ಎಂದರು.

‘ಈ ವರ್ಷದ ರಾಜ್ಯ ಬಜೆಟ್‌ನಲ್ಲಿ ಮದ್ಯದ ದರ ಏರಿಕೆ ಮಾಡಲಾಗಿತ್ತು. ಆದರೆ ನಾಲ್ಕು ವರ್ಷಗಳಿಂದ ವೈನ್ ದರದಲ್ಲಿ ಏರಿಕೆ ಇಲ್ಲ. ಸೇವನೆ ಮಾಡುವವರ ಸಂಖ್ಯೆಯಲ್ಲಿ ಇಳಿಮುಖವಾಗಿದ್ದು, ಆದಾಯವೂ ಸ್ವಲ್ಪ ಕಡಿಮೆ ಆಗಿದೆ’ ಎಂದರು.

ಕೆಂಪು ದ್ರಾಕ್ಷಾರಸ ತಯಾರಿಸಲು ಬಳಸುವ ದ್ರಾಕ್ಷಿ



‘ಶೀತಲ ಘಟಕ ನಿರ್ಮಾಣ ಶೀಘ್ರ ಆರಂಭ’

ರಾಜ್ಯದ 32,473 ಹೆಕ್ಟೇರ್ ಪ್ರದೇಶದಲ್ಲಿ ವರ್ಷಕ್ಕೆ 8.21 ಲಕ್ಷ ಮೆಟ್ರಿಕ್ ಟನ್ ದ್ರಾಕ್ಷಿ ಬೆಳೆದರೆ, ವಿಜಯಪುರ, ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ 25,637 ಹೆಕ್ಟೇರ್ ಪ್ರದೇಶದಲ್ಲಿ 6.64 ಲಕ್ಷ ಮೆಟ್ರಿಕ್ ಟನ್ ದ್ರಾಕ್ಷಿ ಬೆಳೆಯಲಾಗುತ್ತದೆ.

‘ವಿಜಯಪುರದಲ್ಲಿ ವೈನ್ ಪಾರ್ಕ್‌ಗೆಂದೇ ಮೀಸಲಿಟ್ಟಿರುವ 141 ಎಕರೆ ಪ್ರದೇಶದಲ್ಲಿ 10 ಸಾವಿರ ಟನ್ ಸಾಮರ್ಥ್ಯದ ಶೀತಲ ಘಟಕ ನಿರ್ಮಿಸಲು ನಬಾರ್ಡ್‌ನಿಂದ ಈಗಾಗಲೇ ₹39.7 ಕೋಟಿ ನೆರವು ಸಿಕ್ಕಿದೆ. ಟೆಂಡರ್ ಸಹ ಕರೆಯಲಾಗಿದ್ದು, ಜೂನ್ ಅಂತ್ಯದ ಒಳಗೆ ಪ್ರಕ್ರಿಯೆ ಪೂರ್ಣ ಆಗಲಿದೆ. ಶೀಘ್ರವೇ ಘಟಕ ನಿರ್ಮಾಣ ಆರಂಭವಾಗಲಿದೆ’ ಎಂದು ಟಿ.ಸೋಮು ತಿಳಿಸಿದರು.



ರಾಜ್ಯದಲ್ಲಿ 19 ಖಾಸಗಿ ವೈನರಿಗಳಿವೆ. 1,000ಕ್ಕೂ ಹೆಚ್ಚು ರೈತರು, ಕಾರ್ಮಿಕರು ವೈನರಿಗಳ ಜತೆಗೆ ಒಡಂಬಡಿಕೆ ಮಾಡಿಕೊಂಡಿದ್ದು ಅವರು ಮಾತ್ರ ವೈನ್ ದ್ರಾಕ್ಷಿ ಬೆಳೆಯುತ್ತಾರೆ

ಟಿ.ಸೋಮು, ವ್ಯವಸ್ಥಾಪಕ ನಿರ್ದೇಶಕ, ರಾಜ್ಯ ದ್ರಾಕ್ಷಿ ಮತ್ತು ದ್ರಾಕ್ಷಾರಸ ಮಂಡಳಿ

ಕಸ್ಟಮ್ಸ್ ಸುಂಕ ರಿಯಾಯಿತಿ ಪರಿಷ್ಕರಣೆ ಅಗತ್ಯ: ಜಿಟಿಆರ್‌ಐ

ಚಿನ್ನ, ಬೆಳ್ಳಿ ಆಮದು ಶೇ 210ರಷ್ಟು ಏರಿಕೆ

ನವದೆಹಲಿ (ಪಿಟಿಐ): ಮುಕ್ತ ವ್ಯಾಪಾರ ಒಪ್ಪಂದದ ಪಾಲುದಾರ ರಾಷ್ಟ್ರ ಅರಬ್ ಸಂಯುಕ್ತ ಸಂಸ್ಥಾನದಿಂದ (ಯುಎಇ) ಭಾರತಕ್ಕೆ 2023–24ರ ಹಣಕಾಸು ವರ್ಷದಲ್ಲಿ ₹89,392 ಕೋಟಿ ಮೌಲ್ಯದ ಚಿನ್ನ ಮತ್ತು ಬೆಳ್ಳಿ ಆಮದಾಗಿದೆ.

ಹಿಂದಿನ ಇದೇ ಅವಧಿಗೆ ಹೋಲಿಸಿದರೆ ಆಮದು ಪ್ರಮಾಣದಲ್ಲಿ ಶೇ 210ರಷ್ಟು ಏರಿಕೆಯಾಗಿದೆ. ಭಾರತ-ಯುಎಇ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದದ (ಸಿಇಪಿಎ) ಅಡಿಯಲ್ಲಿ ಯುಎಇಗೆ ಭಾರತ ನೀಡಿದ ಆಮದು ಸುಂಕದ ರಿಯಾಯಿತಿಯಿಂದ ಚಿನ್ನ ಮತ್ತು ಬೆಳ್ಳಿಯ ಆಮದು ತೀವ್ರ ಏರಿಕೆಯಾಗಿದೆ. ಕಸ್ಟಮ್ಸ್ ಸುಂಕ ರಿಯಾಯಿತಿಯನ್ನು ಪರಿಷ್ಕರಿಸುವ ಅಗತ್ಯವಿದೆ ಎಂದು ಗ್ಲೋಬಲ್ ಟ್ರೇಡ್ ರಿಸರ್ಚ್ ಇನಿಷಿಯೇಟಿವ್ (ಜಿಟಿಆರ್‌ಐ) ಸೋಮವಾರ ಹೇಳಿದೆ.

ಬೆಳ್ಳಿಯ ಆಮದಿನ ಮೇಲೆ ಶೇ7ರಷ್ಟು ಕಸ್ಟಮ್ಸ್ ಸುಂಕದ ರಿಯಾಯಿತಿ ಇದೆ. ಚಿನ್ನದ ಆಮದಿಗೆ 160 ಟನ್‌ವರೆಗೆ ಶೇ1ರಷ್ಟು ರಿಯಾಯಿತಿ ನೀಡಲಾಗುತ್ತಿದೆ.

ಯುಎಇಯಿಂದ ಖಾಸಗಿ ಸಂಸ್ಥೆಗಳು ಕೂಡ ಗಿಫ್ಟ್ ಸಿಟಿಯಲ್ಲಿನ ಇಂಡಿಯಾ ಇಂಟರ್‌ನ್ಯಾಷನಲ್ ಬುಲಿಯನ್ ಎಕ್ಸ್‌ಚೇಂಜ್ (ಐಐಬಿಎಕ್ಸ್) ಮೂಲಕ ಆಮದು ಮಾಡಿಕೊಳ್ಳಲು ಅವಕಾಶ ಇದೆ. ಇದರಿಂದ ಭಾರತಕ್ಕೆ ಚಿನ್ನ ಮತ್ತು ಬೆಳ್ಳಿಯ ಆಮದು ಹೆಚ್ಚಳವಾಯಿತು. ಈ ಹಿಂದೆ, ಅಧಿಕೃತ ಏಜೆನ್ಸಿಗಳು ಮಾತ್ರ ಇಂತಹ ಆಮದುಗಳನ್ನು ನಿರ್ವಹಿಸಬಹುದಾಗಿತ್ತು ಎಂದು ವರದಿ ಹೇಳಿದೆ.

ವ್ಯಾಪಾರ ನೀತಿಯ ಸಮತೋಲನ, ದೇಶೀಯ ವರಮಾನದ ರಕ್ಷಣೆ, ಆಮದಿನಲ್ಲಿ ನ್ಯಾಯಸಮ್ಮತವಾದ ಸ್ಪರ್ಧೆ ಸಾಧ್ಯವಾಗುವಂತೆ ಕೆಲವು ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕಿದೆ ಎಂದು ಜಿಟಿಆರ್‌ಐ ಸಂಸ್ಥಾಪಕ ಅಜಯ್ ಶ್ರೀವಾಸ್ತವ ಹೇಳಿದ್ದಾರೆ.

ಚಿನ್ನ ಮತ್ತು ಬೆಳ್ಳಿಯ ಆಮದು ಹೆಚ್ಚಳವನ್ನು ತಗ್ಗಿಸಲು ಸಿಇಪಿಎ ಅಡಿಯಲ್ಲಿ ರಿಯಾಯಿತಿ ಸುಂಕದ ದರಗಳನ್ನು ಮರುಮೌಲ್ಯಮಾಪನ ಮಾಡಬೇಕಿದೆ ಮತ್ತು ಪರಿಷ್ಕರಿಸುವ ಅಗತ್ಯವಿದೆ. ಬೆಲೆಬಾಳುವ ಲೋಹದ ಆಮದು ಪ್ರಮಾಣ ಮತ್ತು ಸ್ವರೂಪವನ್ನು ನಿಯಂತ್ರಿಸಲು ಐಐಬಿಎಕ್ಸ್ ನಿಯಮಗಳನ್ನು ಬಿಗಿಗೊಳಿಸಬೇಕಿದೆ ಎಂದು ಹೇಳಿದ್ದಾರೆ.

ಕಲ್ಲಿದ್ದಲು ಆಮದು ಹೆಚ್ಚಳ

ನವದೆಹಲಿ (ಪಿಟಿಐ): ಏಪ್ರಿಲ್ ತಿಂಗಳಲ್ಲಿ 2.61 ಕೋಟಿ ಟನ್ ಕಲ್ಲಿದ್ದಲು ಆಮದಾಗಿದೆ ಎಂದು ಇ-ವಾಣಿಜ್ಯ ಸಂಸ್ಥೆ ಎಂ-ಜಂಕ್ಷನ್ ಸರ್ವಿಸಸ್ ಲಿಮಿಟೆಡ್ ತಿಳಿಸಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ 2.30 ಕೋಟಿ ಟನ್ ಕಲ್ಲಿದ್ದಲು ಆಮದಾಗಿತ್ತು. ಈ ಆಮದಿಗೆ ಹೋಲಿಸಿದರೆ ಶೇ 13.2ರಷ್ಟು ಏರಿಕೆಯಾಗಿದೆ. ಕೋಕಿಂಗ್ ಅಲ್ಲದ (ಉಷ್ಣ ವಿದ್ಯುತ್ ಸ್ಥಾವರದಲ್ಲಿ ಬಳಸುವ ಕಲ್ಲಿದ್ದಲು) ಕಲ್ಲಿದ್ದಲು 1.74 ಕೋಟಿ ಟನ್ ಮತ್ತು 49.7 ಲಕ್ಷ ಟನ್ ಕೋಕಿಂಗ್ (ಉತ್ತಮ ಗುಣಮಟ್ಟ) ಕಲ್ಲಿದ್ದಲು ಆಮದಾಗಿದೆ ಎಂದು ತಿಳಿಸಿದೆ. ಬೇಸಿಗೆಯಲ್ಲಿ ವಿದ್ಯುತ್ ಬೇಡಿಕೆ ಹೆಚ್ಚಳದಿಂದ ಕಲ್ಲಿದ್ದಲು ಆಮದು ಏರಿಕೆಯಾಗಿದೆ ಎಂದು ತಿಳಿಸಿದೆ.

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹15400
ಎಸಿ	₹9100
ಆರ್‌ಪಿ	₹16500
ಆರ್‌ಸಿ	₹9620

ಮುಂಬೈ ಧಾರಣೆ (ಶೇಂಗಾ)

17-6-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1500 (1510)
ಒಂದು ವಾರದ ಡೆಲಿವರಿ	1495 (1505)
ಸೋಯಾ ಕಚ್ಚಾ	925 (927)
ಪಾಮ್ ವಾರದ ಡೆಲಿವರಿ	924 (928)
ಸೂರ್ಯಕಾಂತಿ ಎಣ್ಣೆ ಕಚ್ಚಾ	930 (940)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ	₹71,450 (71,645)
ಬೆಳ್ಳಿ ಕೆ.ಜಿ	₹88,400 (88,400)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಆಹಾರದಲ್ಲಿ ಲೋಹದ ತುಂಡು ಕ್ಷಮೆ ಕೇಳಿದ ಏರ್ ಇಂಡಿಯಾ

ಮುಂಬೈ (ಪಿಟಿಐ): ಪ್ರಯಾಣಿಕರೊಬ್ಬರಿಗೆ ನೀಡಿದ ಆಹಾರದಲ್ಲಿ ಬ್ಲೇಡ್ ರೀತಿಯ ಲೋಹದ ತುಂಡು ಪತ್ತೆ ಆಗಿರುವುದಾಗಿ ವಿಮಾನಯಾನ ಸಂಸ್ಥೆ ಏರ್ ಇಂಡಿಯಾ ಸೋಮವಾರ ತಿಳಿಸಿದೆ.

ಕಳೆದ ವಾರ ಬೆಂಗಳೂರು– ಸ್ಯಾನ್ ಫ್ರಾನ್ಸಿಸ್ಕೋ ವಿಮಾನದಲ್ಲಿ ಪ್ರಯಾಣಿಕರೊಬ್ಬರ ಆಹಾರದಲ್ಲಿ ಲೋಹದ ತುಂಡು ಪತ್ತೆಯಾಗಿತ್ತು. ಈ ಕುರಿತು ಪ್ರಯಾಣಿಕ, ಸಾಮಾಜಿಕ ಜಾಲತಾಣ ‘ಎಕ್ಸ್’ ನಲ್ಲಿ ತಮಗಾದ ಅನುಭವವನ್ನು ಹಂಚಿಕೊಂಡಿದ್ದರು.

ಈ ಕುರಿತು ತನಿಖೆ ನಡೆಸಿದ್ದ ವಿಮಾನಯಾನ ಸಂಸ್ಥೆಯು, ತರಕಾರಿ ಸಂಸ್ಕರಿಸುವ ಯಂತ್ರದಿಂದ ಈ ತುಂಡು ಬಂದಿದೆ. ಏರ್ ಇಂಡಿಯಾವು ಬಾಧಿತ ಗ್ರಾಹಕರಿಗೆ ಆದ ತೊಂದರೆಗೆ ಕ್ಷಮೆಯಾಚಿಸುತ್ತದೆ ಎಂದು ಏರ್ ಇಂಡಿಯಾದ ಅಧಿಕಾರಿ ರಾಜೇಶ್ ಡೋಗ್ರಾ ತಿಳಿಸಿದ್ದಾರೆ.

‘ಸಾಲದ ಬೆಳವಣಿಗೆ ಶೇ 15ರಷ್ಟು ನಿರೀಕ್ಷೆ’

ನವದೆಹಲಿ (ಪಿಟಿಐ): ಈ ಹಣಕಾಸು ವರ್ಷದಲ್ಲಿ ಸಾಲ ನೀಡಿಕೆ ಪ್ರಮಾಣವು ಶೇ 14–15ರಷ್ಟು ಹೆಚ್ಚಳ ಆಗುವ ನಿರೀಕ್ಷೆ ಇದೆ ಎಂದು ಭಾರತೀಯ ಸ್ಟೇಟ್ ಬ್ಯಾಂಕ್‌ನ ಅಧ್ಯಕ್ಷ ದಿನೇಶ್ ಕುಮಾರ್ ಖಾರಾ ಹೇಳಿದ್ದಾರೆ.

ಒಟ್ಟು ಆಂತರಿಕ ಉತ್ಪನ್ನದಲ್ಲಿ ಆಗುವ ಏರಿಕೆ ಮತ್ತು ಹಣದುಬ್ಬರದ ಆಧಾರದಲ್ಲಿ ಸಾಲ ನೀಡಿಕೆ ಪ್ರಮಾಣವನ್ನು ಲೆಕ್ಕ ಹಾಕಲಾಗುತ್ತದೆ. ಹೀಗೆ ಲೆಕ್ಕ ಹಾಕಿದಾಗ ಈ ವರ್ಷದ ಪ್ರಗತಿಯು ಶೇ 14ರಷ್ಟಿರಬಹುದು ಎಂದು ಅಂದಾಜಿಸಿದ್ದೇವೆ. ಸಾಲ ನೀಡುವುದಕ್ಕೆ ಇರುವ ಅವಕಾಶಗಳ ಮೇಲೆ ಕೂಡ ಈ ಪ್ರಗತಿ ಅವಲಂಬಿತವಾಗಿದೆ. ಈ ಪ್ರಮಾಣದ ಬೆಳವಣಿಗೆಯು ಅಪಾಯವನ್ನು ಎದುರಿಸುವ ನಮ್ಮ ಸಾಮರ್ಥ್ಯದ ಮಿತಿಯೊಳಗೇ ಇದೆ ಎಂದು ಅವರು ವಿವರಿಸಿದ್ದಾರೆ.

ಠೇವಣಿಯು ಶೇ 11ರ ಪ್ರಮಾಣದಲ್ಲಿ ಬೆಳೆಯಬಹುದು ಎಂಬ ಅಂದಾಜು ಇದೆ ಎಂದು ಅವರು ಹೇಳಿದ್ದಾರೆ.

ಬ್ಯಾಂಕ್ ಹೊಂದಿರುವ ಹೆಚ್ಚುವರಿ ನಗದು ಮೀಸಲು ಅನುಪಾತವು (ಎಸ್‌ಎಲ್‌ಆರ್) ₹3.5 ಲಕ್ಷ ಕೋಟಿಯಿಂದ ₹4 ಲಕ್ಷ ಕೋಟಿಯಷ್ಟು ಇದೆ. ನಮ್ಮ ಸಾಲ-ಠೇವಣಿ ಅನುಪಾತವು ಶೇ 68-69ರಷ್ಟಿದೆ. ಹಾಗಾಗಿ ಸಾಲ ನೀಡಿಕೆಯನ್ನು ಹೆಚ್ಚಿಸಲು ಸಾಕಷ್ಟು ಅವಕಾಶ ಇದೆ ಎಂದು ಅವರು ಹೇಳಿದ್ದಾರೆ.

‘ನಾವು ಯಾವಾಗಲೂ ಠೇವಣಿಗಳಿಗೆ ಪ್ರಾಮುಖ್ಯತೆ ನೀಡುತ್ತೇವೆ. ಅದಕ್ಕಾಗಿಯೇ ಇತ್ತೀಚೆಗೆ ಅಲ್ಪಾವಧಿಯ ಠೇವಣಿಗಳ ಬಡ್ಡಿದರವನ್ನು ಹೆಚ್ಚಿಸಿದ್ದೇವೆ. ಈ ವರ್ಷದಲ್ಲಿ ನಾವು ಕನಿಷ್ಠ ಶೇ 12-13ರಷ್ಟು ಬೆಳೆಯಬೇಕು ಎಂಬುದು ನಮ್ಮ ಪ್ರಯತ್ನವಾಗಿದೆ’ ಎಂದು ಹೇಳಿದ್ದಾರೆ.

ಮುಂಬೈ ವಾಯವ್ಯ ಲೋಕಸಭಾ ಕ್ಷೇತ್ರದ ಮತ ಎಣಿಕೆ ಅಕ್ರಮ ಆರೋಪ: ಶಿವಸೇನಾ (ಉದ್ಧವ್ ಬಣ) ಆಗ್ರಹ

‘ವಾಲ್ಕರ್ ಪ್ರಮಾಣವಚನವನ್ನು ತಡೆಹಿಡಿಯಿರಿ’

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ: ಮುಂಬೈ ವಾಯವ್ಯ ಲೋಕಸಭಾ ಕ್ಷೇತ್ರದ ಮತ ಎಣಿಕೆ ಕಾರ್ಯದಲ್ಲಿ ನಡೆದಿದೆ ಎನ್ನಲಾದ ಅಕ್ರಮದ ಕುರಿತ ವಿವಾದವು ಸೋಮವಾರ ತೀವ್ರತೆ ಪಡೆದುಕೊಂಡಿದೆ. ‘ಅಕ್ರಮದ ಕುರಿತು ಎದ್ದಿರುವ ಸಂಶಯಗಳು ನಿವಾರಣೆಯಾಗದ ಹೊರತು ಶಿವಸೇನಾದ ರವೀಂದ್ರ ವಾಲ್ಕರ್ ಅವರು ಸಂಸದರಾಗಿ ಪ್ರಮಾಣವಚನ ಸ್ವೀಕರಿಸುವುದನ್ನು ತಡೆಹಿಡಿಯಬೇಕು’ ಎಂದು ಶಿವಸೇನಾವು (ಉದ್ಧವ್ ಬಣ) ಆಗ್ರಹಿಸಿದೆ.

ವಾಲ್ಕರ್ ಅವರ ಗೆಲುವನ್ನು ಪ್ರಶ್ನಿಸಿ ಹಾಗೂ ಚುನಾವಣಾ ಆಯೋಗವು ತನ್ನ ಬಳಿ ದಾಖಲಾದ ದೂರುಗಳ ಬಗ್ಗೆ ಯಾವುದೇ ಕ್ರಮಗಳನ್ನು ಕೈಗೊಳ್ಳದಿರುವ ಬಗ್ಗೆ 48 ಮತಗಳಿಂದ ಪರಾಭವಗೊಂಡ ಶಿವಸೇನಾ ಉದ್ಧವ್ ಬಣದ ಅಮೋಲ್ ಕೀರ್ತಿಕರ್ ಅವರು ಬಾಂಬೆ ಹೈಕೋರ್ಟ್ ಮೆಟ್ಟಿಲೇರಲು ಸಿದ್ಧತೆ ನಡೆಸಿದ್ದಾರೆ. ಮತಎಣಿಕೆಯು ನೆಸ್ಕೊ ಪ್ರದರ್ಶನ ಕೇಂದ್ರದಲ್ಲಿ ನಡೆದಿತ್ತು. ಈ ಮತಎಣಿಕೆ ಕೇಂದ್ರದ ಚುನಾವಣಾಧಿಕಾರಿ ವಂದನಾ ಸೂರ್ಯವಂಶಿ ಅವರ ವಿರುದ್ಧ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲು ಇದೇ ಪಕ್ಷದ ನಾಯಕ ಅನಿಲ್ ಪರಬ್ ಚಿಂತನೆ ನಡೆಸಿದ್ದಾರೆ.

ಶಿವಸೇನಾದ (ಉದ್ಧವ್ ಬಣ) ನಾಯಕ ಆದಿತ್ಯ ಠಾಕ್ರೆ ಅವರು ಪತ್ರಿಕಾಗೋಷ್ಠಿ ನಡೆಸಿ, ‘ಆಡಳಿತಯಂತ್ರವನ್ನು ಬಳಸಿಕೊಂಡು ನಮ್ಮ ಅಭ್ಯರ್ಥಿಯ ಜಯವನ್ನು ಕಿತ್ತುಕೊಳ್ಳಲಾಗಿದೆ. ಈ ಪ್ರಕರಣದ ಬಗ್ಗೆ ಆಯೋಗವು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ಕ್ರಮ ಜರುಗಿಸಬೇಕು. ಇಲ್ಲವಾದಲ್ಲಿ ‘ಚುನಾವಣಾ ಅಕ್ರಮ’ದ ಕುರಿತು ಒಂದೆರಡು ದಿನಗಳಲ್ಲಿ ನ್ಯಾಯಾಲಯದಲ್ಲಿ ದಾವೆ ಹೂಡಲಾಗುವುದು’ ಎಂದು ತಿಳಿಸಿದರು.

‘ಗೆಲುವು ಘೋಷಣೆ: ಶಂಕಾಸ್ಪದ’

‘ಫಾರಂ 17ಅನ್ನು ನಮಗೆ ನೀಡಿರಲಿಲ್ಲ. ಚುನಾವಣಾಧಿಕಾರಿ ಹಾಗೂ ಏಜೆಂಟರನ್ನು ದೂರ ಕೂರಿಸಲಾಗಿತ್ತು. ಇದರಿಂದ ಮತ ತಾಳೆಯು ಕಷ್ಟವಾಯಿತು. 19ನೇ ಸುತ್ತಿನ ಮತ ಎಣಿಕೆವರೆಗೂ ಎಲ್ಲವೂ ಸರಿಯಾಗಿಯೇ ಇತ್ತು. ಅಲ್ಲಿಂದ ಮುಂದೆ ಮತ ಎಣಿಕೆ ಕಾರ್ಯವು ಪಾರದರ್ಶಕವಾಗಿ ಇರಲಿಲ್ಲ. 19ನೇ ಸುತ್ತಿನವರೆಗೆ ಶಿವಸೇನಾ ಅಭ್ಯರ್ಥಿ ವಾಲ್ಕರ್ ಅವರಿಗಿಂತ 650 ಮತಗಳ ಅಂತರದಿಂದ ಮುಂದೆ ಇದ್ದೆವು. ಆದ್ದರಿಂದ, ಗೆಲುವು ಘೋಷಿಸಿರುವುದು ಹಲವು ಶಂಕೆಗೆ ದೂಡುತ್ತಿದೆ. ಆಡಳಿತಯಂತ್ರವನ್ನು ಬಳಸಿಕೊಂಡು ಅಕ್ರಮ ನಡೆಸಿರುವುದರ ಕುರಿತು ಜನಪ್ರಾತಿನಿಧ್ಯ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸುತ್ತೇವೆ’ ಎಂದು ಶಿವಸೇನಾ (ಉದ್ಧವ್ ಬಣ) ನಾಯಕ ಅನಿಲ್ ಪರಬ್ ಅವರು ಆರೋಪಿಸಿದ್ದಾರೆ.

‘ಚುನಾವಣಾಧಿಕಾರಿ ಅವರಿಗೆ ನಿರಂತರವಾಗಿ ಕರೆಗಳು ಬರುತ್ತಿದ್ದವು. ಅವರು ಹೊರಗೆ ಹೋಗಿ ಬಂದು, ಕರೆಗಳನ್ನು ಸ್ವೀಕರಿಸಿರಬಹುದು. ಆದ್ದರಿಂದ ಈ ಬಗ್ಗೆಯೂ ತನಿಖೆ ನಡೆಸಿ’ ಎಂದೂ ಆಗ್ರಹಿಸಿದ್ದಾರೆ.

ವಿಲಾಸ್ ವಿರುದ್ಧ ದೂರು

ನೆಸ್ಕೊ ಮತ ಎಣಿಕೆ ಕೇಂದ್ರದ ಒಳಗೆ ಅಕ್ರಮವಾಗಿ ಪ್ರವೇಶಿಸಿದ್ದಕ್ಕಾಗಿ ಶಿವಸೇನಾದ (ಉದ್ಧವ್ ಬಣ) ಪರಿಷತ್ ಸದಸ್ಯ ವಿಲಾಸ್ ಪೋಟ್ನಿಸ್ ಹಾಗೂ ಅವರ ಖಾಸಗಿ ಭದ್ರತಾ ಸಿಬ್ಬಂದಿ ವಿರುದ್ಧ ಜನಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 188 ಅಡಿಯಲ್ಲಿ ದೂರು ದಾಖಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು. ವಿಲಾಸ್ ಅವರು ಅಭ್ಯರ್ಥಿ ಅಮೋಲ್ ಕೀರ್ತಿಕರ್ ಅವರೊಂದಿಗೆ ಕೇಂದ್ರವನ್ನು ಪ್ರವೇಶಿಸಿದ್ದರು. ಈ ಬಗ್ಗೆ ಪ್ರತಿಕ್ರಿಯಿಸಿರುವ ವಿಲಾಸ್ ಅವರು, ‘ತಿಳಿಯದೆಯೇ ಕೇಂದ್ರದ ಒಳಹೊಕ್ಕಿದ್ದೇನೆ. ಕೇಂದ್ರದಲ್ಲಿ ಹೆಚ್ಚಿನ ಭದ್ರತೆ ನಿಯೋಜಿಸಲಾಗಿತ್ತು. ಯಾವ ಸಿಬ್ಬಂದಿಯೂ ನನ್ನನ್ನು ತಡೆಯಲಿಲ್ಲ. ಚುನಾವಣಾಧಿಕಾರಿಯು ನನ್ನ ಹೆಸರನ್ನು ಕೂಗಿದ ತಕ್ಷಣವೇ ನಾನು ಕೇಂದ್ರದಿಂದ ಹೊರನಡೆದಿದ್ದೇನೆ’ ಎಂದರು.

ಇವಿಎಂ ಹಾಗೂ ಇದರ ಕಾರ್ಯವಿಧಾನವು ಸಂಪೂರ್ಣ ಪಾರದರ್ಶಕವಾಗಿದೆ ಎಂಬುದನ್ನು ಆಯೋಗವು ಖಚಿತ ಪಡಿಸಬೇಕು. ಇಲ್ಲವಾದಲ್ಲಿ ಈ ಯಂತ್ರದ ಬಳಕೆಯನ್ನು ನಿಷೇಧಿಸಬೇಕು. ಪ್ರಜಾಸತ್ತಾತ್ಮಕವಾದ ಎಲ್ಲ ಸಂಸ್ಥೆಗಳನ್ನು ಕೈವಶ ಮಾಡಿಕೊಂಡ ಈ ಹೊತ್ತಿನಲ್ಲಿ, ಸಾರ್ವಜನಿಕರಿಗೆ ಪಾರದರ್ಶಕವಾಗಿರುವ ಚುನಾವಣಾ ಪ್ರಕ್ರಿಯೆಯೊಂದೇ ಕೊನೆಯ ರಕ್ಷಣೆಯಾಗಿದೆ

ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ಈ ಚುನಾವಣೆಯ ಉದ್ದಕ್ಕೂ ಎಷ್ಟು ಇವಿಎಂಗಳು ದೋಷಪೂರಿತವಾಗಿದ್ದವು ಎಂಬುದನ್ನು ಮೊದಲು ಆಯೋಗ ಅಂಕಿ–ಅಂಶಗಳನ್ನು ಬಿಡುಗಡೆ ಮಾಡಬೇಕು. ಎಷ್ಟು ಇವಿಎಂಗಳು ತಪ್ಪು ಸಮಯ, ದಿನಾಂಕವನ್ನು ತೋರಿಸಿವೆ? ಎಷ್ಟು ಮತಗಳು ಇವಿಎಂನಲ್ಲಿ ದಾಖಲಾಗಿವೆ? ಎಷ್ಟು ಕಂಟ್ರೋಲ್ ಯೂನಿಟ್‌ಗಳನ್ನು ಹಾಗೂ ಬ್ಯಾಲೆಟ್ ಯೂನಿಟ್‌ಗಳನ್ನು ಬದಲಾಯಿಸಲಾಗಿದೆ? ಅಣಕು ಮತದಾನದ ವೇಳೆ ಎಷ್ಟು ಇವಿಎಂಗಳಲ್ಲಿ ದೋಷ ಕಂಡುಬಂದಿತ್ತು?

ಗೌರವ್ ಗೊಗೊಯ್, ಕಾಂಗ್ರೆಸ್ ನಾಯಕ

ಮಹಾರಾಷ್ಟ್ರ, ಉತ್ತರ ಪ್ರದೇಶ, ಬಿಹಾರ ಹಾಗೂ ಇತರ ರಾಜ್ಯಗಳಲ್ಲಿ ಬಿಜೆಪಿ ಗೆಲುವು ಸಾಧಿಸಿದ 80 ಕ್ಷೇತ್ರಗಳ ಮತ ಎಣಿಕೆಯನ್ನು ಸರಿಯಾಗಿ ನಡೆಸಿದರೆ, ಈ ಎಲ್ಲ ಕ್ಷೇತ್ರಗಳಲ್ಲೂ ಬಿಜೆಪಿ ಸೋಲಲಿದೆ. ಆಗ ಈಗಿನ ಬಿಜೆಪಿ ಸರ್ಕಾರವು ಅಧಿಕಾರ ಕಳೆದುಕೊಳ್ಳಲಿದೆ. ಇವಿಎಂ ಕುರಿತು ಎದ್ದಿರುವ ವಿಚಾರಗಳ ಕುರಿತು ಸುಪ್ರೀಂ ಕೋರ್ಟ್ ಹಾಗೂ ಚುನಾವಣಾ ಆಯೋಗವು ಕಠಿಣ ನಿರ್ಧಾರ ಕೈಗೊಳ್ಳಬೇಕು

ಸಂಜಯ್ ಸಿಂಗ್, ಎಎಪಿ ನಾಯಕ

ಒಂದು ವೇಳೆ ಇವಿಎಂ ಇಲ್ಲದೆ ನ್ಯಾಯಯುತವಾಗಿ ಚುನಾವಣೆಯನ್ನು ನಡೆಸಿದ್ದರೆ, ಬಿಜೆಪಿಯು 240 ಸ್ಥಾನಗಳನ್ನು ಅಲ್ಲ, 40 ಸ್ಥಾನಗಳನ್ನೂ ಗೆಲ್ಲುತ್ತಿರಲಿಲ್ಲ

ಆದಿತ್ಯ ಠಾಕ್ರೆ, ಶಿವಸೇನಾ (ಉದ್ಧವ್ ಬಣ) ನಾಯಕ

ಇವಿಎಂ ಹ್ಯಾಕ್ ಮಾಡಬಹುದಿದ್ದರೆ, ಕಾಂಗ್ರೆಸ್ ಇಷ್ಟು ಸ್ಥಾನ ಗೆಲ್ಲುತ್ತಿತ್ತೇ? ಸುಳ್ಳು ಸುದ್ದಿ ಹರಡುತ್ತಿರುವ ‘ಇಂಡಿಯಾ’ ನಾಯಕರು ಕ್ಷಮೆ ಕೇಳಬೇಕು

ಸಂಜಯ್ ನಿರುಪಮ್, ಶಿವಸೇನಾ ನಾಯಕ

ನಮ್ಮ ಅಧಿಕಾರಿಗಳೊಬ್ಬರು ಬಳಸುತ್ತಿದ್ದ ಮೊಬೈಲ್‌ವೊಂದು ಅಕ್ರಮವಾಗಿ ಬೇರೊಬ್ಬರ ಕೈ ಸೇರಿದ್ದು ದುರದೃಷ್ಟಕರ. ಈ ಬಗ್ಗೆ ಈಗಾಗಲೇ ಪೊಲೀಸರಿಗೆ ದೂರು ನೀಡಲಾಗಿದೆ

ವಂದನಾ ಸೂರ್ಯವಂಶಿ, ಚುನಾವಣಾಧಿಕಾರಿ

ಒಟಿಪಿಯನ್ನು ಬಳಸಿಕೊಂಡು ಇವಿಎಂಗಳನ್ನು ತೆರೆಯಲಾಗಿದೆ ಎಂದು ನಮ್ಮ ಠಾಣೆಯ ಯಾವ ಅಧಿಕಾರಿಯೂ ಯಾರಿಗೂ ಮಾಹಿತಿ ನೀಡಿಲ್ಲ

ಠಾಣೆ ಅಧಿಕಾರಿಗಳು, ಪ್ರಕರಣದ ಕುರಿತು ತನಿಖೆ ನಡೆಸುತ್ತಿರುವ ವನರಾಯ್ ಠಾಣೆ

ಮಿಂಚಿದ ತಂಜಿಮ್ ಹಸನ್, ಮುಸ್ತಫಿಜುರ್ • ನೇಪಾಳ ತಂಡದ ಹೋರಾಟ ವ್ಯರ್ಥ

ಸೂಪರ್ ಎಂಟರ ಹಂತಕ್ಕೆ ಬಾಂಗ್ಲಾ

ಕಿಂಗ್‌ಸ್ಟೌನ್ (ಸೇಂಟ್ ವಿನ್ಸೆಂಟ್), (ಪಿಟಿಐ): ಮಧ್ಯಮ ವೇಗಿ ತಂಜಿಮ್ ಹಸನ್ ಸಕಿಬ್ ಅವರ ಜೀವನ ಶ್ರೇಷ್ಠ ಬೌಲಿಂಗ್ (4–2–7–4) ನೆರವಿನಿಂದ ಬಾಂಗ್ಲಾದೇಶ ತಂಡ ಟಿ20 ವಿಶ್ವಕಪ್‌ನ ತನ್ನ ಕೊನೆಯ ಲೀಗ್ ಪಂದ್ಯದಲ್ಲಿ ನೇಪಾಳ ತಂಡವನ್ನು ಸೋಮವಾರ 21 ರನ್‌ಗಳಿಂದ ಸೋಲಿಸಿ ಸೂಪರ್ ಎಂಟರ ಹಂತ ಪ್ರವೇಶಿಸಿತು.

ಈ ಹಿಂದಿನ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡಕ್ಕೆ ಪ್ರಬಲ ಪೈಪೋಟಿ ನೀಡಿದ್ದ ನೇಪಾಳ ಸೋಮವಾರ ನಡೆದ ಈ ಪಂದ್ಯದಲ್ಲೂ ಸುಲಭವಾಗಿ ಮಣಿಯಲಿಲ್ಲ. ಬೌಲರ್‌ಗಳ ಸಾಂಘಿಕ ಪ್ರಯತ್ನದಿಂದ ಬಾಂಗ್ಲಾದೇಶ ತಂಡವನ್ನು 106 ರನ್ನಿಗೆ ಆಲೌಟ್ ಮಾಡಿತ್ತು. ಆದರೆ ತಂಜೀಮ್, ಅನುಭವಿ ಶಕಿಬ್ ಅಲ್ ಹಸನ್ (9ಕ್ಕೆ2), ಮುಸ್ತಫಿಝುರ್ ರಹಮಾನ್ (4–1–7–3) ಅವರು ಬಿಗು ಬೌಲಿಂಗ್‌ನಿಂದ ನೇಪಾಳ ನಾಲ್ಕು ಎಸೆತಗಳಿರುವಂತೆ 85 ರನ್ನಿಗೆ ಕುಸಿಯಿತು.

ಟಿ20 ವಿಶ್ವಕಪ್‌ನಲ್ಲಿ ತಂಡವೊಂದು ಅತಿ ಕಡಿಮೆ ಮೊತ್ತ ಗಳಿಸಿಯೂ ಗೆದ್ದ ದಾಖಲೆ ಇದಾಗಿದೆ.

ದಕ್ಷಿಣ ಆಫ್ರಿಕಾ ‘ಡಿ’ ಗುಂಪಿನಲ್ಲಿ ಮೊದಲನೇ ಸ್ಥಾನ ಪಡೆದರೆ, ಬಾಂಗ್ಲಾದೇಶ ಎರಡನೇ ಸ್ಥಾನದಲ್ಲಿ ಲೀಗ್ ವ್ಯವಹಾರ ಪೂರೈಸಿತು.

ಒಂದು ಹಂತದಲ್ಲಿ ನೇಪಾಳ 5 ವಿಕೆಟ್‌ಗೆ 78 ರನ್ ಗಳಿಸಿ ಗೆಲುವಿನತ್ತ ಸಾಗಿದಂತೆ ಕಂಡರೂ, ಐದು ರನ್ ಅಂತರದಲ್ಲಿ ಏಳು ವಿಕೆಟ್ ಕಳೆದುಕೊಂಡಿತು. ಬ್ಯಾಟಿಂಗ್‌ನಲ್ಲಿ ನಿರಾಶೆ ಮೂಡಿಸಿದ ಬಾಂಗ್ಲಾ ತನ್ನೆಲ್ಲಾ

ತಂಜಿದ್ ಹಸನ್ ಸಕಿಬ್ ಎಎಫ್‌ಪಿ ಚಿತ್ರ

ಬೌಲಿಂಗ್ ಸಂಪನ್ಮೂಲ ಬಳಸಿ ಹೋರಾಟ ನೀಡಿದ ಎದುರಾಳಿಯನ್ನು ಕಟ್ಟಿಹಾಕಿತು. ಒಂದು ಹಂತದಲ್ಲಿ ನೇಪಾಳವನ್ನು 5 ವಿಕೆಟ್‌ಗೆ 26 ರನ್‌ಗಳಿಗೆ ಸೀಮಿತಗೊಳಿಸಿದ್ದ ಬಾಂಗ್ಲಾದೇಶ ಗೆಲುವಿನತ್ತ ಸಾಗಿತ್ತು. ಆದರೆ ಕುಶಲ್ ಮಲ್ಲ (27) ಮತ್ತು ದೀಪೇಂದ್ರ ಸಿಂಗ್ ಐರಿ (25) ಅವರು ಆರನೇ ವಿಕೆಟ್‌ಗೆ 52 ರನ್ ಸೇರಿಸಿ, ಹೋರಾಟ ಪ್ರದರ್ಶಿಸಿ ಗೆಲುವಿನಾಸೆ ಮೂಡಿಸಿದ್ದರು. ಈ ಹಂತಲ್ಲೇ ನಾಟಕೀಯ ಕುಸಿತ ಆರಂಭವಾಯಿತು. ಇವರಿಬ್ಬರ ವಿಕೆಟ್‌ಗಳನ್ನು ಮುಸ್ತಫಿಜುರ್ ಪಡೆದರು. ಸ್ಲೊ ಆಫ್ ಕಟರ್‌ಗಳನ್ನು ಪರಿಣಾಮಕಾರಿಯಾಗಿ ಪ್ರಯೋಗಿಸಿದರು.

ಇದಕ್ಕೆ ಮೊದಲು ಆಡಿದ ಬಾಂಗ್ಲಾದೇಶದ ಬ್ಯಾಟರ್‌ಗಳಲ್ಲಿ ಒಬ್ಬರೂ 20ರ ಗಡಿ ದಾಟಲಿಲ್ಲ.

‘ಅನನುಭವ ತಂಡಕ್ಕೆ ಹಿನ್ನಡೆ ಉಂಟುಮಾಡಿತು’ ಎಂದು ನೇಪಾಳ ನಾಯಕ ರೋಹಿತ್ ಪೌದೆಲ್ ಹೇಳಿದರು

ಸ್ಕೋರುಗಳು: ಬಾಂಗ್ಲಾದೇಶ: 19.3 ಓವರುಗಳಲ್ಲಿ 106 (ಶಕೀಬ್ ಅಲ್ ಹಸನ್ 17, ಮಹಮುದುಲ್ಲಾ 15, ರಿಷದ್ ಹುಸೇನ್ 13; ಸೋಮಪಲ್ ಕಮಿ 10ಕ್ಕೆ2, ದೀಪೇಂದ್ರ ಸಿಂಗ್ ಐರಿ 22ಕ್ಕೆ2, ರೋಹಿತ್ ಪೌದೆಲ್ 20ಕ್ಕೆ2, ಸಂದೀಪ್ ಲಾಮಿಚಾನೆ 17ಕ್ಕೆ2); ನೇಪಾಳ: 19.2 ಓವರುಗಳಲ್ಲಿ 85 (ಕುಶಲ್ ಮಲ್ಲ 27, ದೀಪೇಂದ್ರ ಸಿಂಗ್ ಐರಿ 25; ತಂಜಿಮ್ ಹಸನ್ ಶಕೀಬ್ 7ಕ್ಕೆ4, ಮುಸ್ತಫಿಜುರ್ ರೆಹಮಾನ್ 7ಕ್ಕೆ3, ಶಕೀಬ್ ಅಲ್ ಹಸನ್ 9ಕ್ಕೆ2, ತಸ್ಕಿನ್ ಅಹ್ಮದ್ 29ಕ್ಕೆ1). ಪಂದ್ಯದ ಆಟಗಾರ: ತಂಜಿಮ್ ಹಸನ್ ಸಕಿಬ್

ಟಿ20 ವಿಶ್ವಕಪ್: ಪಾಯಿಂಟ್ ಪಟ್ಟಿ

ತಂಡ	ಆಡಿದ ಪಂದ್ಯ	ಗೆಲುವು	ಸೋಲು	ಫಲಿತಾಂಶ ಇಲ್ಲ	ಪಾಯಿಂಟ್ಸ್	ನೆಟ್ ರನ್‌ರೇಟ್
‘ಎ’ ಗುಂಪು						
ಭಾರತ	4	3	0	1	7	1.137
ಅಮೆರಿಕ	4	2	1	1	5	0.127
ಪಾಕಿಸ್ತಾನ	4	2	2	0	4	0.294
ಕೆನಡಾ	4	1	2	1	3	-0.493
ಐರ್ಲೆಂಡ್	4	0	3	1	1	-1.293
‘ಬಿ’ ಗುಂಪು						
ಆಸ್ಟ್ರೇಲಿಯಾ	4	4	0	0	8	2.791
ಇಂಗ್ಲೆಂಡ್	4	2	1	1	5	3.611
ಸ್ಕಾಟ್ಲೆಂಡ್	4	2	1	1	5	1.255
ನಮಿಬಿಯಾ	4	1	3	0	2	-2.585
ಒಮಾನ್	4	0	4	0	0	-3.062
‘ಸಿ’ ಗುಂಪು						
ಅಫ್ಗಾನಿಸ್ತಾನ	3	3	0	0	6	4.230
ವೆಸ್ಟ್ ಇಂಡೀಸ್	3	3	0	0	6	2.596
ನ್ಯೂಜಿಲೆಂಡ್	4	2	2	0	4	0.415
ಯುಗಾಂಡ	4	1	3	0	2	-4.510
ಪಾ.ನ್ಯೂಗಿನಿ	4	0	4	0	0	-1.268
‘ಡಿ’ ಗುಂಪು						
ದಕ್ಷಿಣ ಆಫ್ರಿಕಾ	4	4	0	0	8	0.470
ಬಾಂಗ್ಲಾದೇಶ	4	3	1	0	6	0.616
ಶ್ರೀಲಂಕಾ	4	1	2	1	3	0.863
ನೆದರ್ಲೆಂಡ್ಸ್	4	1	3	0	2	-1.358
ನೇಪಾಳ	4	0	3	1	1	-0.542

ಕೊನೆಗೂ ಗೆದ್ದ ಶ್ರೀಲಂಕಾ

ನೆದರ್ಲೆಂಡ್ಸ್ ತಂಡದ ವಿರುದ್ಧ 83 ರನ್‌ಗಳ ಗೆಲುವು

ಸೇಂಟ್ ಲೂಸಿಯಾ (ಪಿಟಿಐ): ಶ್ರೀಲಂಕಾ ತಂಡವು ಟಿ20 ವಿಶ್ವಕಪ್‌ನ ‘ಡಿ’ ಗುಂಪಿನ ಔಪಚಾರಿಕ ಪಂದ್ಯದಲ್ಲಿ ನೆದರ್ಲೆಂಡ್ಸ್ ತಂಡವನ್ನು 83 ರನ್‌ಗಳಿಂದ ಮಣಿಸಿ ಲೀಗ್ ಹಂತದ ಅಭಿಯಾನವನ್ನು ಮುಗಿಸಿತು.

ಗುಂಪಿನಲ್ಲಿ ಮೊದಲೆರಡು ಸ್ಥಾನಗಳನ್ನು ಪಡೆದಿರುವ ದಕ್ಷಿಣ ಆಫ್ರಿಕಾ (8 ಅಂಕ) ಮತ್ತು ಬಾಂಗ್ಲಾದೇಶ (6 ಅಂಕ) ತಂಡಗಳು ಈಗಾಗಲೇ ಸೂಪರ್ ಎಂಟರ ಘಟ್ಟಕ್ಕೆ ಪ್ರವೇಶ ಪಡೆದಿವೆ. ಸೋಮವಾರ ನಡೆದ ಕೊನೆಯ ಪಂದ್ಯ ಗೆಲ್ಲುವ ಮೂಲಕ ಶ್ರೀಲಂಕಾ ಒಟ್ಟಾರೆ 3 ಪಾಯಿಂಟ್ಸ್ ಪಡೆಯಿತು.

ಮತ್ತೊಂದೆಡೆ ನೇಪಾಳ ವಿರುದ್ಧ ಮಾತ್ರ ಗೆಲುವು ಸಾಧಿಸಿದ ನೆದರ್ಲೆಂಡ್ಸ್ ತಂಡವೂ ಟೂರ್ನಿಯಿಂದ ಹೊರಬಿತ್ತು.

ಮೊದಲು ಬ್ಯಾಟಿಂಗ್ ಮಾಡಿದ ಶ್ರೀಲಂಕಾ ತಂಡ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 201 ರನ್ ಕಲೆಹಾಕಿತು. ಕುಶಾಲ್ ಮೆಂಡಿಸ್ (46; 29ಎ, 4x5) ಮತ್ತು ಚರಿತ್ ಅಸಲಂಕ (46; 21ಎ, 4x1, 6x5) ಉಪಯುಕ್ತ ಕಾಣಿಕೆ ನೀಡಿದರು. ಆ್ಯಂಜೆಲೊ ಮ್ಯಾಥ್ಯೂಸ್ (ಔಟಾಗದೇ 30; 15ಎ, 4x1, 6x2) ಮತ್ತು ವನಿಂದು ಹಸರಂಗ (ಔಟಾಗದೇ 20; 6ಎ, 4x1, 6x2) ಕೊನೆಯಲ್ಲಿ ಅಬ್ಬರಿಸಿ ತಂಡದ ಮೊತ್ತ ಇನ್ನೂರರ ಗಡಿ ದಾಟಿಸಿದರು. ಡಚ್ ಪಡೆ 16.4 ಓವರ್‌ಗಳಲ್ಲಿ 118 ರನ್ ಗಳಿಸಿ ಸವಾಲು ಮುಗಿಸಿತು. ಆರಂಭ ಆಟಗಾರ ಮೈಕೆಲ್ ಲೆವಿಟ್ ಮತ್ತು ನಾಯಕ ಸ್ಕಾಟ್ ಎಡ್ವರ್ಡ್ಸ್ ತಲಾ 31 ರನ್ ಗಳಿಸಿ ಸ್ವಲ್ಪ ಹೋರಾಟ ತೋರಿದರು. ನುವಾನ್ ತುಷಾರ ಮೂರು ವಿಕೆಟ್ ಪಡೆದರೆ, ವನಿಂದು ಹಸರಂಗ ಮತ್ತು ಮಥೀಶ ಪಥಿರಾಣ ತಲಾ ಎರಡು ವಿಕೆಟ್ ಗಳಿಸಿದರು.

ಸಂಕ್ಷಿಪ್ತ ಸ್ಕೋರ್: ಶ್ರೀಲಂಕಾ: 20 ಓವರ್‌ಗಳಲ್ಲಿ 6 ವಿಕೆಟ್‌ಗೆ 201 (ಕುಶಾಲ್ ಮೆಂಡಿಸ್ 46, ಧನಂಜಯ ಡಿಸಿಲ್ವ 34, ಚರಿತ್ ಅಸಲಂಕ 46, ಆ್ಯಂಜೆಲೊ ಮ್ಯಾಥ್ಯೂಸ್ ಔಟಾಗದೇ

ಚೆಂಡನ್ನು ಸಿಕ್ಸರ್‌ಗೆ ಅಟ್ಟಿದ ಶ್ರೀಲಂಕಾದ ಚರಿತ್ ಅಸಲಂಕ – ಎಪಿ/ಪಿಟಿಐ ಚಿತ್ರ

30; ಲೋಗನ್ ವ್ಯಾನ್ ಬೀಕ್ 45ಕ್ಕೆ 2). ನೆದರ್ಲೆಂಡ್ಸ್: 16.4 ಓವರ್‌ಗಳಲ್ಲಿ 118 (ಮೈಕೆಲ್ ಲೆವಿಟ್ 31, ಸ್ಕಾಟ್ ಎಡ್ವರ್ಡ್ಸ್ 31; ನುವಾನ್ ತುಷಾರ 24ಕ್ಕೆ 3, ವನಿಂದು ಹಸರಂಗ 25ಕ್ಕೆ 2, ಮಥೀಶ ಪಥಿರಾಣ 12ಕ್ಕೆ 2). ಪಂದ್ಯದ ಆಟಗಾರ: ಚರಿತ್ ಅಸಲಂಕ

4 ಓವರುಗಳಲ್ಲಿ ರನ್ ನೀಡದೇ 3 ವಿಕೆಟ್ ಕಿತ್ತ ಫರ್ಗ್ಯೂಸನ್

ನ್ಯೂಜಿಲೆಂಡ್‌ಗೆ 7 ವಿಕೆಟ್ ಜಯ

ತರೂಬಾ (ಟ್ರಿನಿಡಾಡ್ ಅಂಡ್ ಟೊಬಾಗೊ), (ಪಿಟಿಐ): ಲಾಕಿ ಫರ್ಗ್ಯೂಸನ್ (4–4–0–3) ಟಿ20 ಅಂತರರಾಷ್ಟ್ರೀಯ ಪಂದ್ಯದಲ್ಲಿ ಅತ್ಯಂತ ಮಿತವ್ಯಯದ ಬೌಲಿಂಗ್ ದಾಖಲೆಗೆ ಪಾತ್ರರಾದರು. ನ್ಯೂಜಿಲೆಂಡ್ ಬೌಲರ್‌ಗಳು ಟಿ20 ವಿಶ್ವಕಪ್ ಪಂದ್ಯದಲ್ಲಿ ಪಾಪುವಾ ನ್ಯೂಗಿನಿ ತಂಡವನ್ನು 78 ರನ್‌ಗೆ ಉರುಳಿಸಿದರು. ನಂತರ 46 ಎಸೆತಗಳು ಇರುವಂತೆಯೇ ಏಳು ವಿಕೆಟ್‌ಗಳಿಂದ ಗೆದ್ದರು.

ಸೋಮವಾರ ನಡೆದ ‘ಸಿ’ ಗುಂಪಿನ ಔಪಚಾರಿಕ ಪಂದ್ಯದಲ್ಲಿ ನ್ಯೂಜಿಲೆಂಡ್ 12.2 ಓವರ್‌ಗಳಲ್ಲಿ 3 ವಿಕೆಟ್‌ಗೆ 79 ರನ್ ಹೊಡೆಯಿತು.

ಫಿನ್ ಅಲೆನ್ (0) ಮತ್ತು ರಚಿನ್ ರವೀಂದ್ರ (6) ಅವರು ಬೇಗನೆ ನಿರ್ಗಮಿಸಿದರು. ಡೆವೋನ್ ಕಾನ್ವೆ (35, 32ಎ) ತಂಡದ ನೆರವಿಗೆ ಬಂದರು.

ನಂತರ ನಾಯಕ ಕೇನ್ ವಿಲಿಯಮ್ಸನ್ (ಔಟಾಗದೆ 18) ಮತ್ತು ಡೆರೆಲ್ ಮಿಚೆಲ್ (ಔಟಾಗದೆ 19) ಅವರಿಬ್ಬರೂ ಗೆಲುವಿನ ವಿಧಿ

ವಿಕೆಟ್ ಪಡೆದ ನ್ಯೂಜಿಲೆಂಡ್ ತಂಡದ ಬೌಲರ್ ಲಾಕಿ ಫರ್ಗ್ಯೂಸನ್ ಅವರನ್ನು ಸಹ ಆಟಗಾರ ಅಭಿನಂದಿಸಿದರು. ಎಎಫ್‌ಪಿ ಚಿತ್ರ

ಪೂರೈಸಿದರು. ಮಳೆಯ ಕಾರಣ ಪಂದ್ಯ ವಿಳಂಬವಾಗಿ ಆರಂಭಗೊಂಡಿತು.

ಅಫ್ಗಾನಿಸ್ತಾನ ಮತ್ತು ವೆಸ್ಟ್ ಇಂಡೀಸ್ ತಂಡಗಳು ಈಗಾಗಲೇ ಗುಂಪಿನಿಂದ ಸೂಪರ್ ಎಂಟರ ಹಂತ ಪ್ರವೇಶಿಸಿದ್ದವು. ಸೋಮವಾರ ನಡೆದ ಕೊನೆಯ ಪಂದ್ಯ ಗೆಲ್ಲುವ ಮೂಲಕ ನ್ಯೂಜಿಲೆಂಡ್ 4 ಪಾಯಿಂಟ್ಸ್ ಸಂಗ್ರಹಿಸಿದರೆ, ನ್ಯೂಗಿನಿ ತಂಡ ಆಡಿದ ನಾಲ್ಕು ಪಂದ್ಯಗಳಲ್ಲೂ ಸೋಲು ಅನುಭವಿಸಿತು.

ಈ ಹಿಂದೆ ಕೆನಡಾದ ಸಾದ್ ಬಿನ್ ಜಾಫರ್ (4–4–0–2) ಅವರು ಫರ್ಗ್ಯೂಸನ್ ಗಿಂತ ಮೊದಲು ಈ ಸಾಧನೆ ದಾಖಲಿಸಿದ್ದರು. ಆದರೆ ಅದು ವಿಶ್ವಕಪ್ ಅರ್ಹತಾ ಪಂದ್ಯದಲ್ಲಿ (ಪನಮಾ ವಿರುದ್ಧ) ಬಂದಿತ್ತು.

ಸ್ಕೋರುಗಳು: ಪಾಪುವಾ ನ್ಯೂಗಿನಿ: 19.4 ಓವರುಗಳಲ್ಲಿ 78 (ಚಾರ್ಲ್ಸ್ ಅಮಿನಿ 17, ಸೇಸೆ ಬಾವು 12, ನಾರ್ಮನ್ ವನುವ 14; ಟ್ರೆಂಟ್ ಬೌಲ್ಟ್ 14ಕ್ಕೆ2, ಟಿಮ್ ಸೌಥಿ 11ಕ್ಕೆ2, ಲಾಕಿ ಫರ್ಗ್ಯೂಸನ್ ಸೊನ್ನೆಗೆ 3, ಈಶ್ ಸೋಧಿ 29ಕ್ಕೆ2)

ನ್ಯೂಜಿಲೆಂಡ್: 12.2 ಓವರ್‌ಗಳಲ್ಲಿ 3 ವಿಕೆಟ್‌ಗೆ 79 (ಡೆವೊನ್ ಕಾನ್ವೆ 35, ಕೇನ್ ವಿಲಿಯಮ್ಸನ್ ಔಟಾಗದೆ 18, ಡೆರಿಲ್ ಮಿಚೆಲ್ ಔಟಾಗದೆ 19, ಕಬುವಾ ಮೋರಿಯಾ 4ಕ್ಕೆ2) ಪಂದ್ಯ ಶ್ರೇಷ್ಠ: ಲಾಕಿ ಫರ್ಗ್ಯೂಸನ್

ಇಂದು ವಿಂಡೀಸ್– ಅಫ್ಗನ್ ಪೈಪೋಟಿ

ಗುಂಪಿನ ಅಗ್ರಸ್ಥಾನ ನಿರ್ಧಾರಕ್ಕೆ ಪಂದ್ಯ: ಆತಿಥೇಯ ಬ್ಯಾಟರ್‌ಗಳಿಗೆ ಸವಾಲು

ಗ್ರಾಸ್ ಐಲ್ (ಸೇಂಟ್ ಲೂಸಿಯಾ), (ಪಿಟಿಐ): ಆತಿಥೇಯ ವೆಸ್ಟ್ ಇಡೀಸ್ ಮತ್ತು ಟೂರ್ನಿಯಲ್ಲಿ ಸುಧಾರಿತ ಪ್ರದರ್ಶನ ನೀಡುತ್ತಿರುವ ಅಫ್ಗಾನಿಸ್ತಾನ ತಂಡಗಳು ಮಂಗಳವಾರ ಮುಖಾಮುಖಿಯಾಗಲಿದ್ದು, ‘ಸಿ’ ಗುಂಪಿನಲ್ಲಿ ಅಗ್ರಸ್ಥಾನಕ್ಕೆ ಪೈಪೋಟಿಗೆ ನಡೆಯಲಿದೆ.

ಎರಡೂ ತಂಡಗಳು ಈಗಾಗಲೇ ಸೂಪರ್ ಎಂಟಕ್ಕೆ ಅರ್ಹತೆ ಪಡೆದಿವೆ. ಮೊದಲ ಪಂದ್ಯದಲ್ಲಿ ಪಾಪುವಾ ನ್ಯೂಗಿನಿ ಎದುರು ಗೆಲುವಿಗೆ ಪರದಾಡಿದ್ದ ವೆಸ್ಟ್ ಇಂಡೀಸ್ ನಂತರ ಲಯ ಕಂಡುಕೊಂಡು ಯುಗಾಂಡ ಮತ್ತು ನ್ಯೂಜಿಲೆಂಡ್ ತಂಡಗಳನ್ನು ಸುಲಭವಾಗಿ ಸೋಲಿಸಿದೆ.

ಇನ್ನೊಂದೆಡೆ ಕೆರಿಬೀಯನ್ ವಾತಾವರಣಕ್ಕೆ ಒಗ್ಗಿಕೊಂಡಿರುವ ರಶೀದ್ ಖಾನ್ ಬಳಗ ಸ್ಥಿರ ಪ್ರದರ್ಶನ ನೀಡಿದೆ.

‘ಆಟವನ್ನು ಸುಧಾರಿಸಿಕೊಳ್ಳುವುದು ನಮಗೆ ಈಗ ತೀರಾ ಮಹತ್ವದ್ದು. ಒಳ್ಳೆಯ ಮತ್ತು ಸ್ಥಿರ ಆಟ ಆಡಬೇಕಾದರೆ ನಮಗೆ ಇದು ಅತ್ಯಗತ್ಯ’ ಎಂದು ವೆಸ್ಟ್ ಇಂಡೀಸ್ ನಾಯಕ ರೋವ್ಮನ್ ಪೊವೆಲ್ ಪಂದ್ಯಕ್ಕೆ

ರಹಮಾನುಲ್ಲಾ ಗುರ್ಬಾಜ್ ಎಪಿ/ಪಿಟಿಐ ಚಿತ್ರ

ಪೂರ್ವಭಾವಿಯಾಗಿ ಹೇಳಿದರು.

ಆರಂಭ ಆಟಗಾರ ರಹಮಾನುಲ್ಲಾ ಗುರ್ಬಾಜ್ (167 ರನ್) ಮತ್ತು ವೇಗದ ಬೌಲರ್ ಫಜಲ್ಹಖ್ ಫರೂಕಿ (12 ವಿಕೆಟ್) ಅವರು ಕ್ರಮವಾಗಿ ಬ್ಯಾಟರ್ ಮತ್ತು ಬೌಲರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರವುದು ಅಫ್ಗನ್ನರು ಈ ಮಹತ್ವದ ಟೂರ್ನಿಯಲ್ಲಿ ಸಾಧಿಸಿರುವ ಮೇಲುಗೈಗೆ ಕನ್ನಡಿಯಾಗಿದೆ.

ಅನುಭವಿ ಇಬ್ರಾಹಿಂ ಜದ್ರಾನ್ (114. ಇದರಲ್ಲಿ 70 ಅತ್ಯಧಿಕ) ಅವರೂ ಉಪಯುಕ್ತ ಆಟವಾಡಿದ್ದಾರೆ. ಆದರೆ ಈ ತಂಡದಲ್ಲಿ ಸಾಕಷ್ಟು ಬಲಗೈ ಆಟಗಾರರಿದ್ದು ಅವರಿಗೆ, ವೆಸ್ಟ್ ಇಂಡೀಸ್‌ನ ಎಡಗೈ ಸ್ಪಿನ್ನರ್‌ಗಳಾದ ಅಕೀಲ್ ಹುಸನೇ ಮತ್ತು ಗುಡಕೇಶ್ ಮೋತಿ ಸವಾಲಾಗಬಹುದು.

ಬೆರಳಿನ ಗಾಯದಿಂದ ಸ್ಪಿನ್ನರ್ ಮುಜೀಬ್ ಉರ್ ರಹಮಾನ್ ಅವರ ಸೇವೆಯನ್ನು ಅಫ್ಗಾನಿಸ್ತಾನ ಕಳೆದುಕೊಂಡಿದೆ. ಆದರೆ ತಂಡದಲ್ಲಿ ರಶೀದ್ ಖಾನ್ ಹಾಗೂ ನೂರ್ ಅಹ್ಮದ್ ಅವರಂಥ ಸ್ಪಿನ್ನರ್‌ಗಳಿದ್ದಾರೆ. ಈ ಸ್ಪಿನ್ನರ್‌ಗಳು ನ್ಯೂಜಿಲೆಂಡ್, ಪಾಪುವಾ ನ್ಯೂಗಿನಿ ಎದುರು ಪರಿಣಾಮಕಾರಿಯಾಗಿದ್ದರು.

ಇಲ್ಲಿನ ಡ್ಯಾರೆನ್ ಸ್ಯಾಮಿ ನ್ಯಾಷನಲ್ ಕ್ರೀಡಾಂಗಣ ಉತ್ತಮ ಪಿಚ್ ಆಗಿದ್ದು, ಇಲ್ಲಿ ಆಡಿರುವ ಎರಡೂ ಪಂದ್ಯಗಳಲ್ಲಿ ಸಾಕಷ್ಟು ರನ್‌ಗಳು ಬಂದಿವೆ.

ರನ್‌ಗಳ ತಲಾಶೆಯಲ್ಲಿರುವ ವಿಂಡೀಸ್ ಬ್ಯಾಟರ್‌ಗಳಿಗೆ ಇದು ನೆರವಾಗಲಿದೆ. ಆತಿಥೇಯ ತಂಡದ ಬ್ಯಾಟರ್‌ಗಳಲ್ಲಿ ಯಾರೂ ಸ್ಥಿರ ಪ್ರದರ್ಶನ ನೀಡಿಲ್ಲ. ‘ಬ್ಯಾಟರ್‌ಗಳಾಗಿ ನಮ್ಮ ನಿರ್ವಹಣೆ ಸಾಧಾರಣವಾಗಿದೆ. ಮಂಗಳವಾರದ ಪಂದ್ಯ ನಮಗೆ ಬ್ಯಾಟರ್‌ಗಳಾಗಿ ಉತ್ತಮ ಆಟವಾಡಲು ಒಳ್ಳೆಯ ಅವಕಾಶ ಒದಗಿಸಿದೆ’ ಎಂದು ಪೊವೆಲ್ ಹೇಳಿದರು.

ಪಂದ್ಯ ಆರಂಭ: ಬೆಳಿಗ್ಗೆ 6.00

‘ಪಾಕ್ ತಂಡದಲ್ಲಿ ಒಗ್ಗಟ್ಟು ಇರಲಿಲ್ಲ’

ನವದೆಹಲಿ (ಪಿಟಿಐ): ‘ಪಾಕಿಸ್ತಾನ ಕ್ರಿಕೆಟ್ ತಂಡದಲ್ಲಿ ಒಗ್ಗಟ್ಟು ಇರಲಿಲ್ಲ. ತಮ್ಮ ಸುದೀರ್ಘ ಕೋಚಿಂಗ್ ವೃತ್ತಿಜೀವನದಲ್ಲಿ ಇಂತಹ ಪರಿಸ್ಥಿತಿಯನ್ನು ಹಿಂದೆಂದೂ ನೋಡಿರಲಿಲ್ಲ’ ಎಂದು ತಂಡದ ಮುಖ್ಯ ಕೋಚ್ ಗ್ಯಾರಿ ಕರ್ಸ್ಟನ್ ಟೀಕಾಪ್ರಹಾರ ನಡೆಸಿದ್ದಾರೆ.

ಗ್ಯಾರಿ ಕರ್ಸ್ಟನ್

ಕಳೆದ ಆವೃತ್ತಿಯಲ್ಲಿ ರನ್ನರ್ಸ್ ಅಪ್ ಆಗಿದ್ದ ಪಾಕಿಸ್ತಾನ ತಂಡ, ಇತ್ತೀಚಿನ ವರ್ಷಗಳಲ್ಲೇ ಅತ್ಯಂತ ಕಳಪೆ ಪ್ರದರ್ಶನ ನೀಡಿತ್ತು. ಅಮೆರಿಕ ಎದುರು ಆಘಾತಕಾರಿ ಸೋಲು ಕಂಡಿದ್ದ ಪಾಕ್ ತಂಡ, ತನ್ನ ಬದ್ಧ ಎದುರಾಳಿ ಭಾರತದ ಎದುರೂ ಸೋತಿತ್ತು.

ಶಾ–ಗಂಭೀರ್ ಭೇಟಿ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ, ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಮೆಂಟರ್ ಆಗಿರುವ ಗೌತಮ್ ಗಂಭೀರ್ ಅವರು ಸೋಮವಾರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾದರು.

ಹಿಂದಿನ ಅವಧಿಯಲ್ಲಿ ಪೂರ್ವ ದೆಹಲಿ ಕ್ಷೇತ್ರದ ಬಿಜೆಪಿ ಸಂಸದರಾಗಿದ್ದ ಗಂಭೀರ್ ಅವರು ಈ ಬಾರಿ ಸ್ಪರ್ಧೆಯಿಂದ ಹಿಂದೆ ಸರಿದಿದ್ದರು. ಭಾರತ ತಂಡದ ಮುಖ್ಯ ಕೋಚ್ ಹುದ್ದೆಗೆ ಪ್ರಬಲ ಆಕಾಂಕ್ಷಿಯಾಗಿರುವ ಅವರು ಸಕ್ರಿಯ ರಾಜಕಾರಣದಿಂದ ವಿರಾಮ ಪಡೆದಿದ್ದಾರೆ.

‘ಲೋಕಸಭಾ ಚುನಾವಣಾ ಯಶಸ್ಸಿಗೆ ಅಭಿನಂದನೆ ಸಲ್ಲಿಸಲು ಶಾ ಅವರನ್ನು ಭೇಟಿ ಮಾಡಿದೆ. ಗೃಹ ಸಚಿವರಾಗಿ ಅವರ ನಾಯಕತ್ವವು ನಮ್ಮ ರಾಷ್ಟ್ರದ ಭದ್ರತೆ ಮತ್ತು ಸ್ಥಿರತೆಯನ್ನು ಮತ್ತಷ್ಟು ಬಲಪಡಿಸುತ್ತದೆ’ ಎಂದು ಅವರು ಎಕ್ಸ್‌ನಲ್ಲಿ ಬರೆದುಕೊಂಡಿದ್ದಾರೆ.

ತಾಲೀಮು ಆರಂಭಿಸಿದ ಭಾರತ ತಂಡ

ಬ್ರಿಜ್‌ಟೌನ್ (ಪಿಟಿಐ): ಟಿ20 ವಿಶ್ವಕಪ್ ಸೂಪರ್ ಎಂಟರ ಹಂತಕ್ಕೇರಿರುವ ಭಾರತ ತಂಡವು ಕೆರಿಬಿಯನ್ ಲೆಗ್‌ನಲ್ಲಿ ಮೊದಲ ಸಲ ತಾಲೀಮು ಆರಂಭಿಸಿತು. ವಿರಾಟ್ ಕೊಹ್ಲಿ, ರವೀಂದ್ರ ಜಡೇಜ ಮತ್ತು ಕುಲದೀಪ್ ಯಾದವ್ ಹೆಚ್ಚು ಹೊತ್ತು ಬೆವರು ಹರಿಸಿದರು.

ಕೊಹ್ಲಿ ಗುಂಪು ಹಂತದ ಪಂದ್ಯಗಳಲ್ಲಿ ವಿಫಲರಾಗಿದ್ದರು. ಅವರ ಸ್ಕೋರುಗಳು 1, 4 ಮತ್ತು 0. ಹೀಗಾಗಿ ಸೂಪರ್ ಎಂಟರ ಹಂತದ ಮತ್ತು ನಾಕೌಟ್ ಪಂದ್ಯಗಳಲ್ಲಿ ಅವರಿಗೆ ಲಯಕ್ಕೆ ಮರಳಬೇಕಾದ ಒತ್ತಡವಿದೆ.

ಭಾರತವು ಗುರುವಾರ ನಡೆಯುವ ಸೂಪರ್ ಎಂಟು ಹಂತದ ಮೊದಲ ಪಂದ್ಯದಲ್ಲಿ ಅಫ್ಗಾನಿಸ್ತಾನ ತಂಡವನ್ನು ಕೆನ್ಸಿಂಗ್ಟನ್ ಓವಲ್‌ನಲ್ಲಿ ಎದುರಿಸಲಿದೆ. ಇದುವರೆಗೆ ಬೌಲಿಂಗ್ ಅಥವಾ ಬ್ಯಾಟಿಂಗ್‌ನಲ್ಲಿ ಜಡೇಜ ಅವರ ಕೊಡುಗೆಯೂ ಹೇಳಿಕೊಳ್ಳುವ ರೀತಿಯಲ್ಲಿಲ್ಲ. ವೇಗಿಗಳ ಸ್ನೇಹಿಯಾಗಿದ್ದ

ಬಾರ್ಬಡೋಸ್ ಬೀಚ್‌ನಲ್ಲಿ ಭಾರತ ಕ್ರಿಕೆಟ್ ತಂಡದ ಆಟಗಾರರು ವಾಲಿಬಾಲ್ ಆಡಿದರು. ಪಿಟಿಐ ಚಿತ್ರ

ಪಿಚ್ ಬ್ಯಾಟರ್‌ಗಳ ಪಾಲಿಗೆ ತಲೆನೋವಾಗಿತ್ತು.

ಕುಲದೀಪ್ ಹಾಲಿ ವಿಶ್ವಕಪ್‌ನಲ್ಲಿ ಒಂದೂ ಪಂದ್ಯ ಆಡಿಲ್ಲ. ಆದರೆ ವೆಸ್ಟ್ ಇಂಡೀಸ್‌ನ ಪಿಚ್‌ಗಳಲ್ಲಿ ಅವರು ಪರಿಣಾಮ ಬೀರುವ ಸಾಧ್ಯತೆ ಇರುವ ಕಾರಣ ಅವರನ್ನು ಮುಂದಿನ ಹಂತದಲ್ಲಿ ಆಡಿಸುವುದು ಖಚಿತವಾಗಿದೆ.

ಎಲ್ಲ ಆಟಗಾರರು ಅಭ್ಯಾಸಕ್ಕೆ ಹಾಜರಾದರು. ಪಿಚ್ ಹೇಗಿದೆ ಎಂದು ನಾಯಕ ರೋಹಿತ್, ತಂಡದ ವೇಗಿ ಜಸ್‌ಪ್ರೀತ್ ಬೂಮ್ರಾ ಅವರನ್ನು ಕೇಳಿದರು. ಬೂಮ್ರಾ ಪ್ರಸನ್ನವದನರಾದಂತೆ ಕಂಡರು.

ಒಲಿಂಪಿಕ್ಸ್‌ಗೆ ಸಿದ್ಧತೆ: ನೀರಜ್‌ಗೆ ಸತ್ವಪರೀಕ್ಷೆ

ಪಾವೊ ನೂರ್ಮಿ ಅಥ್ಲೆಟಿಕ್ ಕೂಟ ಇಂದು: ಜಾವೆಲಿನ್‌ನಲ್ಲಿ ಪ್ರಬಲ ಕಣ

ತುರ್ಕು (ಫಿನ್ಲೆಂಡ್), (ಪಿಟಿಐ): ತೊಡೆಯ ಸ್ನಾಯುನೋವಿನಿಂದ ಅಲ್ಪಾವಧಿ ವಿರಾಮ ಪಡೆದಿದ್ದ ಜಾವೆಲಿನ್ ತಾರೆ ನೀರಜ್ ಚೋಪ್ರಾ, ಹೊಸ ಉತ್ಸಾಹದೊಡನೆ ಮಂಗಳವಾರ ಪಾವೊ ನೂರ್ಮಿ ಅಥ್ಲೆಟಿಕ್ ಕೂಟದಲ್ಲಿ ಭಾಗವಹಿಸಲಿದ್ದಾರೆ. ಆದರೆ ಒಲಿಂಪಿಕ್ಸ್ ಸಿದ್ಧತೆಗೆ ನೆರವಾಗಲಿರುವ ಈ ಕೂಟದಲ್ಲಿ ಹಾಲಿ ಒಲಿಂಪಿಕ್ ಚಾಂಪಿಯನ್‌ಗೆ ಪ್ರಬಲ ಪೈಪೋಟಿ ಎದುರಾಗುವ ಸಂಭವವಿದೆ.

26 ವರ್ಷದ ನೀರಜ್ ಕಣದಲ್ಲಿರುವ ಏಕೈಕ ಭಾರತೀಯ ಅಥ್ಲೀಟ್. ಅವರಿಗೆ ಜರ್ಮನಿಯ ಯುವತಾರೆ ಮ್ಯಾಕ್ಸ್ ಡ್ಹೆನಿಂಗ್ ಅವರಿಂದ ಪೈಪೋಟಿ ಎದುರಾಗುವ ನಿರೀಕ್ಷೆಯಿದೆ. ಜಾವೆಲಿನ್ ಎಸೆತದಲ್ಲಿ 90 ಮೀ. ದೂರ ಥ್ರೊ ಮಾಡಿರುವ ಸಾಧಕರ ಕ್ಲಬ್‌ಗೆ ಸೇರ್ಪಡೆಗೊಂಡ ಅತಿ ಕಿರಿಯ ಜಾವೆಲಿನ್ ಪಟು ಎಂಬ ಹಿರಿಮೆಗೆ ಉದಯೋನ್ಮುಖ ತಾರೆ 19 ವರ್ಷದ ಡ್ಹೆನಿಂಗ್ ಪಾತ್ರರಾಗಿದ್ದಾರೆ.

ನೀರಜ್ ಇನ್ನೂ 90 ಮೀ. ಕ್ಲಬ್‌ಗೆ ಸೇರ್ಪಡೆಯಾಗಿಲ್ಲ. 2022ರ ಕೂಟದಲ್ಲಿ ಅವರು ಭಲ್ಲೆಯನ್ನು 89.30 ಮೀ. ದೂರ ಎಸೆದು ಬೆಳ್ಳಿ ಗೆದ್ದಿದ್ದರು. ಅದೇ ವರ್ಷದ ಡೈಮಂಡ್ ಲೀಗ್‌ನಲ್ಲಿ ಅವರ ವೈಯಕ್ತಿಕ ಶ್ರೇಷ್ಠ ಪ್ರದರ್ಶನವಾದ 89.94 ಮೀ. ದಾಖಲಾಗಿತ್ತು.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ನೀರಜ್ ಅವರಿಗೆ ಚಿನ್ನದ

ನೀರಜ್ ಚೋಪ್ರಾ ಎಎಫ್‌ಪಿ ಚಿತ್ರ

ಪದಕ ಉಳಿಸಿಕೊಳ್ಳುವ ಹಾದಿಯಲ್ಲಿ ಉದಯೋನ್ಮುಖ ಥ್ರೋವರ್ ಡ್ಹೆನಿಂಗ್ ಅವರಿಂದ ಹೆಚ್ಚಿನ ಪೈಪೋಟಿ ಎದುರಾಗಬಹುದು ಎಂಬ ಮಾತುಗಳು ಕೇಳಿಬರುತ್ತಿವೆ.

2022ರಲ್ಲಿ ಇದೇ (ಪಾವೊ ನೂರ್ಮಿ) ಕೂಟದಲ್ಲಿ ನೀರಜ್ ಅವರನ್ನು ಸೋಲಿಸಿದ್ದ ಸ್ಥಳೀಯ ಸ್ಪರ್ಧಿ ಒಲಿವರ್ ಹೆಲಾಂಡರ್ ಅವರೂ ಕಣದಲ್ಲಿದ್ದಾರೆ.

ಎರಡು ಬಾರಿಯ ವಿಶ್ವ ಚಾಂಪಿಯನ್ ಆ್ಯಂಡರ್ಸನ್ ಪೀಟರ್ಸ್ (ಗ್ರೆನಡಾ) ಮತ್ತು 2012ರ ಒಲಿಂಪಿಕ್ ಚಾಂಪಿಯನ್ ಕೆಶೋರ್ನ್ ವಾಲ್ಕಾಟ್ (ಟ್ರಿನಿಡಾಡ್ ಮತ್ತು ಟೊಬಾಗೊ) ಅವರೂ ಸ್ಪರ್ಧಾಕಣದಲ್ಲಿದ್ದಾರೆ. ಗೈರುಹಾಜರಾಗಿರುವ ಪ್ರಮುಖ ಸ್ಪರ್ಧಿ ಎಂದರೆ ಯಾಕುಬ್ ವಾಡ್ಲೆಚ್. ಝೆಕ್ ರಿಪಬ್ಲಿಕ್‌ನ ಈ ಅನುಭವಿ ಅಥ್ಲೀಟ್ ದೋಹಾ ಡೈಮಂಡ್ ಲೀಗ್‌ನಲ್ಲಿ ನೀರಜ್ ಅವರನ್ನು ಸೋಲಿಸಿ ಚಿನ್ನ ಗೆದ್ದಿದ್ದರು.

ತೊಡೆಯ ಸ್ನಾಯುಗುಚ್ಛದ ನೋವು ಬಾಧಿಸದಂತೆ ಮುನ್ನೆಚ್ಚರಿಕೆಯ ಕ್ರಮವಾಗಿ ಚೋಪ್ರಾ ಅವರು ಕಳೆದ ತಿಂಗಳು ಒಸ್ಟ್ರಾವಾ ಗೋಲ್ಡನ್ ಸ್ಪೈಕ್ ಟೂರ್ನಿಯಿಂದ ಹಿಂದೆಸರಿದಿದ್ದರು.

ಚೋಪ್ರಾ, ಕಳೆದ ತಿಂಗಳು ಭುವನೇಶ್ವರದಲ್ಲಿ ನಡೆದ ಫೆಡರೇಷನ್ ಕಪ್ ರಾಷ್ಟ್ರೀಯ ಸೀನಿಯರ್ ಅಥ್ಲೆಟಿಕ್ ಕೂಟಕ್ಕೆ ಪುನರಾಗಮನ ಮಾಡಿ ಚಿನ್ನಗೆದ್ದಿದ್ದರು. ಆದರೆ ಅಲ್ಲಿ ಅಷ್ಟೇನೂ (82.77 ಮೀ.) ಗಮನ ಸೆಳೆದಿರಲಿಲ್ಲ.

ಪಾವೊ ನೂರ್ಮಿ ಕ್ರೀಡೆಗಳ ನಂತರ ಅವರು ಜುಲೈ 7ರಂದು ಪ್ಯಾರಿಸ್ ಡೈಮಂಡ್ ಲೀಗ್‌ನಲ್ಲಿ ಕಣಕ್ಕಿಳಿಯಲಿದ್ದಾರೆ.

ಫುಟ್‌ಬಾಲ್ ಕೋಚ್ ಇಗೊರ್ ಸ್ಟಿಮಾಚ್ ವಜಾ

ನವದೆಹಲಿ (ಪಿಟಿಐ): ಇಗೊರ್ ಸ್ಟಿಮಾಚ್ ಅವರನ್ನು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್), ಭಾರತ ತಂಡದ ಮುಖ್ಯ ಕೋಚ್ ಸ್ಥಾನದಿಂದ ತೆಗೆದುಹಾಕಿದೆ. ಫಿಫಾ ವಿಶ್ವಕಪ್ ಕ್ವಾಲಿಫೈಯರ್ಸ್‌ನಲ್ಲಿ ತಂಡದ ನಿರಾಶಾದಾಯಕ ನಿರ್ವಹಣೆಯಿಂದಾಗಿ ಅವರ ತಲೆದಂಡ ಆಗಿದೆ.

56 ವರ್ಷ ವಯಸ್ಸಿನ ಕ್ರೊವೇಷಿಯಾದ ಸ್ಟಿಮಾಚ್ ಅವರನ್ನು 2019ರಲ್ಲಿ ರಾಷ್ಟ್ರೀಯ ತಂಡದ ಹೆಡ್ ಕೋಚ್ ಆಗಿ ನೇಮಕ ಮಾಡಲಾಗಿತ್ತು. ಅವರ ಅವಧಿಯನ್ನು ಕಳೆದ ವರ್ಷ ವಿಸ್ತರಿಸಲಾಗಿತ್ತು. ಎರಡನೇ ಸುತ್ತಿನ ಕೊನೆಯ ಲೀಗ್ ಪಂದ್ಯದಲ್ಲಿ ಇತ್ತೀಚೆಗೆ ಕತಾರ್ ಎದುರು 1–2ರಲ್ಲಿ ಸೋತ ನಂತರ ಭಾರತ ತಂಡ ಕ್ವಾಲಿಫೈಯರ್ಸ್‌ನ ಮೂರನೇ ಸುತ್ತಿಗೇರಲು ವಿಫಲವಾಗಿತ್ತು.

‘2026ರ ವಿಶ್ವಕಪ್ ಅರ್ಹತಾ ಸುತ್ತಿನಲ್ಲಿ ಸೀನಿಯರ್ ಪುರುಷರ ತಂಡದ ನಿರಾಶಾದಾಯಕ ಆಟದ ನಂತರ, ತಂಡವನ್ನು ಮುನ್ನಡೆಸುವುದಕ್ಕೆ ಹೊಸ ಹೆಡ್ ಕೋಚ್ ನೇಮಕಕ್ಕೆ ಸದಸ್ಯರು ಸರ್ವಾನುಮತದಿಂದ ಒಪ್ಪಿಗೆ ನೀಡಿದರು’ ಎಂದು ಎಐಎಫ್‌ಎಫ್ ಹೇಳಿಕೆಯಲ್ಲಿ ತಿಳಿಸಿದೆ. ಸ್ಟಿಮಾಚ್ ಅವರಿಗಿಂತ ಮೊದಲು ಭಾರತ ತಂಡಕ್ಕೆ ಸ್ಟೀಫನ್ ಕಾನ್‌ಸ್ಟಂಟೇನ್ ಕೋಚ್ ಆಗಿದ್ದರು.

ಸ್ಟಿಮಾಚ್ ಮಾರ್ಗದರ್ಶನದಡಿ ಭಾರತ ಎರಡು ಸ್ಯಾಫ್ ಚಾಂಪಿಯನ್‌ಷಿಪ್, ಒಮ್ಮೆ ಇಂಟರ್‌ಕಾಂಟಿನೆಂಟಲ್ ಕಪ್ ಮತ್ತು ಮೂರು ರಾಷ್ಟ್ರಗಳ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡಿದೆ.

ರಷ್ಯಾ, ಚೀನಾ ದಾಳಿ ಬೆದರಿಕೆ ಹಿನ್ನೆಲೆಯಲ್ಲಿ ಕ್ರಮ –ನ್ಯಾಟೊ ಮುಖ್ಯಸ್ಥರ ಹೇಳಿಕೆ

ಅಣ್ವಸ್ತ್ರ ಬಳಕೆ: ನ್ಯಾಟೊ ರಾಷ್ಟ್ರಗಳ ಸಿದ್ಧತೆ

ಲಂಡನ್ (ರಾಯಿಟರ್ಸ್): ರಷ್ಯಾ ಮತ್ತು ಚೀನಾದಿಂದ ಆಕ್ರಮಣದ ಬೆದರಿಕೆ ಇದ್ದು, ಸಂಗ್ರಹದಲ್ಲಿ ಇರುವ ಅಣ್ವಸ್ತ್ರಗಳನ್ನು ಬಳಕೆಗೆ ಸಜ್ಜುಗೊಳಿಸಲು ‘ನ್ಯಾಟೊ’ ಸದಸ್ಯ ರಾಷ್ಟ್ರಗಳು ಸಿದ್ಧತೆ ಆರಂಭಿಸಿವೆ.

‘ಸಂಭವನೀಯ ದಾಳಿ ತಡೆಗೆ ಕ್ರಮ ಕೈಗೊಳ್ಳಲು ಮತ್ತು ಅಣ್ವಸ್ತ್ರ ಬಳಕೆ ವಿಷಯದಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ನ್ಯಾಟೊ ಬದ್ಧವಾಗಿದೆ. ಸಂಗ್ರಹದಲ್ಲಿ ಇರುವ ಅಣ್ವಸ್ತ್ರಗಳ ಬಳಕೆ ಹೇಗಿರಬೇಕು ಎನ್ನುವ ಬಗ್ಗೆ ಸದಸ್ಯ ರಾಷ್ಟ್ರಗಳ ಜತೆಗೆ ಚರ್ಚೆ ನಡೆದಿದೆ’ ಎಂದು ನ್ಯಾಟೊ ಮುಖ್ಯಸ್ಥ ಜೆನ್ಸ್ ಸ್ಟಾಲ್ಟೆನ್‌ಬರ್ಗ್ ಹೇಳಿದರು.

‘ಅಣ್ವಸ್ತ್ರ ನಿರ್ವಹಣೆಯ ವಿವರಗಳನ್ನು ಈಗಲೇ ಹೇಳಲು ಬಯಸುವುದಿಲ್ಲ. ಆದರೆ, ಎಷ್ಟು ಅಣ್ವಸ್ತ್ರ ಸಿಡಿತಲೆಗಳು ಬಳಕೆಗೆ ಸಿದ್ಧ ಇವೆ, ಎಷ್ಟನ್ನು ಸಜ್ಜಾಗಿ ಡಬೇಕು ಎಂಬ ಬಗ್ಗೆ ಚರ್ಚೆ ಅಗತ್ಯವಿದೆ. ಅದನ್ನೇ ನಾವು ಈಗ ಮಾಡುತ್ತಿದ್ದೇವೆ’ ಎಂದು ದೈನಿಕವೊಂದಕ್ಕೆ ತಿಳಿಸಿದ್ದಾರೆ.

ಅಣ್ವಸ್ತ್ರ ಮೈತ್ರಿ ಹೊಂದಿರುವುದಾಗಿ ಸಂದೇಶ ರವಾನಿಸಲು ಈಗ ಪಾರದರ್ಶಕವಾದ ಚರ್ಚೆ ಹೆಚ್ಚು ನೆರವಾಗಲಿದೆ ಎಂದರು.

‘ಅಣ್ವಸ್ತ್ರರಹಿತ ಜಗತ್ತಿನ ನಿರ್ಮಾಣವೇ ನ್ಯಾಟೊ ಗುರಿ. ಆದರೆ, ಎಷ್ಟು ಕಾಲ ಅಣ್ವಸ್ತ್ರಗಳು ಇರುತ್ತವೆಯೋ ಅಲ್ಲಿಯವರೆಗೂ ಅಣ್ವಸ್ತ್ರ ಮೈತ್ರಿಗೆ ಬದ್ಧವಾಗಲೇಬೇಕಿದೆ. ರಷ್ಯಾ, ಚೀನಾ, ಉತ್ತರ ಕೊರಿಯಾ ರಾಷ್ಟ್ರಗಳ ಬಳಿ ಅಣ್ವಸ್ತ್ರಗಳಿವೆ. ಹೀಗಿರುವಾಗ ನ್ಯಾಟೊ ರಾಷ್ಟ್ರಗಳಲ್ಲಿ ಇಲ್ಲ ಎಂದಾದರೆ ಹೆಚ್ಚು ಅಪಾಯಕಾರಿ ಸ್ಥಿತಿ ಉದ್ಭವಿಸುವ

ಜೆನ್ಸ್ ಸ್ಟಾಲ್ಟೆನ್‌ಬರ್ಗ್

ಸಾಧ್ಯತೆ ಇದೆ’ ಎಂದು ಪ್ರತಿಕ್ರಿಯಿಸಿದರು.

ಅಣ್ವಸ್ತ್ರಗಳು ನ್ಯಾಟೊ ಪಾಲಿಗೆ ಭದ್ರತಾ ಖಾತರಿಯಾಗಿವೆ. ಅದರ ಉದ್ದೇಶ ಶಾಂತಿ ಕಾಪಾಡಿಕೊಳ್ಳುವುದೇ ಆಗಿದೆ ಎಂದು ಸ್ಟಾಲ್ಟೆನ್ ಬರ್ಗ್ ಪ್ರತಿಪಾದಿಸಿದರು.

ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು, ಪ್ರತಿಕೂಲ ಸಂದರ್ಭಗಳಲ್ಲಿ ರಷ್ಯಾ ತನ್ನನ್ನು ತಾನು ರಕ್ಷಿಸಿಕೊಳ್ಳಲು ಅಣ್ವಸ್ತ್ರಗಳನ್ನು ಬಳಸಬಹುದು ಎಂದು ಇತ್ತೀಚೆಗೆ ಪದೇ ಪದೇ ಎಚ್ಚರಿಕೆ ನೀಡಿದ್ದರು. ಅಮೆರಿಕ ಮತ್ತು ಐರೋಪ್ಯ ಮೈತ್ರಿ ರಾಷ್ಟ್ರಗಳು ಜಗತ್ತನ್ನು ಅಣ್ವಸ್ತ್ರ ಸಂಘರ್ಷಕ್ಕೆ ದೂಡುತ್ತಿವೆ. ಉಕ್ರೇನ್‌ಗೆ ಸಾಕಷ್ಟು ಶಸ್ತ್ರಾಸ್ತ್ರ ಮಾರಿದ್ದು, ಈ ಪೈಕಿ ಕೆಲವನ್ನು ರಷ್ಯಾದ ಭೌಗೋಳಿಕ ಗಡಿಯಲ್ಲೂ ಬಳಸಬಹುದಾಗಿದೆ ಎಂದು ರಷ್ಯಾ ಆತಂಕ ವ್ಯಕ್ತಪಡಿಸಿತ್ತು.

ಅಣ್ವಸ್ತ್ರ ಸಜ್ಜಿತ ಶಸ್ತ್ರಾಸ್ತ್ರಗಳ ಹೆಚ್ಚಿನ ನಿಯೋಜನೆ ಕುರಿತು ನ್ಯಾಟೊ ಮುಖ್ಯಸ್ಥರ ಹೇಳಿಕೆಯು ಪರಿಸ್ಥಿತಿಯನ್ನು ಇನ್ನಷ್ಟು ಗಂಭೀರವಾಗಿಸಲಿದೆ ಎಂದು ರಷ್ಯಾ ಪ್ರತಿಕ್ರಿಯಿಸಿದೆ.

‘ಹೈಟೆಕ್ ಪರಮಾಣು: ಅಮೆರಿಕಗಿಂತ ಚೀನಾ 15 ವರ್ಷ ಮುಂದು’

ವಾಷಿಂಗ್ಟನ್ (ರಾಯಿಟರ್ಸ್): ಹೈಟೆಕ್ ಪರಮಾಣು ಶಕ್ತಿ ಕ್ಷೇತ್ರದಲ್ಲಿ ಅಮೆರಿಕವು ಚೀನಾಗಿಂತ 15 ವರ್ಷಗಳಷ್ಟು ಹಿಂದೆ ಇದೆ ಎಂದು ಅಮೆರಿಕ ಮೂಲದ ಇನ್ಫರ್ಮೇಷನ್ ಟೆಕ್ನಾಲಜಿ ಅಂಡ್ ಇನೊವೇಷನ್ ಫೌಂಡೇಷನ್‌ನ ಅಧ್ಯಯನ ತಿಳಿಸಿದೆ. ಚೀನಾವು 27 ಪರಮಾಣು ರಿಯಾಕ್ಟರ್‌ಗಳನ್ನು ನಿರ್ಮಿಸುತ್ತಿದೆ. ಒಂದೊಂದರ ನಿರ್ಮಾಣದ ಅವಧಿ ಸರಾಸರಿ 7 ವರ್ಷಗಳು. ಬೇರೆ ದೇಶಗಳಿಗೆ ಹೋಲಿಸಿದರೆ ಈ ನಿರ್ಮಾಣಾವಧಿ ತುಂಬಾ ಕಡಿಮೆ ಇದೆ. ಬೀಜಿಂಗ್‌ನಲ್ಲಿ ಹಣಕಾಸಿನ ನೆರವೂ ದೊರೆಯುತ್ತಿದೆ ಎಂದು ಅಧ್ಯಯನ ವರದಿ ಉಲ್ಲೇಖಿಸಿದೆ.

ಭಾರತೀಯ ಪ್ರಜೆ ನಿಖಿಲ್ ಗುಪ್ತಾ ಅಮೆರಿಕಕ್ಕೆ ಹಸ್ತಾಂತರ

ವಾಷಿಂಗ್ಟನ್ (ಪಿಟಿಐ): ‘ಅಮೆರಿಕದಲ್ಲಿ ಸಿಖ್ ಮೂಲಭೂತವಾದಿಯ ಕೊಲೆ ಸಂಚು ಕೃತ್ಯದ ಆರೋಪಿ, ಭಾರತೀಯ ಪ್ರಜೆ ನಿಖಿಲ್ ಗುಪ್ತಾನನ್ನು ಝೆಕ್ ಗಣರಾಜ್ಯವು ಅಮೆರಿಕಕ್ಕೆ ಹಸ್ತಾಂತರ ಮಾಡಿದೆ’ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಅಮೆರಿಕದ ಮನವಿಯ ಮೇರೆಗೆ 52 ವರ್ಷ ವಯಸ್ಸಿನ ಗುಪ್ತಾನನ್ನು ಝೆಕ್ ಗಣರಾಜ್ಯದ ಪೊಲೀಸರು ಕಳೆದ ವರ್ಷ ಬಂಧಿಸಿದ್ದರು. ಖಾಲಿಸ್ತಾನ್ ಪ್ರತ್ಯೇಕತಾವಾದಿ ಗುರುಪತ್ವಂತ್ ಸಿಂಗ್ ಪನ್ನೂ ಅವರ ಹತ್ಯೆ ಸಂಚಿನಲ್ಲಿ ಈತ ಭಾಗಿಯಾಗಿದ್ದ ಎಂಬ ಆರೋಪಗಳಿವೆ.

ಗಡೀಪಾರು ಕ್ರಮವನ್ನು ಪ್ರಶ್ನಿಸಿ ಗುಪ್ತಾ ಸಲ್ಲಿಸಿದ್ದ ಅರ್ಜಿಯನ್ನು ಝೆಕ್ ನ್ಯಾಯಾಲಯವು ಕಳೆದ ತಿಂಗಳಷ್ಟೇ ತಿರಸ್ಕರಿಸಿತ್ತು. ಭಾರತದ ಅಧಿಕಾರಿ ಒಬ್ಬರ ನಿರ್ದೇಶನದ ಅನುಸಾರ ಗುಪ್ತಾ ಕಾರ್ಯನಿರ್ವಹಿಸುತ್ತಿದ್ದರು ಎಂದು ಅಮೆರಿಕದ ವಕೀಲರು ಆರೋಪಿಸಿದ್ದರು.

ಗಾಜಾಗೆ ನೆರವು: ‘ಸೀಮಿತ ವಿರಾಮ’ ಘೋಷಿಸಿದ ಇಸ್ರೇಲ್ ಸೇನೆ

ಜೆರುಸಲೇಂ (ಎ.ಪಿ): ‘ವೈದ್ಯಕೀಯ, ಮಾನವೀಯ ನೆರವು ಒದಗಿಸಲು ಅವಕಾಶ ಕಲ್ಪಿಸುವ ಕ್ರಮವಾಗಿ ಗಾಜಾದ ದಕ್ಷಿಣ ವಲಯದಲ್ಲಿ ಹಗಲು ಹೊತ್ತಿನಲ್ಲಿ ಸಂಘರ್ಷಕ್ಕೆ ವಿರಾಮ ನೀಡಲಾಗುವುದು’ ಎಂದು ಇಸ್ರೇಲ್ ಸೇನೆಯು ಭಾನುವಾರ ಪ್ರಕಟಿಸಿದೆ.

ಉಲ್ಲೇಖಿತ ‘ಕಾರ್ಯತಂತ್ರ ವಿರಾಮ’ ರಫಾ ವಲಯದಲ್ಲಿ ಸುಮಾರು 12 ಕಿ.ಮೀ. ರಸ್ತೆ ವ್ಯಾಪ್ತಿಗೆ ಅನ್ವಯವಾಗಲಿದೆ. ಈ ವಿರಾಮವು ಇಸ್ರೇಲ್ ಸೇನೆಯ ಅತಿಕ್ರಮಣದಿಂದಾಗಿ ಇತ್ತೀಚಿನ ದಿನಗಳಲ್ಲಿ ಹೆಚ್ಚು ಬಾಧಿತರಾಗಿರುವ ಪ್ಯಾಲೆಸ್ಟೀನಿಯರಿಗೆ ಅಗತ್ಯ ವೈದ್ಯಕೀಯ ನೆರವನ್ನು ಒದಗಿಸಲು ಸಹಕಾರಿಯಾಗಲಿದೆ ಎಂದು ಆಶಿಸಲಾಗಿದೆ.

ಕಾರ್ಯತಂತ್ರ ವಿರಾಮವು ಸ್ಥಳೀಯ ಸಮಯ ಬೆಳಿಗ್ಗೆ 8 ಗಂಟೆಗೆ ಆರಂಭವಾಗಿ, ಸಂಜೆ 7 ಗಂಟೆಯವರೆಗೆ ಮುಂದಿನ ಆದೇಶದವರೆಗೆ ಚಾಲ್ತಿಯಲ್ಲಿರುತ್ತದೆ. ಇಸ್ರೇಲ್ ಸೇನೆಯ ನಿಯಂತ್ರಣದಲ್ಲಿ ಇರುವ ಕೆರೆಂ ಶಾಲೊಂ ಕ್ರಾಸಿಂಗ್ ಪ್ರದೇಶದವರೆಗೂ ಟ್ರಕ್‌ಗಳು ತೆರಳಬಹುದಾಗಿದೆ ಎಂದು ಸೇನೆಯು ತಿಳಿಸಿದೆ.

ಮುಸಲ್ಮಾನರ ಪ್ರಮುಖ ಹಬ್ಬ ಈದ್–ಅಲ್–ಅದಾ ಆಚರಣೆ ಮುನ್ನ ವಿಶ್ವಸಂಸ್ಥೆ ಹಾಗೂ ಇತರೆ ಅಂತರ ರಾಷ್ಟ್ರೀಯ ನೆರವು ಸಂಸ್ಥೆಗಳ ಜೊತೆಗೆ ನಡೆದ ಮಾತುಕತೆಯ ಪರಿಣಾಮ ಇಸ್ರೇಲ್ ಸೇನೆ ಈ ಕಾರ್ಯತಂತ್ರ ವಿರಾಮವನ್ನು ಘೋಷಿಸಿದೆ.

ಯುದ್ಧ ಸಮಿತಿ’ ವಿಸರ್ಜಿಸಿದ ಇಸ್ರೇಲ್ ಪ್ರಧಾನಿ: ಪ್ಯಾಲೆಸ್ಟೀನ್ ಮೇಲೆ ಯುದ್ಧ ನಡೆಸಿಕೊಂಡು ಹೋಗುವ ಜವಾಬ್ದಾರಿಯೊಂದಿಗೆ ರಚಿಸಲಾಗಿದ್ದ ‘ಯುದ್ಧ ಕ್ಯಾಬಿನೆಟ್’ (ಸಮಿತಿ) ಅನ್ನು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ವಿಸರ್ಜಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಪಕ್ಷ ಸಂಸದ ಬೆನ್ನಿ ಗ್ಯಾಂಟ್ಜ್ ಸಮಿತಿಯಿಂದ ಹಿಂದೆ ಸರಿದ ಬಳಿಕ ವಿಸರ್ಜನೆ ಮಾಡಲಾಯಿತು ಎನ್ನಲಾಗಿದೆ.

ಇಂಗ್ಲೆಂಡ್, ರುಮೇನಿಯಾ ತಂಡಗಳ ಶುಭಾರಂಭ

ಗೆಲ್ಸೆನ್ಕಿರ್ಚೆನ್, ಜರ್ಮನಿ (ಎಪಿ): ಜೂಡ್ ಬೆಲ್ಲಿಂಗ್‌ಹ್ಯಾಮ್ ಗಳಿಸಿದ ಗೋಲಿನ ನೆರವಿನಿಂದ ಇಂಗ್ಲೆಂಡ್ ತಂಡವು ಯುರೋ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಸೋಮವಾರ ಸರ್ಬಿಯಾ ತಂಡವನ್ನು 1-0ಯಿಂದ ಮಣಿಸಿ ಶುಭಾರಂಭ ಮಾಡಿತು.

ರಿಯಲ್ ಮ್ಯಾಡ್ರಿಡ್ ತಾರೆ, 20 ವರ್ಷದ ಬೆಲ್ಲಿಂಗ್‌ಹ್ಯಾಮ್ ಅವರು 13ನೇ ನಿಮಿಷ ಇಂಗ್ಲೆಂಡ್ ತಂಡಕ್ಕೆ ಮುನ್ನಡೆ ಒದಗಿಸಿದರು. ಸಮಬಲ ಸಾಧಿಸಲು ಸರ್ಬಿಯಾ ಆಟಗಾರರು ಕೊನೆಯವರೆಗೆ ಪ್ರಯತ್ನಿಸಿದರೂ ಸಫಲವಾಗಲಿಲ್ಲ. ಇದೇ ವೇಳೆ ನಾಯಕ ಹ್ಯಾರಿ ಕೇನ್ ಅವರು ಪ್ರಮುಖ ಟೂರ್ನಿಗಳಲ್ಲಿ 23ನೇ ಪಂದ್ಯವನ್ನು ಆಡುವ ಮೂಲಕ ಇಂಗ್ಲೆಂಡ್ ಪರ ದಾಖಲೆ ನಿರ್ಮಿಸಿದರು.

ಯುರೋ ಕಪ್ 2024 ಜರ್ಮನಿ

ಈ ಗೆಲುವಿನೊಂದಿಗೆ 'ಸಿ' ಗುಂಪಿನಲ್ಲಿ ಇಂಗ್ಲೆಂಡ್ 3 ಅಂಕದೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಭಾನುವಾರ ನಡೆದ ಡೆನ್ಮಾರ್ಕ್ ಮತ್ತು ಸ್ಲೋವೆನಿಯಾ ತಂಡಗಳ ನಡುವಿನ ಪಂದ್ಯ 1-1ರಿಂದ ಡ್ರಾ ಗೊಂಡಿತ್ತು. ಇಂಗ್ಲೆಂಡ್ ತನ್ನ ಮುಂದಿನ ಪಂದ್ಯವನ್ನು ಗುರುವಾರ ಫ್ರಾಂಕ್‌ಫರ್ಟ್‌ನಲ್ಲಿ ಡೆನ್ಮಾರ್ಕ್ ವಿರುದ್ಧ ಸೆಣಸಲಿದೆ. ಇಂಗ್ಲೆಂಡ್ ತಂಡವು ಕಳೆದ ಆವೃತ್ತಿಯ ಫೈನಲ್‌ನಲ್ಲಿ ಇಟಲಿಗೆ ಸೋತು, ರನ್ನರ್ ಅಪ್ ಆಗಿತ್ತು. ನಿಗದಿತ ಅವಧಿಯಲ್ಲಿ 1-1ರಿಂದ ಸಮಬಲ ಸಾಧಿಸಿದ್ದರಿಂದ ಪೆನಾಲ್ಟಿ ಶೂಟೌಟ್‌ನಲ್ಲಿ ಇಟಲಿಯು 3-2ರಿಂದ ಜಯ ಸಾಧಿಸಿತ್ತು. 2000ರ ನಂತರ ಇದೇ ಮೊದಲ ಬಾರಿ ಸರ್ಬಿಯಾ ತಂಡವು ಯುರೋ ಕಪ್ ಟೂರ್ನಿಯಲ್ಲಿ ಆಡುತ್ತಿದೆ.

ರುಮೇನಿಯಾಗೆ ಸುಲಭ ಗೆಲುವು: ರುಮೇನಿಯಾ ತಂಡವು 'ಇ' ಗುಂಪಿನ ಪಂದ್ಯದಲ್ಲಿ 3-0 ಗೋಲುಗಳಿಂದ ಉಕ್ರೇನ್ ತಂಡವನ್ನು ಸುಲಭವಾಗಿ ಮಣಿಸಿತು. ಈ ಮೂಲಕ 24 ವರ್ಷಗಳಲ್ಲಿ ಮೊದಲ ಬಾರಿಗೆ ಪ್ರಮುಖ ಅಂತರರಾಷ್ಟ್ರೀಯ ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ಉಕ್ರೇನ್ ತಂಡದ ಗೋಲ್‌ಕೀಪರ್ ಆಂಡ್ರಿ ಲುನಿನ್ ಎಸಗಿದ ತಪ್ಪುಗಳು ರುಮೇನಿಯಾ ತಂಡಕ್ಕೆ ವರದಾನವಾದವು. ನಿಕೋಲ್ ಸ್ಟಾನ್ಸಿಯು (29ನೇ ನಿಮಿಷ), ರಜ್ವಾನ್ ಮರಿನ್ (53ನೇ ನಿ) ಮತ್ತು ಡೆನಿಸ್ ಡ್ರಾಗಸ್ (57ನೇ ನಿ) ಅವರು ರುಮೇನಿಯಾ ಪರ ಚೆಂಡನ್ನು ಗುರಿ ಸೇರಿಸಿದರು. 2022ರ ಫೆಬ್ರುವರಿಯಲ್ಲಿ ರಷ್ಯಾದ ಆಕ್ರಮಣದ ನಂತರ ಉಕ್ರೇನ್ ತಂಡವು ಪ್ರಮುಖ ಟೂರ್ನಿಯೊಂದರಲ್ಲಿ ರಾಷ್ಟ್ರಧ್ವಜದೊಂದಿಗೆ ಮೊದಲ ಬಾರಿ ಕಣಕ್ಕೆ ಇಳಿಯಿತು.

ಎರಡು ವರ್ಷಗಳ ಹಿಂದೆ ವಿಶ್ವಕಪ್‌ಗೆ ಅರ್ಹತೆ ಪಡೆಯುವ ಅವಕಾಶವನ್ನು ಅದು ತಪ್ಪಿಸಿಕೊಂಡಿತ್ತು.

ಚೆಂಡಿನ ಮೇಲೆ ಹಿಡಿತ ಸಾಧಿಸಲು ಯತ್ನಿಸುತ್ತಿರುವ ಇಂಗ್ಲೆಂಡ್ ತಂಡದ ಜೂಡ್ ಬೆಲ್ಲಿಂಗ್‌ಹ್ಯಾಮ್ –ಎಎಫ್‌ಪಿ ಚಿತ್ರ

ರ‍್ಯಾಂಕಿಂಗ್: 71ನೇ ಸ್ಥಾನಕ್ಕೆ ನಗಾಲ್

ನವದೆಹಲಿ (ಪಿಟಿಐ): ಭಾರತದ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಅವರು ಸೋಮವಾರ ಪ್ರಕಟವಾದ ಎಟಿಪಿ ಸಿಂಗಲ್ಸ್ ರ‍್ಯಾಂಕಿಂಗ್‌ನಲ್ಲಿ ಜೀವನಶ್ರೇಷ್ಠ 71ನೇ ಸ್ಥಾನಕ್ಕೆ ಬಡ್ತಿ ಪಡೆದಿದ್ದಾರೆ.

26 ವರ್ಷದ ನಗಾಲ್ ಅವರು ಕಳೆದ ವಾರ ಪ್ರಕಟವಾದ ಕ್ರಮಾಂಕಪಟ್ಟಿಯಲ್ಲಿ 95 ರಿಂದ 77ನೇ ಸ್ಥಾನಕ್ಕೆ ಜಿಗಿದಿದ್ದರು. ಭಾನುವಾರ ಪೆರುಗಿಯಾ ಚಾಲೆಂಜರ್ ಟೆನಿಸ್ ಟೂರ್ನಿಯಲ್ಲಿ ರನ್ನರ್ ಅಪ್ ಆದ ನಗಾಲ್ ಅವರಿಗೆ ಇದೀಗ ಮತ್ತೆ ಆರು ಸ್ಥಾನಗಳ ಬಡ್ತಿ ದೊರಕಿದೆ. ಇದು ಒಲಿಂಪಿಕ್ಸ್ ಕೋಟಾ ಪಡೆಯಲು ಅವರಿಗೆ ನೆರವಾಗಲಿದೆ.

ಪ್ಯಾರಿಸ್ ಒಲಿಂಪಿಕ್ಸ್‌ನ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಅರ್ಹತೆಗಾಗಿ ಎದುರುನೋಡುತ್ತಿರುವ ನಗಾಲ್ ಈತನಕ ಒಟ್ಟು 777 ಎಟಿಪಿ ಪಾಯಿಂಟ್ಸ್‌ಗಳನ್ನು ಗಳಿಸಿದ್ದಾರೆ.

ಸುಮಿತ್

ಆಸ್ಟ್ರೇಲಿಯಾ ಓಪನ್‌ನಲ್ಲಿ ಎರಡನೇ ಸುತ್ತು ಪ್ರವೇಶಿಸುವ ಮೂಲಕ ಐತಿಹಾಸಿಕ ಸಾಧನೆಯೊಡನೆ ವರ್ಷಾರಂಭ ಮಾಡಿದ್ದ ನಗಾಲ್, ಫ್ರೆಂಚ್ ಓಪನ್‌ನ ಮೊದಲ ಸುತ್ತಿನಲ್ಲೇ ನಿರ್ಗಮಿಸಿದ್ದರು. ವಿಂಬಲ್ಡನ್‌ನ ಮುಖ್ಯಸುತ್ತಿನ ಸ್ಪರ್ಧೆಯಲ್ಲಿ ನಗಾಲ್ ಕಣಕ್ಕೆ ಇಳಿಯುವರು. ಅದರ ಬೆನ್ನಲ್ಲೇ ಒಲಿಂಪಿಕ್ ಕ್ರೀಡೆಗಳ ಸ್ಪರ್ಧೆ ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ನಡೆಯಲಿದೆ.



^Ex-showroom price New Nexon Smart(O) MT, New Delhi. Accessories shown and features mentioned may not be a part of standard equipment and are subject to change without prior notice. Actual colour of the vehicle and upholstery might differ. Tinted glass and number plates shown are for creative visualisation. New Nexon Price Smart (O) MT, New Delhi. Tata Nexon Scored highest adult occupant score as per test conducted by GNCAP in category of SUV less than 4 meter & engine less than 1.5L SUV as per GNCAP test result. 7 in 7 celebration offer varies on select models & valid till 30th June'24 only. Tata Nexon is highest selling SUV from April 21 to Mar 24 cumulative sales as per SIAM Data

KHT MOTORS	KROPEX AUTO	PRERANA MOTORS	ADISHAKTI CARS	CAUVERY MOTORS:	KEY MOTORS	SREE AUTO
Whitefield: 7506023988; **Domlur:** 7506024006, **Kolar:** 8291028427	**Hosur Road:** 7506024016, **Koramangala:** 9167395364, **Sarjapur road:** 8291202713, **Mahadevapura:** 8291052641	**Lalbagh Road:** 7506024020; **BTM Layout:** 7506024118; **Rajajinagar:** 7506024039; **Yelahanka:** 9619489334	**Hebbal:** 7506023837; **Dasarahalli:** 9167982568; **Kalyana Nagar:** 9167163087	**Avalahalli:** 8879156068; **Mekhri Circle:** 8422849049; **Devanahalli:** 8879078454	**Kanakapura Road:** 7506023980, **Mysore Road:** 9167395034, **Kanakapura City:** 8879145649, **BG Road:** 9167395164, **Sunkadakatte Magadi Road:** 9167882027, **Nelamangala:** 9167881890	**Tumkur:** 7506024318, **Tiptur:** 9619050469, **Chitradurga:** 9619033465, **Kunigal:** 8879046819, **Chikkaballapur:** 9167082428, **Chintamani:** 8291927028

*ನಿಯಮ ಮತ್ತು ಷರತ್ತುಗಳು ಅನ್ವಯ. ಪೈನ್ ಲ್ಯಾಬ್ ಮಶಿನ್‌ಗಳಲ್ಲಿ ಮಾತ್ರ HDFC ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸಿ ಮಾಡಿದ EMI ವಹಿವಾಟಗಳಿಗೆ ಎಲ್ಲ ಹೋಂಡಾ ಟೂ ವೀಲರ್ ಮಾಡೆಲ್‌ಗಳ ಮೇಲೆ ಕೊಡುಗೆ ಲಭ್ಯವಿದೆ. ಗ್ರಾಹಕರು ರೂ. 3000 ವರೆಗೆ 5% ಇನ್‌ಸ್ಟಂಟ್ ಕ್ಯಾಶ್‌ಬ್ಯಾಕ್ ಅನ್ನು ಗ್ರಾಹಕರು ಪಡೆಯಬಹುದು. ಕೊಡುಗೆ ಅವಧಿಯಲ್ಲಿ ಪ್ರತಿ ಕಾರ್ಡ್/ಆರ್ಡರ್‌ಗೆ ಒಂದು ವಹಿವಾಟಿನ ಮೇಲೆ ಮಾನ್ಯವಾಗಿದೆ. ಆಫರ್ 31ನೇ ಆಗಸ್ಟ್ 2024 ರವರೆಗೆ ಮಾನ್ಯವಾಗಿರುತ್ತದೆ. ಆಯ್ದ ಔಟ್‌ಲೆಟ್‌ಗಳಲ್ಲಿ ಮಾತ್ರ ಸ್ಕೀಮ್ ಲಭ್ಯವಿದೆ. ಚಿತ್ರದಲ್ಲಿ ತೋರಿಸಿದ ಉತ್ಪನ್ನವು ಮಾರ್ಕೆಟ್‌ನಲ್ಲಿ ಲಭ್ಯವಿರುವ ಉತ್ಪನ್ನಕ್ಕಿಂತ ವಿಭಿನ್ನವಾಗಿರಬಹುದು. ಉತ್ಪನ್ನದಲ್ಲಿ ತೋರಿಸಿದ ಅಕ್ಸೆಸರಿಗಳು ಪ್ರಮಾಣಿತ ಸಲಕರಣೆಯ ಭಾಗವಾಗಿಲ್ಲ. ಬಣ್ಣಗಳು ಮತ್ತು ವೇರಿಯಂಟ್‌ಗಳನ್ನು ಆಧರಿಸಿ ವೈಶಿಷ್ಟ್ಯಗಳು ಬದಲಾಗಬಹುದು. ಹಣಕಾಸು ಕೊಡುಗೆಯು ಹಣಕಾಸು ಸಲಹೆಗಾರರ ವಿವೇಚನೆಗೆ ಒಳಪಟ್ಟಿರುತ್ತದೆ; ಸಂಬಂಧಿಸಿದ ನಿಯಮ ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ. #ಮೂಲ: 2001 ಜೂನ್‌ನಿಂದ 2023 ಜೂನ್‌ವರೆಗೆ ಬ್ರ್ಯಾಂಡ್ ಆಕ್ಟಿವಾದ ಸಂಚಿತ ಮಾರಾಟ ಅಂಕಿ ಅಂಶಗಳು.

ಕಡಿಮೆ ಬಡ್ಡಿದರ @ 8.49%* | ಕಡಿಮೆ EMI ₹2499* | 5% ಇನ್‌ಸ್ಟಂಟ್ ಕ್ಯಾಶ್‌ಬ್ಯಾಕ್ ₹3000* ವರೆಗೆ HDFC BANK | ಡೀಲರ್ ವಿವರಗಳಿಗಾಗಿ QR ಕೋಡ್ ಸ್ಕ್ಯಾನ್ ಮಾಡಿ | ACTIVA 30 MILLION# HAPPY CUSTOMERS | CLICK BOOK RELAX

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) - 122050, India; **Website:** www.honda2wheelersindia.com; **Customer Care:** customercare@honda.hmsi.in

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; Haiku Honda - **DOMLUR:** 49656565, 9342432156; **INDIRANAGAR:** 9342432157; Dhruvdesh Honda - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; Planet Honda - **RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; VFM Honda - **KR PURAM:** 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9900018516;; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; Namma Honda - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; **SIDLAGHATTA:** 9611596113; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com